ಮೈಸೂರು ಜಿಲ್ಲೆಯ ಚಿತ್ರಕಲೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಕಿರುಪ್ರಬಂಧ)







ಸಂಶೋಧಕ

ಹೇಮಂತಕುಮಾರ .ಎಂ

ಮಾರ್ಗದರ್ಶಕರು

ಡಾ.ಎಸ್.ಸಿ.ಪಾಟೀಲ

ಲಲಿತಕಲಾ ನಿಕಾಯ

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ ,ಹಂಪಿ

ವಿದ್ಯಾರಣ್ಯ -೫೮೩.೨೭೬

೨೦೧೨-೧೩

ಮೈಸೂರು ಜಿಲ್ಲೆಯ ಚಿತ್ರಕಲೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಕಿರುಪ್ರಬಂಧ)

ಸಂಶೋಧಕ
ಹೇಮಂತಕುಮಾರ .ಎಂ

ನೋಂದಣಿ ಸಂಖ್ಯೆ : KUVA/00530

ಮಾರ್ಗದರ್ಶಕರು
ಡಾ.ಎಸ್.ಸಿ.ಪಾಟೀಲ
ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ
ಪ್ರಾದೇಶಿಕ ಕಛೇರಿ ಬೆಂಗಳೂರು-೫೮೦೦೧

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ ,ಹಂಪಿ
ವಿದ್ಯಾರಣ್ಯ -೫೮೩೨೭೬
೨೦೧೨-೧೩

ಪ್ರಮಾಣ ಪತ್ರ

ಮೈಸೂರು ಜಿಲ್ಲೆಯ ಚಿತ್ರಕಲೆ ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ ದೃಶ್ಯಕಲಾ ವಿಭಾಗಕ್ಕೆ, ಡಾ.ಎಸ್.ಸಿ.ಪಾಟೀಲ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಈ ಸಂಪ್ರಂಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಸಂಶೋಧನ ವಿದ್ಯಾರ್ಥಿ
ಹೇಮಂತಕುಮಾರ. ಎಂ
ದೃಶ್ಯಕಲಾವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ-೫೮೩೨೭೬

ದಿನಾಂಕ- ೩೦-೭-೨೦೧೩
ಸ್ಥಳ-ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣಪತ್ರ

ಹೇಮಂತಕುಮಾರ.ಎಂ. ಇವರು ಬರೆದು ಸಾದರಪಡಿಸಿದ **"ಮೈಸೂರು ಜಿಲ್ಲೆಯ ಚಿತ್ರಕಲೆ "** ಎಂಬ ಶೀರ್ಷಿಕೆಯ ಈ ಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು ನನ್ನಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಸಂಪ್ರಬಂಧವನು ಸಿದ್ದಪಡಿಸಿದ್ದಾರೆ.

ಪ್ರಸ್ತುತ ಸಂಪ್ರಬಂಧ ಇಡಿಯಾಗಿ ಅಥವಾ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣಕರಿಸುತ್ತೇನೆ.

ಡಾ.ಎಸ್.ಸಿ.ಪಾಟೀಲ
ಮಾರ್ಗದರ್ಶಕರು
ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾವಿಶ್ವವಿದ್ಯಾಲಯ
ಪ್ರಾದೇಶಿಕ ಕಛೇರಿ ಚಿತ್ರಕಲಾಪರಿಷತ್ತು
ಆವರಣ ಬೆಂಗಳೂರು-೫೬೦೦೦೧

ದಿನಾಂಕ- ೩೦-೭-೨೦೧೩
ಸ್ಥಳ -ವಿದ್ಯಾರಣ್ಯ

ಧೃಢೀಕರಣ ಪತ್ರ

ಹೇಮಂತಕುಮಾರ್.ಎಂ. ಇವರು ಬರೆದು ಸಾದರಪಡಿಸಿದ **ಮೈಸೂರು ಜಿಲ್ಲೆಯ ಚಿತ್ರಕಲೆ** ಎಂಬ ಶೀರ್ಷಿಕೆಯ ಈ ಪ್ರಬಂಧವು ಮೂಲಸಂಶೋಧನಾ ಕೃತಿಯಾಗಿದ್ದು, **ಡಾ.ಎಸ್.ಸಿ.ಪಾಟೀಲ** ಅವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಸಂಪ್ರಬಂಧವನ್ನು ಸಿದ್ದಪಡಿಸಿದ್ದಾರೆ.

ಪ್ರಸ್ತುತ ಸಂಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಧೃಢೀಕರಿಸುತ್ತೇನೆ.

ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩೨೭೬

ದಿನಾಂಕ-೩೦-೭-೨೦೧೩
ಸ್ಥಳ- ವಿದ್ಯಾರಣ್ಯ

ಮುಖ್ಯಸ್ಥರು
ದೃಶ್ಯಕಲಾ ವಿಭಾಗ (ಲಲಿತಕಲಾ ನಿಕಾಯ)
ಕನ್ನಡ ವಿಶ್ವ ವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಮೈಸೂರು ಜಿಲ್ಲೆಯ ಚಿತ್ರಕಲೆ
ಪರಿವಿಡಿ

---

೩. ಭಿತ್ತಿಚಿತ್ರಗಳ ನೆಲೆಗಳು

೪ ಹಸ್ತಪ್ರತಿಗಳ ನೆಲೆಗಳು

೫. ಗಂಜೀಫಾ ಚಿತ್ರಗಳ ನೆಲೆಗಳು

೬. ಗಾಜಿನ ಚಿತ್ರಗಳ ನೆಲೆಗಳು

೭. ಗ್ರಂಥಋಣ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ.

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಮನುಷ್ಯನ ಹುಟ್ಟು ನಿಸರ್ಗದ ಮಡಿಲಲ್ಲಿಯೇ, ನಿಸರ್ಗದಿಂದಲೇ ಮನುಷ್ಯ ಬೆಳೆದವನು. ಈ ಮಾನವನ ಮನಸ್ಸಿನ ಅಭಿವ್ಯಕ್ತಿಯೇ ಕಲೆ. ಕಲೆಯು ಮನುಷ್ಯನ ಹುಟ್ಟಿನೊಂದಿಗೆ ಬೆಳೆದು ಬಂದಿದೆ. ಹಾಗೂ ಅವಿಭಾಜ್ಯ ಅಂಗವಾಗಿ ಅವನ ಎಲ್ಲಾ ಚಟುವಟಿಕೆಗಳಿಗೆ ಮೂಲವಾಗಿದೆ. ಪ್ರಕೃತಿಯನ್ನೆ ಅವಲಂಬಿಸಿದ ಮನುಷ್ಯನ ಹುಟ್ಟು-ಸಾವು, ಕಾಮ, ಹಸಿವು, ಬಾಯಾರಿಕೆ, ಆಸೆ-ದುಃಖ, ಸಂತೋಷ ಅಷ್ಟೇ ಅಲ್ಲದೇ ನಿಸರ್ಗದ ವಿಸ್ಮಯ ಶಕ್ತಿಯ ನರ್ತನ, ಸೌಂದರ್ಯ ಮತ್ತು ಹತ್ತು ಹಲವು ಪ್ರಾಬಲ್ಯತೆ ಕಂಡು ಆ ಶಕ್ತಿಯನ್ನು ಕೈವಶ ಮಾಡಿಕೊಳ್ಳಲು, ತನ್ನ ಅನಿಸಿಕೆ ವ್ಯಕ್ತಪಡಿಸಲು ಕಲೆಗಳಲ್ಲಿ ಮುಖ್ಯವಾದಂತಹ ಚಿತ್ರಕಲೆಯನ್ನು ಮೊದಲು ಆದಿಮಾನವ ಬಳಸಿದ್ದನ್ನು ನಾವುಕಾಣಬಹುದು. ಭಾಷೆಗಿಂತ ಮೊದಲೆ ಚಿತ್ರಕಲೆಯನ್ನು ಸಂವಹನ ಕ್ರಿಯೆಯಾಗಿ ಮನುಷ್ಯನು ಕಂಡುಕೊಂಡಿದ್ದನು. ವಿದ್ವಾಂಸರುಗಳು ತಿಳಿಸಿದಂತೆ ಕಲೆ ಅದು ಒಂದು ಅಭಿವ್ಯಕ್ತಿ. ಅದು ಯಾವುದಾದರು ಒಂದು ಮಾಧ್ಯಮದಿಂದಲೇ ಅಭಿವ್ಯಕ್ತಿಯಾಗಬೇಕು. ಅದರಲ್ಲಿ ಶಿಲ್ಪಕಲೆ, ವಾಸ್ತುಕಲೆ, ನೃತ್ಯಕಲೆ, ಚಿತ್ರಕಲೆ ಮೊದಲಾದ ಕಲೆಗಳನ್ನು ಉದಾಹರಿಸಬಹದು. ಪ್ರಾರಂಭದ ಚಿತ್ರಕಲೆಗೆ ಆದಿಮಾವನವನೆ ಪಿತಾಮಹ, ಅಂದಿನಿಂದ ಹಿಡಿದು ಇಂದಿನ ಆಧುನಿಕ ಮಾನವನ ವರೆಗೆ, ಚಿತ್ರಕಲೆಯು ಹಲವು ಕಾಲಘಟ್ಟಗಳಲ್ಲಿ ಸಮಯ ಸಂದರ್ಭಕ್ಕೆ ತಕ್ಕಂತೆ ರೂಪಾಂತರಗೊಳ್ಳುತ್ತ ಹೊಸದನ್ನು ಅಳವಡಿಸಿಕೊಳ್ಳುತ್ತ ಬೆಳೆದುಬಂದಿದೆ.

ಇಂದು ನಮಗೆ ಕಾಣಸಿಗುವ ಪ್ರಾಗೈತಿಹಾಸಿಕ ನೆಲೆಯಲ್ಲಿ ವರ್ಣರೇಖೆಗಳಿಂದ ನಿರ್ಮಿಸಿರುವಂತಹ ಚಿತ್ರಕಲೆಯನ್ನು ಪ್ರಾರಂಭದಕಲೆ ಎಂದು ಗುರುತಿಸುತ್ತಾರೆ. ನಂತರ ಅಲೆಮಾರಿತನ ಬಿಟ್ಟು ಒಂದು ಕಡೆ ನೆಲೆಸಲು ಪ್ರಾರಂಭಿಸಿದ ಮೇಲೆ ಸುಸಂಸ್ಕೃತ, ಜ್ಞಾನದ ಬಾಗಿಲೊಳಗಿನಿಂದ ಸಾಗಿ, ನಾಗರೀಕತೆಯಿಂದ ಸೌಂದರ್ಯದ ಪ್ರಜ್ಞೆಮೂಡಿ, ಉಪಯೋಗದ ಅರಿವುತಿಳಿದು, ಪ್ರಕೃತಿಯನ್ನು ಹೆಚ್ಚಾಗಿ ಅವಲಂಬಿಸಿದ ಈ ಸರಹದ್ದನ್ನು ಬುಡಕಟ್ಟು ಜನಾಂಗದಕಾಲ ಎನ್ನುತ್ತಾರೆ. ಇವರು ಇಂದೂ ಸಹ ಕರ್ನಾಟಕದ ಸುತ್ತಮುತ್ತಲಿನ ಕಾಡಿನಲ್ಲಿ ನೆಲೆಸಿರುತ್ತಾರೆ. ಆದರೆ ಮಾನವನ ಬುದ್ದಿ ಇನ್ನೂ ವೃದ್ಧಿಸಿದಾಗಲೂ ಸ್ವಲ್ಪ ಕಟ್ಟುಪಾಡುಗಳನ್ನು ಮಾಡಿಕೊಂಡು ಬದುಕುವಾಗಲೂ ಚಿತ್ರಕಲೆ ಬೆಳೆದಿರುತ್ತದೆ ಅದನ್ನು ಜಾನಪದ,

ಜನಪದ ಚಿತ್ರಕಲೆ ಎನ್ನುತ್ತಾರೆ. ಹೀಗೆ ಬೆಳಸಿಕೊಂಡಿದ್ದನು, ಕಲಾಇತಿಹಾಸದ ಜ್ಞಾನವಂತರು ಜನಪದ ಚಿತ್ರಕಲೆಯ ಪ್ರಕಾರಗಳಲ್ಲಿ ಗುರುತಿಸುತ್ತಾರೆ.

ಇನ್ನೂ ಶಿಸ್ತು ಮತ್ತು ಸಂಪ್ರದಾಯ, ಧರ್ಮದ ಆಚರಣೆಯ ಪ್ರತೀಷ್ಠೆಯಾಗಿಯೂ ಸಾಗಿ ಬಂದ ಐತಿಹಾಸಿಕ ಕಾಲವನ್ನು ಸಂಪ್ರದಾಯದ ಶಿಷ್ಟಪದ ಚಿತ್ರಕಲೆಯೆಂದು ಕರೆಯುತ್ತಾರೆ. ಈ ಕಾಲದ ಚಿತ್ರಕಲೆಯು ಹೆಚ್ಚಾಗಿ ಧರ್ಮದ ಹಿನ್ನಲೆಯಲ್ಲಿಯೇ ಬೆಳೆದಿದ್ದು, ಇಲ್ಲಿನಾ ಜೈನ, ಬೌದ್ಧ, ವೈಷ್ಣವ, ಶೈವ, ಮುಸ್ಲಿಂ, ಕ್ರೈಸ್ತ ಧರ್ಮಗಳ ಪ್ರಮುಖವಾದವುಗಳು. ಕರ್ನಾಟಕವನ್ನು ಆಳಿದ ಈ ರಾಜವಂಶಸ್ಥರು ಸ್ವತಂತ್ರವಾಗಿ ಆಡಳಿತ ನಡೆಸಿ ಹೋಗಿದ್ದಾರೆ. ಅವರಲ್ಲಿ ಪ್ರಮುಖವಾಗಿ ಮೈಸೂರು ಜಿಲ್ಲೆಗೆ ಗಂಗರು, ಚೋಳರು, ರಾಷ್ಟ್ರಕೂಟರು, ಹೊಯ್ಸಳರ ತರುವಾಯ ವಿಜಯನಗರ ಪತನ ನಂತರ ಸಾಮಂತರಾಗಿದ್ದವರಲ್ಲಿ ಮೈಸೂರಿನ ಒಡೆಯರು ಒಬ್ಬರು, ಸ್ವತಂತ್ರವಾಗಿ ಆಡಳಿತ ನಡೆಸಿ, ಮುಂದಿನ ಕಾಲದಲ್ಲಿ ಮುಸ್ಲಿಂ ರಾಜಕೀಯಕ್ಕೆ ಸಿಲುಕಿ ನಂತರ ಪಾಶ್ಚಾತ್ಯರ ಕೈಗೊಂಬೆಯಾಗಿದ್ದರು ಸಹ ಭಿತ್ತಿಚಿತ್ರಕಲೆ, ಗಾಜಿನಚಿತ್ರಕಲೆ, ಹಸ್ತಪ್ರತಿಚಿತ್ರಕಲೆ, ಮುಂತಾದ ಕಲೆಗಳು ೧೮ ಮತ್ತು ೧೯ನೇ ಶತಮಾನದ ಕಾಲದಲ್ಲಿ ಪಾಶ್ಚಾತ್ಯರ ಪ್ರಭಾವದಿಂದ ಕಲಾಶಾಲೆಗಳು, ಕಲಾವಿದರು, ಕಲಾಕೃತಿಗಳು ಸೃಷ್ಟಿಯಾಗಿ ಅವು ದೇಶ ವಿದೇಶಗಳಲ್ಲಿಯೂ ಅವು ಹೆಸರು ಗಳಿಸಿವೆ. ಈ ಮೇಲಿನ ಕಲೆಯ ನೆಲೆಗಳು ಸ್ಥಿತಿ-ಗತಿ ಚಿತ್ರಕಲೆಗೆ ಸಂಬಂಧಪಟ್ಟಂತಹ ಇನ್ನೂ ಅನೇಕ ಕಲಾ ಪ್ರಕಾರಗಳಾದ ಎನ್‌ಗ್ರೇವಿಂಗ್ ಕಲೆ, ಕಪ್ಪುಬಿಳುಪಿನ ಪೋಟೋಕಲರ್ ಕಲೆ, ಲೀಥೋಗ್ರಪಿ ಕಲೆಗಳು, ಮ್ಯೂಸಿಯಂ, ಅರಮನೆಗಳಲ್ಲಿ ಇರುವ ಇನ್ನೂ ಅನೇಕ ಚಿತ್ರಕಲಾಕೃತಿಗಳು ಹಲವು ಚಿತ್ರಕಲಾ ಪ್ರಕಾರಗಳಲ್ಲಿ ಸಂಗ್ರಹಗೊಂಡಿದೆ.

ದೃಶ್ಯಕಲಾ ಸಾಹಿತ್ಯ ಸಹ ಈ ಪ್ರಾಂತ್ಯದಲ್ಲಿ ಕಂಡುಬರುತ್ತದೆ. ಒಟ್ಟಿನಲ್ಲಿ ಎಲ್ಲಾ ಪ್ರಕಾರದ ಕಲಾಪರಂಪರೆಗಳು ಕಲಾಚಕ್ರಕ್ಕೆ ಸಿಲುಕಿ ಬದಲಾವಣೆಯ ಹಾದಿಯಲ್ಲಿ ಹಲವು ಧರ್ಮ, ರಾಜಕೀಯ ಮತ್ತು ಸಾಮಾಜಿಕತೆಯ ಪ್ರಭಾವದಿಂದ ಬೆಳೆದಿವೆ. ಆಧುನಿಕ ಕಾಲದ ಅನೇಕ ವೈಜ್ಞಾನಿಕ, ಮನೋವಿಜ್ಞಾನ ಮುಂತಾದರಲ್ಲಿ ಹಲವು ಆವಿಷ್ಕಾರಗಳು ನಡೆದಿವೆ ಅದರ ಫಲವಾಗಿ ಚಿತ್ರಕಲೆಯ ಮೇಲೆ ಅನೇಕ ಬದಲಾವಣೆಗಳಾಗಿರುವುದನ್ನು ನಾವು ಕಲಾಪ್ರಪಂಚದ ಹಾದಿಯಲ್ಲಿ ನೋಡಬಹುದು. ಅದು ಕರ್ನಾಟಕದ ಬೇರೆಬೇರೆ ಸ್ಥಳಗಳಿಗೆ ಹೋಲಿಸಿದರೆ ಮೈಸೂರು ಭಾಗದ ಪ್ರಾಂತ್ಯದಲ್ಲಿ ಲಲಿತಕಲೆಗಳ ಮೇಲೆ ಈ ಪ್ರಭಾವ ಆಗಿರುವುದು ಕಂಡುಬರುತ್ತದೆ.

ಒಂದು ಕಾಲಕ್ಕೆ ಕರ್ನಾಟಕದ ರಾಜಧಾನಿಯಾಗಿದ್ದ ಮೈಸೂರು ಒಂದು ಸಾಂಸ್ಕೃತಿಕ ನಗರವಾಗಿತ್ತು ಈಗ ಒಂದು ಜಿಲ್ಲಾಕೇಂದ್ರವಾಗಿದೆ. ಮೈಸೂರು ಮೊದಲು ಒಂದು ಹಳ್ಳಿಯಾಗಿ ಪಾಳೇಗಾರಿಕೆಗೆ ಒಳಪಟ್ಟು ನಂತರ ಪಟ್ಟಣವಾಗಿ ಮುಂದೆ ಮಹಾ ಸಂಸ್ಥಾನವಾಗಿ ಬೆಳೆದು, ಇಂದು ಮೈಸೂರು ಲಲಿತಕಲೆಗಳ ಪಾರಂಪರಿಕ ನಗರವಾಗಿದೆ. ಹಿಂದೂ ದೇಶದ ಕಲೆಗೆ ಅನೇಕ ಅವಿಸ್ಮರಣೀಯ ಹಾಗೂ ಶ್ರೀಮಂತ ಕಾಣಿಕೆ ನೀಡಿದ ಕರ್ನಾಟಕದ ಬಹು ಮುಖ್ಯ ಪ್ರದೇಶವಾಗಿದೆ. ಆಳಿದ ಅನೇಕ ರಾಜ ಮಹಾರಾಜರು, ರಾಜರಮನೆತನಗಳು, ಶ್ರೀಮಂತರು, ಅರಮನೆಯ ಸಂಬಂಧ ಹೊಂದಿದ ಪರಿವಾರದವರು ಸಹ ಆಧುನಿಕತೆಯ ಕಾಲದಲ್ಲಿ ಸಹ ಬದಲಾವಣೆಗೆ ತಮ್ಮ ಹೃದಯ ವಿಶಾಲತೆಯನ್ನು ಬೆಳಸಿಕೊಂಡಿದ್ದಾರೆ. ಅದರ ಫಲವೇ ಇಂದು ಅನೇಕ ಸಂಮೃದ್ಧ ಚಿತ್ರಕಲೆಯ ಭಂಡಾರ ಇಲ್ಲಿದೆ. ಸಂಶೋಧಕನಿಗೆ ಸಂಶೋಧಿಸಲು ಒಂದು ನಿದಿಯಾಗಿದೆ. ಲಲಿತಕಲೆಯ ಗಣಿಯಾಗಿ ಅದರಲ್ಲಿ ಸಂಶೋಧಕ ಎಷ್ಟು ಅಧ್ಯಯನಕ್ಕೆ ತೊಡಗಿದರು ಖಾಲಿಯಾಗದ ಚಿತ್ರಕಲೆಯ ಪ್ರಕಾರಗಳ ಸಂಪತ್ತು ತುಂಬಿದೆ. ಮೈಸೂರು ಪ್ರಾಂತ್ಯದಲ್ಲಿ ಚಿತ್ರಕಲೆಯ ಈ ಶ್ರೀಮಂತ ಪರಂಪರೆಯ ಕಾರಣಗಳಿಂದ ಮೈಸೂರು ಜಿಲ್ಲೆಯ ಚಿತ್ರಕಲೆಯನ್ನು ಅಧ್ಯಯನಕ್ಕೆ ಒಳಪಡಿಸಿ, ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಈ ಮೇಲಿನ ಅನೇಕ ಚಿತ್ರಕಲಾ ಪ್ರಕಾರಗಳು ಇಂದು ಅನೇಕ ಅಪಾಯ ಎದುರಿಸುತ್ತಿದ್ದು ಅವುಗಳು ಅಳಿವಿನ ಅಂಚಿನಲ್ಲಿವೆ. ಅವುಗಳ ದಾಖಲೆಗಾಗಿ ಹಾಗೂ ಸಂರಕ್ಷಣೆ, ಜಾಗೃತಿ ದೃಷ್ಟಿಯೂ ಸಹ ಹೊಂದಿದ್ದು, ಮೈಸೂರು ಹಾಗೂ ತಾಲ್ಲೂಕಿನಲ್ಲಿ ಕಂಡು ಬರುವ ಚಿತ್ರಕಲೆಗಳನ್ನು ಗುರುತಿಸಿ ಮುಖ್ಯವಾಹಿನಿಗೆ ತರುವ ಉದ್ದೇಶ ಹೊಂದಲಾಗಿದೆ. ಐತಿಹಾಸಿಕವಾಗಿ ಸ್ಥಾಪಿಸಿದ ಕಲಾಶಾಲೆ, ಗ್ಯಾಲರಿ, ಮ್ಯೂಸಿಯಂಗಳು, ದೇವಾಲಯಗಳು ಸಹ ಬದಲಾವಣೆ ಕಂಡಿದೆ ಅದನ್ನು ಸಹ ಗುರುತಿಸುವ ಉದ್ದೇಶ ಹೊಂದಲಾಗಿದೆ.

ಅಧ್ಯಯನದ ಉದ್ದೇಶ

ಒಂದು ಕಾಲದಲ್ಲಿ ಮೈಸೂರು ಜಿಲ್ಲೆಯು ಲಲಿತಕಲೆಗಳ ತವರೂರಾಗಿ, ಪ್ರಾಚೀನ ಐತಿಹಾಸಿಕ ನಾಡಾಗಿ, ಪ್ರಸಿದ್ಧಿಯಾದ ಮಹಿಷಾಪುರವು ಧಾರ್ಮಿಕ ಹಿನ್ನೆಲೆಯ ಆರಾಧನಾ ಪುಣ್ಯ ಸ್ಥಳವಾಗಿ, ಸಾಂಸ್ಕೃತಿಕ ಕೇಂದ್ರವಾಗಿ ಮತ್ತು ಹಲವೂ ಕಲೆಗಳ ನೆಲೆಯಾಗಿ, ಬೆಳೆದಿದೆ.

ಮೈಸೂರು ಜಿಲ್ಲೆಯಲ್ಲಿ ಆದಿಮಾನವ ನೆಲೆಗಳು ಹಾಗೂ ಕಲೆಯ ಕುರುಹುಗಳು ಪತ್ತೆಯಾಗಿದೆ. ಪುರಾಣಗಳಲ್ಲಿ ಪ್ರಸಿದ್ಧ ಕ್ಷೇತ್ರವಾಗಿದ್ದು. ಶೈವ, ವೈಷ್ಣವ, ಬೌದ್ಧ, ಜೈನ, ಮುಸ್ಲಿಂ, ಕ್ರೈಸ್ತ ಚಿತ್ರಕಲೆಯು ಹೇರಳವಾಗಿದ್ದು. ಮಠಮಂದಿರ, ದೇವಾಸ್ಥಾನ, ಮಹಲ್‌ಗಳಲ್ಲಿ ಮತ್ತು ಚರ್ಚ್‌ನಲ್ಲೂ ಇರುವುದನ್ನು ಅಧ್ಯಯನ ಮಾಡಬಹುದು. ಐತಿಹಾಸಿಕವಾಗಿಯೂ ಅನೇಕ ರಾಜ ಮಹಾರಾಜರ ಪ್ರೋತ್ಸಾಹ ಕೊಡುಗೆಗಳು ಇವೆ. ಇದರಲ್ಲಿ ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ, ಒಡೆಯರು ಮುಸ್ಲಿಂ ಅರಸರು, ಅಲ್ಲದೆ ಬ್ರಿಟೀಷ್ ಅಧಿಕಾರಿಗಳೂ ಸಹ ಅನೇಕ ಕೊಡುಗೆಗಳನ್ನು ಲಲಿತಕಲೆಗಳ ಅನೇಕ ಪ್ರಕಾರಗಳಿಗೆ ನೀಡಿದ್ದಾರೆ. ಹಾಗಾಗಿ ಹಲವು ಬಗೆಯ ಚಿತ್ರಕಲೆಗಳು ಇಲ್ಲಿ ಕಂಡುಬರುತ್ತವೆ.

ಪಾರಂಪರಿಕ ನಗರದಲ್ಲಿ ಅರಮನೆಯ ಕಲಾವಿದರು ಹಾಗೂ ವಿವಿಧ ಕಲಾವಿದರುಗಳು ರಚಿಸಿದ ನೂರಾರು ಕಲಾಕೃತಿಗಳು ಅರಮನೆ, ದೇವಾಲಯ, ಆಸ್ಪತ್ರೆ, ಕಾಲೇಜು, ಲೈಬ್ರರಿ, ಮಂದಿರ, ಮಠಗಳಲ್ಲಿ, ಮ್ಯೂಸಿಯಂ, ವಸ್ತುಸಂಗ್ರಹಾಲಯ ಮುಂತಾದ ಸ್ಥಳಗಳಲ್ಲಿ ಕಂಡು ಬರುತ್ತದೆ. ಇಂತಹ ಚಿತ್ರಕಲೆಗಳನ್ನು ಅಧ್ಯಯನ ಮಾಡಿ, ಕಲಾಲೋಕಕ್ಕೆ ಪರಿಚಯಿಸುವ ಉದ್ದೇಶ ಹೊಂದಲಾಗಿದೆ. ಮುಖ್ಯವಾಗಿ ಮೈಸೂರು ಎಂದರೆ ಸಂಪ್ರದಾಯ ಕಲೆಯಂದು ಗುರುತಿಸಿಕೊಂಡ ನಗರವಾಗಿದೆ. ಆದರೆ ಇನ್ನೂ ಅನೇಕ ಚಿತ್ರಕಲೆಯ ಪ್ರಕಾರಗಳು ಮೈಸೂರು ಪ್ರಾಂತ್ಯದಲ್ಲಿ ಕಂಡು ಬರುತ್ತದೆ. ಅವುಗಳನ್ನು ಗುರುತಿಸುವ, ತಿಳಿದುಕೊಳ್ಳುವುದರ ಜೊತೆಗೆ ಅನೇಕ ಹೊಸಸಂಗತಿಗಳು ಹೊರತರಲು ಈ ಅಧ್ಯಯನ ಕೈಗೊಳ್ಳೂವುದು ಸೂಕ್ತವೆಂಬ ಉದ್ದೇಶದಿಂದ ಅಧ್ಯಯನ ನಡೆಸುವ ಉದ್ದೇಶ ಹೊಂದಲಾಗಿದೆ.

ಐತಿಹಾಸಿಕ ಅಲ್ಲದೆ ಸಮಕಾಲೀನರಲ್ಲಿ ಪ್ರಸ್ತುತ ನವ್ಯತೆಯ ಹೊಸ ಆಯಾಮಗಳನ್ನು ಹೊಂದಿದ ಚಿತ್ರಕಲೆಯ ಕಲಾಕೃತಿಗಳನ್ನು ಮಾಡುತ್ತಿರುವ ಕಲಾವಿದರು, ಅವರನ್ನು ಸೃಷ್ಟಿಸುವ ಕಲಾಶಾಲೆಗಳು, ಪ್ರೇರೇಪಿಸುವ ಸಂಘಟನೆಗಳು, ಕಲಾಸಾಹಿತ್ಯ ಬರೆಯುವುದರ ಜೊತೆಗೆ ಕಲಾವಿದರಾಗಿ, ಸೇವೆಸಲ್ಲಿಸಿರುವ, ಸಲ್ಲಿಸುತ್ತಿರುವ, ಕಲೆಗಾಗಿ ದುಡಿಯುತ್ತಿರುವುದರ ಜೊತೆಗೆ ಅನೇಕ ಕಲಾವಿದರು ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಇನ್ನೂ ಕೆಲವು ಕಲಾವಿದರು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ನಾಡಿನ ಕೀರ್ತಿಯನ್ನು ಎಲ್ಲಾ ಕಡೆಗೂ ಹರಡಿದ್ದಾರೆ. ಇದನ್ನು ಸಹ ಗುರುತಿಸಿ ಅನಾವರಣಗೊಳಿಸಬಹುದು. ಈ ಪ್ರಾಂತ್ಯದಲ್ಲಿ ಕಾಲಕಾಲಕ್ಕೆ ಚಿತ್ರಕಲೆಯ ಮೇಲಾದ ಪ್ರಭಾವ ಹಾಗೂ ಪ್ರೇರಣೆಗಳು ಅನೇಕ ಬದಲಾವಣೆಯ ಅಂಶಗಳು ಕಂಡುಬರುತ್ತದೆ. ಚಿತ್ರಕಲಾ ಕೃತಿಯಲ್ಲಿ ರಾಮಾಯಣ, ಮಹಾಭಾರತ,

ಪುರಾಣಗಳಲ್ಲಷ್ಟೇ ಅಲ್ಲದೆ ಅಲಂಕಾರಿಕ, ಸಾಮಾಜಿಕ ವಿಷಯಗಳಲ್ಲದೆ ಹಲವಾರು ನಮೂನೆಗಳ ಚಿತ್ರಗಳು ರಚನೆಯಾಗಿವೆ ಅವುಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಮೈಸೂರಿನ ವಿಷಯಕ್ಕೆ ಸಂಬಂಧಪಟ್ಟಂತೆ ಅನೇಕ ಅಧ್ಯಯನ ನಡೆದಿರುತ್ತದೆ. ಆದರೆ ಚಿತ್ರಕಲೆಯ ಬಗ್ಗೆ ಕುರಿತು ಆಳವಾದ ಅಧ್ಯಯನ ಆಗಿಲ್ಲ. ಮೈಸೂರು ಎಂದರೆ ಲಲಿತಕಲೆಗಳ ತೋಟವಿದ್ದಂತೆ, ಅದರಲ್ಲಿ ಹಲವು ಚಿತ್ರಕಲಾ ಪ್ರಕಾರಗಳ ದೇಶಿಯವಾಗಿ, ರಾಜಾಶ್ರಯದಿಂದ ಸಾರ್ವತ್ರಿಕವಾಗಿ ಬೆಳೆದ ಅನೇಕ ಕಲಾಪರಂಪರೆಗಳು ಬೆಳವಣಿಗೆ ಹೊಂದಿದ್ದು ಅವುಗಳನ್ನು ಗುರುತಿಸಿ ಅಧ್ಯಯನಕ್ಕೆ ತಂದು ಕೊಳ್ಳಲಾಗುವುದು. ಜೊತೆಗೆ ಮೈಸೂರು ಸುತ್ತಲಿನ ಅನೇಕ ತಾಲೂಕಿನಲ್ಲಿಯೂ ಅನೇಕ ಕಲೆಯ ನೆಲೆಗಳು ಇದ್ದರೂ ಮೈಸೂರು ಜಿಲ್ಲೆಯಲ್ಲಿರುವ ಸಮಗ್ರ ಚಿತ್ರಕಲೆಗಳ ಕುರಿತು ಅಧ್ಯಯನ ನಡೆದಿರುವುದಿಲ್ಲ, ಆದ್ದರಿಂದ ಅವುಗಳನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ಕೆಲವು ಬಿಡಿ ಬಿಡಿ ಅಧ್ಯಯನಗಳು ನಡೆದಿದೆ, ಅದರಲ್ಲಿ ಮೈಸೂರು ಭಾಗದ ಕಲೆಗಳ ಕುರಿತು ಅತ್ಯಲ್ಪ ಹೊರ ಮೇಲ್ಮೈ ವಿವರಣೆಯ ವಿಷಯ ಸಂಗ್ರಹಿಸಿದ್ದಾರೆ. ಉದಾ: ಹಸ್ತಪ್ರತಿ ಚಿತ್ರಕಲೆ, ಭಿತ್ತಿ ಚಿತ್ರಕಲೆ, ಗಾಜಿನ ಚಿತ್ರಕಲೆ ಯಾವುದೇ ಆಗಿರಲಿ, ಈ ಅಧ್ಯಯನದಲ್ಲಿ ಪೂರ್ಣ ಪ್ರಮಾಣದಲ್ಲಿ ಅಧ್ಯಯನವಾಗಿಲ್ಲ. ಇಲ್ಲಿ ವಿವಿಧ ಕಲೆಗಳನ್ನು ಹಾಗೂ ಕಲೆಯ ನೆಲೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಜಿಲ್ಲೆಯ ಕಲೆಗಳನ್ನು ಗುರುತಿಸಿ ಮತ್ತು ಇತ್ತೀಚಿನ ಆಧುನಿಕ ಕಲೆಗಳ ಬೆಳವಣಿಗೆಯಿಂದ ಅಂದಿನ ಪರಂಪರೆಯ ಕಲೆಗಳ ಮೇಲಾದ ಪರಿಣಾಮದ ಕುರಿತು ಅಧ್ಯಯನ ಮಾಡುವ ಉದ್ದೇಶವಿದೆ. ಜಾಗತಿಕ ಪರಿಣಾಮದಿಂದ ಕಾಲ ಕ್ರಮೇಣ ನಾಶವಾಗುತ್ತಿರುವ ಕಲೆಗಳನ್ನು ತಡೆಯುವ ಪ್ರಯತ್ನ ಮಾಡದಿದ್ದರೆ. ಮುಂದಿನ ಪೀಳಿಗೆಗೆ ನಮ್ಮ ಪರಂಪರೆಯು ಅರಿವಿಗೂ ಬಾರದೆ ಹೋಗುತ್ತದೆ. ಆದ್ದರಿಂದ ಈ ಅಧ್ಯಯನದಲ್ಲಿ ಜಾಗೃತಿ, ಸಂರಕ್ಷಣೆ, ಮೌಲ್ಯಗಳ ತಿಳುವಳಿಕೆ ಮೂಡಿಸುವ ದಿಶೆಯಲ್ಲಿ ಪ್ರಸ್ತುತ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಅಧ್ಯಾಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಹತ್ತು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗುವುದು. ಪ್ರತಿಯೊಂದು ಅಧ್ಯಯದಲ್ಲಿ ಚರ್ಚಿಸುವ ವಿಷಯಗಳ ಕುರಿತಾದ ಸಂಕ್ಷಿಪ್ತ ಸ್ವರೂಪದ ವಿವರಗಳನ್ನು ನೀಡಲಾಗಿದೆ.

ಅಧ್ಯಾಯ–ಒಂದು ಅಧ್ಯಯನದ ಉದ್ದೇಶ, ಸ್ವರೂಪ ವ್ಯಾಪ್ತಿ ಮತ್ತು ವೈದಾನಿಕತೆ.

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತು ವಿವರಗಳನ್ನು ನೀಡಲಾಗಿದೆ.

ಅಧ್ಯಾಯ–ಎರಡು ಮೈಸೂರು ಜಿಲ್ಲೆಯ ಸಾಂಸ್ಕೃತಿಕ ಪರಿಸರ, ಲಲಿತಕಲೆಗಳ ಬೆಳವಣಿಗೆಯ ನೆಲೆ, ಹಿನ್ನೆಲೆ.

ಮೈಸೂರು ಜಿಲ್ಲೆಯ ಸಾಂಸ್ಕೃತಿಕ ಪರಿಸರ, ಲಲಿತಕಲೆಗಳ ಬೆಳವಣಿಗೆಯ ನೆಲೆ, ಹಿನ್ನೆಲೆಗಳನ್ನು ಎರಡನೆಯ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಅಧ್ಯಾಯ–ಮೂರು ಮೈಸೂರು ಜಿಲ್ಲೆಯ ಭಿತ್ತಿಚಿತ್ರಕಲೆ.

ಮೈಸೂರು ಜಿಲ್ಲೆಯ ಭಿತ್ತಿಚಿತ್ರಕಲೆಯ ರಚನೆಯ ಬೇಕಾಗುವ ಪರಿಕರಗಳು ಹಾಗೂ ಭಿತ್ತಿಯ ಮೇಲೆ ಚಿತ್ರರಚಿಸುವ ವಿಧಿವಿಧಾನಗಳನಲ್ಲದೆ, ಅವುಗಳ ವಸ್ತುವಿಷಯದ ಕುರಿತು ಮೂರನೆಯ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ.

ಅಧ್ಯಾಯ-ನಾಲ್ಕು ಮೈಸೂರು ಜಿಲ್ಲೆಯ ಹಸ್ತಪ್ರತಿ ಚಿತ್ರಕಲೆ.

ಮೈಸೂರು ಜಿಲ್ಲೆಯ ಹಸ್ತಪ್ರತಿ ಚಿತ್ರಕಲೆಯ ವಸ್ತುವಿಷಯ, ರಚನಾವಿಧಾನ, ಬಣ್ಣಗಳ ಬಳಕೆ ಮತ್ತು ಈ ಕಲೆಗೆ ಸಿಕ್ಕ ಪ್ರೋತ್ಸಾಹ ಜೊತೆಗೆ ಸಂಗ್ರಹವಾಗಿರುವ ನೆಲೆಗಳನ್ನು ವಿಂಗಡಿಸಿಕೊಂಡು ನಾಲ್ಕನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ-ಐದು ಗಂಜೀಫಾ ಚಿತ್ರಕಲೆ.

ಮೈಸೂರು ಜಿಲ್ಲೆಯ ಗಂಜೀಫಾ ಚಿತ್ರಕಲೆಗೆ ಸಿಕ್ಕ ಪ್ರೋತ್ಸಾಹ, ಸಂಗ್ರಹ ನೆಲೆಗಳು ಮತ್ತು ವಸ್ತುವಿಷಯ, ಮಾಧ್ಯಮದ ಹಿನ್ನೆಲೆ, ರಚನಾವಿಧಿ, ವಿಧಾನ ಹಾಗೂ ತಂತ್ರಗಾರಿಕೆಗಳನ್ನು ~~ಐದನೆಯ ಅಧ್ಯಾಯದಲ್ಲಿ~~ ಚರ್ಚಿಸಲಾಗಿದೆ.

ಅಧ್ಯಾಯ-ಆರು ಗಾಜಿನ ಚಿತ್ರಕಲೆ.

ಮೈಸೂರು ಜಿಲ್ಲೆಯ ಗಾಜಿನ ಮೇಲಿನ ಚಿತ್ರಕಲೆಯ ಬೆಳವಣಿಗೆ, ಈ ಕಲೆಗೆ ಸಿಕ್ಕ ಪ್ರೋತ್ಸಾಹ, ವಸ್ತುವಿಷಯ ಮಾಧ್ಯಮ ರಚನಾ ವಿಧಿ-ವಿಧಾನಗಳನ್ನು ಕುರಿತು ~~ಆರನೆಯ ಅಧ್ಯಾಯದಲ್ಲಿ~~ ಗುರುತಿಸಲಾಗಿದೆ.

ಅಧ್ಯಾಯ-ಏಳು ಮೈಸೂರು ಜಿಲ್ಲೆಯ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ, ಶೈಲಿ ಮತ್ತು ಲಕ್ಷಣಗಳು.

ಮೈಸೂರು ಜಿಲ್ಲೆಯ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ, ಶೈಲಿ ಮತ್ತು ಪ್ರಮುಖ ಲಕ್ಷಣಗಳನ್ನು ಒಂಭತ್ತನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ-ಎಂಟು ಸಮಾರೋಪ.

ಸಮಾರೋಪ. ಈ ಅಧ್ಯಾಯದಲ್ಲಿ ಒಟ್ಟಾರೆ ಮೇಲಿನ ಎಲ್ಲಾ ಅಧ್ಯಾಯಗಳಿಂದ ಕಂಡು ಕೊಂಡ ಫಲಿತಗಳು ಸಮಾರೋಪದಲ್ಲಿ ಸಮೀಕರಿಸಲಾಗಿದೆ.

ಅಧ್ಯಾಯನದ ವ್ಯಾಪ್ತಿ

ಅಧ್ಯಯನವು ಮೈಸೂರು ಜಿಲ್ಲೆಯ ವ್ಯಾಪ್ತಿಗೆ ಒಳಗೊಂಡಿದೆ. ಇದರಲ್ಲಿ ಚಿತ್ರಕಲೆಯು ಅತ್ಯಂತ ವಿಶಾಲವಾಗಿ ಹರಡಿಕೊಂಡಿದ್ದು, ಈ ಜಿಲ್ಲೆಯಲ್ಲಿ ಏಳೂ ತಾಲೂಕುಗಳಿದ್ದು ಅದರಲ್ಲಿ ಎಲ್ಲಾ ಭಾಗದ ಚಿತ್ರಕಲೆಯ ನೆಲೆಗಳನ್ನು ಕುರಿತು ಅಧ್ಯಯನ ಮಾಡಲಾಗುವುದು. ಹಾಗೂ ಎಲ್ಲಾ ಭಾಗದ ಚಿತ್ರಕಲೆಯ

ನೆಲೆಗಳನ್ನು ಕುರಿತು ಹಾಗೂ ಅಲ್ಲಿ ಕಂಡುಬರುವ ಪ್ರಮುಖ ಕಲಾಪ್ರಕಾರಗಳನ್ನು ವಿಂಗಡಿಸಿಕೊಂಡು, ಅವು ಇರುವಂತಹ ಪ್ರಮುಖ ನೆಲೆಗಳಾದ ದೇವಾಲಯ, ಅರಮನೆ, ಮಠಮಾನ್ಯಗಳ ಕಟ್ಟಡಗಳಲ್ಲಿ ಕಂಬ, ಗೋಡೆ, ಕಿಟಕಿ, ಬಾಗಿಲು, ಮೇಲ್ಛಾವಣಿಗಳಲ್ಲಿ ಅಳವಡಿಸಿ ರಚಿಸಿರುವ ಮತ್ತು ತೂಗುಹಾಕಿರುವ ಚಿತ್ರಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿ, ಈ ಜಿಲ್ಲೆಯ ಕಲಾಗ್ಯಾಲರಿ, ವಸ್ತುಸಂಗ್ರಹಾಲಯ ಮತ್ತು ಕಲಾಶಾಲೆಗಳಲ್ಲಿ ಇರುವ ಚಿತ್ರಗಳನ್ನು ಸಹಿತ ಅಧ್ಯಯನದ ವ್ಯಾಪ್ತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಅದರೊಂದಿಗೆ ಅಧ್ಯಯನಕ್ಕೆ ಪೂರಕವಾಗಿ ಕರ್ನಾಟಕ, ಕರ್ನಾಟಕಕೇತರ ಪ್ರದೇಶದ ಚಿತ್ರಕಲೆಯನ್ನು ಅಧ್ಯಯನಕ್ಕೆ, ಅಲಲ್ಲಿ ತೌಲನಿಕವಾಗಿಯೂ ಚರ್ಚೆಗೆ ಬಳಸಿಕೊಳ್ಳಲಾಗಿದೆ. ಒಟ್ಟಾರೆ ಪ್ರಸ್ತುತ ಅಧ್ಯಯನವು ಪ್ರಮುಖವಾಗಿ ಮೈಸೂರು ಜಿಲ್ಲೆಯ ವ್ಯಾಪ್ತಿಯನ್ನು ಹೊಂದಿದೆ.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ನೆಡದ ಅಧ್ಯಯನಗಳು

ದೃಶ್ಯಕಲೆಯನ್ನೇ ಅಧ್ಯಯನದ ಪ್ರಧಾನ ಉದ್ದೇಶವಾಗಿಟ್ಟುಕೊಂಡು ಬಂದ ಸಂಶೋಧನ ಅಧ್ಯಯನದಲ್ಲಿ ಮೈಸೂರು ಜಿಲ್ಲೆಯಲ್ಲಿ ಕಂಡುಬರುವ ಚಿತ್ರಕಲೆಯ ಬಗ್ಗೆ ನಡೆದ ಅಧ್ಯಯನಗಳಲ್ಲಿ ೨೦೦೩ರಲ್ಲಿ ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಇಲ್ಲಿಂದ ಸಂಶೋಧಕರಾದ ಚರಿತಾ ಅವರು **"ಕರ್ನಾಟಕದ ಚಿತ್ರಕಲಾ ಪರಂಪರೆಯಲ್ಲಿ ಮೈಸೂರು ಸಾಂಪ್ರದಾಯಿಕ ಕಲಾವಿದರ ಪಾತ್ರ ಒಂದು ಅಧ್ಯಯನ"**[೧] ಎಂಬ ಪಿಹೆಚ್.ಡಿ ಪ್ರಬಂಧವು ಡಾ.ಎನ್.ಎಸ್.ರಂಗರಾಜು ಮಾರ್ಗದರ್ಶಕರಿಂದ ಪ್ರಬಂಧ ಹೊರಬಂದಿದೆ.

೨೦೦೪ರಲ್ಲಿ ಮೈಸೂರು ವಿಶ್ವವಿದ್ಯಾಲಯ ಮೈಸೂರು ಇಂದ ಪಿ.ಗೌರೀಶ್ ಅವರ **"ಮೈಸೂರು ತಾಲೂಕಿನ ಜನಪದಚಿತ್ರಕಲೆ"** [೨] ಎಂಬ ಪಿಹೆಚ್.ಡಿ ಪ್ರಬಂಧ ಹೊರಬಂದಿದ್ದು, ಅಂಬಳಿಕೆ ಹಿರಿಯಣ್ಣ ಮಾರ್ಗದರ್ಶಕರಾಗಿದ್ದಾರೆ. ಈ ಪ್ರಾಂತ್ಯದ ಸುತ್ತಮುತ್ತಲಿನಲ್ಲಿ ಕಂಡುಬರುವ ಜನಪದಕಲೆಯನ್ನು ಕುರಿತು ಸಂಶೋಧನೆ ಕೈಗೊಂಡಿದ್ದಾರೆ.

ಮೈಸೂರು ಜಿಲ್ಲೆಯ ಚಿತ್ರಕಲೆಯ ಕುರುತಾಗಿ ಹಲವಾರು ಕಲಾಸಾಹಿತ್ಯಗಳು ಇಲ್ಲಿಯವರೆಗೆ ಹಲವು ಕ್ರಮಗಳಲ್ಲಿ ಬಂದಿವೆ. ಪುಸ್ತಕರೂಪ, ಪತ್ರಿಕಾ ಲೇಖನ, ತುಂಡು ಬರಹಗಳು ಹೀಗೆ ಹಲವು ಬಗೆಯಲ್ಲಿ ಬಂದಿವೆ.

ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ[೩] ಈ ಗ್ರಂಥವನ್ನು ೨೦೧೦ರಲ್ಲಿ (ಸಂ) ಮಾಡಿರುವ ಡಾ.ಆರ್.ಗೋಪಾಲ್.ಅವರು ಹಾಗಿದು, ಪ್ರಕಟಣೆಯನ್ನು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು ಇವರು ಹೊರತಂದಿರುತ್ತಾರೆ. ಮೈಸೂರಿನ ಕಲೆಗಳ ಮಾಹಿತಿ ಮತ್ತು ಸಾಂಸ್ಕೃತಿಕ ವಿವರವಿದೆ.

ಮೈಸೂರು ದರ್ಶನ[೪] ೧ರಿಂದ೪ ಸಂಪುಟಗಳಲ್ಲಿ ಕೆಲವು ಕಲೆಗಳಕುರಿತು ಮಾಹಿತಿಯನ್ನು ಪ್ರಧಾನಸಂಪಾದಕರಾದ ಪ್ರೋ.ಕೆ.ಎಸ್.ರಂಗಪ್ಪ ಅವರಾಗಿದ್ದು ಪ್ರಕಟಣೆಯನ್ನು ಪ್ರಸಾರಾಂಗ ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾಲಯ ಮಾನಸಗಂಗೋತ್ರಿ ಮೈಸೂರು. ೨೦೧೨ರಲ್ಲಿ ಪ್ರಸಾರಾಂಗ ಕ.ರಾ.ಮು.ವಿ. ಕನ್ನಡ ಭಾಷಾಭಿವೃದ್ಧಿ ಯೋಜನೆ ಅಡಿಯಲ್ಲಿ ಹೊರಬಂದಿರುತ್ತದೆ. ಇದರಲ್ಲಿ ಶಿಲ್ಪ, ಚಿತ್ರಕಲೆಯಲ್ಲಿ ಮೈಸೂರುಶೈಲಿ, ಸಾಂಪ್ರದಾಯಿಕ ಭಿತ್ತಿಚಿತ್ರಕಲೆ ಗಂಜೀಫಾಕಲೆ ಇತ್ಯಾದಿಕಲೆ ಮತ್ತು ಚಿತ್ರಕಲೆಯನ್ನು ಗುರುತಿಸಿ ಬರೆದಿದ್ದಾರೆ.೪

ಕಲಾಕೋಶ,[೫] ಎಂಬ ಗ್ರಂಥವನ್ನು (ಪ್ರ.ಸಂ).ಪಿ.ಆರ್.ತಿಪ್ಪೇಸ್ವಾಮಿ ಮತ್ತು ಇತರರು ಸೇರಿ ಕಲಾವಿದ್ಯಾರ್ಥಿಗಳಿಗೆ ಉಪಯುಕ್ತವಾದಂತಹ ಮಾಹಿತಿಯನ ಒಳಗೊಂಡಂತಹ ಪುಸ್ತಕವನ್ನು ಲಲಿತಕಲಾ ಅಕಾಡೆಮಿ ಬೆಂಗಳೂರು ಇವರು ಹೊರತಂದಿರುತ್ತಾರೆ ಈ ಗ್ರಂಥದಲ್ಲಿ ಮತ್ತು ಮೈಸೂರಿನ ಕೆಲವು ಕಲೆಯ ವಿವರವನ್ನು ತಿಳಿಸಿದ್ದಾರೆ.

---

೧. ಚರಿತಾ.: **"ಕರ್ನಾಟಕದ ಚಿತ್ರಕಲಾ ಪರಂಪರೆಯಲ್ಲಿ ಮೈಸೂರು ಸಾಂಪ್ರದಾಯಿಕ ಕಲಾವಿದರ ಪಾತ್ರ ಒಂದು ಅಧ್ಯಯನ"** ಪಿಹೆಚ್.ಡಿ ಮಹಾಪ್ರಬಂಧ, ಮೈ.ವಿ.ವಿ. ೨೦೦೩

೨. ಪಿ.ಗೌರಿಶ್.: **"ಮೈಸೂರು ತಾಲೂಕಿನ ಜನಪದಚಿತ್ರಕಲೆ"** ಪಿ.ಹೆಚ್‌ಡಿ ಮಹಾಪ್ರಬಂಧ, ಮೈ.ವಿ.ವಿ. ೨೦೦೪

೩. ಡಾ.ಆರ್.ಗೋಪಾಲ್.: **ಮೈಸೂರು ಜಿಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾ.ವ.ಮತ್ತು ಸಂ.ನಿ.ಮೈ. ೨೦೧೦

೪. ಪ್ರೋ.ಕೆ.ಎಸ್.ರಂಗಪ್ಪ.: **ಮೈಸೂರು ದರ್ಶನ**, ಪ್ರ.ಪ್ರ.ಕ.ರಾ.ವಿ.ಮಾ.ಮೈ. ೨೦೧೨

೫.ಪಿ.ಆರ್.ತಿಪ್ಪೇಸ್ವಾಮಿ.: **ಕಲಾಕೋಶ**, ಪ್ರ. ಕ.ಲ.ಅ.ಬೆಂ.೨೦೦೮

ಕರ್ನಾಟಕ ಸಂಸ್ಕೃತಿ ಸಮೀಕ್ಷೆ [೬] ಎಂಬ ಪುಸ್ತಕವು ಡಾ.ಎಚ್.ತಿಪ್ಪೇರುದ್ರಸ್ವಾಮಿ ಅವರದಾಗಿದ್ದು ಪ್ರಕಟಣೆ ಡಿ.ವಿ.ಕೆ ಮೂರ್ತಿ ಪ್ರಕಾಶನ ಮೈಸೂರು. ೧೯೯೭ರಲ್ಲಿ ಹೊರಬಂದಿರುತ್ತದೆ. ಗ್ರಂಥದಲ್ಲಿ ನಮ್ಮನಾಡಿನ ಸಂಸ್ಕೃತಿಯನ್ನು ತೆರೆದು ತೋರಿಸುವ ವಿವರಗಳಿವೆ. ಇತಿಹಾಸ, ಲಲಿತಕಲೆಗಳ ಕುರಿತು ಮಾಹಿತಿ ಇದರಲ್ಲಿದೆ. ಅಷ್ಟೇ ಅಲ್ಲದೆ ಭಾರತೀಯ ಸಂಸ್ಕೃತಿ, ಕನ್ನಡನಾಡಿನ ಜನಪದದ ಜೊತೆಗೆ ಮೈಸೂರಿನ ಸಂಸ್ಕೃತಿಯನ್ನು ವಿವರಿಸಿದ್ದಾರೆ.

ಕರ್ನಾಟಕ ಸಂಸ್ಕೃತಿ ಚರಿತ್ರೆ -೪ [೭] ಸಾಮ್ರಾಜ್ಯ ಮತ್ತು ಸಂಸ್ಥಾನ ಚರಿತ್ರೆ ವಿಭಾಗ ಮಾಲೆ-೨೯. ಲೇಖಕ ಡಾ.ಎನ್.ಚಿನ್ನಸ್ವಾಮಿಸೋಸಲೆ ಅವರಾಗಿದ್ದು ಪ್ರಕಟಣೆಯನ್ನು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪ರಲ್ಲಿ ಬಂದ ಗ್ರಂಥವು ಹೊರಬಂದಿರುತ್ತದೆ. ಮೈಸೂರಿನ ಇತಿಹಾಸದ ಸಂಸ್ಕೃತಿಯನ್ನು ಅಲ್ಪಮಟ್ಟಿಗೆ ಕಟ್ಟಿಕೊಟ್ಟಿರುತ್ತಾರೆ. ಅದರಲ್ಲಿ ಲಲಿತಕಲೆಗಳನ್ನು ಸಹ ಚರ್ಚಿಸಿದ್ದಾರೆ.

ಮೈಸೂರು ನೂರಿನ್ನೂರು ವರ್ಷಗಳ ಹಿಂದೆ. [೮] ಎಂಬ ಗ್ರಂಥವನ್ನು ಲೇಖಕರಾದ ಪ್ರೊ.ಪಿ.ವಿ.ನಂಜರಾಜ ಅರಸು ಅವರು ಬರೆದಿದ್ದು ಪ್ರಕಟಣೆಯನ್ನು ಅಭಿರುಚಿ ಪ್ರಕಾಶನ ಸರಸ್ಮತಿಪುರ, ಮೈಸೂರು. ೨೦೦೭ ರಲ್ಲಿ ಈ ಗ್ರಂಥವು ಹೊರ ಬಂದಿರುತ್ತದೆ. ಇದರಲ್ಲಿ ಒಡೆಯರ ಚರಿತ್ರೆ ಹಾಗೂ ಮೈಸೂರಿನ ಕಲೆಗಳ ಹಿನ್ನೆಲೆಯನ್ನು ಮತ್ತು ಬೆಳವಣಿಗೆಯನ್ನು ಸಹ ತಿಳಿಸಿದ್ದಾರೆ.

ಇತ್ತೀಚಿಗೆ ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಗುಲಬರ್ಗಾವಿಶ್ವವಿದ್ಯಾಲಯ, ಧಾರವಾಡ, ಶಿವಮೊಗ್ಗ, ದಾವಣಗೆರೆ, ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಹಲವಾರು ವಿದ್ಯಾರ್ಥಿಗಳು ಚಿತ್ರಕಲೆಯ ಸಂಶೋಧನಾ ಅಧ್ಯಯನದಲ್ಲಿ ನಿರತರಾಗಿದ್ದಾರೆ. ಐದು ವರ್ಷದ ವಿಶೇಷಪರಿಣಿತಿ ಮತ್ತು ಡಿಪ್ಲೋಮ ಅಂತಿಮ ವರ್ಷದ ತರಗತಿಯಲ್ಲಿ ಆ ಕೋರ್ಸ್‌ನ ಅಂಗವಾಗಿ ಕಿರುಪ್ರಬಂಧಗಳನ್ನು ರಚಿಸಿದ್ದಾರೆ. ಮತ್ತು ಬಿ.ಎಫ್.ಎ, ಬಿ.ವಿ.ಎ, ಎಂ.ಎಫ್.ಎ, ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ಅಧ್ಯಯನದ ಭಾಗವಾಗಿ ಕಿರುಸಂಶೋಧನಾ ಪ್ರಬಂಧಗಳು ರಚನೆಯಾಗುತ್ತಿವೆ. ಇದರಲ್ಲಿ ಮೈಸೂರು ಜಿಲ್ಲೆಯ ಸಮಗ್ರವಾದ ಚಿತ್ರಕಲೆಯ ಅಧ್ಯಯನ ನಡೆದಿರುವುದಿಲ್ಲ ಆದರೆ ಬಿಡಿಯಾಗಿ ಕೆಲವು ಸಣ್ಣ ಅಧ್ಯಯನಗಳು ನಡೆದಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ನಡೆಸಲಾಗಿದೆ.

ಅಧ್ಯಯನ ವಿಧಾನ

ಮೈಸೂರು ಜಿಲ್ಲೆಯ ಚಿತ್ರಕಲೆಯ ಅಧ್ಯಯನದ ವಿಧಾನದಲ್ಲಿ ಎರಡು ರೀತಿಯ ಆಕರ ಸಾಮ್ರಾಗಿಗಳನ್ನು ಬಳಸಿಕೊಳ್ಳಲಾಗುವುದು.

೧ ಮೂಲ ಆಕರ ಸಾಮಾಗ್ರಿ
೨ ಆನುಷಂಗಿಕ ಆಕರ ಸಾಮ್ರಾಗಿ

---

೬. ಡಾ.ಎಚ್.ತಿಪ್ಪೇರುದ್ರಸ್ವಾಮಿ,: **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಪ್ರಡಿ.ವಿ.ಕೆ ಮೂರ್ತಿ ಪ್ರಕಾಶನ ಮೈಸೂರು,೧೯೯೭
೭. ಡಾ.ಎನ್.ಚಿನ್ನಸ್ವಾಮಿ ಸೋಸಲೆ; **ಕರ್ನಾಟಕ ಸಂಸ್ಕೃತಿ ಚರಿತ್ರೆ** -೪,ಪ್ರ ಕ.ವಿ.ವಿ.ಹಂಪಿ, ೨೦೦೪
೮. ಪ್ರೊ.ಪಿ.ವಿ.ನಂಜರಾಜ ಅರಸು; **ಮೈಸೂರು ನೂರಿನ್ನೂರು ವರ್ಷಗಳ ಹಿಂದೆ**, ಪ್ರ ಅಭಿರುಚಿ ಪ್ರಕಾಶನ ಸರಸ್ಮತಿಪುರ, ಮೈಸೂರು. ೨೦೦೭

೧ ಮೂಲ ಆಕರ ಸಾಮ್ರಗಿ : ಮೂಲ ಆಕರ ಸಾಮಾಗ್ರಿಯೇ ಪ್ರಥಮ ಹಾಗೂ ಅತಿಮುಖ್ಯವಾಗಿರುತ್ತದೆ. ಇದರಲ್ಲಿ ಕ್ಷೇತ್ರಕಾರ್ಯಯು ಅತಿಮುಖ್ಯ, ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನು ತಿಳಿದುಕೊಳ್ಳವುದಕ್ಕೆ ಬೇಕಾಗುವಂತಹ ವಿಧಾನ ಇದಾಗಿದೆ. ಒಂದು ನಾಡಿನ ಸಂಸ್ಕೃತಿ, ಇತಿಹಾಸ, ಕಲೆ ವಿಷಯಗಳ ಬಗ್ಗೆ ಸಂಶೋಧನೆ ಮಾಡುವಾಗ ಕ್ಷೇತ್ರ ಕಾರ್ಯ ಪ್ರಮುಖವಾಗಿರುತ್ತದೆ.

ಕ್ಷೇತ್ರಕಾರ್ಯದಲ್ಲಿ ಅವಲೋಕನ ಅತಿಮುಖ್ಯವಾದ ಅಂಶವಾಗಿದ್ದು ಮೂಲಭೂತವಾದ ಭಿತ್ತಿಚಿತ್ರಗಳು, ಹಸ್ತಪ್ರತಿ ಚಿತ್ರಗಳು, ಹಾಗೂ ಚಿತ್ರಕಲಾ ಕೃತಿಗಳು ಕಲಾವಿದರು ಮುಖ್ಯ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ, ಛಾಯಾಚಿತ್ರಣ ಮಾಡಿಕೊಂಡು ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅದೇ ಸ್ಥಳಗಳಲ್ಲಿ ಸಂಗ್ರಹಿಸಿಕೊಂಡು ಅಧ್ಯಯನ ಮಾಡಲಾಗಿದೆ. ಉದಾ: ಅರಮನೆ, ದೇವಾಲಯ, ಮಠ, ಹಸ್ತಪ್ರತಿ ಸಂಗ್ರಹಾಲಯ ಹಾಗೂ ಸ್ಥಳೀಯ ಹಿರಿಯರ ಮಾಹಿತಿಯನ್ನು ಪಡೆಯಲಾಗಿದೆ. ಹೀಗೆ ಹಲವಾರು ಮೂಲಚಿತ್ರಗಳು ಲಭ್ಯವಿಲ್ಲದ ಸಮಯದಲ್ಲಿ ಅವುಗಳನ್ನು ಪ್ರತಿಕೃತಿ ಮಾಡಿಕೊಂಡು ಅಥವಾ ಛಾಯಾಚಿತ್ರ ಮಾಡಿಕೊಳ್ಳಲಾಗಿದೆ. ಮತ್ತು ಕಲಾಕ್ಷೇತ್ರದಲ್ಲಿ ಹಲವಾರು ವಿದ್ವಾಂಸರ ಜೊತೆಗೆ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹೀಗೆ ಈ ಕ್ಷೇತ್ರಕಾರ್ಯದಿಂದ ದೊರೆತ ಹಲವಾರು ವಿವರಗಳನ್ನು ವಿಷಯ ಕುರಿತು ಮಾರ್ಗದರ್ಶಕರೊಂದಿಗೆ ಚರ್ಚಿಸಿ, ಸೂಕ್ತ ವಿಷಯವನ್ನು ಸಂಗ್ರಹಿಸಿ ಪ್ರಬಂಧ ಬರವಣಿಗೆಗೆ ಅನೂಕೂಲವಾಗುವಂತೆ ಪಟ್ಟಿಕೆಗಳಲ್ಲಿ ಸಂಗ್ರಹ ಮಾಡಿಕೊಂಡು ಪ್ರಸ್ತತ ಪ್ರಬಂಧವನ್ನು ರಚನೆ ಮಾಡಲಾಗಿದೆ.

ಆನುಷಂಗಿಕ ಆಕರ ಸಾಮಾಗ್ರಿ

ಪ್ರಬಂಧ ರಚಿಸುವಲ್ಲಿ ಎರಡನೆಯ ವಿಧಾನವಾದಂತಹ ಆನುಷಂಗಿಕ ಆಕರ ಸಾಮಾಗ್ರಿಯಲ್ಲಿ. ಈ ಸಂಶೋಧನೆಗೆ ಸಂಬಂಧಿಸಿದಂತೆ ಸಂಶೋಧನ ಮಹಾಪ್ರಬಂಧಗಳು, ಕಿರುಪ್ರಬಂಧಗಳು, ಪ್ರಕಟಿತ ಮತ್ತು ಅಪ್ರಕಟಿತ ಕಲಾಸಾಹಿತ್ಯ, ಕೆಲವು ಕಲಾ ಲೇಖನಗಳು, ಕಲೆಯ ಹಲವು ರೀತಿಯ ಗ್ರಂಥಗಳು, ಸಂಪುಟಗಳು, ವಿಶ್ವಕೋಶ, ಗೆಜೆಟಿಯರ್‌ಗಳು, ಅನುವಾದಗ್ರಂಥಗಳು, ಅಲ್ಲದೆ ದೇಶಿಯ-ವಿದೇಶಿಯ ಪ್ರವಾಸಿಗರ ಬರಹಗಳು, ಸಂಶೋಧನಾ ಲೇಖನಗಳು, ಪತ್ರಗಳು ಮೌಖಿಕ ಮಾಹಿತಿಗಳು, ಮುಂತಾದ ಮೂಲದಿಂದ ಮಾಹಿತಿ ಸಂಗ್ರಹಿಸಿಕೊಂಡು ಅಧ್ಯಯನ ಮಾಡಲಾಗಿದೆ. ಹೀಗೆ ಆನುಷಂಗಿಕ ಆಕರ ಸಾಮಾಗ್ರಿಗಳನ್ನು ವಿವಿಧ ಪಟ್ಟಿಗಳಲ್ಲಿ ಸಂಗ್ರಹ ಮಾಡಿಕೊಂಡು ಪ್ರಸ್ತುತ ಕಿರುಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

~~~~~~~~~~~o~~~~~~~~~~~~
~~~~~~~~~~~

ಅಧ್ಯಾಯ : ಎರಡು

ಮೈಸೂರು ಜಿಲ್ಲೆಯ ಸಾಂಸ್ಕೃತಿಕ ಪರಿಸರ, ಲಲಿತಕಲೆಗಳ ಬೆಳವಣಿಗೆಯ ನೆಲೆ-ಹಿನ್ನಲೆ.

ಅಧ್ಯಾಯ: ಎರಡು

ಮೈಸೂರು ಜಿಲ್ಲೆಯ ಸಾಂಸ್ಕೃತಿಕಪರಿಸರ, ಲಲಿತಕಲೆಗಳ ಬೆಳವಣಿಗೆಯ ನೆಲೆ ಹಿನ್ನಲೆ

ಮೈಸೂರು ಸಾಂಸ್ಕೃತಿಕ ರಾಜಧಾನಿಯಾಗಿರುವಂತೆ ಈ ಹಿಂದೆ ಕರ್ನಾಟಕದ ರಾಜಧಾನಿಯೂ ಆಗಿದ್ದಿತು. ಬಹಳ ಹಿಂದಿನಿಂದಲೇ ಆದಿಮಾನವನ ಪ್ರಾರಂಭದ ಆ ದಿನಗಳಲ್ಲಿದ್ದ ನೆಲೆಗಳನ್ನು ಈ ಜಿಲ್ಲೆಯು ಹೊಂದಿದ್ದು ಅತಿ ಪ್ರಾಚೀನತೆಯ ಹಿನ್ನೆಲೆಯನ್ನು ತನ್ನ ಒಡಲಿನಲ್ಲಿ ಬಚ್ಚಿಟ್ಟುಕೊಂಡಿದೆ. ಒಂದು ಚೈತನ್ಯಪ್ರಾಯದ ಸಂಸ್ಕೃತಿಯಲ್ಲಿ ಬೆಳೆದ ಶ್ರೀಮಂತ ಸಾಂಸ್ಕೃತಿಕ ಪರಿಸರ ಇದು ಈ ಪ್ರದೇಶದ ಇತಿಹಾಸದಲ್ಲಿ ಲಲಿತಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹದೊರತದ್ದರಿಂದ ಇದು ಕಲೆಯ ತವರೂರಾಗಿದೆ. ದೀರ್ಘಇತಿಹಾಸ ಹೊತ್ತ ಈ ನಾಡು ತನ್ನ ಒಡಲಿನಲ್ಲಿ ವಿವಿಧ ಕಲಾಪ್ರಕಾರಗಳನ್ನು ಹೊಂದಿ ಇಂದು ಕಲೆಗಳ ಪರಂಪರಾಗತ ಬೀಡಾಗಿದೆ. ದಕ್ಷಿಣ ಭಾರತದ ಹೃದಯ ಭಾಗದಲ್ಲಿರುವ ಮೈಸೂರು ಜಿಲ್ಲೆ, ಕನ್ನಡನಾಡಿನ ತೆಂಕಣದಿಕ್ಕು ಪೂರ್ವ ಭಾಗದಲ್ಲಿರುವ ಒಂದು ಪ್ರದೇಶ. ಈ ಭಾಗವು ಹಿಂದೆ ಮೈಸೂರು ರಾಜ್ಯವಾಗಿತ್ತು. ಇಂದು ಭಾರತದೊಳಗಿನ ಕರುನಾಡಿನ ಪ್ರಾಚೀನ ನಗರಗಳಲ್ಲಿ ಒಂದೆನಿಸಿದೆ. ನೈಸರ್ಗಿಕವಾಗಿಯೂ ಸುಂದರ ತಾಣಗಳನ್ನು ಒಳಗೊಂಡ ಸಂಪದ್ಭರಿತ ನೆಲೆಯಾಗಿ, ಸಾಂಸ್ಕೃತಿಕ ರಂಗಕ್ಕೆ ಅತ್ಯಂತ ಮಹತ್ವ ಪೂರ್ಣವಾದ ತನ್ನದೆ ಆದ ದೇಶಿಯ ಕೊಡುಗೆಗಳನ್ನು ನೀಡಿದ್ದು, ಆಧುನಿಕ ಕಾಲದ ಪ್ರವಾಹಕ್ಕೆ ಕೊಚ್ಚಿ ಹೋಗದೆ ಅದರ ಅನುಭವದಿಂದ ಪರಿಪುಷ್ಪಗೊಳ್ಳುತ್ತಾ ಇನ್ನೂ ಬೆಳೆಯುತ್ತಲೇ ಇದೆ.

ಯಾವುದೇ ಪ್ರಾಂತ್ಯ ಅಥವಾ ದೇಶದ ಸಂಸ್ಕೃತಿ ನೋಡಬೇಕಾದರೆ ಕಲೆಯೇ ಮುಖ್ಯ. ಕಲೆಯ ಪರಿಸರವೇ ಸಂಸ್ಕೃತಿಯ ಜೀವಾಳ. ಭಾರತೀಯ ಸಂಸ್ಕೃತಿಯು ಮೊಟ್ಟಮೊದಲು ರೂಪುಗೊಂಡಿರುವುದೆ ದಖ್ಖನ್ ಪ್ರಸ್ಥಭೂಮಿಯಲ್ಲಿ. ಸಂಸ್ಕೃತಿ ಎಂದರೆ ಒಂದು ದೇಶದ ಅಥವಾ ಒಂದು ಜನಾಂಗದ ಮಾನಸಿಕವಾದ ಸಾಧನೆ. ಅಷ್ಟೇಅಲ್ಲದೆ ಪಕ್ವತೆ, ಬುದ್ದಿವಾದ, ನಾಗರಿಕತೆ ಅಲ್ಲದೆ ವ್ಯವಸಾಯ, ಕೃಷಿ, ಸಭ್ಯತೆ, ಸಭಾನಗರ, ಸಂರಕ್ಷಿಸು ಎಂದೆಷ್ಟೇ ಅಲ್ಲದೆ ಗೌರವಿಸು, ಆರಾಧಿಸು, ಸೇವೆಮಾಡು ಎಂಬಿತ್ಯಾದಿ ಅರ್ಥಗಳು ಇರುತ್ತದೆ.[೧]

೧. ಎಚ್.ತಿಪ್ಪೇರುದ್ರಸ್ವಾಮಿ: ಕರ್ನಾಟದ ಸಂಸ್ಕೃತಿ ಸಮೀಕೆ, ಪು.ಸ.-೨೫

ಸಂಸ್ಕೃತಿಯ ಪ್ರಧಾನ ಅಂಶವೇ ಜನಜೀವನದ ಅಂತರಂಗದ ಅನುಭವ. ಅಲ್ಲದೆ ಆಯಾಪ್ರದೇಶದ ಬಾಷೆ, ಧರ್ಮ, ಜನಗಳ ಸಮಸ್ಯೆಗಳಿಗೆ ಉತ್ತರ ಕಾಣಬಯಸುವ ಅಂತರಂಗದ ಸಾಧನೆಯ ಮೂಲಸಾಮಾಗ್ರಿಯೇ ಆಗಿದೆ.

ನಮ್ಮ ಪುರಾಣೇತಿಹಾಸವಾದ ಪದ್ಮಪುರಾಣ ಮತ್ತು ವಿಷ್ಣುಪ್ಮರಾಣಗಳಲ್ಲಿ ಮಾಹಿಷ್ಮತಿ, ಮಹಿಷಮಂಡಲ, ಮಹಿಷರಾಷ್ಟ್ರ ಇತ್ಯಾಧಿ ಹೆಸರುಗಳಿಂದ ಮೈಸೂರು ಕೂಡಿದೆ. ಕಾರಣ ಮಹಿಷ ಎಂಬ ರಾಕ್ಷಸನು ಈ ಸ್ಥಳದಲ್ಲಿ ಇದ್ದನ್ನೊಂದು ಅದು ತಿಳಿಸುತ್ತದೆ. ಅವನು ಇಲ್ಲಿಯ ಜನರಿಗೆ ತುಂಬ ಉಪಟಳ ಕೊಡುತ್ತಿದ್ದನು. ಆಗ ಇಲ್ಲಿ ಆಳ್ವಿಕೆ ಮಾಡುತ್ತಿದ್ದ ರಾಜನು ತನ್ನ ಕುಲದೇವತೆಯಾದ ವಾಸಂತಿಕ, ದುರ್ಗ ಅಥವಾ ಚಾಮುಂಡೇಶ್ವರಿ ಎಂದು ಕರೆಯುವ ಆ ದೇವಿಯ ಅನುಗ್ರಹದಿಂದ ತೊಂದರೆ ತಪ್ಪಿಸಿಕೊಂಡ ನಂತರ ಶಾಂತಿನೆಲೆಸಿತು.[೨] ಈ ಪ್ರದೇಶದಲ್ಲಿ, ಇದರ ನೆನಪಿಗಾಗಿ ಮಹಿಷಾಪುರ ಮತ್ತು ಮಹಿಷಾನ ವಿಗ್ರಹವನ್ನು ಚಾಮುಂಡಿ ಬೆಟ್ಟದಲ್ಲಿ ದೊಡ್ಡದಾಗಿ ನಿರ್ಮಿಸಿರುವುದು ನಾವು ಕಾಣಬಹುದಾಗಿದೆ. ಮೈಸೂರು ಚರಿತ್ರೆಯನ್ನು ಗುರುತಿಸುವಂತಹ ಅಂಶಗಳಲ್ಲಿ ಮೊದಲಿಗೆ ಪ್ರಾರಂಭವಾದಂತಹ ಘಟ್ಟವು, ಕ್ರಿ.ಶ ಪೂರ್ವದಲ್ಲಿ ಚಾಣಕ್ಯನ ಸಹಾಯದಿಂದ ಪಟ್ಟಕ್ಕೆ ಬಂದ ಚಂದ್ರಗುಪ್ತ ಮೌರ್ಯನು ಮಾಹಿಷ್ಮತಿಗೆ ಬಂದು ನಂತರ ಶ್ರವಣಬೆಳಗೊಳಕ್ಕೆ ಹೋಗಿ ನೆಲೆಸಿದನು ಎಂದು. ಆ ನಂತರ ಮೌರ್ಯನ ಮೊಮ್ಮಗನಾದ ಅಶೋಕನು ಬೌದ್ಧಧರ್ಮ ಬೋಧಕರನ್ನು ಮಹಿಷಮಂಡಲಕ್ಕೆ ಕಳುಹಿಸಿದನು. ಮಹಿಷಾರಾಷ್ಟ್ರ ಕ್ರಿ.ಶದ ಪ್ರಾರಂಭದ ಹೊತ್ತಿಗೆ ಪ್ರಬಲಶಕ್ತಿಯಾಗಿ ಬೆಳೆದಿದ್ದು ಎಂಬುದಕ್ಕೆ ತಮಿಳುನಾಡಿನ ಚೋಳರಾಜನು ಸಹ ಶ್ರೀಲಂಕಾ ಗೆಲ್ಲಲು ಮೈಸೂರುಸೇನೆಯ ಸಹಾಯ ಪಡೆದಿದ್ದನಂತೆ ಎಂಬ ಉಲ್ಲೇಖಗಳು ಐತಿಹಾಸಿಕ ಗ್ರಂಥಗಳಲ್ಲಿ [೩] ಕಾಣಸಿಗುವುದು, ಕೆಲವು ಶಾಸನಗಳ ಪ್ರಕಾರ ಎರುಮೈನಾಡು ಎಂದು ಮತ್ತೊಂದು ಹೆಸರಿನಿಂದಲ್ಲೂ ಸಹ ಗುರುತಿಸುತ್ತಾರೆ. ಮುಂದೆ ಗ್ರೀಕ್ ದೇಶದಿಂದ ಬಂದ ಟಾಲಾಮಿ ಎಂಬ ಪ್ರವಾಸಿಯು ತನ್ನ ಗ್ರಂಥದಲ್ಲಿ ಪುನ್ನಾಟ, ಪೌನ್ನಾಟ ಎಂಬುದನ್ನು ಕ್ರಿ.ಶ ೧೫೦ರಲ್ಲಿ ಮೈಸೂರಿಗೆ ಕರೆದಿದ್ದಾನೆ. ಇತ್ತೀಚಿನ ಕಾಲದ ಸಾಹಿತ್ಯಗ್ರಂಥಗಳಲ್ಲಿ ಮೈಸ(ಸು,ಸೆ)ನಾಡು, ಮಹಿಸೂರು ತದನಂತರ ಮೈಸೂರು ಎಂದು ಪರಿವರ್ತನೆ ಆಗಿ ಪ್ರಸಿದ್ಧ ಸ್ಥಳವಾಗಿದೆ.[೪] ಎಂದು ವಿದ್ವಾಂಸರು ತಿಳಿಸುತ್ತಾರೆ.

೧೧೭೫ ರಿಂದಲೆ ಮೈಸೂನಾಡು ೭೦ ಗ್ರಾಮಗಳ ಪಾಳೇಪಟ್ಟು ಆಗಿತ್ತು. ೧೪೯೯ ರ ಶಾಸನಗಳಲ್ಲಿ ಮೈಸೂರು ಎಂಬ ಪದ ಪೂರ್ಣವಾಗಿ ಬಳಕೆಗೆ ಬಂದಿದೆ. ಹೀಗೆ ಸುಧೀರ್ಘವಾದ ಒಂದು ಜನಾಂಗದ ಸಂಸ್ಕೃತಿಯ ಭವ್ಯಪರಂಪರೆಯ ಇತಿಹಾಸವನ್ನು ಇದು ಹೊಂದಿದೆ. ಎಂದು ಈ ಐತಿಹಾಸಿಕ ಕಾಲವನ್ನು ಪ್ರಾಚೀನ ಇತಿಹಾಸದ ಕಾಲಘಟ್ಟವಾಗಿ ಗುರುತಿಸಲಾಗಿದೆ. ಇನ್ನೂ ಮುಂದೆ ಇದರಲ್ಲಿ ಹಲವು ಪ್ರಮುಖ ರಾಜವಂಶಸ್ಥರು ಈ ನಾಡಿನ ಲಲಿತಕಲೆಗೆ ಅವಿಸ್ಮರಣೀಯ ಪ್ರೋತ್ಸಾಹದ ಕೊಡುಗೆ ನೀಡಿದ್ದಾರೆ. ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳ ಮತ್ತು ವಿಜಯನಗರದ ಪರಂಪರೆಯ ನಿಷ್ಠೆ ಸಂಪ್ರದಾಯಗಳನ್ನು ಸಮರ್ಥವಾಗಿ ಮುಂದುವರೆಸಿದ್ದು ಮೈಸೂರು ಒಡೆಯರು. ಇವರ ಚರಿತ್ರೆಯೂ ಆರು ಶತಮಾನಗಳ ಕಾಲದ ಬಹಳ ದೊಡ್ಡ ಮನೆತನದ ಸಂಸ್ಕೃತಿ ಸಂಪನ್ನವಾದುದ್ದಾಗಿದೆ.[೫] ಇಲ್ಲಿಂದ ಒಡೆಯರ ಇತಿಹಾಸವಾಗಿ ಬೆಳೆಯಿತು. ಹಾಗಾಗಿ ಸಾಂಸ್ಕೃತಿಕ ರಾಜಧಾನಿಯಾಗಿ ಬೌದ್ಧಿಕ ಸಂಪತ್ತು ಅಪರಿಮಿತವಾಗಿದೆ.

---

೨. ಪ್ರೊ.ಕೆ.ಎಸ್. ರಂಗಪ್ಪ,: ಮೈಸೂರುದರ್ಶನ, ಪು.ಸ-೫

೩. ಪ್ರೊ.ನಂಜರಾಜಅರಸು,: ಮೈಸೂರು ನೂರಿನ್ನೂರು ವರ್ಷಗಳ ಹಿಂದೆ. ಪು.ಸ-೩

೪. ೫. ಡಾ.ಆರ್.ಗೋಪಾಲ್: ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.ಸಂ-೨೮-೪೩

ಇಲ್ಲಿ ಕನ್ನಡ ಮತ್ತು ಸಂಸ್ಕೃತಗಳೆರಡು ಪ್ರೋತ್ಸಾಹ ಪಡೆದವು. ಇಷ್ಟೆಲ್ಲ ಗಟ್ಟಿತನ ಹೊಂದಿದ್ದರು ಮೈಸೂರು ಒಡೆಯರ ಮೂಲದ ಬಗ್ಗೆ ಚರಿತ್ರಕಾರರಲ್ಲಿ ಒಮ್ಮತವಿಲ್ಲ ಚಂದ್ರ ಅಥವಾ ಯದುವಂಶದ ಮನೆತನದವರು ಎಂದು, ಮೂಲವನ್ನು ಮಹಾವಿಷ್ಣು, ಶ್ರೀಕೃಷ್ಣ, ಬ್ರಹ್ಮ, ಚಂದ್ರನ ಮೂಲಕ ಯದುರಾಯರ ವರೆಗೆ ಪೌರಾಣಿಕ ವಂಶಾವಳಿ ಹೇಳುತ್ತಾರೆ. ಮೂಲಸ್ಥಳವನ್ನು ದ್ವಾರಕೆಯೆಂದು ಗುರುತಿಸಿದ್ದಾರೆ.

ಇನ್ನೊಂದರ ಪ್ರಕಾರ ಇಲ್ಲಿನ ಅರಸರು ಹೊರಗಿನಿಂದ ಬಂದವರಾಗಿರಲಿಕ್ಕಿಲ್ಲ, ಪ್ರಾಚೀನ ಕಾಲದಿಂದ ಮೈಸೂನಾಡು ಒಂದು ಪುಟ್ಟ ಭೌಗೋಳಿಕ ಘಟಕ್ಕೆ ಇದನ್ನು ಆಳುತ್ತಿದ್ದವರು ಇಲ್ಲಿನ ಮಣ್ಣಿನ ಮಕ್ಕಳೇ ಆಗಿರುತ್ತಾರೆ.[೬] ಕೃಷ್ಣ, ಯದು ಮುಂತಾದ ವಿವರಗಳು ಬಹುಶಃ ಹೊಸ ಮನೆತನವೊಂದರ ಗಟ್ಟಿ ನೆಲಗಟ್ಟಿಗೆ ಒದಗಿಸಿಕೊಟ್ಟ ಹಿನ್ನೆಲೆಯಾಗಿದೆ. ಮೈಸೂರು ಪ್ರಾಂತ್ಯದಲ್ಲಿ ಯದುವಂಶ ಪ್ರಾರಂಭವಾಗುವುದೇ ೧೩ನೇ ಶತಮಾನಾರ್ಧದ ನಂತರ ಮೊದಲೆ ಆಳ್ವಿಕೆ ಮಾಡುತ್ತಿದ್ದ ಚಾಮರಾಜರು ಗಂಡು ಸಂತಾನವಿರಲಿಲ್ಲ ಮತ್ತು ಸ್ವರ್ಗಸ್ಥರಾಗಿದ್ದರು, ಪತ್ನಿ ದೊಡ್ಡದೇವಾಜಮ್ಮಣ್ಣೀ ಮತ್ತು ಮಗಳನ್ನು ದುಷ್ಟ ಸೇನಾಪತಿಯಾದ ಮಾರನಾಯಕನು ಮದುವೆಯಾಗುವಂತೆ ಪೀಡಿಸುತ್ತಿದ್ದ. ಇವರಿಗೆ ಈ ಸಂಕಷ್ಟದಿಂದ ಪಾರುಮಾಡಿದ ಯದುರಾಯನಿಗೆ ತನ್ನ ಮಗಳನ್ನು ಕೊಟ್ಟು ೧೩೯೯ರಲ್ಲಿ ಪಟ್ಟಾಭಿಷೇಕ ಮಾಡಿ ರಾಜ್ಯಭಾರ ವಹಿಸಿದ ವಿವರಗಳಿವೆ.

ಒಡೆಯರ್ ಎಂಬ ಬಿರುದು ಸಹ ಇಲ್ಲಿನಿಂದ ಪ್ರಾರಂಭವಾಗುತ್ತದೆ. ಮುಂದಿನ ಎಲ್ಲಾ ಅರಸರಿಗೂ ಗೌರವ, ಅಧಿಕಾರದ ಪ್ರತಿಯಾಗಿ ಮತ್ತು ೩೩ಗ್ರಾಮಗಳ ಪ್ರಾಂತದ ಅಧಿಪತ್ಯಕ್ಕಾಗಿ ಮತ್ತು ಕಷ್ಟಕಾಲದಲ್ಲಿ ದಾರಿ ತೋರಿಸಿದ ಜಂಗಮನ ನೆನಪಿಗಾಗಿ ಹೆಸರಿನೊಂದಿಗೆ ಗೌರವಸೂಚಕವಾಗಿ ಇರುತ್ತದೆ. ಯದುರಾಯರಿಂದ ಒಡೆಯರ್ ಮನೆತನದ ಇತಿಹಾಸ ಆರಂಭವಾಗುತ್ತದೆ. ಒಟ್ಟು ೨೫ ಅರಸರು ರಾಜ್ಯಭಾರ ಮಾಡಿರುತ್ತಾರೆ,

೨೬ನೇ ಖಾಸಗಿ ರಾಜನಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರು ಇಂದು ಮುನ್ನಡೆಸುತ್ತಿದ್ದಾರೆ. ಮೊದಲನೆಯ ಒಡೆಯರ್ ಅರಸನಾದ ಯದುವಂಶ ಸಂಸ್ಥಾಪಕನಾದ ಯದುರಾಯ ನಂತರ ಹಿರಿಯಬೆಟ್ಟದ ಚಾಮರಾಜ ಒಡೆಯರು, ತಿಮ್ಮರಾಜ ಒಡೆಯರು ಹಾಗೂ ಹಿರಿಯಚಾಮರಾಜ ಒಡೆಯರು, ಬೆಟ್ಟದ ಚಾಮರಾಜ ಒಡೆಯರು, ಇಮ್ಮಡಿ ತಿಮ್ಮರಾಜಒಡೆಯರು ಮತ್ತು ಬೋಳಚಾಮರಾಜ ಒಡೆಯರು, ರಾಜ ಒಡೆಯರ್ ವರೆಗೆ ಅಂದರೆ ೧೩೯೯ ರಿಂದ ೧೬೧೦ ರವರೆಗೆ ೨೧೧ ವರ್ಷಗಳು ಪಾಳೇಗಾರರಾಗಿ ಆಳ್ವಿಕೆ ನಡೆಸಿದ್ದಾರೆ.

ಯದುರಾಯ ನಂತರ ಹಿರಿಯಬೆಟ್ಟದ ಚಾಮರಾಜ ಒಡೆಯರು ಯಾದವಗಿರಿಯಲ್ಲಿ ಕೋಟೆಯನ್ನು ಕಟ್ಟಿಸಿ ನಾಲ್ಕುದಿಕ್ಕಿಗೆ ಬಾಗಿಲುಗಳನ್ನು ಮಾಡಿಸಿ ಶಿಲ್ಪಕಲೆಯ ಸೌಂದರ್ಯದಿಂದ ಮೆರಗನ್ನು ಹೆಚ್ಚಿಸುತ್ತಾನೆ. ವಾಸ್ತುಕಲೆಯ ಭವ್ಯತೆ ಸಾಕ್ಷಿಯಾಗಿ ಈ ದೇವಾಲಯವಿದೆ ಇದಕ್ಕೆ ಮೇಲುಕೋಟೆ ಎಂದು ಹೆಸರು ಇಟ್ಟಿದ್ದಾರೆ. ಇವರ ನಂತರ ತಿಮ್ಮರಾಜ ಒಡೆಯರು, ಆ ನಂತರದ ಮೇಲೆ ಹಿರಿಯಚಾಮರಾಜ ಒಡೆಯರು ತರುವಾಯ ಬೆಟ್ಟದ ಚಾಮರಾಜ ಒಡೆಯರು ಇವರಿಗೆ ಅರಿನಿಷೂದನರೆಂದು ಹೊಗಳುತ್ತಾರೆ. ಶಿಥಿಲಕೋಟೆಯ ದುರಸ್ತಿ, ಪುರಗೇರಿ, ತಮ್ಮಟಗೇರಿ ಸೊಮೇಶ್ವರ, ಲಕ್ಷ್ಮೀನಾರಯಣಸ್ವಾಮಿ ಗುಡಿಗಳು ಅಲ್ಲದೆ ೧೫ನೇ ಶತಮಾನದಲ್ಲಿ ಕೋಟೆ ಕಟ್ಟಿಸಿ, ಮಹಿಸೂರು ನಗರ ಎಂದು ಹೆಸರನ್ನು ಇಟ್ಟದ್ದು ಇವರೆ ನಂತರ ಇಮ್ಮಡಿತಿಮ್ಮರಾಜ ಅರಸರ ನಂತರ ಬೋಳಚಾಮರಾಜ ಒಡೆಯರು ಇವರಿಗೆ ಸುಗುಣಗಂಭೀರ ಎಂದು ಮೈಸೂರು ಅರಮನೆಯ ಕೋಟೆಯ ಒಳಗೆ ತ್ರಿಣೇಶ್ವರ ದೇವಾಸ್ಥಾನವನ್ನು ನಿರ್ಮಿಸಿದ್ದರು.

೬. ಪ್ರೊ.ಕೆ.ಎಸ್. ರಂಗಪ್ಪ: ಮೈಸೂರುದರ್ಶನ, ಪು.ಸ-೫

ಇದು ಅತಿ ಪ್ರಾಚೀನ ದೇವಾಲಯವಾಗಿದೆ ಹೀಗೆ ಅರಮನೆ ಅವರಣದಲ್ಲದೆ ನಂತರ ಚಾಮರಾಜ ಒಡೆಯರು ಕೋಟೆ ಕಟ್ಟಿಸಿ ಭದ್ರಪಡಿಸಿದರು. ಆ ನಂತರ ೧೬೧೦ ರಿಂದ ೧೬೩೮ ವರೆಗೆ ೨೮ ವರ್ಷಗಳು ವಿಜಯನಗರದ ಅಧೀನ ರಾಜರಾಗಿದ್ದರು. ರಾಜ ಒಡೆಯರು ಒಡೆಯರ ಮನೆತನವನ್ನು ಭದ್ರಬೂನಾದಿಯ ಮೇಲೆ ನಿಲ್ಲಿಸಿದ್ದು ಈ ರಾಜ ಒಡೆಯರು. ರಾಜ್ಯ ನಿರ್ಮಾಣ ಸ್ವತಂತ್ರರಾಗಲು ಹಂತ ಹಂತವಾಗಿ ಸಫಲರಾದರು. ಶ್ರೀರಂಗಪಟ್ಟಣವನ್ನು ರಾಜಧಾನಿ ಮಾಡಿ ಅಲ್ಲಿಂದ ಹೊಸ ಅಧ್ಯಾಯ ಆರಂಭವಾಯಿತು. ಪಾಳೇಗಾರಿಕೆ ಹರಿದು ಹಂಚಿಹೋಗಿದ್ದನ್ನು ಒಂದು ಆಡಳಿತ ಕೇಂದ್ರಕ್ಕೆ ತಂದು ಸಂಸ್ಥಾನದ ರೂವಾರಿಯಾದರು. ಒಡೆಯರ ಚರಿತ್ರೆಯಲ್ಲಿ ಮೈಸೂರು ರಾಜ್ಯ ಉದಯಿಸಿತು. ಮೊದಲ ಸಿಂಹಾಸನಾರೋಹಣದಲ್ಲಿ ದಸರಾ ದರ್ಬಾರು ನಡೆಸಿದ್ದರು, ವಿಜಯನಗರ ಅರಸರ ಪರಂಪರೆಯಂತೆ ನವರಾತ್ರಿ ಉತ್ಸವ, ಮಹಾನವಮಿ, ವಿಜಯದಶಮಿಗಳನ್ನು ಒಳಗೊಂಡಂತೆ ಸಂಪ್ರದಾಯವನ್ನು ಕಟ್ಟಳೆಗೊಳಿಸಿದರು. ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯ, ಮೈಸೂರಿನ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದಲ್ಲಿ ಇವರ ಭಕ್ತ ವಿಗ್ರಹಗಳಿವೆ. ಇವರಿಗೆ ಮೈಸೂರು ರೂವಾರಿ, ಪವಾಡ ಪ್ರಭು, ರಾಜೇಂದ್ರ, ರಾಜನೃಪ, ರಾಜಮಹೀಪತಿ ಎಂದು ಕರೆಯುತ್ತಿದ್ದುದಾಗಿ ತಿಳಿದುಬರುತ್ತದೆ.

ಆ ನಂತರ ಚಾಮರಾಜ ಒಡೆಯರಿಗೆ ಕಠಾರಿಯ ಸಾಳ್ವ, ವೈರಿಗಜ, ಗಂಡಭೇರುಂಡ ಎಂಬ ಬಿರುದು ಇದೆ.[೭] ರಾಜ್ಯ ವಿಸ್ತರಣೆ ಮಾಡಿ ಸಂಪತ್ತು ಹೆಚ್ಚಿಸಿದರು. ಸರ್ವ ಧರ್ಮ ಸಮನ್ವಯ ಪ್ರತಿಪಾದಕರು ಸ್ವತಃ ವೈಷ್ಣವರಾದರೂ ಶೈವ ಮತ್ತು ಜೈನಧರ್ಮಗಳನ್ನು ಪ್ರೋತ್ಸಾಹಿಸಿದರು. ಅಶ್ವಶಾಸ್ತ್ರ ಕೃತಿ, ರಾಮಾಯಾಣದ ಗದ್ಯ ರೂಪಾ, ಭೌದ್ದಿಕ ಚರ್ಚೆ, ಸಾಹಿತ್ಯ, ಸಂಗೀತಗೋಷ್ಠಿ ವಾದ್ಯಗೋಷ್ಠಿಗಳನ್ನು ನಡೆಸುತ್ತಿದ್ದರು. ಕೋಟೆಯನ್ನು ವಿಸ್ತರಿಸಿ ಭದ್ರಪಡಿಸಿದ್ದರು.

ಇಮ್ಮಡಿರಾಜ ಒಡೆಯರು ಲಲಿತಕಲೆಗೆ ಪ್ರೋತ್ಸಾಹ ನೀಡಿದ್ದರಿಂದ ಸಂಗೀತಲೋಲ ಸಾಹಿತ್ಯ ರತ್ನಾಕರ, ಮಲೆಪರಗಂಡ, ಅಭಯ ಪ್ರತಾಪಾಧೀಶ್ವರ ಎಂಬ ಬಿರುದುಗಳು ಇವರಿಗೆ ಇವೆ.[೮]

ನಂತರ ೧೬೩೮ ರಿಂದ ೧೬೯೬ ರವರೆಗೆ ೫೮ ವರ್ಷಗಳು ಮಂಡಾಲಧೀಶ್ವರಾಗಿದ್ದರು, ಅದರಲ್ಲಿ ರಣಧೀರಕಂಠೀರವ ನರಸರಾಜ ಒಡೆಯರಯಿಂದ ಚಿಕ್ಕದೇವರಾಜ ಒಡೆಯರವರೆಗೆ ಇರುವುದು ಕಂಡುಬರುತ್ತದೆ. ಕಂಠೀರವರ ಕಾಲದಲ್ಲಿ ಲಲಿತಕಲೆ ಪೋತ್ಸಾಹ ನೀಡಿರುವುದು ಕಂಡುಬರುತ್ತದೆ. ಶ್ರೀರಂಗಪಟ್ಟಣದ ಕೋಟೆ, ಮೈಸೂರು ಕೋಟೆಯು ಸೇರಿದಂತೆ ವಿಶಾಲವಾಯಿತು. ಪ್ರಾಚೀನ ಅರಮನೆಯನ್ನು ಚಿತ್ರಕಲೆ, ಶಿಲ್ಪಕಲೆ, ವಾಸ್ತುಗಳಿಗೆ ಮೆರಗನ್ನು ನೀಡಿ ಸುಂಧರಗೊಳಿಸಿದರು. ಶ್ರೀರಂಗಪಟ್ಟಣದಲ್ಲಿ ಟಂಕಶಾಲೆ ನಾಣ್ಯಗಳ ಮುದ್ರಣ ಪ್ರಾರಂಭವಾಯಿತು. ನಾಣ್ಯಗಳಲ್ಲಿ ಅನೇಕ ದೇವರ ಚಿತ್ರಗಳು, ಅಲಂಕಾರಿಕ ನಕ್ಷೆಗಳು ಕಂಡುಬರುತ್ತದೆ. ಪಟ್ಟಣದಲ್ಲಿ ನರಸಿಂಹಸ್ವಾಮಿ ದೇವಾಸ್ಥಾನ ಕಟ್ಟಿಸಿ, ನಂಜನಗೂಡಿನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಗುಡಿಗೋಪುರಗಳಿಗೆ ಅನೇಕ ಮೂರ್ತಿಗಳನ್ನು ಮಾಡಿಸಿಕೊಟ್ಟರು. ಕರೀಘಟ್ಟದ ದೇವಸ್ಥಾನ ದುರಸ್ತಿ ಮಾಡಿಸಿ ಸುಂದರಗೊಳಿಸಿದರು. ಇವರ ಆಳ್ವಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಬೆಳವಣಿಗೆಯಾಯಿತು. ಭಾಸ್ಕರನ ಬೇಹಾರಗಣಿತ, ಮಾರ್ಕಂಡೇಯಪುರಾಣ ಇತ್ಯಾದಿಗಳನ್ನು ಹೆಸರಿಸಬಹುದು. ಮೈಸೂರಿನ ತೃಣೇಶ್ವರ ಸ್ವಾಮಿ ದೇವಾಲಯ ನಿರ್ಮಾಣ ಮಾಡಿಸಿದರು. ಇವರಿಗೆ ಸರಸವಿದ್ಯಾವಿಶಾರದ, ಮತ್ತು ಸಂಗೀತ ಸಾಹಿತ್ಯ ಶಾಸ್ತ್ರ ವಿಶಾರದ ಎಂಬ ಬಿರುದುಗಳು ಇದ್ದವು.

೭, ಪ್ರೊ.ಕೆ.ಎಸ್. ರಂಗಪ್ಪ: ಮೈಸೂರುದರ್ಶನ, ಪು,ಸ-೭೦
೮, ಪ್ರೊ.ಕೆ.ಎಸ್. ರಂಗಪ್ಪ: ಮೈಸೂರುದರ್ಶನ, ಪು,ಸ-೮೧

ದೇವರಾಜ ಒಡೆಯರ್ ಅವರು ತಿರುಪತಿಯ ನವರತ್ನಮಂಟಪ, ಕಲ್ಲುಮಂಟಪ, ಮೈಸೂರಿನ ಚಾಮುಂಡಿಬೆಟ್ಟದಲ್ಲಿ ೭೦೦ನೇ ಮೆಟ್ಟಿಲಿನ ಹತ್ತಿರ ಅದ್ಭುತವಾದ ಬೃಹದಾಕಾರವಾದ ೧೬ ಅಡಿ ನಂದಿ ವಿಗ್ರಹ ಇದೆ. ಅದಕ್ಕೆ ಬೆಟ್ಟದಬಸವ ಎಂಬ ಹೆಸರಿಸಿದ್ದು ಇವರೆ.[೯] ಕಲೆಯನ್ನು ಪ್ರೊತ್ಸಾಹಿಸಿದವರಲ್ಲಿ ದೇವರಾಜ ಅರಸರ ಹೆಸರು ಸ್ಮರಿಣಿಯವಾಗಿದೆ. ಅನೇಕ ಭಕ್ತವಿಗ್ರಹಗಳನ್ನು ಕೆತ್ತಿಸಿದ್ದಾರೆ. ಧರಣಿವರಾಹ, ಮೂರು ಮನ್ನೆಯರಗಂಡ ಹಿಂದುರಾಯಸುರತ್ರಾ ಎಂಬ ಬಿರುದುಗಳಿಸಿದ್ದರು. ನಂತರ ಚಿಕ್ಕದೇವರಾಜ ಒಡೆಯರು ೧೬೭೩ರಿಂದ ೧೭೦೪ರವರೆಗೆ ೩೧ ವರ್ಷಗಳು ಸರ್ವಸ್ವತಂತ್ರವಾಗಿ ಆಳ್ವಿಕೆ ಮಾಡಿದರು. ಅದರಲ್ಲಿವ ಚಿಕ್ಕದೇವರಾಜ ಒಡೆಯರ ಕಂಠೀರವ ಒಡೆಯರ, ದೊಡ್ಡಕೃಷ್ಣರಾಜ ಒಡೆಯರ, ಚಾಮರಾಜ ಒಡೆಯರ, ಇಮ್ಮಡಿಕೃಷ್ಣರಾಜ ಒಡೆಯರವರೆಗೆ ಇದ್ದು. ಚಿಕ್ಕದೇವರಾಜ ಒಡೆಯರಿಗೆ ಅಪ್ರತಿಮವೀರ, ಸಂಗರಭೀಮ, ಯಾದವಕುಲೋದ್ವಾರಕ, ತೆಂಕಣರಾಯ, ಕರ್ನಾಟಕದ ಚಕ್ರವರ್ತಿ ಎಂಬ ಬಿರುದುಗಳು ಇತ್ತು. ವಿಜಯನಗರದ ಕೃಷ್ಣದೇವರಾಯರಂತೆ ಯದುವಂಶದ ಅತ್ಯಂತ ಶ್ರೇಷ್ಠ ಅರಸು, ಔರಂಗಜೇಬನ ಸ್ನೇಹಸಂಬಂಧ ಅತ್ಯಂತ ಚೆನ್ನಾಗಿತ್ತು. ಉತ್ತಮ ಯುದ್ದ ಕೌಶಲ್ಯ ಬಲವರಾಗಿದ್ದರು. ನವಕೋಟಿ ನಾರಾಯಣ ನೂತನ ಸಾಹಿತ್ಯಬ್ರಹ್ಮ ಎಂದು ಹೆಸರಾಗಿದ್ದರು.[೧೦] ಇವರ ಅಸ್ಥಾನವು ಕವಿಗಳು, ಕವಯಿತ್ರಿಯರು. ಪ್ರಸಿದ್ದ ವಿದ್ವಾಂಸರುಗಳಿಂದ ತುಂಬಿತ್ತು. ವೈಷ್ಣವ ಧರ್ಮದ ಹಿನ್ನೆಲೆಯಲ್ಲಿ ಗಣ್ಯಕೃತಿಗಳು, ಒಡೆಯರು ಕುಲಚರಿತ್ರೆ ಅನೇಕ ರಾಮಯಾಣ, ಭಗವದ್ಗೀತೆ, ಕ್ಷೇತ್ರಮಹಾತ್ಮ್ಯ ಗದ್ಯಗಳಲ್ಲಿ ಕೃತಿರಚನೆ, ನಾಟಕಗಳು ಸಾಹಿತ್ಯಗಳಿಗೆ ಪ್ರೋತ್ಸಾಹ ನೀಡಿದವರಾಗಿದ್ದಾರೆ.

ಗುಂಡ್ಲಪೇಟೆ, ತೆರಕಣಾಂಬಿಯಲ್ಲಿ ಭವ್ಯವಾದ ಪರವಾಸುದೇವ, ಹರದನಹಳ್ಳಿಯಲ್ಲಿ ಅಪ್ರತಿಮರಾಜಗೋಪಾಲ, ವರಕೂಡಿನಲ್ಲಿ ವರದರಾಜಸ್ವಾಮಿ, ಬೆಂಗಳೂರಿನ ಕೋಟೆ ವೆಂಕಟರಮಣ ಸ್ವಾಮಿ ದೇವಾಲಯ, ಅನೇಕಗಳಲ್ಲಿ ವಿಗ್ರಹಗಳು ಮತ್ತು ಶ್ರೀರಂಗಪಟ್ಟಣದಲ್ಲಿ ಅರಮನೆ ಬಲಭಾಗದಲ್ಲಿ ಶ್ವೇತವರಾಹಸ್ವಾಮಿ ದೇವಾಲಯ, ಬೇಲೂರು, ಬೆಳ್ಳೂರುಗಳ ಜಿನಬಸದಿ. ಮುಡುಕುತೊರೆ, ಹುಲ್ಲಂಬಳ್ಳಿ ಮಠಗಳಿಗೆ ಪ್ರೋತ್ಸಾಹ. ಮೈಸೂರಿನಲ್ಲಿ ಚಿಕ್ಕ ಅರಮನೆ ಕಟ್ಟಿಸಿದ್ದರು. ನಂತರದವರಾದ ಕಂಠೀರವ ಮಹಾರಾಜ ಒಡೆಯರಿಗೆ ಮೂಕಅರಸು ಎಂಬ ಹೆಸರಿತ್ತು.

ಹಲವು ದೇವತಾಕಾರ್ಯಗಳಿಗೆ ಪ್ರೋತ್ಸಾಹ ನೀಡಿದ್ದಾರೆ. ಮೇಲುಕೋಟೆಯಲ್ಲಿ ಒಂದು ಮಾಧವನಗುಡಿ ಕಟ್ಟಿಸಿದ್ದರು. ಆ ನಂತರದಲ್ಲಿ ಬಂದ ದೊಡ್ಡ ಕೃಷ್ಣರಾಜ ಒಡೆಯರಿಗೆ ಶ್ರೀವೈಷ್ಣವನೃಪಾಗ್ರಣಿ ಎಂಬ ಬಿರುದು ಇತ್ತು. ಇವರು ಅನೇಕ ವೈಷ್ಣವ ಶಿಲ್ಪಮೂರ್ತಿ ನಿರ್ಮಿಸಲು ಪ್ರೋತ್ಸಾಹಿಸಿದರು. ಕಳಲೆಯ ಲಕ್ಷ್ಮೀಕಾಂತಸ್ವಾಮಿ ದೇವಾಲಯವನ್ನು ಜೀರ್ಣೋದ್ದಾರ ಮಾಡಿಸಿದರು. ಇವರು ಸಂಗೀತ, ಸಾಹಿತ್ಯಗಳ ಬೆಳವಣಿಗೆಯಲ್ಲಿ ತೊಗಡಿಕೊಂಡಿದ್ದರು.
ಇವರ ಕಾಲದಲ್ಲಿ ರಚನೆಗೊಂಡ ಕಾವೇರಿ ಮಹಾತ್ಮ ವರನಂದೀ ಕಲ್ಯಾಣ, ಪದ್ಮನೀಪರಿಣಯ, ಸಕಲವೈದ್ಯ ಸಂಹಿತ ಸಾರರ್ಣವ ಇತ್ಯಾದಿಗಳ ಜೊತೆ ವನ್ಯಪ್ರಾಣಿ ರಕ್ಷಣೆಗೆ ವಿಶೇಷ ಆಸಕ್ತಿ ವಹಿಸಿದ್ದರು.

ಆ ನಂತರ ಚಾಮರಾಜ ಒಡೆಯರು ತರುವಾಯ ಇಮ್ಮಡಿ ಕೃಷ್ಣರಾಜ ಒಡೆಯರು ಇವರ ಆಡಳಿತದಲ್ಲಿ ಹೈದರನಿಂದ ದಳವಾಯಿಗಳ ಬಲ ಕಡಿಮೆಗೊಳಿಸಿದರು. ಸಾಹಿತ್ಯಗಳನ್ನು ರಚಿಸಿದ್ದಾರೆ.

೯. ಪ್ರೊ.ಕೆ.ಎಸ್. ರಂಗಪ್ಪ, ಮೈಸೂರುದರ್ಶನ,: ಪು.ಸ-೮೮
೧೦. ಪ್ರೊ.ಕೆ.ಎಸ್. ರಂಗಪ್ಪ, ಮೈಸೂರುದರ್ಶನ,: ಪು.ಸ-೯೦

ಅದರಲ್ಲಿ ಸೌಂದರ್ಯಕಾವ್ಯ, ನಂಜರಾಜ ಯಶೋಬೋಷಣ, ನಂಜರಾಜಯಶಸ್ಪಮೋಲ್ಲಾಸ ಚಂಪೂಗಳು ಸೇರಿದೆ. ನವಬೋರಾಜ ಎಂಬ ನಂಜನಕೀರ್ತಿ ಇರುವುದು ಇವರಿಗೆ. ಇವರ ಕಾಲದಿಂದ ೧೭೬೧ ರಿಂದ ೧೭೯೯ರವರೆಗೆ ೩೮ ವರ್ಷಗಳು ಹೈದರ ಮತ್ತು ಟಿಪ್ಪು ಆಳ್ವಿಕೆ ಕಾಲದಲ್ಲಿ ಇಮ್ಮಡಿ ಕೃಷ್ಣನಂಜರಾಜ ಒಡೆಯರ, ಬೆಟ್ಟದ ಚಾಮರಾಜ ಒಡೆಯರು, ಖಾಸಚಾಮರಾಜ ಒಡೆಯರು. ಮುಮ್ಮಡಿ ಕೃಷ್ಣರಾಜ ಒಡೆಯರವರೆಗೆ ಮುಸ್ಲಿಂ ಪ್ರಭಾವದ ಆಡಳಿತ ಕಂಡುಬರುತ್ತದೆ.

ನಂಜರಾಜ ಒಡೆಯರು ಅನಂತರ ಬೆಟ್ಟದ ಚಾಮರಾಜ ಒಡೆಯರು ತರುವಾಯ ಚಾಮರಾಜ ಒಡೆಯರು ಈ ರಾಜರುಗಳ ಹೆಸರಿನಲ್ಲಿ ಹೈದರಾಲಿ, ಟಿಪ್ಪುಸುಲ್ತಾನ್ ಆಡಳಿತವನ್ನು ನಡೆಸಿದರು. ಮೈಸೂರು ಹುಲಿಯೆಂದೇ ಟಿಪ್ಪು ಪ್ರಖ್ಯಾತನಾದನು. ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮೈಸೂರು ಪಟ್ಟಣವನ್ನು ರಾಜ್ಯದ ಅವಿಭಾಜ್ಯ ಹಂಗದಂತೆ ಆಳ್ವಿಕೆ ಮಾಡಿದ್ದರು. ಇವರ ಸಾಧನೆ ಈ ನಾಡಿಗೆ ಸೇರಿದೆ. ಇವರನ್ನೂ ಮೈಸೂರು ಅರಸರೆಂದೇ ಕರೆಯುತ್ತಿದ್ದರು ಲಲಿತಕಲೆಗೆ ಅಪಾರ ಪ್ರೋತ್ಸಾಹ ದೊರೆಕಿಸಿಕೊಟ್ಟಿದ್ದಾರೆ. ೧೮ನೇ ಶತಮಾನದ ಉತ್ತರಾರ್ಧ ಇಡಿ ಹಿಂದೂ ಇತಿಹಾಸದಲ್ಲೇ ಒಂದು ಮಹತ್ವದ ತಿರುವು ಮಧ್ಯಯುಗದಿಂದ ಆಧುನಿಕ ಕಾಲಕ್ಕೆ ಪಾದಾರ್ಪಣೆ ಮಾಡಿದ ಕಾಲ. ಹಳೆ ಅರಮನೆ ಕೆಡುವಿಸಿ ಹೊಸದಾಗಿ ನಜರ್‌ಬಾದ್‌ನಲ್ಲಿ ಅರಮನೆ ಕೋಟೆ ಕಟ್ಟಿಸಲು ಪ್ರಾರಂಭಿಸಿದ ಟಿಪ್ಪೂ ಮತ್ತೊಂದು ಅರಮನೆ (ಬಂಗಲೆ) ನಿರ್ಮಿಸಿದ್ದನು. ಹಾಗೆ ಇವನ ಕಾಲದಲ್ಲಿ ಕೈಗಾರಿಕೆ ಕ್ರಾಂತಿ ನಡೆಯಿತು. ತೋಟಗಾರಿಕೆ ಬೆಳವಣಿಗೆ ಹೆಚ್ಚಿತು. ದೇಶವಿದೇಶದಿಂದ ಕುಶಲಕರ್ಮಿಗಳನ್ನು ಕರೆಸಿ ಮೈಸೂರಿನಲ್ಲಿ ನೆಲಸುವಂತೆ ಮಾಡಿದನು. ಅನೇಕ ಅರಮನೆ ಕಟ್ಟಿಸಿದ್ದಾನೆ. ಅದರಲ್ಲಿ ಶ್ರೀರಂಗಪಟ್ಟಣ ಬೇಸಿಗೆ ಅರಮನೆ ಉತ್ತಮ ಉದಾರಹಣೆಯಂತೆ ಇದೆ. ಮುಂತಾದ ಅರಮನೆಗಳನ್ನು ಅಲ್ಲಿ ಕಟ್ಟಿಸಿ ಅದರಲ್ಲಿ ಭಿತ್ತಿಚಿತ್ರಗಳು ನಿರ್ಮಾಣ,ಕಾರ್ಯಕ್ಕೆ ಪ್ರೋತ್ಸಾಹಿಸಿದರಿಂದ ಕಲಾಚಟುವಟಿಕೆಗಳು ಹೆಚ್ಚಾಗಿ ನಡೆದಿರುತ್ತದೆ. ಅನೇಕ ಭಾವಚಿತ್ರಗಳು, ಅಲಂಕಾರಿಕ ನಕ್ಷೆಗಳ ಕಲಾಕೃತಿಗಳು ಇಂದು ಸಹ ಅಲ್ಲಿ ಕಂಡುಬರುತ್ತದೆ. ವಿದೇಶದಿಂದ ಅನೇಕ ಚಿತ್ರಕಲಾವಿದರನ್ನು ಇಲ್ಲಿಗೆ ಕರೆಸಿ ಕಲಾಕೃತಿ ನಿರ್ಮಾಣಕ್ಕೆ ಮುಖ್ಯ ಕಾರಣಕರ್ತನಾದನು.[೧೧]

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಘಟ್ಟದಲ್ಲಿ ಮೈಸೂರು ಸಂಸ್ಥಾನವನ್ನು ವಸಾಹತು ಕಾಲಘಟ್ಟವಾಗಿ, ಅದರಲ್ಲಿ ಲಲಿತಕಲೆಗೆ ಪ್ರೋತ್ಸಾಹನೀಡಿರುವುದು ವಿಶೇಷವಾಗಿಯೂ ಗುರುತಿಸಬಹುದು. ಅದನ್ನೂ ಆಧುನಿಕ ಮೈಸೂರಿನ ಇತಿಹಾಸವೆಂದು ಕರೆಯಬಹುದಾಗಿದೆ.

ಅದನ್ನು ಕ್ರಿ.ಶ. ಹದಿನೆಂಟನೆಯ ಶತಮಾನದ ಪ್ರಾರಂಭದಿಂದ ಇಪ್ಪತ್ತನೆಯ ಶತಮಾನದ ಅರ್ಧಭಾಗದವರೆಗೆ, ಸುಮಾರು ನೂರೈವತ್ತು ವರ್ಷಗಳ ಕಾಲ ಮೈಸೂರು ಸಮಸಂಸ್ಥಾನದಲ್ಲಿ ಬ್ರಿಟಿಷರ ಚಕ್ರಾಧಿಪತ್ಯದೊಂದಿಗೆ ಸಾಗಿದೆ. ಆ ಕಾಲದಲ್ಲಿಯೂ ಲಲಿತಕಲೆಯಲ್ಲಿ ಚಿತ್ರಕಲೆಗೆ ಹೆಚ್ಚು ಬೆಳವಣಿಗೆ ಕಂಡಿದ್ದರ ಜೊತೆ ಅದರ ಕಲಾಪ್ರಕಾರಗಳು ಸಹ ಬೆಳವಣಿಗೆ ಕಂಡಿತು. ೧೭೯೯ರಿಂದ ದಿವಾನರುಗಳ ಆಡಳಿತವು ಪ್ರಾರಂಭವಾಗುತ್ತದೆ. ೧೮೩೧ರ ವರೆಗೆ ೩೨ ವರ್ಷಗಳು ಬ್ರಿಟಿಷರ ಅಧೀನದಲ್ಲಿ ಆಶ್ರಿತರಾಜರಾಗಿ ಆಳ್ವಕೆ ಮಾಡಿದರು. ೧೮೩೧ರಿಂದ ೧೮೮೧ರವರೆಗೆ ೫೦ವರ್ಷಗಳಷ್ಟು ಬ್ರಿಟಿಷ್ ಕಮೀಷನರ ಆಳ್ವಿಕೆ ನಡೆಯುತ್ತದೆ. ಅದರಲ್ಲಿ ಮುಮ್ಮಡಿಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿಕೃಷ್ಣರಾಜ ಒಡೆಯರು, ಜಯಚಾಮರಾಜ ಒಡೆಯರು ಆಳ್ವಿಕೆ ಮಾಡುತ್ತಾರೆ.

---

೧೧. ಪ್ರೊ.ಕೆ.ಎಸ್. ರಂಗಪ್ಪ, :ಮೈಸೂರುದರ್ಶನ, ಪು.ಸ-೧೨೮

೧೨. ಡಾ.ತಿಪ್ಪೇರುದ್ರಸ್ವಾಮಿ.: ಕರ್ನಾಟಕ ಸಂಸ್ಕೃತಿ ಪು.ಸಂ-೧೬೦

ಟೀಪ್ಪುಸುಲ್ತಾನ ಮರಣ ನಂತರ ಮೈಸೂರು ರಾಜ್ಯವನ್ನು ನಾಲ್ಕು ಭಾಗವಾಗಿ ವಿಂಗಡಿಸಿ, ಒಂದು ಭಾಗವನ್ನು ಮೈಸೂರು ಸಂಸ್ಥಾನಕ್ಕೆ ಬಿಟ್ಟು ಕೊಟ್ಟರು. ಶ್ರೀರಂಗಪಟ್ಟಣದಿಂದ ನಡೆಯುತ್ತಿದ್ದ ಆಳ್ವಿಕೆ ಮತ್ತೆ ಮೈಸೂರಿನಿಂದ ನಡೆಯತೊಡಗಿತ್ತು. ಸಿಬಿ. ಶ್ರವಣಬೆಳಗೊಳ, ಶ್ರೀರಂಗಪಟ್ಟಣ ಮತ್ತು ಮೈಸೂರಿನ ಜಗನ್ಮೋಹನ ಅರಮನೆ, ಹಿರಿಯೂರು, ಗುಬ್ಬಿ, ಚಾಮರಾಜನಗರ, ತಲಕಾಡು, ಬೊಪ್ಪಗೌಡನಪುರ ಮುಂತಾದ ಸ್ಥಳಗಳಲ್ಲಿ ಇವರು ಭಿತ್ತಿಚಿತ್ರಕಲೆ ರಚಿಸಲು ಪ್ರೋತ್ಸಾಹಿಸಿದ್ದಾರೆ. ಇವರ ಕಾಲದಲ್ಲಿ ಲಲಿತಕಲೆಗೆ ಅಪಾರ ಪ್ರೋತ್ಸಾಹದಿಂದ ದೇವಾಲಯಗಳು ಭಿತ್ತಿಚಿತ್ರಗಳು ರಚನೆಗೊಂಡಿವೆ. ದಿವಾನ್‌ಪೂರ್ಣಯ್ಯನವರ ಆಡಳಿತ ಕಾರ್ಯದಿಂದ ಅನೇಕ ವೈಷ್ಣವ ಮಹಾಲಯಗಳ ಸ್ಥಾಪನೆ ಮಾಡಿಸಿದ್ದರು, ಅಲ್ಲಿ ಶಿಲ್ಪಮೂರ್ತಿ, ವಾಸ್ತುಮೂರ್ತಿಗಳನ್ನು ಏತ್ತೆಚ್ಚಾವಾಗಿ ಸೃಷ್ಟಿಯಾದವು ಅರಮನೆಯ ಆವರಣದಲ್ಲಿ ಶ್ವೇತವರಾಹ ದೇವಾಲಯ, ಪ್ರಸನ್ನಕೃಷ್ಣಸ್ವಾಮಿ ದೇವಾಲಯಗಳ ಸ್ಥಾಪನೆ ಅಲ್ಲಿ ಭಿತ್ತಿಚಿತ್ರಕಲೆಯ ರಚನೆಗೂ ಇವರದೆ ಸಹಾಯ ಅಸ್ತ, ಕಲೆ, ಸಾಹಿತ್ಯ, ಸಂಸ್ಕೃತಿ ದೃಷ್ಟಿಯಿಂದ ಸಂಕ್ರಮಣಕಾಲ, ಸ್ವತಃ ಮುಮ್ಮಡಿಕೃಷ್ಣರಾಜ ಒಡೆಯರ್ ಅವರೆ ೬೦ ಕೃತಿಗಳನ್ನು ರಚಿಸಿದ್ದಾರೆ. ಶಿವತತ್ವನಿಧಿ, ಸೌಗಂಧಿಕ ಪರಿಣಯ, ಕೃಷ್ಣಕಥಾ ಸಾರಸಂಗ್ರಹ, ಹಾಗೆ ಸಂಗೀತಕ್ಕೆ ಪ್ರೋತ್ಸಾಹದಿಂದ ಮೂಗೂರು ಸುಬ್ಬಣ್ಣ ಸದಾಶಿವರಾಯ, ವೀಣೆಶೇಷಣ್ಣ, ವೀಣೆಶಾಮಣ್ಣ ಮುಂತಾದವರು. ಕವಿಗಳು ಆಳಿಯಲಿಂಗರಾಜ, ದೇವಾಲಪುರದ ನಂಜುಂಡ, ಕೆಂಪುನಾರಾಯಣ ಮುಂತಾದ ಕವಿಗಳಿಗೆ ಆಶ್ರಯ ಚಾಮುಂಡೇಶ್ವರಿ ದೇವಾಲಯ, ನಂಜನಗೂಡಿನ ದೇವಾಲಯಕ್ಕೆ ಗೋಪುರ, ಕೊಡುಗ್ಗೆ ದೊರೆಗಳಾಗಿದ್ದ ಇವರಿಗೆ **"ಕೃಷ್ಣರಾಜಭೂಪ, ಮನೆಮನೆಗೆ ದೀಪ"** ಎಂಬ ಪಡೆನುಡಿ ಹುಟ್ಟಿಕೊಂಡಿತ್ತು.[೧೩]

ಮುಮ್ಮಡಿಯವರ ಕಾಲದಲ್ಲಿ ಮರದ ಅರಮನೆ ನಿರ್ಮಾಣ, ಅದು ಕೆಳದಿ ಶಿವಪ್ಪನಾಯಕನ ಅರಮನೆಯಂತೆ ಮಾದರಿಯಲ್ಲಿ ಸರಳಸುಂದರವಾಗಿ ನಿರ್ಮಾಣವಾಗಿತ್ತು. ಐದು ಅಂತಸ್ತು, ಹೊರಭಾಗ ಸುಂದರ ಕೆತ್ತನೆಗಳಿಂದ ಕೂಡಿದ್ದು. ದರ್ಭಾರ್ ಸಭಾಂಗಣ ಬಣ್ಣಬಣ್ಣದ ಚಿತ್ರಗಳಿಂದಲೂ ಚಿನ್ನದ ಮುಲಾಯಿನಿಂದಲೂ ಅಲಂಕೃತವಾಗಿತ್ತು. ಸರಸ್ವತಿಭಂಡಾರ, ಅಂತಪುರ ಅದರಲ್ಲಿ ಕೆಲವು ಯೂರೋಪಿಯನ್ ಕಲಾವಿದರ ಚಿತ್ರಗಳಿದ್ದವು. ಬಾಗಿಲಗಳಲ್ಲಿ ಹಸ್ತಿದಂತದ ಕೆತ್ತನೆಗಳಿದ್ದವು ಪರಕಾಲಮಠಕ್ಕೆ ಅನೇಕ ಕಲಾಕೃತಿಗಳನ್ನು ಉಡುಗೂರೆ ನೀಡಿದ್ದಾರೆ.[೧೪] ಕಾರಂಜಿ ಅರಮನೆ, ಚೆಲುವಾಂಬ ವಿಲಾಸ ಅರಮನೆ, ಜಗನ್ಮೋಹನ ಅರಮನೆ, ವಸಂತ ಮಹಲ್ ಅರಮನೆ, ಲೋಕರಂಜನ ಮಹಲ್, ಈ ಅರಮನೆಗಳ ಸ್ಥಾಪನೆಗೆ ಮುಮ್ಮಡಿಕೃಷ್ಣರಾಜ ಒಡೆಯರ್ ಹಾಗೂ ಚಾಮರಾಜ ಒಡೆಯರ ಕಾರಣಕರ್ತರುರಾಗಿದ್ದಾರೆ.

ಅಲೋಕ ಅರಮನೆ ಮುಮ್ಮಡಿಯವರ ನಂತರ ಬಂದ ಚಾಮರಾಜೇಂದ್ರರು ದಿವಾನ್ ರಂಗಚಾರ್ಲು ಮತ್ತು ಶೇಷಾದ್ರಿ ಅಯ್ಯರ್ ಅವರ ಆಡಳಿತ ನೆರವಿನಿಂದ ಪ್ರಜಾಪ್ರತಿನಿಧಿಸಭೆ, ಅನೇಕ ಶಾಲೆಗಳು ತೆರೆದರು. ಅವುಗಳಲ್ಲಿ ಸಂಸ್ಕೃತಶಾಲೆ, ಫಸ್ಟ್‌ಗ್ರೇಡ್ ಕಾಲೇಜ್, ಮಹಾರಾಣಿ ಕಾಲೇಜ್, ಇಂಗ್ಲಿಷ್ ಪಾಠಶಾಲೆ ಪುರಾತತ್ವ ಇಲಾಖೆ, ಭೂಗರ್ಭ ಇಲಾಖೆ ಮುಂತಾದವುಗಳನ್ನು ತೆರೆದಿದ್ದಾರೆ. ನಾಟಕ ಪ್ರದರ್ಶನಗಳಿಗೆ ಪ್ರೋತ್ಸಾಹ ಜೊತೆಗೆ ಅನೇಕ ವಿದ್ವಾಂಸರನ್ನು ಪೋಷಿಸಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಧೀರ್ಘಕಾಲ ಆಳಿದ ಯದುವಂಶೀಯ ರಾಜರಲ್ಲಿ ನಾಲ್ವಡಿ ಅವರು ಒಬ್ಬರು. ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯ, ಕೃಷ್ಣರಾಜಸಾಗರ, ದಸಾರ ವಸ್ತುಪ್ರದರ್ಶನ, ಅಂಬಾವಿಲಾಸ ಅರಮನೆ ಅದರಲ್ಲಿ ಕಲಾಸೌಂದರ್ಯ,

೧೩, ಪ್ರೊ.ಕೆ.ಎಸ್. ರಂಗಪ್ಪ: ಮೈಸೂರುದರ್ಶನ, ಪು.ಸ-೯೯
೧೪, ಪ್ರೊ.ಕೆ.ಎಸ್. ರಂಗಪ್ಪ: ಮೈಸೂರುದರ್ಶನ, ಪು.ಸ-೧೦೦

ಸುಂದರಮೂರ್ತಿರೂಪದ ವಾಸ್ತುಶಿಲ್ಪ, ನಕ್ಷಾಅಲಂಕಾರ ಮತ್ತು ಕಲ್ಯಾಣಮಂಟಪ ಇತ್ಯಾಧಿಗಳನ್ನು ಹಾಗೂ ಕರಿಕಲ್ಲು ತೊಟ್ಟಿ, ನವಿಲುತೊಟ್ಟಿ. ಮತ್ತು ವಸ್ತುಪ್ರದರ್ಶನಗಳು, ಭಿತ್ತಿಚಿತ್ರಗಳು ಮರದಕೆತ್ತನೆ, ಗಾಜಿನಚಿತ್ರಕಲೆ ಮುಂತಾದ ಪ್ರಕಾರದ ಚಿತ್ರಕಲೆಯ ವಿವಿಧಗಳು ಇಲ್ಲಿ ಕಂಡುಬರುತ್ತದೆ. ನಾಲ್ವಡಿಯರ ಕಾಲದಲ್ಲಿಯೇ ಸಾಮಾನ್ಯರಿಗೆ ವಿದ್ಯಾಭಾಸ, ಲಲಿತಕಲೆಗೆ ತುಂಬ ಪ್ರೋತ್ಸಾಹ ನೀಡಿ, ಕಲಾವಿದರಿಗೆ ಆಶ್ರಯದಾತರಾಗಿದ್ದರು.

ಆಧುನಿಕ ಮೈಸೂರು ಕಟ್ಟಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಸೇರುತ್ತದೆ. ಗಾಂಧೀಜಿ ಇವರಿಗೆ ರಾಜರ್ಷಿ ಎಂದು ಕರೆದರು. ರಾಮರಾಜ್ಯದ ಪ್ರತಿಫಲನ ಕಂಡ ಬಿ.ಎಂ.ಶ್ರೀಯವರು ಪುಣ್ಯದರಸು, ಧರ್ಮದಾಳು, ಕನ್ನಡಿಗರ ಮಯಿರಮುಡಿ ಎಂದು ಕರೆದಿದ್ದಾರೆ. ಮೈಸೂರು ವಿವಿಗೆ ಮೊದಲನೆಯ ಕುಲಾಧಿಪತಿಯಾಗಿ ಡಾಕ್ಟರ್‌ಆಫ್ ಲಾ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡರು. ಇವರ ಆಸ್ಥಾನದಲ್ಲಿ ವೀಣೆಶೇಷಣ್ಣ, ಭಕ್ಷಿಸುಬ್ಬಣ್ಣ, ಮೈಸೂರು ವಾಸುದೇವಾಚಾರ್ಯ ಸಂಗೀತ ಕಲಾವಿದರು. ಜಟ್ಟಿತಾಯಮ್ಮ, ಸುಂದರಮ್ಮ ಮುಂತಾದ ನಾಟ್ಯ ಕಲಾವಿದೆಯರಿಗೆ ಆಶ್ರಯದಾತರಾಗಿ ಪ್ರೋತ್ಸಾಹ ನೀಡಿದ್ದರು.[೧೫]

ಜಯಚಾಮರಾಜೇಂದ್ರ ಒಡೆಯರ್ ಅವರ ಕಾಲವು ಸಂಕ್ರಮಣ ಕಾಲವಾಗಿದೆ. ಮೈಸೂರು ಮತ್ತು ಮದರಾಸಿನ ರಾಜ್ಯಪಾಲರಾಗಿದ್ದು ಇವರು ಬಹುಕಾಲ ವನ್ಯಜೀವಿಗಳ ಭಾರತೀಯ ಮಂಡಳಿಯ ಅಧ್ಯಕ್ಷರಾಗಿದ್ದರು. ಲಲಿತಮಹಲ್, ರಾಜೇಂದ್ರ ವಿಲಾಸ ಅರಮನೆ, ಚಾಮುಂಡಿವಿಹಾರ, ಚಿತ್ತರಂಜನ್ ಮಹಲ್ ಸ್ಥಾಪನೆ ಮತ್ತು ಭಾರತದ ಸ್ವಾತಂತ್ರಕ್ಕೆ ಮೊದಲು ಒಪ್ಪಿಗೆ ಕೊಟ್ಟಿದ್ದು ಅಲ್ಲದೆ ಸಾಹಿತ್ಯ, ಸಂಗೀತ, ಕಲೆಗಳಲ್ಲಿ ಆಪಾರ ಆಸಕ್ತಿತೋರಿಸಿದ್ದಾರೆ. ಜಯಚಾಮರಾಜೇಂದ್ರ ಗ್ರಂಥರತ್ನಮಾಲೆ ಎಂಬ ಸ್ವತಃ ಪ್ರಕಾಶನ ಅಡಿಯಲ್ಲಿ ವೇದ, ಪುರಾಣ ಹಾಗೂ ಗ್ರಂಥಭಂಡಾರವನ್ನು ರೂಪಿಸಿದ್ದರು. ತತ್ವಶಾಸ್ತ್ರ, ಸೌಂದರ್ಯಶಾಸ್ತ್ರ, ರಸಶಾಸ್ತ್ರ, ತರ್ಕಶಾಸ್ತ್ರ ಮುಂತಾದವುಗಳ ಕುರಿತಾಗಿದೆ. ಕರ್ನಾಟಕ ಸಂಗೀತದೆಡೆ ಒಲವು, ಪಾಶ್ಚಾತ್ಯ ಸಂಗೀತ ಕೃತಿಸಂಗ್ರಹಾಲಯ, ಕ್ವೀನ್ಸ್‌ಲ್ಯಾಂಡ್ ವಿವಿಯಿಂದ ಡಿ.ಲಿಟ್, ಬನರಾಸ್ ವಿವಿಗೌರವ ಡಾಕ್ಟರ್ ಆಫ್ ಲಾ. ವಿದೇಶಿ ಬಿರುದುಗಳು ಸಹ ಬಂದಿರುತ್ತದೆ. ಇವರು ಕೋಟೆಯೊಳಗಿನ ಗಾಯತ್ರಿ ದೇವಾಲಯ, ಭುವನೇಶ್ವರಿ ಮತ್ತು ಹೊರಗೆ ವಿಶ್ವೇಶ್ವರ ಮತ್ತು ಶಿವಕಾಮೇಶ್ವರಿ ದೇವಾಸ್ಥಾನಗಳು ಕಟ್ಟಿಸಿದ್ದರು. ತ್ರಿಣಯನೇಶ್ವರನಿಗೆ, ಚಾಮುಂಡೇಶ್ವರಿ ದೇವಾಲಯದ ಮಹಾದ್ವಾರಕ್ಕೆ ನಕಾಶೆ ಕೆಲಸ ಬೆಳ್ಳಿ ಹೊದಿಕೆ. ಚಾಮರಾಜೇಂದ್ರ ಮೃಗಾಲಯ ಮತ್ತು ಅನೇಕ ವಿದ್ಯಾಸಂಸ್ಥೆಗಳನ್ನು ನಿರ್ಮಿಸಿದ್ದಾರೆ.[೧೬]

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಸಹ ಶ್ರೀ ಜಯಚಾಮರಾಜೇಂದ್ರ ಆರ್ಟ್‌ಗ್ಯಾಲರಿ ಟ್ರಸ್ಟ್, ಮಹಾರಾಣಿಲಕ್ಷಮ್ಮಣಿಯವರ ಎಜುಕೇಷನಲ್ ಟ್ರಸ್ಟ್.

ಜಯಚಾಮರಾಜೇಂದ್ರ ಕಲ್ಚರಲ್ ಅಕಾಡೆಮಿ, ಮೈಸೂರು ಮ್ಯೂಸಿಕ್ ಅಸೋಸಿಯೇಷನ್, ಜಯಚಾಮರಾಜೇಂದ್ರ ಎಜುಕೇಷನಲ್ ಟ್ರಸ್ಟ್, ಇವರು ಕಲಾಕೃತಿಸಂಗ್ರಹಾಲಯದ ಜೊತೆಗೆ ಇವರು ಪ್ರಜಾಸೇವೆ ಮಾಡುತ್ತಿದ್ದಾರೆ. ವಿವಿಧ ಕಲಾಕೃತಿಗಳು, ವೇಷಭೂಷಣಗಳು ಯುದ್ದಗಳಲ್ಲಿ ಉಪಯೋಗಿಸುತ್ತಿದ್ದ ಆಯುಧಗಳು, ಛಾಯಾಚಿತ್ರಗಳು, ತಮ್ಮ ಖಾಸಗಿ ಸಂಗ್ರಹಾಲಯವೊಂದನ್ನು ಅರಮನೆಯ ಹಿಂಭಾಗದ ಕರಿಕಲ್ಲು ತೊಟ್ಟಿಯಲ್ಲಿ ಶ್ರೀಕಂಠದತ್ತರು ಸಂಗ್ರಹಿಸಿ, ಅರಮನೆಯ ಪರಂಪರೆಯನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯ ಮಾಡುತ್ತಿದ್ದಾರೆ.

೧೫.ಡಾ.ತಿಪ್ಪೇರುದ್ರಸ್ವಮಿ,: ಕರ್ನಾಟಕ ಸಂಸ್ಕೃತಿ ಪು.ಸಂ-೧೭೧
೧೬. ಪ್ರೊ.ಕೆ.ಎಸ್. ರಂಗಪ್ಪ: : ಮೈಸೂರುದರ್ಶನ, ಪು.ಸ- ೧೦೨

ಸಂಸ್ಕೃತಿ ಪರಂಪರೆಗಳನ್ನು ಉಳಿಸಿ ಬೆಳೆಸುವುದರಲ್ಲಿ ಅವರಿಗೆ ವಿಶೇಷ ಕಾಳಜಿ. ಇಂದಿನ ಸಂವಿಧಾನಕ್ಕೆ ಅನುಗುಣವಾಗಿ ಅವರು ಮಹಾರಾಜರಲ್ಲ ಆದರೆ ಇಂದಿನ ಖಾಸಾಗಿ ದರ್ಬಾರು ಹಿಂದಿನ ನವರಾತ್ರಿಯ ವಿಧಿವಿಧಾನಗಳ ಪ್ರಕಾರಗಳನ್ನು ಇಂದು ಸಹ ನಡೆಸುತ್ತಿದ್ದಾರೆ.

ಮೈಸೂರು ಸಾಂಸ್ಕೃತಿಕ ಪರಿಸರವು ಪ್ರಾಚೀನತೆಯಿಂದ ಪುರಾಣ ಹಾಗೂ ಐತಿಹಾಸಿಕ ಕಾಲದಲ್ಲಿ ವಿಜ್ರಮಿಸಿದೆ. ಅದಕ್ಕೆ ಇಲ್ಲಿನ ಅರಸರುಗಳು ಲಲಿತಕಲೆಗೆ ಮರೆಯಲಾಗದಂತಹ ಶಾಶ್ವತವಾದ ದೇಶಿಯ ತನ ಪ್ರತಿಬಿಂಬಿಸುವ ಕಲಾಸಂಪತ್ತುನು ಕೊಡುಗೆ ನೀಡಿ, ಕಲಾವಿದರನ್ನು ಪೋಷಿಸಿ, ಕಲಾಕೃತಿಗಳನ್ನು ಸಂರಕ್ಷಿಸಿ ದೇಶದ ಆಸ್ತಿಗೆ ಮೌಲ್ಯ ತಂದು ಕೊಟ್ಟಿದ್ದಾರೆ. ಹಾಗೆ ಅನೇಕ ಚಿತ್ರಕಲಾ ಪ್ರಕಾರಗಳನ್ನು ಪ್ರೋತ್ಸಾಹಿಸಿದರಿಂದ ಇಲ್ಲಿ ಕಲೆಗಳು ಬೆಳೆಯಲು ಕಾರಣ ಮಾತೃಗಳಾಗಿದ್ದಾರೆ.

ಲಲಲಿತಕಲೆಯಲ್ಲಿ ಚಿತ್ರಕಲೆ ಮತ್ತು ಅದರ ಪ್ರಮುಖ ಪ್ರಕಾರವಾದ ಭಿತ್ತಿಚಿತ್ರಕಲೆಯು ದೇವಾಲಯ, ಅರಮನೆ, ಮಂಟಪ, ರಂಗಮಂದಿರ, ಚರ್ಚ್‌ಗಳಲ್ಲಿ ಭಿತ್ತಿಚಿತ್ರ ರೂಪದಲ್ಲಿ ರಾರಜಿಸುತ್ತಿದೆ. ಅದರಲ್ಲಿ ಭಾಗವತ, ರಾಮಯಾಣ, ಮಹಾಭಾರತ, ಅಲಂಕಾರಿಕ ಸ್ತ್ರೀಯರ ಚಿತ್ರಗಳು, ವಿವಿಧ ನಕ್ಷೆಗಳು, ಒಣಭಿತ್ತಿಯ ರಚನೆಯಲ್ಲಿ ಚಿತ್ರಿಸಿದ್ದಾರೆ. ಅವು ದೇಶಿಯ ಪ್ರತೀಕದಂತೆ ಪ್ರತಿಫಲಿಸುತ್ತದೆ. ನೈಸರ್ಗಿಕ ವರ್ಣಗಳ ಬಳಕೆ, ಪ್ರಾಂತ್ಯದ ಶೈಲಿಯ ಸೊಬಗು, ತಮ್ಮ ದೀರ್ಘಕಾಲದ ಆಳ್ವಿಕೆಯಲ್ಲಿ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದಾರೆ. ಆಗಿನ ಮೈಸೂರು ಸಂಸ್ಥಾನದಲ್ಲಿದ್ದ ಪ್ರಾಂತ್ಯಗಳು ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಚಿಕ್ಕಮಂಗಳೂರು, ಶಿವಮೊಗ್ಗ, ಹಾಸನ, ಚಿತ್ರದುರ್ಗ ಈ ಸ್ಥಳಗಳಲ್ಲಿ ಭಿತ್ತಿಚಿತ್ರಕಲೆ ಕಾರ್ಯ ನಡೆದಿರುತ್ತದೆ. ಆದರೆ ಈಗಿನ ಪರಿಸ್ಥಿತಿಯ ರಾಜಕೀಯ ಹಾಗೂ ಆಧುನಿಕ ಕರ್ನಾಟಕದಲ್ಲಿ ಮೈಸೂರು ಜಿಲ್ಲೆಯಲ್ಲಿ ನಗರ ಹಾಗೂ ತಾಲೂಕುಗಳಲ್ಲಿ ಭಿತ್ತಿಚಿತ್ರಕಲೆಯ ನೆಲೆಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಅವು ಸುತ್ತೂರು, ಮುಡುಕುತೊರೆ, ಬೈಲುಕುಪ್ಪೆ, ಟಿ.ನರಸಿಪುರ ಸ್ಥಳಗಳಲ್ಲಿ ಭಿತ್ತಿಚಿತ್ರಗಳು ಕಂಡುಬರುತ್ತದೆ. ಇವುಗಳನ್ನು ಮಾತ್ರ ಅಧ್ಯಯಕ್ಕೆ ಬಳಸಿಕೊಳ್ಳಲಾಗಿದೆ. ೧೬೪೯ರಿಂದ ನಂತರ ಯಥೇಚ್ಚವಾಗಿ ಭಿತ್ತಿಚಿತ್ರಗಳನ್ನು ನಿರ್ಮಿಸಿಸುರಿತ್ತಾರೆ. ಚಿತ್ರಕಲೆಯು ಪ್ರಾರಂಭದಲ್ಲಿ ಅರಮನೆಗಳಲ್ಲಿ ನಂತರ ದೇವಾಲಯಗಳಲ್ಲಿ ಇದೆ. ಆಧುನಿಕ ಕಾಲದಲ್ಲಿ ಟಿಪ್ಪು ಮತ್ತು ಎಲ್ಲಾ ಒಡೆಯರವಂಶಸ್ಥರ ಅರಸರುಗಳು ಅರಮನೆ ದೇವಾಲಯಗಳಲ್ಲಿ ಚಿತ್ರಕಲೆಯು ವಿಜಯನಗರದ ನಂತರ ಮೈಸೂರಿನಲ್ಲಿ ಸುತ್ತಮುತ್ತ ಭಿತ್ತಿಚಿತ್ರಗಳು ಹೆಚ್ಚು ಕಂಡುಬರುತ್ತವೆ.

ಇಲ್ಲಿನ ಐತಿಹಾಸಿಕ ಕಾಲಗಳಲ್ಲಿಯೇ ಹಸ್ತಪ್ರತಿಗಳು ಸಹ ಇರುತ್ತದೆ. ಅದರಲ್ಲಿ ಚಿತ್ರಕಲೆಯೂ ಸಹ ಕಂಡುಬರುತ್ತದೆ. ಹಸ್ತಪ್ರತಿಯೂ ತಾಳೆಗರಿ, ಕಾಗದ, ರಟ್ಟು ಮತ್ತು ಕಾಗದದ ಜೊತೆ ಬಟ್ಟೆಯಲ್ಲಿಯೂ ಇವುಇರುತ್ತದೆ. ಹೆಚ್ಚಾಗಿ ಧಾರ್ಮಿಕ ಹಿನ್ನೆಲೆಯಲ್ಲಿ ಹಾಗೂ ಅಲಂಕಾರಿಕ ನಕ್ಷೆಯನ್ನು ಇವು ಹೊಂದಿರುತ್ತದೆ ಅನೇಕ ಶಾಸ್ತ್ರಗ್ರಂಥಗಳಲ್ಲಿ ಸೌಂದರ್ಯ, ತತ್ವಶಾಸ್ತ್ರ, ಪುರಾಣಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ರೇಖಾಚಿತ್ರಗಳು ಇದೆ.

ಮೈಸೂರು ಭಾಗದಲ್ಲಿ ಧಾರ್ಮಿಕ, ಐತಿಹಾಸಿಕವು ದೀರ್ಘವಾದ ಹಿನ್ನೆಲೆಯಿಂದ ಹಸ್ತಪ್ರತಿ ಕಲೆಯು ಅಷ್ಟೇ ಹೇರಳವಾಗಿ ತುಂಬಿದೆ. ಅವುಗಳು ಅರಮನೆಯ ಸರಸ್ವತಿ ಭಂಡಾರದಲ್ಲಿ, ಓರಿಯಂಟಲ್ ಹಸ್ತಪ್ರತಿ ಸಂಗ್ರಹಾಲಯದಲ್ಲಿ ಮತ್ತು ಸಂಸ್ಕೃತ ಪಾಠ ಶಾಲೆಯಲ್ಲಿಯಲ್ಲಿ ಮುಖ್ಯವಾಗಿ ಹಸ್ತಪ್ರತಿಗಳು ಶೇಖರಣೆಗೊಂಡಿದೆ. ಅದು ಮಹಾರಾಜರ ಕಾಳಜಿಯಿಂದ ಇಂದು ನಮ್ಮೆಲ್ಲರಿಗೂ ಸಹ ಪ್ರಾಚೀನ ಮೈಸೂರು ಚಿತ್ರಕಲೆಯ ಪ್ರಕಾರಗಳಲ್ಲಿ ಒಂದು. ಮೈಸೂರು ಪ್ರಾಂತ್ಯದಲ್ಲಿ ಪರಂಪರೆಯಿಂದ ಬೆಳೆದು ಬಂದಿದೆ, ಅರಸರ ಪ್ರೋತ್ಸಾಹದಿಂದ ಬೆಳವಣಿಗೆ ಕಂಡಿದೆ. ಇತ್ತೀಚಿನ ಕಾಲಮಾನದಲ್ಲಿ ತಾಂತ್ರಿಕ, ಯಾಂತ್ರಿಕ ಮತ್ತು ರಾಜಕೀಯವಾಗಿ ಬೆಳೆವಣಿಗೆಯಿಂದ ಇದು ಕುಂಠಿತಗೊಂಡಿತ್ತು.

ಹಾಗೇ ಭಾರತೀಯ ಕಲೆಯಲ್ಲಿ ಗಂಜೀಫಾ ಕಲೆಯು ಅತಿ ಪ್ರಾಚೀನತೆಯಿಂದಲೂ ಇದೆ. ಅದು ಧಾರ್ಮಿಕ, ಕ್ರೀಡೆಯ ಮನೋರಂಜನೆಯ ಹಿನ್ನೆಲೆಯಲ್ಲಿ ಕೂಡಿದೆ. ಈ ಕಲೆಯೂ ಮೈಸೂರು ಪ್ರಾಂತ್ಯದಲ್ಲಿಯೂ ರಾಜರ ಪ್ರೋತ್ಸಾಹದ ನೆರಳಿನಲ್ಲಿ ಹೆಚ್ಚಾಗಿ ಬೆಳವಣಿಗೆ ಕಂಡಿದೆ. ಇದರಲ್ಲಿ ಅನೇಕ ರೀತಿಯ ಪ್ರಕಾರಗಳು ಇದೆ. ದೇಶಿಯವಾಗಿ ಜನಪದ ಮತ್ತು ಸಂಪ್ರದಾಯ ಹಾಗೂ ಸಮಕಾಲೀನ ನೆಲೆಯ ಅಂಶದಲ್ಲಿ ರಚನೆಯಾಗಿದೆ.

ಅವುಗಳು ಅರಮನೆ ಸಂಗ್ರಹಾಲಯದಲ್ಲಿ, ಖಾಸಗಿ ಮೂಜಿಯಂಗಳಲ್ಲಿ, ಶ್ರೀಮಂತ ಮಹಲ್‌ಗಳಲ್ಲಿ ಕಂಡುಬರುತ್ತದೆ. ಈ ಪ್ರಾಂತ್ಯದಲ್ಲಿ ಒಂದು ಕಲಾಪರಂಪರೆಯಾಗಿ ಇಂದಿಗೂ ಸಹ ಚಿತ್ರರಚಿಸುವ ಕಲಾವಿದರು ಕಂಡುಬರುತ್ತಾರೆ.

ಆ ಕಲೆಗಳಂತೆ ಆಧುನಿಕ ಕಾಲದಲ್ಲಿ ಈ ಪ್ರಾಂತ್ಯದಲ್ಲಿ ಗಾಜಿನ ಚಿತ್ರಕಲೆಯೂ ಒಂದು ಚಿತ್ರಕಲಾ ಪರಂಪರೆಯಾಗಿ ಬೆಳೆದು ಸಾಗುತ್ತಿದೆ. ಅದು ಪಾಶ್ಚಾತ್ಯರ ಲಲಿತಕಲೆಯ ಪ್ರಭಾವದಿಂದ ಘನವಾದ ದ್ರವ ಮಾಧ್ಯಮವಾಗಿದ್ದು ಒಂದು ಪಾರದರ್ಶಕ ಗುಣಹೊಂದಿದೆ. ಇದರ ಮೇಲೆ ಒಂದು ರೀತಿಯಲ್ಲಿ ವಿಭಿನ್ನ ಚಿತ್ರಕಲೆ ರಚಿಸುತ್ತಾರೆ. ಇಲ್ಲಿನ ರಾಜರ ಆಸೆಯಂತೆ ಅರಮನೆ, ಮಹಲ್‌ಗಳಲ್ಲಿ ಚರ್ಚ್‌ಗಳಲ್ಲಿ ಹೆಚ್ಚಾಗಿ ಗಾಜಿನಚಿತ್ರಗಳು ಕಂಡುಬರುತ್ತದೆ. ಅದರಲ್ಲಿ ದೇಶಿಯ ಸಂಪ್ರದಾಯಿಕ ಚಿತ್ರಗಳು ಆಧುನಿಕ ಚಿತ್ರಗಳು, ಅಲಂಕಾರಿಕ ನಕ್ಷೆಗಳು, ರಿಯಾಲಿಸ್ಟಿಕ್ ಮಾದರಿ ಹೊಂದಿದ ಗಾಜಿನಚಿತ್ರಗಳು ಈ ಪ್ರಾಂತ್ಯದಲ್ಲಿ ಇದೆ ಹಾಗೂ ಒಂದು ಉದ್ಯಮವಾಗಿ, ಸಾರ್ವತ್ರಿಕ ಪ್ರಮುಖ ಕಲೆಯಾಗಿದೆ. ವರ್ಣ ಮತ್ತು ಎಚ್ಚಿಂಗ್ ಎಂಬ ತಂತ್ರದಿಂದ ಚಿತ್ರಕಲೆ ರಚಿಸುತ್ತಾರೆ.

ಬ್ರಿಟಿಷ್‌ರ ಆಡಳಿತ ಚುಕ್ಕಾಣಿಯಲ್ಲಿ ಅನೇಕ ಸುಧಾರಣೆಯ ಜೊತೆ ಬದಲಾವಣೆಗಳು ಆದವು, ಅದರಲ್ಲಿ ಶಿಕ್ಷಣ ಕ್ರಾಂತಿಯು ಒಂದು. ಅದರಲ್ಲಿ ಚಿತ್ರಶಾಲೆ ಸೇರಿದೆ. ಅದರ ಪಠ್ಯಕ್ರಮದ ಜೊತೆಗೆ ಅನೇಕ ಕಲಾಶಾಲೆ ತೆರೆದರು. ಶಾಲೆಯಲ್ಲಿ ಕರಕುಶಲ ಕಲೆಯ ಶಿಕ್ಷಣವನ್ನು ನೀಡುತ್ತಿದ್ದರು. ಅದರಲ್ಲಿ ಅವರ ಪ್ರಭಾವ, ಪ್ರೇರಣೆಯಿದ್ದು, ರಾಜರು ಸಹ ಶಿಕ್ಷಣದ ಮಹಾತ್ವಾಕಾಂಕ್ಷೆಯ ಫಲವಾಗಿ ಮೈಸೂರು ಪ್ರಾಂತ್ಯದಲ್ಲಿ ರಾಜರ ಆಸಕ್ತಿಯಿಂದ ಹಲವು ಕಲಾಶಾಲೆ ಸ್ಥಾಪನೆ ಮಾಡಿದರು. ಇದರ ಪ್ರೇರಣೆಯಿಂದ ಕಲಾವಿದರು ಮತ್ತು ಕಲಾಚಟುವಟಿಕೆಗಳು ಈ ಭಾಗದಲ್ಲಿ ನಡೆಯಲು ಪ್ರಾರಂಭವಾಯಿತು. ಮುಂದಿನ ವರ್ಷಗಳಲ್ಲಿ ಖಾಸಗಿಯಾಗಿಯೂ ಅನೇಕ ಕಲಾಶಾಲೆಗಳು ಸ್ಥಾಪನೆಯಾಗಿದೆ ಈ ನೆಲೆಯಲ್ಲಿ, ಖಾಸಗಿ ಕಲಾಶಾಲೆ ತಲೆಯೆತ್ತಿ ಕಲಾಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಲು ಅನೇಕ ಕಲಾವಿದರನ್ನು ಇಲ್ಲಿ ಹೊರತಂದಿರುತ್ತಾರೆ. ಇದರಿಂದ ವಿಭಿನ್ನಕಲಾಕೃತಿಗಳು ಕಲಾಪ್ರಪಂಚದಲ್ಲಿ ಅಮರವಾಗಿ ಪ್ರಸಿದ್ದಿಯಾಗಿದೆ. ಇಲ್ಲಿ ಚಿತ್ರಕಲೆಯ ಹಲವು ಪ್ರಕಾರಗಳ ಬಗೆ ಇಲ್ಲಿಯೂ ಶಿಕ್ಷಣ ನೀಡಿರುತ್ತಾರೆ. ಆಧುನಿಕತೆಯಲ್ಲಿ ದೇಶಿಯ ವಿದೇಶಿಯ ಸಾರವನ್ನು ಸಾರುವ ಶಿಕ್ಷಣ ನೀಡಿದ್ದರೂ ಕಲಾವಿದರು ತಮ್ಮ ಶ್ರೇಷ್ಠತೆಯನ್ನು ಕಾಪಾಡಿಕೊಂಡು ಬೆಳೆದಿದ್ದಾರೆ.

ಚಿತ್ರಕಲೆಯ ಅನೇಕ ಕಲಾಪ್ರಕಾರಗಳು ಮೈಸೂರು ಜಿಲ್ಲೆಯಲ್ಲಿ ಹೇರಳವಾಗಿ ಬೆಳೆದಿದೆ. ಅದು ಅನೇಕ ಪ್ರಸಿದ್ಧಕಲೆಯ ಋತುವಿನ ಕಾಲದಲ್ಲಿಯೇ ಅವು ಈ ನಾಡಿನ ನೆಲೆಯಲ್ಲಿ ಬೆಳೆದು ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದು ಅನೇಕ ಕಲಾವಿದರುಗಳು ಹೆಸರು ಸಹ ಮಾಡಿದ್ದಾರೆ. ನವ್ಯತೆಯಲ್ಲಿ ಕೈಗಾರಿಕೆಯ ಕ್ರಾಂತಿಯ ತರಾತುರಿಯ ಕಾಲದ ಸುಳಿಯಲ್ಲಿ ಚಿತ್ರಕಲೆಯ ಪ್ರಕಾರಗಳು ನಶಿಸುತ್ತಿದೆ. ಆದರು ಇಂದು ಅಲ್ಲಲ್ಲಿ ಜೀವಂತಿಕೆಯ ಕಲೆಯ ಸೆಲೆಯಾಗಿ ಕಂಡುಬರುತ್ತಿದೆ. ಆ ಕಲೆಗಳಿಗೂ ಸಹ ರಾಜಾಶ್ರಯ ದೊರಕಿ ಒಂದು ಕಾಲದಲ್ಲಿ ವಿಜೃಂಭಿಸಿತ್ತು. ಆದರೆ ಇಂದು ಅದು ಕೈತಪ್ಪಿ ಕಲಾವಿದರು ಇಂದಿನ ಯಾಂತ್ರಿಕ ಕಾಲದಲ್ಲಿ ಕಂಗಲಾಗಿದ್ದಾರೆ. ಆಗಾಗಿ ಈ ಕಲೆಗಳು ನಶಿಸುತ್ತಿವೆ.

ಈ ಕಲೆಗಳು ಯಾವುವೆಂದರೆ, ಜನಪದಕಲೆಗಳು ಮತ್ತು ಕಪ್ಪು-ಬಿಳಿಪಿನ ಪೋಟೋವನ್ನು ವರ್ಣಗಳಿಂದ ಕೊನೆಗೊಳಿಸುವಕಲೆ. ಲೀಥೋಗ್ರಾಫ್, ಎನ್‌ಗ್ರೇವಿಂಗ್‌ಕಲೆ ಮಣಿಗಳಿಂದ ನಿರ್ಮಾಣವಾದ ಕಲಾಕೃತಿಗಳ ತಯಾರಿಕೆ, ಚರ್ಮ ಪ್ರಸಾದನ ಕಲೆ, ಕಪ್ಪೆಚಿಪ್ಪಿನಿಂದ ಮೂರ್ತಿ ತಯಾರಿಕೆ, ಮೇಣದ ಕಲಾಕೃತಿ ರಚನೆ ಇನ್ನೂ ಮುಂತಾದ ಕಲೆಯ ಪ್ರಕಾರಗಳು ಇವೆ ಅವುಗಳನ್ನು ಸಂಕೀರ್ಣ ಕಲಾ ಪರಂಪರೆ ಎಂದು ಗುರುತಿಸಿ ಅಧ್ಯಯನ ಮಾಡಲಾಗಿದೆ. ಇದರಲ್ಲಿ ಬೇರೆ ಬೇರೆ ಮಾಧ್ಯಮಗಳು ಸಹ ಬಳಕೆಯಾಗಿ ಸಂಯೋಜನೆಯಿಂದ ನಿರ್ಮಾಣ ವಾಗಿರುತ್ತದೆ, ಈ ಕಲೆಗಳು ಮೈಸೂರಿನ ಸುತ್ತಮುತ್ತ ಒಂದು ಉತ್ತಮ ಉದ್ಯಮವಾಗಿಯೂ ಪರಿಣಯಿಸಿದೆ. ಹಾಗೆ ಕರಕುಶಲ ಕಲೆಯು ಸಹ ಈ ನೆಲೆಯಲ್ಲಿ ಹೆಮ್ಮರವಾಗಿ ಬೆಳೆದಿದೆ. ಮೈಸೂರಿನಲ್ಲಿ ಕರಕುಶಲ ಕೇಂದ್ರ ಮೂಂಚೂಣಿಯಲ್ಲಿ ಸಾಗುತ್ತಿದೆ. ಈ ಎಲ್ಲಾ ಕಲೆಗಳು ಮೈಸೂರು ಜಿಲ್ಲೆಯ ಸಂಕೀರ್ಣಕಲೆಯಾಗಿದ್ದು. ಅವು ಒಂದು ಪರಂಪರೆಯಾಗಿಯೂ ಬೆಳೆದಿವೆ.

ಆ ಕಲಾಕೃತಿಗಳು ಸರಕಾರಿ ಸಂಗ್ರಹಾಲಯಗಳಲ್ಲಿ, ಖಾಸಗಿ ಚಿತ್ರಸಂಗ್ರಹಕಾರರು, ಅರಮನೆಯ ಸಂಗ್ರಹಾಲಯ ಮುಂತಾದ ಸ್ಥಳಗಳಲ್ಲಿ ಶೇಖರಣೆಗೊಂಡಿವೆ. ಮೈಸೂರಿನ ಚಿತ್ರಕಲಾ ಕ್ಷೇತ್ರವು ಯಾವಾಗಲೂ ಚಲನೆಯಿಂದ ಕೂಡಿದೆ. ಚಿತ್ರಕಲೆಯ ಇತಿಹಾಸ ತೆರೆದು ನೋಡಿ ಅಲೋಚಿಸಿದ್ದರೆ ತಿಳಿಯುತ್ತದೆ.೫೦೦-೬೦೦ ರಷ್ಟು ವರ್ಷಗಳ ಕಾಲ ದೀರ್ಘ ಇತಿಹಾಸದಲ್ಲಿ ಪ್ರಾಚೀನ ಕಲಾಇತಿಹಾಸ, ಐತಿಹಾಸಿಕ ಕಲಾಇತಿಹಾಸ, ಆಧುನಿಕ ಕಲಾಇತಿಹಾಸದಲ್ಲಿ ಲಲಿತಕಲೆಯು ಇಲ್ಲಿ ಸಮೃದ್ಧವಾಗಿ ಬೆಳೆದಿದೆ. ಇಲ್ಲಿ ಚಿತ್ರಕಲೆಯು ನಿಂತ ನೀರಂತೆ ಒಂದೇ ಆಕಾರದಲ್ಲಿ ಇರುವುದಿಲ್ಲ ಅದು ಅನೇಕ ರೀತಿಯಲ್ಲಿ ರೂಪಾಂತರಗೊಂಡು ಮಿಲನಗೊಂಡಿದೆ. ಅದರಲ್ಲಿ ಮನುಷ್ಯನ ಭಾವನೆ, ಪರಿಸ್ಥಿತಿಗಳು, ಸಂದರ್ಭ, ರಾಜಕೀಯ, ಧಾರ್ಮಿಕದ ಕೆಲವು ಪ್ರಭಾವ ಪ್ರೇರಣೆ, ತನ್ನದೆಶೈಲಿ ಲಕ್ಷಣಗಳಿಂದ ಆಗಿದೆ, ಮೊಗಲಕಲೆ, ಡಚ್ಚರು, ಇಂಗ್ಲಿಷರು ಮತ್ತು ಆಧುನಿಕ ಕಲೆಯ ಪ್ರಭಾವ ಈ ಪ್ರಾಂತ್ಯದ ಚಿತ್ರಕಲೆಯಲ್ಲಿ ಸೇರಿದೆ. ಜೊತೆಗೆ ಇತಿಹಾಸದಲ್ಲಿ ನಮ್ಮ ವಿಜಯನಗರದ ಪತನ ನಂತರ ಅಲ್ಲಿನ ಲಲಿತಕಲೆಯು ಮೈಸೂರು ಪ್ರಾಂತ್ಯದಲ್ಲಿ ಮೊಳಕೆ ಹೊಡೆದು ಬೆಳೆಯಿತ್ತು, ಅದರಲ್ಲಿ ಬೇರೆ ಚಿತ್ರಕಲಾ ಶೈಲಿಯಂತೆ ಇಲ್ಲಿಯೂ ದೇಶಿಯ ಸೊಬಗುವುಳ್ಳ ತಮ್ಮದೆ ಆದ ಶೈಲಿ ಮತ್ತು ಪ್ರತ್ಯೇಕ ಲಕ್ಷಣಗಳಿಂದ ಚಿತ್ರಕಲೆ ಕಂಡುಬರುತ್ತದೆ.

ಇಲ್ಲಿನ ಐತಿಹಾಸಿಕ ನೆಲೆಗಟ್ಟಿನ ಮೇಲೆ ಮುಸ್ಲಿಂ, ಮತ್ತು ಇಂಗ್ಲಿಷರ ಮತ ಧರ್ಮಗಳು, ಧಾರ್ಮಿಕ, ಆಧುನಿಕತೆ ಒಳಗೊಂಡ ಚಿತ್ರಕಲೆಯು ಈ ಪ್ರಾಂತ್ಯದಲ್ಲಿ ಅರಮನೆ, ಸಂಗ್ರಹಾಲಯ, ದೇವಾಲಯ ಹಾಗೂ ಗ್ಯಾಲರಿ, ಕಲಾಶಾಲೆ, ಚರ್ಚ್, ಕಛೇರಿ ಮುಂತಾದ ಸ್ಥಳಗಳಲ್ಲಿ ದಾಖಲಾಗಿದೆ. ಕಲಾಕೃತಿಗಳೆಲ್ಲ ಮೌಲ್ಯಗಳನ್ನು ಒಳಗೊಂಡ ಕಲಾಪ್ರಕಾರಗಳ ಪರಂಪರೆಯೆ ಆಗಿದ್ದು ಈ ಪ್ರದೇಶದ ಸೊಬಗಿನ ಪ್ರತಿಫಲವಾಗಿ ಈ ನಾಡಿನ ಸಂಪತ್ತು ಆಗಿರುತ್ತದೆ. ಆದರೆ ಐತಿಹಾಸಿಕ ಘಟನೆಗಳಿಂದ ಕೆಲವು ನಾಶವಾಗಿದೆ.

ತೌಲನಿಕವಾಗಿ ನೋಡಿದಾಗ ಹೊರರಾಜ್ಯದ ಸಾಂಸ್ಕೃತಿಕ ಪರಿಸರವನ್ನು ಹೋಲಿಕೆ ಮಾಡಿ ನೋಡಿದಾಗಲೂ ಮೈಸೂರು ಅರಸರುಗಳು ಕಲೆಉಳಿಸಿ ಬೆಳೆಸುವ ಶ್ರಮವೇ ಹೆಚ್ಚಾಗಿದೆ. ಇಲ್ಲಿನ ಅರಸರುಗಳ ಸಾಂಸ್ಕೃತಿಕ ಪರಿಸರವನ್ನು ವಿಶ್ವಪ್ರಸಿದ್ಧಿಯಾಗಿರುವಂತೆ ನಿರ್ಮಾಣ ಮಾಡಿದ್ದಾರೆ. ಈಗಲೂ ಆ ಸವಿಯ ವೈಭವವನ್ನು ಜನರು ತುದಿಗಾಲಿನಲ್ಲಿ ನಿಂತೂ ನೋಡಿ, ಆಶ್ಚರ್ಯಚಕಿತರಾಗಿ ಈ ಕಲೆಯನ್ನು ಕಣ್ಣು ಅರಳಿಸಿ ನೋಡಿ, ಮನಸೋಲುವ ಜೊತೆಗೆ ಮೈಮರೆತು ನೋಡುತ್ತಾ ನಿಲ್ಲುತ್ತಾರೆ. ಕರ್ನಾಟಕ ಐತಿಹಾಸಿಕ ದಾರಿಯಲ್ಲಿ ಲಲಿತಕಲೆಯ ಜೊತೆಗೆ ಚಿತ್ರಕಲೆಯನ್ನು ಉಳಿಸಿ ಬೆಳೆಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಇಲ್ಲಿನ ಅರಸರು ಕಲೆಯ ಎಲ್ಲಾ ಭಾಗದಲ್ಲಿ ನೋಡಿದಾಗ ಚಿತ್ರಕಲೆಯ ಪ್ರಕಾರಗಳ ಜೊತೆ ಕಲಾಸಾಹಿತ್ಯ ಸಹ ಇಲ್ಲಿ ಬೆಳೆಸಿದ್ದಾರೆ.

ಈ ಜಿಲ್ಲೆಯ ಲಲಿತಕಲೆಯಂತೆ ಸುರಪುರ, ಕೆಳದಿ ಅರಸರ ಲಲಿತಕಲೆಯು ಅಲ್ಲಿಯೂ ಬೆಳೆದರು ಸಹ ಹೆಚ್ಚು ಪ್ರಬುದ್ಧತೆ ಶಕ್ತಿಶಾಲಿಯಾಗಿ ಬೆಳೆದಿದ್ದು ಮೈಸೂರು ಅರಸರು ಮಾತ್ರ, ಏಕೆಂದರೆ ಕರ್ನಾಟಕ ಆಡಳಿತ ಚುಕ್ಕಾಣಿ ಬ್ರಿಟಿಷರ ಕೈಯಲ್ಲಿತ್ತು. ಆದರೂ ಇಲ್ಲಿನ ಅರಸರು ತುಂಬ ಜಾಣ್ಮೆಯಿಂದ ಭಿತ್ತಿಚಿತ್ರಕಲೆ, ಹಸ್ತಪ್ರತಿಚಿತ್ರಕಲೆ, ಗಂಜೀಫಾಚಿತ್ರಕಲೆ, ಗಾಜಿನಚಿತ್ರಕಲೆ, ಮತ್ತು ಕಲಾಶಾಲೆಗಳು ಅದರಿಂದ ಅನೇಕ ಕಲಾಪ್ರಕಾರಗಳನ್ನು ಅವರು ಇಲ್ಲಿ ಉಳಿಯಲ್ಲೂ, ಈ ಭಾಗದಲ್ಲಿ ಆಧುನಿಕ ಕಾಲದಲ್ಲಿಯೂ ಶ್ರಮಿಸಿದ್ದರು.

~~~~~~~~~~~~o~~~~~~~~~~~~~~
~~~~~~~~~~~~

ಅಧ್ಯಾಯ : ಮೂರು

ಮೈಸೂರು ಜಿಲ್ಲೆಯ ಭಿತ್ತಿ ಚಿತ್ರಕಲೆ.

ಅಧ್ಯಾಯ: ಮೂರು

ಮೈಸೂರು ಜಿಲ್ಲೆಯ ಭಿತ್ತಿಚಿತ್ರಕಲೆ

ಮಾನವನ ಭಾವನೆಯ ಅಭಿವ್ಯಕ್ತಿಯಾದ ಕಲೆಯು ವಿವಿಧ ರೂಪಗಳಲ್ಲಿದ್ದು ಅದರಲ್ಲಿ ಚಿತ್ರಕಲೆಯು ಪ್ರಮುಖವಾಗಿದೆ. ಚಿತ್ರಕಲೆಯಲ್ಲಿಯೂ ಅನೇಕ ಪ್ರಕಾರಗಳಲ್ಲಿದ್ದೂ ಅದರಲ್ಲಿ ಭಿತ್ತಿಚಿತ್ರಕಲೆ ಪ್ರಾಚೀನತೆಯ ಶಿಲಾಶ್ರಯಗಳಲ್ಲಿ ರಚನೆಯಾಗಿರುವ ವರ್ಣರಹಿತ ಮತ್ತು ವರ್ಣಚಿತ್ರಗಳು ಪ್ರಾರಂಭಿಕ ಭಿತ್ತಿಚಿತ್ರಕಲೆಯೆಂದು ಗುರುತಿಸುತ್ತಾರೆ. ಭಾರತದಲ್ಲಿ ಹಲವು ನೆಲೆಗಳಲ್ಲಿ ಕ್ರಿ.ಪೂ ಹಿಂದಿನಿಂದಲೂ ಪ್ರಾಗೈತಿಹಾಸಿಕ ಭಿತ್ತಿಚಿತ್ರಕಲೆಗಳಿವೆ. ನಂತರದ ಕಾಲವಾದಂತಹ ಐತಿಹಾಸಿಕ ಕಾಲದಲ್ಲಿ ದೊಡ್ಡ ಪ್ರಮಾಣದ ಸಾಂಪ್ರದಾಯಿಕ ಪ್ರಕಾರಗಳಲ್ಲಿ, ರಾಜವಂಶಸ್ಥರ ಆಶ್ರಯದಲ್ಲಿ ಬೆಳೆದಿರುವುದನ್ನು ಸಿಂಧೂನಾಗರಿಕತೆ, ವೇದಕಾಲ ಆ ನಂತರದ ರಾಮಯಾಣ, ಮಹಾಭಾರತಗಳಲ್ಲಿ ಅರಮನೆಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಲಾಗಿತ್ತು ಎಂಬುದು ಹಲವು ಸಾಹಿತ್ಯಗಳಲ್ಲಿ ಗುರುತಿಸಿದ್ದಾರೆ.[೧]

ಸಾಂಸ್ಕೃತಿಕವಾಗಿ ಹೆಚ್ಚು ಕಾಣಿಕೆ ನೀಡಿದ ಕರ್ನಾಟಕದಲ್ಲಿ ಭಿತ್ತಿಚಿತ್ರಕಲೆಯ ಒಂದು ಶಿಷ್ಟ ಪರಂಪರೆಯಾಗಿ ಕಾಲಕಾಲಕ್ಕೆ ಶ್ರೀಮಂತಗೊಳ್ಳುತ್ತಾ ಬೆಳೆದಿರುತ್ತದೆ. ಅದು ಕದಂಬರಿಂದಲೇ ಆದರೂ ಬಾದಾಮಿ ಚಾಲುಕ್ಯರಿಂದ ಪ್ರತಿಬಿಂಬಿಸುತ್ತಾ ಹೊಯ್ಸಳ, ವಿಜಯನಗರಅರಸರ ಕಾಲದಲ್ಲಿ ವಿಸ್ತಾರವಾಗಿ ಬೆಳೆಯಿತು. ಆ ನಂತರ ದೊರೆಗಳಾದ ಮೈಸೂರು ಒಡೆಯರು ಪ್ರವರ್ಧನಮಾನಕ್ಕೆ ಬಂದಾಗ ಮೈಸೂರಿನ ಆಡಳಿತಕ್ಕೆ ಒಳಪಟ್ಟಂತಹ ಪ್ರಾಂತ್ಯಗಳಲ್ಲಿ ಭಿತ್ತಿಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದವರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ೧೭ನೇಶತಮಾನ, ಚಾಮರಾಜ ಒಡೆಯರು ೧೮ನೇ ಶತಮಾನ, ನಾಲ್ವಡಿಕೃಷ್ಣರಾಜ ಒಡೆಯರು ಇವರ ಕಾಲದಲ್ಲಿ ಚಿತ್ರಕಲೆಯು ಸಮೃದ್ಧವಾಗಿ ಬೆಳೆದು ಬಂತು. ಹಾಗಾಗಿ ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲಿ ಅಂದಿನ ಕಲೆಯ ನೆಲೆಗಳು ಕಲಾರಾಧಕರಿಗೆ, ಕಲಾಶಿಕ್ಷಣಕ್ಕೆ ದೇವಾಲಯಗಳಾಗಿ ಸಂಶೋಧನೆಗೆ ದೊಡ್ಡ ಆಕಾರ ಸಾಮಾಗ್ರಿಯಾಗಿದೆ.

೧. ಸಿ.ಶಿವರಾಮಮೂರ್ತಿ: ಭಾರತೀಯ ಚಿತ್ರಕಲೆ,ಪು.ಸಂ-೧೦

ಭಿತ್ತಿಚಿತ್ರವನ್ನು ಆಂಗ್ಲಭಾಷೆಯಲ್ಲಿ ಮ್ಯೂರಲ್ ಪೇಂಟಿಂಗ್ ಎಂದು ಕರೆಯುತ್ತಾರೆ. ಶಬ್ದಕೋಶ ಮತ್ತು ವಿಶ್ವಕೋಶಗಳಲ್ಲಿ ಭಿತ್ತಿಚಿತ್ರಕಲೆಯ ಅರ್ಥ ವ್ಯಾಪ್ತಿಯ ಬಗ್ಗೆ ವಿವರಣೆ ಕೊಟ್ಟಿದೆ. ಅದರಲ್ಲಿ ಗೋಡೆ ಮತ್ತು ಮೇಲ್ಛಾವಣಿಗಳಲ್ಲಿ ಬರೆದ, ಕೆತ್ತಿ ಕೊರೆದು ಅಂಟಿಸಿ ರೂಪಿಸಿದ ಕೃತಿಗಳು ಮತ್ತು ಬಣ್ಣಗಳಿಂದ ಚಿತ್ರಿಸಿದ್ದನ್ನು ಭಿತ್ತಿಚಿತ್ರ ಎಂದು ಹೆಸರಿಸಿದ್ದು ನಮ್ಮ ಪ್ರಾಚೀನರು ಭಿತ್ತಿಚಿತ್ರವನ್ನು ಕುಡ್ಯ ಚಿತ್ರವೆನ್ನುತ್ತಾರೆ. ಗೋಡೆ, ಕಮಾನು, ಕಂಬ ಮತ್ತು ತೊಲೆ, ಮೇಲ್ಛಾವಣಿ ಮುಂತಾದ ವಾಸ್ತುವಿನ ಭಾಗಗಳಲ್ಲಿ ರಚನೆಯಾಗಿರುವ ಚಿತ್ರಗಳನ್ನು ಒಟ್ಟಾರೆ ಭಿತ್ತಿಚಿತ್ರಗಳೆಂದು ಕರೆಯಲಾಗಿದೆ.[3] ಪ್ರಾಚೀನ ಗ್ರಂಥಗಳಲ್ಲಿ ಈ ವಿಷಯ ಕುರಿತಾದ ಪ್ರಧಾನ ವಿಷಯವಾಗಿ ಸ್ವತಂತ್ರವಾಗಿ ಇರುವಂಥಹ ಗ್ರಂಥಗಳು ಯಾವುವು ಇರುವುದಿಲ್ಲ. ಆದರೆ ಪ್ರಸಿದ್ಧ ಸಾಹಿತ್ಯ ಗ್ರಂಥಗಳಲ್ಲಿ ಭಿತ್ತಿಚಿತ್ರಕಲೆಯ ವಿಷಯ ಕುರಿತಾದ ಕೆಲವು ಅಧ್ಯಾಯಗಳು ಪದ್ಯವಾಗಿ ಕಾಣುತ್ತವೆ. ಅದರಲ್ಲಿ ಕಶ್ಯಪ್ಪ ಶಿಲ್ಪಶಾಸ್ತ್ರ, ವಿಷ್ಣುಧರ್ಮೋತ್ತರ ಪುರಾಣ, ಮಾನಸ್ಲೋಲಾಸ, ಶಿಲ್ಪರತ್ನ, ಶಿವತತ್ವರತ್ನಾಕರ, ಸಮಾರಾಂಗಣ ಸೂತ್ರದಾರ ಮುಂತಾದವುಗಳಲ್ಲಿ ಉಲ್ಲೇಖಗೊಂಡಿರುತ್ತದೆ.

ಭಿತ್ತಿಸಿದ್ದತೆ: ಭಿತ್ತಿಸಿದ್ದತೆಯಲ್ಲಿ ಎರಡು ವಿಧ ಒಣಭಿತ್ತಿ, ಹಸಿಭಿತ್ತಿ ಎಂದು ಮೊದಲನೆಯದಲ್ಲಿ ಸುಣ್ಣ, ಉಸುಕು, ಪ್ರಧಾನವಾದ ಗಾರೆಭಿತ್ತಿ, ಎರಡನೆಯದಾದ ಹಸಿಭಿತ್ತಿಯಲ್ಲಿ ಜೇಡಿಮಣ್ಣು, ಮುಂತಾದಗಳಿಂದ ನಿರ್ಮಾಣವಾಗುತ್ತದೆ. ಮೈಸೂರು ಜಿಲ್ಲೆಯ ಐತಿಹಾಸಿಕ ಮತ್ತು ಆಧುನಿಕ ಭಿತ್ತಿಚಿತ್ರ ನೆಲೆಗಳು ಒಣಭಿತ್ತಿ ವಿಧಿ-ವಿಧಾನದ ರಚನೆಯಲ್ಲಿ ನಿರ್ಮಾಣವಾಗಿರುತ್ತದೆ. ಭಿತ್ತಿಸಿದ್ಧತೆಯ ನಾಲ್ಕು ಹಂತಗಳಲ್ಲಿ ನಡೆಯುತ್ತದೆ. ಮೊದಲನೆಯ ಹಂತ ವಸ್ತುಗಳನ್ನು ಸಂಸ್ಕರಿಸಿಕೊಂಡು. ದ್ವಿತೀಯ ಹಂತವು ವಸ್ತುಗಳನ್ನು ಮಿಶ್ರಣಮಾಡುವುದು ನಂತರ ಆಧಾರಕ್ಕೆ ಅಂಟು ದ್ರಾವಕಗಳಿಂದ ತಿಕ್ಕಿ ನುಣುಪುಗೊಳಿಸಿ ಕೊನೆಯ ಹಂತ ಸಿದ್ಧತೆಗೊಂಡ ಭಿತ್ತಿಗೆ ಸುಣ್ಣದ ಹಿನ್ನೆಲೆಯ ಲೇಪನ ಕೊಟ್ಟು ಚಿತ್ರಬರೆಯಲು ಅಣಿಗೊಳಿಸುವುದಾಗಿದೆ.

ಭಿತ್ತಿಚಿತ್ರ ರಚನೆಯ ಪರಿಕರಗಳು : ಭಿತ್ತಿಚಿತ್ರ ರಚನೆಯ ಪರಿಕರಗಳಲ್ಲಿ ಎರಡು ರೀತಿ ಮೊದಲನೆಯದು ಭಿತ್ತಿನಿರ್ಮಾಣ ಪರಿಕರಗಳು ಮತ್ತೊಂದು ಭಿತ್ತಿಚಿತ್ರ ರಚನಾಪರಿಕರಗಳಾಗಿದೆ. ಭಿತ್ತಿನಿರ್ಮಾಣ ಪರಿಕರಗಳು ಅನೇಕ ವಸ್ತುಗಳು ಇದ್ದು ಅದರಲ್ಲಿ ಕಲ್ಲಿನಪುಡಿ, ಉಸುಕು, ಸುಣ್ಣ, ನಾರುಪದಾರ್ಥ, ಶಂಖಚೂರ್ಣ ಇತ್ಯಾದಿ ಜೊತೆ ವಿವಿಧ ಗಿಡದ ರಸ, ಕಾಕಂಬಿ, ಬಾಳೆಹಣ್ಣು, ಜೇನುಮೇಣ ಅನೇಕ ವಸ್ತುಗಳು ಸೇರಿಸಿ ಭಿತ್ತಿನಿರ್ಮಾಣ ಮಾಡಲಾಗುತ್ತದೆ.

ಭಿತ್ತಿಚಿತ್ರ ರಚನಾ ಪರಿಕರಗಳು : ವರ್ತಿಕಾ, ಬಣ್ಣ, ಅಂಟುದ್ರಾವಕ, ಬಣ್ಣಮಿಶ್ರಗೊಳಿಸುವ ತಟ್ಟೆ ಮತ್ತು ಕುಂಚಗಳು, ಮತ್ತು ಆಧುನಿಕ ಕಾಲದಲ್ಲಿ ಪೆನ್ಸಿಲ್, ವರ್ಣಗಳಾದ ಜಲವರ್ಣ, ತೈಲವರ್ಣ, ಆಕ್ರಲಿಕ್, ಮತ್ತು ಸಿಂಥೆಟಿಕ್‌ಬ್ರೇಸ್‌ಗಳು, ಡಿಸ್ಟೆಂಪರ್ ಇತ್ಯಾದಿ ಪರಿಕರಗಳನ್ನು ನಿರ್ಮಾಣದ ರಚನಾ ವಿಧಿ-ವಿಧಾನಗಳಲ್ಲಿ ಬಳಸುತ್ತಿದ್ದಾರೆ.

ಬಣ್ಣಗಳು: ಖನಿಜ, ಪ್ರಾಣಿ, ಸಸ್ಯಮೂಲ ಮತ್ತು ಲೋಹಗಳಿಂದ ಪಡೆದುಕೊಳ್ಳುತ್ತಿದ್ದರು. ಲೋಹವನ್ನು ಕಾಯಿಸಿ, ಕರಗಿಸುವುದರಿಂದ ಮತ್ತು ತೇಯುವುದರಿಂದ ಬಣ್ಣ ಪಡೆಯುತ್ತಾರೆ. ಎಲೆ, ಹೂ, ಹಣ್ಣು, ಚಿಗುರು, ಕಾಂಡ ಮತ್ತು ಬೇರುಗಳಿಂದ ಸಸ್ಯಮೂಲ ಬಣ್ಣ ತಯಾರಿಸಿಕೊಳ್ಳುತ್ತಿದ್ದರು.

ರಕ್ತ, ಎಲುಬು, ಕೊಬ್ಬುಗಳಂತಹ ಪ್ರಾಣಿಮೂಲದ ವರ್ಣ ಹಾಗೂ ಆದಿರು, ಮಣ್ಣು, ಬಣ್ಣದಕಲ್ಲುಗಳಂತಹ ಖನಿಜಮೂಲ ವರ್ಣಗಳ ಜೊತೆ ಪ್ರಾಣಿ, ಸಸ್ಯಗಳಿಂದ ಪಡೆದ ಅಂಟುದ್ರಾವಕಗಳನ್ನು ಸೇರಿಸಿ ಬಣ್ಣ ಲೇಪನ ಮಾಡುತ್ತಿದ್ದರು.[೩]

ಕುಂಚಗಳು : ಪ್ರಾಣಿಯಿಂದ ಕುಂಚಗಳನ್ನು ತಯಾರಿಸುತ್ತಾರೆ. ಹಸು ಮತ್ತು ಕರು, ಅಳಿಲು ಇತ್ಯಾದಿ ರೋಮಗಳಿಂದ ಹಾಗೂ ಸಸ್ಯದ ಕಾಂಡ, ಬೇರುಗಳಿಂದ ಕಲಾವಿದ ಹಲವು ವಿಧಗಳಲ್ಲಿ ತಯಾರಿಸಿಕೊಳ್ಳುತ್ತಿದ್ದರು.[೪]

ಇಲ್ಲಿನ ಭಿತ್ತಿಚಿತ್ರ ರಚನೆಯಲ್ಲಿ ಪ್ರೊಸ್ಕೋಸೆಕ್ಕೋ ಎಂಬ ಒಣಭಿತ್ತಿ ವಿಧಾನದಿಂದ ಚಿತ್ರ ರಚಿಸಿದ್ದಾರೆ. ಶಾಸ್ತ್ರ ನಿಯಮಾನುಸಾರ ಸಂಪ್ರದಾಯ ಬದ್ಧ ಮಾನವ, ದೇವ-ದೇವತೆಯರು ಹಾಗೂ ಪ್ರಾಣಿ-ಪಕ್ಷಿಗಳ ಅಳತೆಯ ಸೂತ್ರವಾದ ತಾಳಮಾನಗಳಲ್ಲಿ ಚಿತ್ರಿಸಿದ್ದಾರೆ. ಷಡಂಗಗಳ ಅರಿವಿನಿಂದಲೇ ಅಲಂಕಾರಿಕ ನಕ್ಷೆ ಸಹ ಚಿತ್ರಿಸಿದ್ದಾರೆ. ಚಿತ್ರಕಾರರು ಈ ಚಿತ್ರಗಳನ್ನು ಆರು ಹಂತಗಳಲ್ಲಿ ಪೂರ್ತಿಗೊಳಿಸುತ್ತಿದ್ದರು, ಎಂದು ತಿಳಿದುಬರುತ್ತದೆ. ಅದನ್ನು ಗೋಡೆ, ಕಿಟಕಿಯ ಬಾಗಿಲು, ಕಂಬ, ಮೇಲ್ಛಾವಣಿಗಳಿಗೆ ಅಳವಡಿಸಿದ ಕಲ್ಲು, ಮರ, ಗಾಜು, ಲೋಹ ಹಾಳೆಯತರದ ಮಾಧ್ಯಮಗಳ ಮೇಲೂ ಮೈಸೂರಿನ ಭಿತ್ತಿಚಿತ್ರ ರಚನೆಗೊಂಡಿರುತ್ತದೆ. ಅದರಲ್ಲಿ ಮೂರು ರೀತಿಯ ವಿಧವಿಧಾನಗಳಿಂದ ಚಿತ್ರರಚಿಸಿರುವುದು ಕಂಡುಬರುತ್ತದೆ. ಅದನ್ನು ಒಣಗಾರೆಯ ಭಿತ್ತಿಯ ಮೇಲೆ ರಚಿಸಿರುತ್ತಾರೆ. ಎರಡನೆಯದಾಗಿ ಗೋಡೆಯ ಮೇಲೆ ಬಟ್ಟೆ(ಕ್ಯಾನ್‌ವಾಸ್) ಅಂಟ್ಟಿಸಿ ಚಿತ್ರಿಸಿರುವುದು ಅಂತಿಮದಾಗಿ ಆಧುನಿಕ ಮಾಧ್ಯಮಪರಿಕರಗಳಿಂದ ಭಿತ್ತಿಚಿತ್ರ ರಚನೆಗೊಂಡಿರುತ್ತದೆ. ಇಲ್ಲಿ ವಿಶೇಷವಾಗಿ ೧೭ನೇ ಶತಮಾನದ ನಂತರ ೨೦ನೇ ಶತಮಾನದ ಆಸುಪಾಸಿನಲ್ಲಿ ದೇಶಿಯ ಗುಣಲಕ್ಷಣಗಳಿಂದ ಕೂಡಿದ ಸಂಪ್ರದಾಯಬದ್ಧವಾದ ಧಾರ್ಮಿಕ ಭಿತ್ತಿಚಿತ್ರಕಲೆ ಒಂದು ಪ್ರಕಾರವಾದರೆ, ಇನ್ನೊಂದು ಬ್ರಿಟಿಷ್‌ರ ಪ್ರೇರಣೆಗೊಳಗೊಂಡ ರಿಯಾಲಿಸ್ಟಿಕ್,

ಮೈಸೂರು ಜಿಲ್ಲೆಯಲ್ಲಿ ಭಿತ್ತಿಚಿತ್ರ ರಚನಾಕಾರ್ಯವು ಪ್ರಾಚೀನ ಐತಿಹಾಸಿಕದ ಕಾಲದಿಂದಲೂ ಇರುವುದು ಕೆಲವು ಸಾಹಿತ್ಯಾಧಾರಗಳಲ್ಲಿ ಮತ್ತು ಅರಮನೆಯ ಚರಿತ್ರೆ ನೋಡಿದರೆ ತಿಳಿದುಬರುತ್ತದೆ. ಯದುರಾಯರ ಹಿಂದಿನಿಂದಲೂ ಅರಮನೆಯೂ ಇತ್ತು ಆ ನಂತರ ಹದಿನಾಲ್ಕನೆಯ ಶತಮಾನದಲ್ಲಿ ಒಡೆಯರು ಹಲವು ದೇವತೆಗಳ ಸುಂದರ ಭಿತ್ತಿಚಿತ್ರಗಳಿಂದ ಅಲಂಕರಿಸಿದ ಅರಮನೆಯಲ್ಲಿ ವಾಸಿಸುತ್ತಿದ್ದರು ಎಂದು ಭೇಟಿ ನೀಡಿದ ಪ್ರವಾಸಿಗರ ಪತ್ರ ಮತ್ತು ಅನೇಕ ಸಾಹಿತ್ಯಗ್ರಂಥದಲ್ಲಿ ಉಲ್ಲೇಖಗೊಂಡಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಮುಂದಿನ ೧೭ನೇ ಶತಮಾನದಲ್ಲಿ ಟಿಪ್ಪು ಆಡಳಿತದಲ್ಲಿ ಆ ಅರಮನೆಯನ್ನು ಕೆಡವಿದ್ದರಿಂದ ಅಲ್ಲಿದ್ದ ಭಿತ್ತಿಚಿತ್ರಗಳು ನಾಶವಾಯಿತು ಎಂದು ತಿಳಿದುಬರುತ್ತದೆ. ೧೮ನೇ ಶತಮಾನದಲ್ಲಿ ಅದೇ ಜಾಗದಲ್ಲಿ ಎರಡನೇ ಅರಮನೆಯನ್ನು ಇನ್ನೂ ದೊಡ್ಡದಾಗಿ ಮುಮ್ಮಡಿಕೃಷ್ಣರಾಜ ಒಡೆಯರು ಮರದಿಂದ ಅರಮನೆಯನ್ನು ಕಟ್ಟಿಸಿದರು. ಹಿಂದೂ ಶೈಲಿಯಲ್ಲಿ ಸುಂದರ ಕೆತ್ತನೆಗಳಿಂದ ಕೂಡಿದ ಶಿಲ್ಪಗಳ ಜೊತೆಗೆ ದರ್ಬಾರ್ ಸಭಾಂಗಣವನ್ನು ಬಣ್ಣಬಣ್ಣದ ಭಿತ್ತಿಚಿತ್ರಗಳಿಂದಲೂ ಚಿನ್ನದ ಮುಲಾಯಿನಿಂದಲೂ ಅಲಂಕೃತವಾಗಿತ್ತು. ಅಲ್ಲಿ ಕೆಲವು ಯೂರೋಪಿಯನ್ ಕಲಾವಿದರ ಚಿತ್ರಗಳು ಸಹ ಹಲವು ಇದ್ದವು ಎಂದು ತಿಳಿದು ಬರುತ್ತದೆ. ೧೮೯೭ರ ಮದುವೆಯ ಸಂದರ್ಭದಲ್ಲಿ ಆ ಮರದ ಅರಮನೆಯು ಕೆಲವು ಭಾಗವು ಬೆಂಕಿಗೆ ತುತ್ತಾಯಿತು. ಆ ನಂತರದಲ್ಲಿ ಮತ್ತೊಂದು ಅರಮನೆಯನ್ನು ಇಲ್ಲಿನ ಅರಸರು ಕಟ್ಟಿಸಿದ್ದರು.

೩,೪,ಡಾ.ಎಸಿ.ಪಾಟೀಲ ಮತ್ತು (ಸಂ,) ನಿಜದನೆಲೆ, ಪು.ಸಂ_೪೬೫, ೪೬೬

೧೯ನೇ ಶತಮಾನದಲ್ಲಿ ಈ ದೇಶದ ಅಗ್ರಗಣ್ಯ ಕಲಾಕಟ್ಟಡವನ್ನು ಮಹಾರಾಣಿ ವಾಣೀವಿಲಾಸಮ್ಮ ಅವರ ಆಸೆಯಂತೆ ಹೊಸ ಅರಮನೆ ಕಟ್ಟಿಸಲಾಯಿತ್ತು. ಅದಕ್ಕೆ ಅಂಬಾವಿಲಾಸ ಅರಮನೆ ಅದು ಮೈಸೂರು ಅರಮನೆ ಎಂದು ಇಂದು ಪ್ರಪಂಚದಲ್ಲೆ ಖ್ಯಾತಿ ಗಳಿಸಿದೆ. ಇದು ಇಂಡೋಸಾರ್ಸೆನಿಕ್ ಮತ್ತು ಮುಸ್ಲಿಂ ಶೈಲಿಯ ಸಮ್ಮಿಳನವನ್ನು ಇದರಲ್ಲಿದ್ದು ಒಳ ಎಲ್ಲಾ ಭಾಗದಲ್ಲಿ ಹೊಯ್ಸಳಶೈಲಿ, ಮೈಸೂರುಶೈಲಿಯ ಶಿಲ್ಪಮೂರ್ತಿಗಳು, ಅಲಂಕಾರಿಕ ಉಬ್ಬುಕೆತ್ತನೆ, ನಕ್ಷೆಗಳು ಹಾಗೂ ಸೂಕ್ಷ್ಮತೆ ಒಳಗೊಂಡಂತಹದ್ದು ಕಲ್ಯಾಣಮಂಟಪ ಮತ್ತು ದರ್ಬಾರ್ ಹಾಲ್‌ಗಳಲ್ಲಿ ಭಿತ್ತಿಚಿತ್ರಕಲೆ ಇರುವುದು ಕಂಡುಬರುತ್ತದೆ.

ಮೈಸೂರು ಜಿಲ್ಲೆಯಲ್ಲಿ ಕಂಡುಬರುವ ಭಿತ್ತಿಚಿತ್ರ ನೆಲೆಗಳು ಈ ರೀತಿ ಇವೆ.

೩.೧. ಕಲ್ಯಾಣಮಂಟಪದ ದಸರಾ ಭಿತ್ತಿಚಿತ್ರಗಳು
೩.೧.೧. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಅವರ ಜಂಬೂಸವಾರಿ ಚಿತ್ರ
೩.೧.೨, ಸೆಂಟ್ ಫಿಲೋಮಿನಾ ಚರ್ಚ್ ಮುಂದೆ ಸಾಗುತ್ತಿರುವ ದಸರಾ ಮೆರವಣಿಗೆಯ ಚಿತ್ರ
೩.೨. ದರ್ಬಾರ್ ಹಾಲ್
೩.೨.೧, ಚಾಮುಂಡೇಶ್ವರಿ ದೇವಿಯ ಭಿತ್ತಿಚಿತ್ರ
೩.೨.೨,ವಿಷ್ಣುವಿನ ಮತ್ಸಾವತಾರದ ಭಿತ್ತಿಚಿತ್ರ
೩.೩,ಜಗನ್ಮೋಹನ ಅರಮನೆಯ ಭಿತ್ತಿಚಿತ್ರಗಳು
೩.೩.೧,ವಂಶವೃಕ್ಷಾದ ಚಿತ್ರ
೩.೩.೨, ಎಡಗೋಡೆಯ ಮೇಲಿನ ದಸರಾಮೆರವಣಿಗೆಯ ಭಿತ್ತಿಚಿತ್ರ
೩.೩.೩, ಬಲಗೋಡೆಯ ಮೇಲಿನ ದಸರಾ ಮೆರವಣಿಗೆಯ ಭಿತ್ತಿಚಿತ್ರ
೩.೩.೪ ಪ್ರಸನ್ನಕೃಷ್ಣಸ್ವಾಮಿ ದೇವಾಲಯ
೩.೪.೧, ಶೌಕಮುನಿ ಮತ್ತು ಶಿಷ್ಯರು ಪರಿಪಿಕ್ ರಾಜನಿಗೆ ಭಾಗವತ ಕಥೆ ಹೇಳುತ್ತಿರುವ ಚಿತ್ರ
೩.೪.೨, ಪ್ರಲಂಬಾಸುರವಧೆ
೩.೪.೩. ಗೋವರ್ಧನಧಾರ ಚಿತ್ರ
೩.೪.೪, ಯಮಳಾರ್ಜುನ ಭಂಜನ ಚಿತ್ರ
೩.೪.೫, ನವರಂಗದ ಎಡಭಾಗದಲ್ಲಿರುವ ಭಿತ್ತಚಿತ್ರ
೩.೫, ಶ್ವೇತವರಹಾಸ್ವಾಮಿ ದೇವಾಲಯ ಮತ್ತು ಅಂಬುಜವಲ್ಲಿ ದೇವಾಲಯದ ಭಿತ್ತಿಚಿತ್ರ
೩.೫.೧,ಕಂಸನು ತನ್ನ ತಂಗಿಯನ್ನು ಕೊಲಲ್ಲು ಮುಂದಾಗಿರುವ ಚಿತ್ರ
೩.೫.೨, ದೇವಕಿ ವಸುದೇವನಿಗೆ ನಾರಯಣಸ್ವಾಮಿ ಅಭಯ ನೀಡುತ್ತಿರುವ ಚಿತ್ರ
೩.೫.೩,ರಾಮನನ್ನು ಹನುಮಂತ ತನ್ನ ಹೆಗಲ ಮೇಲೆ ಹೊತ್ತು ಯುದ್ದಕ್ಕೆ ಹೋಗುತ್ತಿರುವ ಚಿತ್ರ
೩.೫.೪, ಕುಂಭಕರ್ಣನು ರಾಮನ ಮೇಲೆ ಯುದ್ದಕ್ಕೆ ಬರುತ್ತಿರುವ ಚಿತ್ರ
೩.೫.೫, ಹತ್ತುತಲೆಯ ರಾವಣ ಯುದ್ದಕ್ಕೆ ಹೋಗುತ್ತಿರುವ ಚಿತ್ರ
೩.೬, ಅಂಬುಜವಲ್ಲಿ ದೇವಾಲಯ
೩.೬.೧, ಕೊಳಲು ಉದೂತ್ತಿರುವ ಬಾಲಕ ಕೃಷ್ಣನ ಚಿತ್ರ
೩.೬.೨, ಖರಸುರ ಸಂಹಾರ ಚಿತ್ರ
೩.೬.೩, ರಕ್ಷ್ಮೀಣಿಯ ಮದುವೆ ಚಿತ್ರ
೩.೬.೪, ಬಲಭಾಗದ ಗೋಡೆಯ ಮೇಲಿನ ರಾಮಾಯಣದ ಭಿತ್ತಿಚಿತ್ರ
೩.೭, ಕೋಟೆಯ ಹೊರಭಾಗದ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ ಭಿತ್ತಿಚಿತ್ರಗಳು

೩.೮, ಮುಡುಕುತೊರೆಯ ಗುಡ್ಡದ ಮೇಲೆ ಮಲ್ಲಿಕಾರ್ಜುನ ದೇವಾಲಯ
೩.೮.೧, ಗಿರಿಜೆ ಮದುವೆ ಕರೆದುಕೊಂಡು ಹೋಗುವ ಚಿತ್ರ
೩.೯, ಅಗಸ್ತೇಶ್ವರ ದೇವಾಸ್ಥಾನ
೩.೧೦, ಸಿಡಿಲುಮಲ್ಲಿಕಾರ್ಜುನ ದೇವಾಲಯದ ಭಿತ್ತಿಚಿತ್ರ
೩.೧೦.೧,ಋಷಿಮುನಿಗಳು ಮತ್ತ ಅಲಂಕಾರಿಕದ ಹೂವಿನ ರೇಖಾಚಿತ್ರ
೩.೧೧, ಚುಂಚನಕಟ್ಟೆಯ ಶ್ರೀರಾಮದೇವರ ದೇವಾಲಯದ ಭಿತ್ತಿಚಿತ್ರ
೩.೧೨, ಸಾಲಿಗ್ರಾಮದ ಭಗವಾನ್ ಅಂತನಾಥ ದೇವಾಲಯ
೩.೧೩.೧, ಜೈನಮುನಿಗಳ ಮೊದಲನೆಯ ಚಿತ್ರ
೩.೧೨.೨, ಜೈನಮುನಿಗಳ ಎರಡನೆಯ ಚಿತ್ರ
೩.೧೩, ಸುತ್ತೂರುಮಠದ ವಸ್ತುಸಂಗ್ರಹಾಲಯದಲ್ಲಿನ ಭಿತ್ತಿಚಿತ್ರಗಳು
೩.೧೪, ಮಾನವ ಮತ್ತು ಪ್ರಾದೇಶಿಕ, ಪ್ರಾಕೃತಿಕ ವಿಜ್ಞಾನ ವಸ್ತುಸಂಗ್ರಹಾಲಯ
೩.೧೫, ಶ್ರೀಲಕ್ಷ್ಮೀನರಸಿಂಹಸ್ವಾಮಿ ಸನ್ನಿಧಿ
೩.೧೬, ರಾಮ್‌ಸನ್ಸ್ ಬೊಂಬೆಮನೆಯಲ್ಲಿರುವ ಮದುವೆ ಸಂಭ್ರಮದ ಒಂದು ಭಿತ್ತಿಚಿತ್ರ
೩.೧೭, ಸತ್ಯನಾರಾಯಣಸ್ವಾಮಿ ದೇವಸ್ಥಾನದಲ್ಲಿರುವ ಎರಡು ಭಿತ್ತಿಚಿತ್ರ
೩.೧೮,ಗಣಪತಿ ಸಚ್ಚಿದಾನಂದ ಆಶ್ರಮದೊಳಗಿನ ಭಿತ್ತಿಚಿತ್ರಗಳು
೩.೧೯,ಪುಷ್ಪಶ್ರಮದಲ್ಲಿನ ಕ್ರೈಸ್ತಧರ್ಮಕ್ಕೆ ಸಂಬಂಧಪಟ್ಟಂತಹ ಭಿತ್ತಿಚಿತ್ರ
೩.೨೦, ಮೈಸೂರಿನ ಪ್ರಾಂತ್ಯದಲ್ಲಿ ಟಬೇಟಿನ ಥಾಂಕ ಭಿತ್ತಿಚಿತ್ರಕಲೆ

೩,೧. ಕಲ್ಯಾಣಮಂಟಪದ ದಸರಾ ಭಿತ್ತಿಚಿತ್ರಗಳು

ಕಲ್ಯಾಣಮಂಟಪಕ್ಕೆ ಹೋಗುವ ಮಾರ್ಗದ ಎಡಗಡೆ ಹಾಗೂ ಮಂಟಪದ ಮೂಕ್ಕಾಲು ಭಾಗದ ಸುತ್ತ ಗೋಡೆಗೆ ಕ್ಯಾನ್‌ವಾಸ್ ಅಂಟಿಸಿ ತೈಲವರ್ಣಗಳಿಂದ ದಸರಾ ಮೆರವಣಿಗೆಯ ಸರಣಿ ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ. ಕ್ಯಾನ್‌ವಾಸ್ ಎಂದರೆ ಚಿತ್ರಪಠ ಎಂದರ್ಥ. ತೈಲಚಿತ್ರ ರಚಿಸಲು ಕ್ಯಾನ್ವಾಸ್‌ನ್ನು ಉಪಯೋಗಿಸುತ್ತಾರೆ ಇವುಗಳ ಮೇಲ್ಮೈ ಒರಟು ಮತ್ತು ಮೃದುವಾಗಿಯೂ ಇರುತ್ತದೆ. ಮರವಜ್ರ, ಚಾಕ್‌ಪೌಡರ್, ಲಿನ್‌ಸಿಡ್ ಆಯಿಲ್ ಬಳಸುತ್ತಾರೆ. ಸಮಾರಾಂಗಣ ಸೂತ್ರಧಾರದಲ್ಲಿ ರೇಷ್ಮೆ ಬಟ್ಟೆಯಿಂದ ಕ್ಯಾನ್‌ವಾಸ್ ತಯಾರಿಸುವ ವಿಧಾನ ತಿಳಿಸಿದ್ದಾರೆ. ಇಲ್ಲಿನ ಭಿತ್ತಿಚಿತ್ರವು ಅರಮನೆಯಿಂದ ಪ್ರಾರಂಭಗೊಂಡು ಸಾಗುವ ಚಿತ್ರವೇ ಮೊದಲು ನಂತರ ಮುಖ್ಯ ರಸ್ತೆಗಳಾದ ಅಶೋಕ ರಸ್ತೆ, ಬನ್ನಿಮಂಟಪಕ್ಕೆ ಹೋಗುವ ರಸ್ತೆ, ಬೆಂಗಳೂರು ರಸ್ತೆ, ಇರನಗೆರೆ ಕೋಟೆಗಡಿ, ಜೊತೆಗೆ ಅನೇಕ ಗಣ್ಯರ ಮುಂದೆ ಸಾಗುತ್ತಿರುವ ದೃಶ್ಯಗಳು ಮತ್ತು ಚರ್ಚಿನ ಮುಂದೆ ಹೋಗುತ್ತಿರುವ ಚಿತ್ರಗಳನ್ನು ಛಾಯಾಚಿತ್ರಗಳ ಆಧಾರದಲ್ಲಿ ೧೯೩೪ ರಿಂದ ೧೯೪೫ ನಡುವಿನಲ್ಲಿ ಈ ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ.

ಮತ್ತೊಂದು ವಿಶೇಷವೆಂದರೆ ಕಲಾಕೃತಿಗಳ ಒಳಗಿರುವ ವ್ಯಕ್ತಿಗಳ ಹೆಸರುಗಳನ್ನು ಗುರುತಿಸಬಹುದು. ಜೊತೆಗೆ ಶಿರ್ಷಿಕೆಯನ್ನು ಕೆಳಗೆ ನಮೂದಿಸಿದ್ದಾರೆ. ಈ ಭಿತ್ತಿಗಳಲ್ಲಿ ನಾಲ್ವಡಿಕೃಷ್ಣರಾಜ ಒಡೆಯರುರವರ ಜಂಬೂಸವಾರಿ, ಸರದಾರರ ಗದ್ದುಗೆಯ ವಾಹನ ಸಾರೋಟು ಮತ್ತು ಪ್ರಥಮ ಚಿಕಿತ್ಸೆ ವಾಹನ, ಸಾರೋಟು ಮತ್ತು ರಥವನ್ನು ಆನೆ ಮತ್ತು ಬೆಳ್ಳಿಯ ರಥ, ಮಹಾರಾಜರ ಅಂಗರಕ್ಷಕ ಪಡೆಗಳು ರಾವುತ ದಳದ ಪತಾಕೆಗಳು, ಮಹಾರಾಜರ ಅಂಗರಕ್ಷಕ ಪಡೆಗಳು ಹಾಗೇ ಕರ್ನಾಟಕ ವಾದ್ಯತಂಡ, ಪಟ್ಟದ ಆನೆ, ಕುದುರೆ ಮತ್ತು ಪಲ್ಲಕ್ಕಿ ತಿದಿಗೊಳಲಿನಿಂದ ಕೂಡಿದ ಸ್ಕಾಟಿಷ್‌ವಾದ ವೃಂದ, ತಾಶಾವಾದ್ಯ ಮತ್ತು ನಿಶಾನೆ ಒಂಟೆ, ನಗಾರಿ ಮತ್ತು ವಾದ್ಯ ಸಮೂಹ, ಸೇಂಟ್ ಫಿಲೋಮಿನಾ ಚರ್ಚಿನ ಮುಂದೆ

ಸಾಗುತ್ತಿರುವ ದಸರಾ ಮೆರವಣಿಗೆ, ಮೈಸೂರು ಕಾಲ್ದಳದ ಮೂರನೇ ತುಕಡಿ, ದಸರಾ ಮೆರವಣಿಗೆಯ ಆನೆಯ ಮೇಲೆ ಕುಳಿತ ಸನ್ನೆಯಾಳು, ಈರನಗೆರೆ ಕೋಟೆಯ ಬಳಿ ಫಿರಂಗಿ ಗಾಡಿಗಳು ಮತ್ತು ಶ್ರೀರಾಮಚಂದ್ರನು ಆಯುಧ ಪೂಜೆಯನ್ನು ನೆರವೇರಿಸುತ್ತಿರುವುದು ಇತ್ಯಾದಿ ದಸರಾ ವಿಷಯ ಕುರಿತಾದ ಭಿತ್ತಿಚಿತ್ರಗಳು ಇಲ್ಲಿ ರಚನೆಗೊಂಡಿರುತ್ತದೆ.

ಈ ಭಿತ್ತಿಚಿತ್ರಗಳನ್ನು ವಿವಿಧ ಕಾಮಾನು ಚೌಕ್ಕಟ್ಟಿನೊಳಗೆ ವಿವಿಧ ಅಳತೆಯೊಳಗೆ ಈ ಕಲಾಕೃತಿಗಳು ಇರುತ್ತದೆ. ಈ ಕಲಾಕೃತಿಗಳಲ್ಲಿ ಪಾಶ್ಚಾತ್ಯರ ಕಲಾಶೈಲಿ ಪ್ರಭಾವ ಸ್ಥಳಿಯ ವಿಷಯವೇ ಆಯ್ದುಕೊಂಡು ಅರಮನೆ ಕಲಾವಿದರುಗಳು ಸೇರಿ ರಚಿಸಿದ್ದಾರೆ. ಕೆ.ಕೇಶವ್ಯ, ಎಸ್.ಎನ್.ಸ್ವಾಮಿ, ವೈ.ನಾಗರಾಜು, ಎಸ್.ಶಂಕರರಾಜು, ಎಸ್.ಆರ್.ಅಯ್ಯಂಗಾರ್ ಮತ್ತು ವೈ.ನಾಗರಾಜು ಅರಮನೆಯ ಕಲಾವಿದರು ಪ್ರತಿಯೊಂದು ಕಲಾಕೃತಿಗಳನ್ನು ಅತ್ಯತ್ತುಮವಾಗಿ ಚಿತ್ರಿಸಿದ್ದಾರೆ.

೩.೧.೧. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಅವರ ಜಂಬೂಸವಾರಿ ಚಿತ್ರ

ಈ ತೈಲವರ್ಣ ಭಿತ್ತಿಚಿತ್ರವು ಸುಮಾರು ೧೯ನೇ ಶತಮಾನದ ನಂತರ ಚಿತ್ರಿಸಲಾಗಿದೆ. ಅರಮನೆ ಆವರಣದಲ್ಲಿ ದಸರಾ ಸಾಗುತ್ತಿರುವ ಚಿತ್ರವು ಕಲ್ಯಾಣಮಂಟಪದಲ್ಲಿ ಬಲಭಾಗದಲ್ಲಿ ದೊಡ್ಡದಾಗಿ ಚಿತ್ರಿಸಿದ್ದಾರೆ. ಗೋಡೆಯ ಮೇಲೆ ಕ್ಯಾನ್‌ವಾಸ್ ಅಂಟಿಸಿ ಅದರ ಮೇಲೆ ದಸರಾ ಮೆರವಣಿಗೆಯ ಚಿತ್ರದಲ್ಲಿ ಈ ಚಿತ್ರವು ಅತ್ಯಂತ ಮೆಚ್ಚುಗೆಗಳಿಸಿದ ಭಿತ್ತಿಚಿತ್ರವಾಗಿದೆ. ಅರಮನೆ ಆವರಣದಿಂದ ದಸರಾ ಸಾಗುತ್ತಿದ್ದು ಚಿತ್ರದೊಳಗೆ ಮೂವರು ಅರಸರು ಇದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರು ಮುಂದೆ, ಅವರ ಹಿಂದೆ ಜಯಚಾಮರಜ ಒಡೆಯರ್ ಮತ್ತು ಶ್ರೀಕಂಠದತ್ತ ಒಡೆಯರು ಕುಳಿತಿದ್ದಾರೆ. ಅರಮನೆಯ ಕಲಾವಿದರಾದ ಕೇಶವಯ್ಯನವರು ಈ ಚಿತ್ರವನ್ನು ತುಂಬ ಶ್ರದ್ಧೆಯಿಂದ ಚಿತ್ರಸಿದ್ದಾರೆ. ಆನೆಯ ಮೇಲೆ ಅಂಬಾರಿಯಲ್ಲಿ ಸಾಗುತ್ತಿದ್ದಾರೆ. ಅಲಂಕರಿಸಿದ ಚಿನ್ನದ ಅಂಬಾರಿಯಲ್ಲಿ ರಾಜವಸ್ತ್ರ ಧರಿಸಿ ಜನರಿಗೆ ಹರ್ಷವನ್ನು ವ್ಯಕ್ತಪಡಿಸುತ್ತಾ ಕುಳಿತ್ತಿದ್ದಾರೆ. ಮಾವುತ ಆನೆಯನ್ನು ಮುನ್ನಡೆಸುತ್ತಿದ್ದಾನೆ. ಅನೇಕ ಕಾಲುಧಳ ಸೈನಿಕರು, ರಾಜಪರಿವಾರದವರು, ಅರಮನೆಯ ಅನೇಕ ಅಧಿಕಾರಿಗಳು, ಪುರೋಹಿತರುಗಳು ಪೂಜಾ ಪರಿಕರಿಗಳನ್ನು ಹಿಡಿದು ಸಾಗುತ್ತಿದ್ದಾರೆ ಎಂಬಂತೆ ಚಿತ್ರಿಸಿದ್ದಾರೆ. ಸೈನಿಕರು ಸಮವಸ್ತ್ರಧರಿಸಿ ಎಲ್ಲರು ದಸರಾ ಹಬ್ಬದ ವಾತಾವರಣದಿಂದ ಎಲ್ಲಾರು ಕಂಗೋಳಿಸುತ್ತಿದ್ದಾರೆ. ಆನೆಯು ಅಂಬಾರಿ ಹೊತ್ತು ರಾಜಗಾಂಭಿರ್ಯದಿಂದ ನಿಂತಿರುತ್ತದೆ. ಹಿನ್ನೆಲೆಯಲ್ಲಿ ಅಸಂಖ್ಯಾ ಮೈಸೂರಿನ ಗಣ್ಯ ವ್ಯಕ್ತಿಗಳು, ಸಾರ್ವಜನಿಕರಲ್ಲಿ ಸಹ ಹಬ್ಬದ ಕಳೆಯು ತುಂಬಿದೆ. ಪ್ರಕೃತಿಯ ಮಡಿಲಲ್ಲಿ ನವರಾತ್ರಿಯ ಉತ್ಸವಕ್ಕೆ ಸಾಕ್ಷಿಯಾಗಿ ಸುಂಧರ ಬೆಳ್ಳಿಯ ಮೋಡಗಳು ಆಕಾಶದಲ್ಲಿ ಚಲ್ಲಿಸುತ್ತಿದೆ. ಎನ್ನುವಂತೆ ಕಲಾವಿದ ರಚಿಸಿದ್ದಾನೆ. ಚಾಮುಂಡಿಯಬೆಟ್ಟದ ಸಾಲು ಸಹ ಈ ವಾತಾವರಣಕಂಡು ಹರುಶದಿಂದ ನಿಂತಿರುವಂತೆ, ಆವರಣದ ದೇವಾಲಯಗಳು ಸುಣ್ಣಬಣ್ಣಗಳಿಂದ ಲೇಪನೆಕಾರ್ಯ ನಡೆದು ಅವುಗಳು ಹೊಚ್ಚ ಹೊಸದರಂತೆ ಶೃಂಗಾರಗೊಳಿಸಿದ್ದಾರೆ. ಈ ಕಲಾಕೃತಿಯು ದೊಡ್ಡದಾಗಿದ್ದು ಸೂಕ್ಷ್ಮಕುಶಲತೆಯಿಂದ ಕೂಡಿದೆ. ಕಲಾವಿದನ ಶ್ರದ್ಧೆ ಕೌಶಲ್ಯ ಆಕೃತಿಗಳನ್ನು ಜೀವಂತಿಕೆಯಿಂದ ಇರುವಂತೆ ಚಿತ್ರಿಸಿದ್ದಾರೆ. ಪಾಶ್ಚಾತ್ಯರ ಪ್ರಭಾವವು ಇದರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಆಕೃತಿಗಳ ಅದ್ಭುತವಾದ ಸಂಯೋಜನೆಯಿಂದ ಕೂಡಿದು ರಿಯಾಲಿಸ್ಟಿಕ್ ಕಲಾಕೃತಿಯಾಗಿದೆ. ೧೯ನೇ ಶತಮಾನದಲ್ಲಿ ಕಪ್ಪುಬಿಳಿಪಿನ ಛಾಯಾಚಿತ್ರವನ್ನು ಕ್ಯಾನ್‌ವಾಸ್ ಮೇಲೆ ಗ್ರಾಫ್ ತಂತ್ರವನ್ನು ಉಪಯೋಗಿಸಿ ರಚಿಸಿದ್ದಾರೆ. ರಾಜಶ್ರಯ ಕಲಾವಿದರಾದ ಕೇಶವಯ್ಯನವರು ಈ ಕಲಾಕೃತಿ ರಚಿಸಿದ್ದಾರೆ. ಇದು ಅಮೋಘ ಕಲಾಕೃತಿಯಾಗಿದ್ದು ಕರ್ನಾಟದ ಬೇರೆಯಾವ ಮೂಲೆಯಲ್ಲು ಈ ತರಹದ ಕಲಾಕೃತಿಯು ಕಾಣಸಿಗುವುದಿಲ್ಲ.

ಅಂದಿನ ದಸಾರವನ್ನು ಎಲ್ಲರು ಸೇರಿ ಆಚರಿಸುತ್ತಿದ್ದರು ಮತ್ತು ಸರ್ವಧರ್ಮದ ಸಮನ್ವಯದಿಂದ ಕೂಡಿ ದಸರಾ ಹಬ್ಬ ಆಚರಿಸುತ್ತಿದ್ದಾರೆ. ನೂರು ವರ್ಷಗಳು ದಾಟಿದ್ಧರು ಇದನ್ನು ಸಂರಕ್ಷಣೆಮಾಡಿ ದೇಶದ ಆಸ್ತಿಯಾಗಿಸಿದ್ದಾರೆ.

೩.೧.೨, ಸೆಂಟ್ ಫಿಲೋಮಿನಾ ಚರ್ಚ್ ಮುಂದೆ ಸಾಗುತ್ತಿರುವ ದಸರಾ ಮೆರವಣಿಗೆಯ ಚಿತ್ರ

ಈ ಕಲಾಕೃತಿಯು ಸಹ ಕಲ್ಯಾಣಮಂಟಪದ ಎಡಭಾಗದಲ್ಲಿ ಗೋಡೆಯ ಮೇಲೆ ಚಿತ್ರರಚನೆ ಮಾಡಲಾಗಿದೆ. ಕಲಾಕೃತಿಯನ್ನು ಕಲಾವಿದ ವೈ.ನಾಗರಾಜು ಅವರು ರಚಿಸಿದ್ದಾರೆ. ಇವರು ರಾಜಾಶ್ರಯದ ಕಲಾವಿದರಾಗಿದ್ದಾರೆ. ೧೯ನೇ ಶತಮಾನದಲ್ಲಿ ಈ ಚಿತ್ರರಚನೆಯ ಕಾರ್ಯ ನಡೆದಿರುತ್ತದೆ. ಈ ಕಲಾಕೃತಿಯು ಅಂದಿನ ದಸರಾ ಮೆರವಣಿಗೆಯಲ್ಲಿ ಇದೊಂದು ಉತ್ತಮವಾದ ಕಲಾಕೃತಿಯಾಗಿದೆ. ಈ ದಸರಾ ಮೆರವಣಿಗೆಯು ಅಂದಿನ ರಾಜಬೀದಿಯಾದ ಅಶೋಕ ರಸ್ತೆಯಲ್ಲಿ ಸಾಗುತ್ತ ಚರ್ಚಿನ ಮುಂದೆಯಿಂದ ಸಾಗುತ್ತಿರುವ ಚಿತ್ರವನ್ನು ರಚಿಸಿದ್ದಾರೆ. ಆ ಚಿತ್ರದಲ್ಲಿ ಅಶ್ವಧಳ ಸಾಗುತ್ತಿದೆ. ಅದರ ಜೊತೆಯಲ್ಲಿ ಕೆಂಪು ಮತ್ತು ಕಂದುಕೆಂಪು ವರ್ಣದ ಸಮವಸ್ತ್ರ ಧರಿಸಿದ ಸೈನಿಕರು ಕುದುರೆಯ ಮೇಲೆ ಶಿಸ್ತಿನಿಂದ ಸವಾರಿ ಮಾಡುತ್ತ ಮುಂದೆ ಸಾಗುತ್ತ ರಸ್ತೆಯಲ್ಲಿ ಚಲಿಸುತ್ತಿದ್ದಾರೆ. ಸ್ಟೆಂಟ್ ಫಿಲೋವಿನಾ ಚರ್ಚ್ ಹೊರಗಡೆ ಸಾಗುತ್ತಿರುವ ದಸರಾ ಮೆರವಣೆಗೆಯಲ್ಲಿ ಮಹಾರಾಜರನ್ನು ಗೌರವಿಸುವುದಾಕ್ಕಾಗಿ ಕಾದುನಿಂತಿರುವ ಕ್ರಿಶ್ಚಿಯನ್ ಬಾಂದವರು ಚರ್ಚಿನ ಹೊರಗಡೆ ನಿಂತಿದ್ದಾರೆ. ಜೊತೆಗೆ ರಸ್ತೆಯ ಬದಿಯಲ್ಲಿ ಸಾರ್ವಜನಿಕರು ನಿಂತಿರುವ ಹಾಗೆ ಚಿತ್ರದೊಳಗೆ ಸಂಯೋಜಿಸಲಾಗಿದೆ. ಹಿನ್ನೆಲೆಯಲ್ಲಿ ಹಬ್ಬದ ವಾತಾವರಣಕ್ಕೆ ನಗರವು ಜನರೆಲ್ಲ ತುಂಬಿರುವಂತೆ ಚಿತ್ರಿಸಲಾಗಿದೆ. ಈ ಕಲಾಕೃತಿವು ದೊಡ್ಡದಾಗಿದ್ದು ಕಲಾವಿದನು ತುಂಬ ತಾಳ್ಮೆ ಶ್ರದ್ಧೆಯಿಂದ ರಚಿಸಿರುವುದು ಕಾಣಬಹುದಾಗಿದೆ. ಇದು ತೈಲವರ್ಣದ ಕಲಾಕೃತಿಯಾಗಿದೆ.

ವೈ ಸುಬ್ರಹ್ಮಣ್ಯರಾಜು ಅವರು ಕಲಾವಿದರ ಕುಟುಂಬದಲ್ಲಿ ೧೯೦೩ರಲ್ಲಿ ಜನನಿದರು. ಇವರು ಮುಂಬಯಿ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಾಶಿಕ್ಷಣ ಪಡೆದು, ಮೈಸೂರು ಸಾಂಪ್ರದಾಯಿಕ ಚಿತ್ರಕಲೆಯು ಪುನರುಜೀವನ ಕಾರ್ಯದಲ್ಲಿ ಮಹತ್ತರ ಸೇವೆ. ಚಾಮರಾಜೇಂದ್ರ ಕಲಾಶಿಕ್ಷಣ ಸಂಸ್ಥೆಯಲ್ಲಿ ವೃತ್ತಿ. ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಹಲವಾರು ಬಾರಿ ಸ್ವರ್ಣಪದಕ ವಿಜೇತರು. ಮೈಸೂರು ಅರಮನೆಯ ಕಲ್ಯಾಣಮಂಟಪದಲ್ಲಿ ದಸರಾ ಮೆರವಣಿಗೆಯ ಭಿತ್ತಿಚಿತ್ರ ಚಿತ್ರರಚನೆ ಮಾಡಿದ್ದಾರೆ. ಇವರು ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ವೈ.ನಾಗರಾಜು, ಕಲಾಮಾರ್ಗದರ್ಶನ ದೊರಕಿದೆ. ಇವರು ರಿಯಾಲಿಸ್ಟಿಕ್, ಸಂಪ್ರದಾಯ ಕಲೆಗಳ ಎರಡರಲ್ಲಿಯೂ ಸಿದ್ದಹಸ್ತರು.

೩.೧.೩, ಶ್ರೀರಾಮನು ಚಾಮುಂಡೇಶ್ವರಿದೇವಿಯನ್ನು ಪೂಜಿಸುತ್ತಿರುವ ತೈಲವರ್ಣದ ಭಿತ್ತಿಚಿತ್ರ

ಈ ತೈಲವರ್ಣದ ಭಿತ್ತಿಚಿತ್ರವು ಅಂಬಾವಿಲಾಸ ಅರಮನೆಯ ಕಲ್ಯಾಣಮಂಟಪದಲ್ಲಿ ಇರುತ್ತದೆ. ಇದರ ಸಂಯೋಜನೆ ಶ್ರೇಷ್ಟತೆಯಿಂದ ಕೂಡಿದೆ ಆಕೃತಿಗಳಾಗಿರಬಹುದು, ವರ್ಣ, ವಸ್ತುಗಳೆ ಆಗಿದ್ದರೂ ತುಂಬ ಮನೋಜ್ಞನವಾಗಿ ಸಂಯೋಜಿಸಿ ಚಿತ್ರಿಸಿದ್ದಾರೆ. ಈ ಚಿತ್ರವು ದೊಡ್ಡದಾಗಿ ಗೋಡೆಯ ಮೇಲೆ ಕ್ಯಾನ್‌ವಾಸ್ ಅಂಟಿಸಿ ರಿಯಾಲಿಸ್ಟಿಕ್ ಶೈಲಿಯಲ್ಲಿ ಧಾರ್ಮಿಕ ಕಲಾಕೃತಿಯನ್ನು ಇವರು ರಚಿಸಿದ್ದಾರೆ. ಆಕೃತಿಗಳನ್ನು ಸಂದರ್ಭ ತಕ್ಕಂತೆ ಚಲನೆಯಿಂದ ಕೂಡಿದೆ. ವೇಷಭೂಷಣ, ಪೂಜಾಸಡಗರದ ಜೊತೆಗೆ ಭಕ್ತಿ ಭಾವವು ಎಲ್ಲಾ ಕಡೆ ತುಂಬಿದಂತೆ ತೋರುತ್ತಿದೆ. ಯಥಾದರ್ಶನದ ಪ್ರಯೋಗವು ಅದ್ಭುತವಾಗಿದೆ.

ರಾಮನು ದೇವಿಯ ಪೂಜೆಯಲ್ಲಿ ತೊಡಗಿದ್ದು ಪಕ್ಕದಲ್ಲಿ ಹನುಮತ, ರಾಜಪರಿವಾರದವರು, ಋಷಿಮುನಿಗಳು, ಸೇವಕರು, ಬ್ರಹ್ಮಾಣರು ಸೇರಿ ಪೂಜಾಕಾರ್ಯವನ್ನು ಸಂಬ್ರಮ ಸಡಗರದಿಂದ ಎಲ್ಲಾರು

ತೊಡಗಿದ್ದಾರೆ. ಅರಮನೆಯ ಒಳಾಂಗಣವು ರಚಿಸಿದ ಹಿನ್ನೆಲೆಯಿಂದ ಕೂಡಿದೆ. ಚಾಮುಂಡಿದೇವಿಯು ಸಿಂಹದ ಮೇಲೆ ಕುಳಿತ್ತಿದ್ದರು ನೈಜತೆಯಿಂದ ಕಂಡುಬರುತ್ತದೆ. ಈ ಶಿಲ್ಪದ ಹಿಂದೆ ಪ್ರಭಾವಳಿಯು ಇರುತ್ತದೆ. ಸೇವಕರು ಗಾಳಿ ಬೀಸುತ್ತಿದ್ದು ಹಿನ್ನೆಲೆಯಲ್ಲಿ ವ್ಯಾದ್ಯವನ್ನು ನುಡಿಸುತ್ತಿದ್ದು. ಹಲವು ಸ್ತ್ರೀಯರು ಕೈಮುಗಿದು ನಿಂತಿರುತ್ತಾರೆ. ಒಳಗಿನ ಮೇಲುಹಂತಸ್ತಿನಲ್ಲಿ ಇವರುವಂತೆ ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ವಿಶೇಷವಾಗಿ ಗಂಧರ್ವರು ಹೂವುಗಳನ್ನು ದೇವಿಯ ಮೇಲೆ ಗಾಳಿಯಲ್ಲಿ ತೇಲುತ್ತಾ ಪರಿಮಳದ ಹೂವುಗಳನ್ನು ಚೆಲ್ಲುತ್ತಿದ್ದಾರೆ. ಈ ಸಂಯೋಜನೆಯಲ್ಲಿ ಪಾಶ್ಚಮಾತ್ಯರ ಪ್ರೇರಣೆಯು ಕಂಡುಬರುತ್ತದೆ. ಕಲಾವಿದನ ಸಾಮರ್ಥ್ಯವು ಆಗಾಧವಾಗಿರುತ್ತದೆ. ಅದ್ಭುತವಾಗಿ ಚಿತ್ರ ಸಂಯೋಜನೆ ಮಾಡಿ ಆಕೃತಿಯ ನೈಜತೆಯ ಲಕ್ಷಣದಲ್ಲಿ ಚಿತ್ರಿಸುವಾಗ ಕಲಾವಿದನ ತಾಳ್ಮೆ ಹೆಚ್ಚಿನದು ಈ ಚಿತ್ರವನ್ನು ೧೯ನೇ ಶತಮಾನದಲ್ಲಿ ರಚಿಸಿರುತ್ತಾರೆ. ಈ ಕಲಾಕೃತಿಯು ವಿಶೇಷಕಲಾಕೃತಿಯಲ್ಲಿ ಒಂದು.

ಒಂದು ಶತಮಾನ ದಾಟಿದರು ವರ್ಣ ಮಾಸದಂತೆ ನೋಡಿಕೊಂಡಿದ್ದಾರೆ. ದಸರಾ ಮೆರವಣಿಗೆಯ ಚಿತ್ರದಲ್ಲಿ ಪ್ರಕೃತಿಯನ್ನು ಸೇರಿಸಿಕೊಂಡು ಚಿತ್ರವನ್ನು ಸಂಯೋಜಿಸಿ ದಸರಾ ಸಂದರ್ಭದ ಭಿತ್ತಿಚಿತ್ರಗಳನ್ನು ಚಿತ್ರಿಸಿ ಅವು ಅತ್ಯುಂತ್ತಮವಾದ ಕಲಾಕೃತಿಯಾಗಿದೆ. ಅಂದಿನ ಕಲಾಪೊಷಕಾರದ ರಾಜರ ಆಸಕ್ತಿಯಿಂದ, ಕಲಾವಿದರು ತೈಲವರ್ಣವನ್ನು ಮತ್ತು ಪಾಶ್ಚಾತ್ಯರ ಕಲಾತಂತ್ರವನ್ನು ನಮ್ಮದೇಶಿಯ ಕಲಾವಸ್ತು ವಿಷಯದಲ್ಲಿ ದುಡಿಸಿಕೊಂಡರು. ಹೊರಗಿನಿಂದ ಬಂದ ಮಾಧ್ಯಮ ತಂತ್ರ ಶೈಲಿಯನ್ನು ತನ್ನತನಕ್ಕೆ ದುಡಿಸಿಕೊಂಡಿದ್ದಾರೆ. ಇಲ್ಲಿನ ಸಂಸ್ಕೃತಿಗೆ ನೆರಳುಬೆಳಕಿನ ಸಂಯೋಜನೆಯು ಈ ಚಿತ್ರಗಳಲ್ಲಿ ಅತ್ಯುತ್ತಮವಾಗಿ ಸೆರೆಯಿಡಿದ್ದಾರೆ. ಯಾಥಾದರ್ಶನದ ತಂತ್ರ ಈ ಚಿತ್ರಗಳಲ್ಲಿ ಎದ್ದು ಕಾಣುತ್ತದೆ.

೧೯ನೇ ಶತಮಾನದಲ್ಲಿ ನಡೆಯುತ್ತಿದ್ದ ಅಂದಿನ ದಸರಾ ವೈಭವವನ್ನು, ಪರಿಸರ, ಜನರ ಪರಿಸ್ಥಿತಿ, ಉಡುಗೆ-ತೊಡುಗೆಗಳ ಜೊತೆ ಸಂಭ್ರಮವನ್ನು ಅತಿಸೂಕ್ಷ್ಮವಾಗಿ, ರಾಜರ ಮೇಲಿನ ಗೌರವ ಭಕ್ತಿಯನ್ನು ವರ್ಣಚಿತ್ರಗಳಲ್ಲಿ ಹಿಡಿದಿಟ್ಟಿದ್ದಾರೆ. ಎಲ್ಲಾ ಮೆರವಣಿಗೆ ಪಟ್ಟದಲ್ಲೂ ರಾಜಗಾಂಭೀರ್ಯದಿಂದ ಕೂಡಿದ ಮೆರವಣಿಗೆ, ಚಾಮುಂಡಿಬೆಟ್ಟದ ಸಾಲು, ಸುಣ್ಣಬಣ್ಣದಿಂದ ಅಲಂಕರಿಸಿ ಸಿದ್ಧವಾಗಿ ನಿಂತಿರುವ ಕಟ್ಟಡ, ಮನೆ ದೇವಾಲಯಗಳು ಸ್ವಚ್ಛತೆಯಿಂದ ಕೂಡಿದ ರಸ್ತೆಗಳು, ನೀಲಿ ಆಕಾಶದಲ್ಲಿ ಬೆಳ್ಳಿಮೋಡಗಳು ಸಹ ಸಂಭ್ರಮ ಆಚರಿಸುವಂತೆ ಚಿತ್ರಿಸಿದ್ದಾರೆ. ಕಲಾಕೃತಿಗಳು ಕಲಾವಿದನ ಶ್ರದ್ಧೆ, ಕೌಶಲ್ಯ, ಆಕೃತಿಗಳಲ್ಲಿನ ಜೀವಂತಿಕೆಯ ಚೆಲುವು, ಭಾವನೆಗಳ ನಲಿದಾಟವನ್ನು ರಾಜಾಶ್ರಯದ ಕಲಾವಿದರು ರಾಜ್ಯದ ಶ್ರೀಮಂತಿಕೆಯನ್ನು ಅದ್ಭುತವಾಗಿ ಸೆರೆಯಿಡಿದ್ದಾರೆ. ನೋಡುವವರನ್ನು ಸಹ ಅಂದಿನ ರಸಗಳಿಗೆಯ ಸವಿಯನ್ನು ಇಂದು ಸಹ ಕಣ್ಣಿಗೆ ಕಟ್ಟುವಂತೆ ಹಾಗೂ ಮನಸ್ಸಿಗೆ ಹಿತಾನುಭವನ್ನು ಉಣ್ಣಬಡಿಸಿರುತ್ತಾರೆ.

ಈ ಎಲ್ಲಾ ಕಲಾಕೃತಿಗಳು ಅಮೋಘವಾಗಿದ್ದು ಕರ್ನಾಟಕದ ಬೇರೆ ಯಾವ ಮೂಲೆಯಲ್ಲೂ ಈ ತರದ ಕಲಾಕೃತಿಗಳು ಕಾಣಸಿಗುವುದಿಲ್ಲ. ನೂರುವರ್ಷ ಹತ್ತಿರ ಬರುತ್ತಿದ್ದರು ಮಾಸದವರ್ಣ, ಕಲಾಕೃತಿಯಲ್ಲಿರುವ ಸೈನಿಕರಶಿಸ್ತು ಮತ್ತು ಗೋಡೆಯಲ್ಲಿ ಇದ್ದಂತಹ ಸ್ಥಳವಕಾಶದಲ್ಲಿ ಅದ್ಭುತವಾಗಿ ಸಂಯೋಜನೆಗೊಂಡಿರುವುದು ಕಲಾವಿದರಲ್ಲಿದ್ದ ಇದ್ದ ಜಾಣ್ಮೆ, ಕೌಶಲ್ಯವು ಉತ್ತಮ ಉದಾಹರಣೆಗೆ ಸಾಕ್ಷಿಯಾಗಿದೆ. ಇಲ್ಲಿನ ಸಂಪ್ರದಾಯ ಕಲಾವಿದರು, ಪಾಶ್ಚಾತ್ಯಕಲಾಪದ್ಧತಿಯನ್ನು ಪಳಗಿಸಿಕೊಂಡು ಉತ್ತಮವಾಗಿ ಭಿತ್ತಿಚಿತ್ರ ರಚನೆ ಮಾಡಿರುವುದನ್ನು ನೋಡಿದರೆ ಕಲಾವಿದರು ವರ್ಣ ಸಂಯೋಜನೆಯನ್ನು ಸಹ ತಂಪಾಗಿ ವಿವಿಧ ವರ್ಣಗಳನ್ನು ದುಡಿಸಿ ಕೊಂಡಿರುವ ರೀತಿ, ಮಾಧ್ಯಮಗಳ ಮತ್ತು ಪರಿಕರಗಳ ವೈವಿಧ್ಯತೆಯ ಸವಾಲನ್ನು ಸರಿಯಾಗಿ ನಿರ್ವಹಿಸಿದ್ದಾರೆ. ಆಕೃತಿಯಲ್ಲಿ ನೆರಳು ಬೆಳಕಿನಆಟ, ಯಥಾದರ್ಶನದ ಅರಿವು, ನಾಲ್ವಡಿಕೃಷ್ಣರಾಜ ಒಡೆಯರು ಅರಮನೆಗಳನ್ನು ವರ್ಣ ಶೃಂಗಾರದಲ್ಲಿ ತುಂಬುವ ಆಸಕ್ತಿ ವಹಿಸಿದ್ದರ ಫಲವಾಗಿದೆ.

ಜಗನ್ಮೋಹನ ಅರಮನೆಯ ಮೇಲುಗಡೆ ಕೋಣೆಯೊಂದರಲ್ಲಿ ಸಹ ಗೋಡೆಗೆ ಕ್ಯಾನ್‌ವಾಸ್ ಅಂಟಿಸಿ ಅಲಂಕಾರಿಕ ನಕ್ಷೆಗಳನ್ನು ಹಾಗೂ ವೃತ್ತಾಕಾರದೊಳಗೆ ಗಣೇಶನಚಿತ್ರ, ಗಿಣಿ, ಹಂಸ, ಹೂಬಳ್ಳಿ ಸಾಲುಗಳನ್ನು ಚಿತ್ರಿಸಿದ್ದಾರೆ. ಇದರ ಹಿನ್ನೆಲೆಯೂ ಹಳದಿ ವರ್ಣವೇ ಪ್ರಧಾನವಾಗಿದ್ದು ಹಸಿರು, ಕೆಂಪು ವರ್ಣಗಳಿಂದ ಹೂ ಬಳ್ಳಿಗಳನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ.

೩.೨. ದರ್ಬಾರ್ ಹಾಲ್

ದರ್ಬಾರ್‌ಹಾಲ್ ಸಭಾಂಗಣವನ್ನು ದಿವಾನ್-ಇ-ಆಯ್ ಎಂದು ಕರೆಯುತ್ತಾರೆ. ಈ ಅರಮನೆಯ ಮೊದಲನೆಯ ಮಹಡಿಯ ಮೇಲ್ಛಾವಣಿಯಲ್ಲಿ ಕಲ್ಲುನಾರು ಶೀಟ್‌ಗಳನ್ನು ಹೊದಿಸಿ ದೊಡ್ಡ ದೊಡ್ಡ ಭಿತ್ತಿಚಿತ್ರಗಳನ್ನು ಸುಂದರವಾಗಿ ರಚಿಸಿದ್ದು ಕಲಾವಿದರಾದ ಶಿಲ್ಪಿ ಸಿದ್ದಲಿಂಗಸ್ವಾಮಿ ಅವರು ಹಾಗೂ ಶಿಷ್ಯವೃಂದದವರು ಸೇರಿ ಅದ್ಭುತವಾಗಿ ಚಿತ್ರಗಳನ್ನು ಮೂಡಿಸಿದ್ದಾರೆ. ಇದನ್ನು ಅರಮನೆ ದಸರಾ ವೀಕ್ಷಿಸುವ ಗ್ಯಾಲರಿಯೆಂದು ಸಹ ಕರೆಯುತ್ತಾರೆ. ಇಲ್ಲಿ ಅಲಂಕಾರಿಕ ಬೃಹತ್ ನಕ್ಷಾಚಿತ್ರಗಳೊಳಗೆ ಅನೇಕ ದೇವ-ದೇವತೆಗಳ ಚಿತ್ರಗಳಿವೆ. ಶಿವ-ಪಾರ್ವತಿ, ವಿಷ್ಣು-ಲಕ್ಷ್ಮೀ, ಬ್ರಹ್ಮ-ಸರಸ್ವತಿ ಮತ್ತು ಸಂಸಾರ ಸಮೇತದ ಜೊತೆಗೆ ಪರಿವಾರ ದೇವ-ದೇವತೆಗಳನ್ನು ಜೊತೆಗೆ ಅವರ ವಾಹನಗಳಾದ ನಂದಿ, ಸಿಂಹ, ಗರುಡ, ಹಂಸ ಇತ್ಯಾದಿಯನ್ನು ಒಂದುಗೂಡಿಸಿ ಸಂಯೋಜಿಸಿದ್ದಾರೆ. ೮ ದಿಕ್ಕುಗಳ ದೇವ-ದೇವತೆಗಳನ್ನು ಮತ್ತು ಅವರ ವಾಹನ ಜೊತೆಗೆ ಚಲ್ಲಿಸುತ್ತಿದ್ದಾರೆ ಎನ್ನುವಂತೆ ವೃತ್ತಾಕಾರದೊಳಗೆ ಭಿತ್ತಿಚಿತ್ರ ರಚಿಸಿದ್ದಾರೆ.

ವಿಷ್ಣುವಿನ ದಶಾವತಾರಗಳ ಚಿತ್ರಗಳನ್ನು ಸಹ ವಿಭಿನ್ನವಾಗಿವೇ ಅಷ್ಟೇಯಲ್ಲದೆ ಅವರ ಪತ್ನಿಸಮೇತರಾಗಿದ್ದು, ಅವರ ವಾಹನ ಹಾಗೂ ಅಲಂಕಾರ ಪ್ರಿಯನಾದ ವಿಷ್ಣುವಿನ ಹಲವು ಅವತಾರವನ್ನು ದೊಡ್ಡ ಅಲಂಕಾರಿಕ ನಕ್ಷೆಯೊಳಗೆ, ಪಾಶ್ಚಾತ್ಯರ ಚಿತ್ರರಚನೆಯ ತಂತ್ರ ಒಳಗೊಂಡ, ನಮ್ಮ ಸಂಪ್ರದಾಯದ ತಂತ್ರಶೈಲಿ ಲಕ್ಷಣಗಳ ಸೇರಿ ಮನೋಜ್ಞವಾಗಿ ಚಿತ್ರಮೂಡಿ ಬಂದಿರುತ್ತದೆ. ಎಲ್ಲಾ ಚಿತ್ರಗಳ ಹಿನ್ನೆಲೆಯನ್ನು ಸರಳ ವಿಶಾಲವಾಗಿ ತೆಳು ಆಕಾಶದ ನೀಲಿ ವರ್ಣವನು ತುಂಬಿರುತ್ತಾರೆ. ಆಕೃತಿಯೇ ಆಗಲ್ಲಿ ಅಲಂಕರಿಸಿ ಹೂ, ಬಳ್ಳಿ, ಪ್ರಾಣಿ-ಪಕ್ಷಿಗಳನ್ನು ಶಿಲ್ಪಕಲೆಯ ಮೂರು ಮತ್ತು ಎರಡು ಆಯಾಮದ ಆಕಾರಗಳಂತೆ ರಚಿಸಿದ್ದಾರೆ. ಆಭರಣಗಳು ಮೋಹಕವಾಗಿದ್ದು, ಚಿತ್ರಗಳು ಜೀವಂತಿಕೆಯ ಕಳೆಯನ್ನು ಹೊತ್ತು ನೋಡುಗರನ್ನು ಹರಸುತ್ತಿರುವಂತೆ ಭಾಸವಾಗುತ್ತೆ ಎಂದು ವೀಕ್ಷಕರು ಉದ್ಗರಿಸುತ್ತಾರೆ. ಹೀಗೆ ದೇವತೆಗಳ ಲಕ್ಷಣ, ವರ್ಣ ಸಂಯೋಜನೆಯು ಕಣ್ಣಿಗೆ ಹಿತವಾಗುದ್ದಲ್ಲದೆ. ಸಹೃದಯರ ಮನವನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಭಿತ್ತಿಚಿತ್ರಗಳಾಗಿವೆ.

೨.೨.೧, ಚಾಮುಂಡೇಶ್ವರಿ ದೇವಿಯ ಭಿತ್ತಿಚಿತ್ರ

ಈ ಚಿತ್ರವು ದರ್ಬಾರ್‌ಹಾಲ್ ಮೇಲ್ಛಾವಣಿಯ ಮೇಲೆ ದೊಡ್ಡದಾಗಿ ಸಂಯೋಜನೆಯಾಗಿರುತ್ತದೆ. ವೃತ್ತಾಕಾರದ ಹೂವಿನ ಒಳಗೆ ಈ ಚಿತ್ರವನ್ನು ಚಿತ್ರಿಸಿದ್ದಾರೆ. ಇದರ ಜೊತೆಗೆ ಇನ್ನೂ ಅನೇಕ ದೇವರ ಚಿತ್ರಗಳನ್ನು ರಚಿಸಲಾಗಿದೆ. ಬ್ರಹ್ಮದೇವ, ಶಿವಪಾರ್ವತಿ, ಲಕ್ಷ್ಮೀನಾರಾಯಣನ ಚಿತ್ರಗಳನ್ನು ಬಿಡಿಸಿದ್ದಾರೆ. ಅದರಲ್ಲಿ ವಿಶೇಷವಾಗಿ ಕಂಡುಬರುವ ಚಾಮುಂಡೇಶ್ವರಿದೇವಿಯ ಚಿತ್ರವು ದೊಡ್ಡಗಾತ್ರದ ಸಿಂಹದ ಮೇಲೆ ಪೀಠವಿದ್ದು ಅದರ ಮೇಲೆ ಈ ದೇವಿಯು ಕುಳಿತ್ತಿದ್ದಾಳೆ. ಎಂಟು ಕೈಗಳನ್ನು ಹೊಂದಿರುತ್ತಾರೆ. ಪ್ರತಿಕೈಗಳಲ್ಲಿ ಆಯುಧವಿದೆ. ಎಡಭಾಗದ ಮೇಲಿನ ಕೈಯಲ್ಲಿ ಗುರಾಣಿ, ಕತ್ತಿ, ಶಂಖ, ಅಗ್ನಿಯನ್ನು ಹಿಡಿದಿರುತ್ತಾಳೆ. ಬಲಭಾಗದ ಕೈಗಳಲ್ಲಿ ಖಡ್ಗ, ಚಕ್ರ, ತ್ರಿಶೂಲ, ಬಾಣವಿದೆ. ದೇವಿಯನ್ನು ಸಾಧಾರಣವಾಗಿ ನೈಜತೆ ಇರುವಂತೆ ಚಿತ್ರಿಸಲಾಗಿದೆ. ತಲೆಗೆ ಕಿರೀಟ, ಕೊರಳಿಗೆ ಮಣಿಸರವಿದ್ದು ನೀಲಿ ರವಿಕೆ, ತಿಳಿಕೆಂಪು

ವರ್ಣದ ಸೀರೆ ಉಟ್ಟುರುತ್ತಾಳೆ. ವರ್ಣ ಲೇಪನವು ವಿಶೇಷವಾಗಿ ನಡೆದಿದೆ ಎಂಬುದನ್ನು ನೋಡಿದರೆ ಕಾಣುತ್ತದೆ.

ಈ ಚಿತ್ರದಲ್ಲಿ ಸಿಂಹವು ದೊಡ್ಡದಾಗಿ ತೋರಿಸಿದ್ದಾನೆ ಕಲಾವಿದನ್ನು, ದೇವಿಯ ವಾಹನವಾದ ಸಿಂಹವು ಕಂದು ಬಣ್ಣದಿಂದ ರಚಿಸಿದ್ದಾರೆ. ದೊಡ್ಡದೇಹವನ್ನು ಹೊಂದಿರುವ ಸಿಂಹವು ದೇವಿಯನ್ನು ತಿರುಗಿ ನೋಡುತ್ತಿರುವಂತೆ ಕಂಡುಬರುತ್ತದೆ. ಈ ಪ್ರಾಣಿಯು ಶಾಂತರೀತಿಯಿಂದ ಕುಳಿತಿರುವಂತೆ ರಚನೆಮಾಡಲಾಗಿದೆ. ಅದರ ಕೇಶವಿನ್ಯಾಸವು ಜಲಪಾತದಂತೆ ಇರುತ್ತದೆ. ಕೂದಲು ದಟ್ಟವಾಗಿದೆ. ಇಲ್ಲಿ ದೇವಿಕ್ಕಿಂತ ಸಿಂಹವೇ ದೊಡ್ಡದಾಗಿ ಚಿತ್ರಿಸಲಾಗಿರುವುದು ವಿಶೇಷವಾಗಿದೆ. ಹಿಂಬಂದಿಯಲ್ಲಿ ಆಕಾಶದಂತೆ ತಿಳಿನೀಲಿ ವರ್ಣದಿಂದ ಲೇಪನ ಮಾಡಿದ್ದಾರೆ. ಸಿಂಹವು ಅಲಂಕಾರಿಕ ಹಸಿರು ಎಲೆಗಳ ಮೇಲೆ ಕುಳಿತಿರುವಂತೆ ಸುಂದರವಾಗಿ ಚಿತ್ರರಚನೆಮಾಡಿದ್ದಾರೆ. ಚಿಕ್ಕದಾದ ಪ್ರಭಾವಳಿಯನ್ನು ದೇವಿಯ ಹಿಂದೆ ಹಿನ್ನೆಲೆಯ ಮೇಲೆ ಚಿತ್ರಿಸಿ, ಅದರ ಮೇಲೆ ವ್ಯಾಲಿಚಿತ್ರಿಲಾಗಿದೆ. ಅದರ ಆಧಾರಕ್ಕೆ ಎರಡು ಅಲಂಕಾರಿಕದಿಂದ ತುಂಬಿದ ಕಂಬಗಳು ಇರುತ್ತದೆ. ವರ್ಣ ಸಂಯೋಜನೆಯಲ್ಲಿ ಯಾವುದೇ ನೆರಳು ಬೆಳಕು ಇಲ್ಲದೆ ವಸ್ತುವಿನ ದುಂಡುತನವನ್ನು ಮಾತ್ರ ಇಲ್ಲಿ ತೋರಿಸಲಾಗದೆ.

೩.೨.೨. ವಿಷ್ಣುವಿನ ಮತ್ಸಾವತಾರದ ಭಿತ್ತಿಚಿತ್ರ

ಈ ಚಿತ್ರವು ವೃತ್ತಾಕಾರದ ಹೊರಗೆ ಇರುವ ಅಲಂಕಾರಿಕ ನಕ್ಷೆಯ ಜಾಗದಲ್ಲಿ ಸಂಯೋಜನೆ ಮಾಡಿದ್ದಾರೆ. ಕಲ್ಲುನಾರು ಶಿಟ್ಟನು ಭಿತ್ತಿಯಾಗಿ ಉಪಯೋಗಿಸಿ ಮತ್ಸಾವತಾರದ ಚಿತ್ರವನ್ನು ರಚಿಸಿದ್ದಾರೆ. ನೀರಿನಿಂದ ಮೇಲೆ ಎದ್ದು ತೇಲುತ್ತಿರುವಂತೆ ಕಲಾವಿದ ಉತ್ತಮವಾಗಿ ಚಿತ್ರಿಸಿದ್ದಾನೆ. ವಿಷ್ಣುವಿನ ಹಲವು ಅವತಾರಗಳಲ್ಲಿ ಈ ಅವತಾರವು ಒಂದು. ಅದನ್ನು ಸಿದ್ದಲಿಂಗಸ್ವಾಮಿ ಮತ್ತು ಅವರ ಶಿಷ್ಯವರ್ಗವು ಈ ಚಿತ್ರಗಳನ್ನು ರಚಿಸಿದ್ದಾರೆ. ರಿಯ್ಯಾಲಿಸ್ಟಿಕ್ ಶೈಲಿಯಲ್ಲಿ ಚಿತ್ರಿಸಿದ ಒಂದು ಕಾಲ್ಪನಿಕ ಚಿತ್ರವಾಗಿದೆ. ಅರ್ಧದೇಹ ಮೀನು ಆದರೆ ಇನ್ನೂ ಅರ್ಧದೇಹವು ಮನುಷ್ಯನಾದಾಗಿರುತ್ತದೆ. ಮನುಷ್ಯ ದೇಹದ ಚಿತ್ರವು ನಡುವಿನವರೆಗೆ ಮಾತ್ರವಿದೆ. ನಾಲ್ಕುಕೈಗಳನ್ನು ಹೊಂದಿರುತ್ತದೆ. ವಿಷ್ಣುವಿನ ಸಂಕೇತವದಂತಹ ಶಂಖ ಚಕ್ರ ಮೇಲಿನ ಕೈಗಳಲ್ಲಿ ಇದ್ದರೆ. ಕೆಳಗಿನ ಕೈಗಳಲ್ಲಿ ಆಭಯಹಸ್ತವನ್ನು ಹೊಂದಿರುತ್ತಾನೆ. ಕೊರಳಿನಲ್ಲಿ ಮುತ್ತಿನಹಾರ ಹಾಗೂ ಹೂವಿನಹಾರವನ್ನು ಕಲಾವಿದನ್ನು ತೋರಿಸಿದ್ದಾನೆ. ತಲೆಯಲ್ಲಿ ಕಿರೀಟ, ತೋಳಿನಲ್ಲಿ ತೋಳುಬಂಧಿ, ಕಾಲಿನಲ್ಲಿ ಕಾಲುಕಡಗವನ್ನು ಧರಿಸಿದಂತೆ ಚಿತ್ರಿಸಲಾಗಿದೆ. ಕೂದಲನ್ನು ಬೆನ್ನಮೇಲೆ ಹರಡಿರುವಂತೆ ರಚನೆಮಾಡಲಾಗಿದೆ. ವಿಷ್ಣು ದೇವರು ಮೀನಿನಿಂದ ಹೊರಬರುವಂತೆ ಕಂಡುಬರುತ್ತದೆ. ಮೀನಿನ ಸ್ವಲ್ಪ ಕೆಳಭಾಗವು ನೀರಿನಲ್ಲಿ ಇರುತ್ತದೆ. ಉಳಿದ ಬಾಲ ಮತ್ತು ದೇಹದ ಭಾಗವು ಮಾತ್ರ ನೀರಿನ ಮೇಲೆ ಇರುತ್ತದೆ. ಜೊತೆಗೆ ಹಲವು ಇತರ ಮೀನುಗಳನ್ನು ಚಿತ್ರದಲ್ಲಿ ತೋರಿಸಿದ್ದಾರೆ. ನೀರಿನ ಜಾಗವನ್ನು ಕಲಾವಿದನ್ನು ಬಿಳಿವರ್ಣದಿಂದ ತೋರಿಸಿ ಆಕಾಶವನ್ನು ಹಿನ್ನೆಲೆಯಂತೆ ನೀಲಿಬಣ್ಣದಿಂದ ಸಾಧರಣವಾಗಿ ಲೇಪಿಸಿದ್ದಾರೆ. ಅದು ಚಿತ್ರವನ್ನು ಚೆನ್ನಾಗಿ ಕಾಣಲು ಸೌಂದರ್ಯ ಹೆಚ್ಚಿಸಲು ಮುಖ್ಯವಾಗಿದೆ. ಇಡಿ ಆಕೃತಿಯಲ್ಲಿ ಕಂದು ವರ್ಣದಿಂದ ರೇಖೆಯನ್ನು ಎಳೆದಿರುತ್ತಾರೆ. ವಿಷ್ಣುವಿನ ತಿಳಿಕೆಂಪು ಮೈವರ್ಣ ಇರುತ್ತದೆ. ಈ ಚಿತ್ರದ ವಿಷ್ಣುವಿನ ಆಕೃತಿಯ ಶಿರದ ಹಿಂದೆ ರಶ್ಮಿಯನ್ನು ಮೂಡುತ್ತಿರುವಂತೆ ಹಾಗೂ ಕೆಳಭಾಗದಲ್ಲಿ ಹಸಿರು ಗಿಡದ ಎಲೆಗಳನ್ನು ಅಥವಾ ಹುಲ್ಲುಗಳು ಇರುವಂತೆ ಕಲಾವಿದನ್ನು ರಚಿಸಿದ್ದಾನೆ.

ಭಿತ್ತಿಚಿತ್ರಗಳೆಲ್ಲಾ ಸೌಂದರ್ಯದ ದೃಷ್ಟಿಯಿಂದ, ಧಾರ್ಮಿಕ ಹಿನ್ನೆಲೆಯಲ್ಲಿದ್ದು ಶ್ರದ್ಧೆ ಭಕ್ತಿಯನ್ನು ಮೂಡಿಸುತ್ತದೆ. ಶಿಲ್ಪಸಿದ್ದಲಿಂಗಸ್ವಾಮಿಗಳ ಕಲ್ಪನೆಗೆ ಬೇರೆ ಯಾವುದೆ ಭಿತ್ತಿಚಿತ್ರವು ಸಾಟಿಯಾಗಿ ನಿಲ್ಲಲಾರದು ಎಂಬ ಅಭಿಮತವಿದೆ. ೧೯ನೇ ಶತಮಾನದ ಭಿತ್ತಿಚಿತ್ರಕಲೆಯ ಪರಿವರ್ತನ ಕಾಲದಲಷ್ಟೇ

ಎಂದು ಹೇಳಲು ಒಂದು ಉದಾಹರಣೆಯಷ್ಟೇಯಾಗಿದೆ ಅಲ್ಲದೆ. ದೇಶದ ಆಸ್ತಿಯಾಗಿ. ಅರಮನೆಯ ದರ್ಬಾರ್‌ಹಾಲ್ ಭಿತ್ತಿಚಿತ್ರಗಳು ಇರುತ್ತದೆ.

೩.೩. ಜಗನ್ಮೋಹನ ಅರಮನೆಯ ಭಿತ್ತಿಚಿತ್ರಗಳು

೧೮೬೧ರಲ್ಲಿ ನಿರ್ಮಿಸಿದಂತಹ ಸಂಪ್ರದಾಯಿಕ ಹಿಂದೂ ಶೈಲಿಯಲ್ಲಿದೆ. ಅಲ್ಲದೆ ಅರಮನೆಯು ಪಾರಂಪರಿಕ ಕಟ್ಟಡಗಳಲ್ಲಿ ಒಂದು ಆಗಿರುತ್ತದೆ. ಈ ಅರಮನೆಯ ಅತಿಮುಖ್ಯ ವಿಶೇಷವೆಂದರೆ ಮಹಡಿ ಮೇಲುಗಡೆ ಒಂದು ಕೋಣೆಯಲ್ಲಿ ೬೦ ಮತ್ತು ೩೫ ಅಡಿ ಅಳತೆಯ ರೂಮಿನ ಸುತ್ತ ತುಂಬ ದಸರಾ ಮೆರವಣಿಗೆ, ಶಿಕಾರಿದೃಶ್ಯಗಳು, ದಿವಾನರುಗಳ, ಭಕ್ಷಿಗಳ ಅಲ್ಲದೆ ಪ್ರಧಾನಿ ಅವರುಗಳ ರಾಜಪರಿವಾರದರೂ ಮತ್ತು ಅಧಿಕಾರಿಗಳು ಅಲ್ಲದೆ ರಾಜವಂಶಾವಳಿ, ಅಲಂಕಾರಿಕ ನಕ್ಷೆ ಹೂ ಬಳ್ಳಿ, ಚದುರಂಗ ಆಟದ ಭಿತ್ತಿಚಿತ್ರಗಳು, ಪಟ್ಟದಹಸು, ಪ್ರಾಣಿ–ಪಕ್ಷಿಗಳನ್ನೂ ಸಹ ಅಮೋಘವಾಗಿ ಚಿತ್ರಿಸಿದ್ದಾರೆ. ಗೋಡೆಗೆ ಕ್ಯಾನ್‌ವಾಸ್ ಅಂಟಿಸಿ ದೇಶಿಯ ಸಂಪ್ರದಾಯವಾದ ಮೈಸೂರು ಶೈಲಿಯಿಂದ ಎಲ್ಲಾ ಚಿತ್ರಗಳನ್ನು ಚಿತ್ರಿಸಿದ್ದಾರೆ. ಅವು ಹಳದಿ ಹಿನ್ನೆಲೆಯಿಂದ ಕೂಡಿರುವುದು ಈ ಭಿತ್ತಿಚಿತ್ರಗಳಲ್ಲಿ ವಿಶೇಷವಾಗಿದೆ. ವರ್ಣಗಳನ್ನು ಗಿಡಮೂಲಿಕೆ ಮತ್ತು ಖನಿಜಮೂಲದಿಂದ ಪಡೆದು ಬಳಸಿದ್ದಾರೆ.

ಪ್ರತಿಗೋಡೆಯಲ್ಲಿ ಅನೇಕ ಭಾಗವಾಗಿ ಪ್ರತೇಕ್ಷಿಸಿ ಚಿತ್ರಿಸಿದ್ದಾರೆ. ಆದರೆ ಅದರಲ್ಲಿ ಪ್ರಧಾನವಾಗಿ ದಸರಾ ಮೆರವಣಿಗೆಯ ಚಿತ್ರವು ತುಂಬ ಉದ್ದವಾಗಿ ಚಿತ್ರಿಸಿದ್ದಾರೆ. ಹಾಗೆ ಅರಸರ ವಂಶಾವಳಿಯ ಚಿತ್ರಗಳು ಅರಳಿಮರದಲ್ಲಿ ವಿಶೇಷವಾಗಿ ಎಲ್ಲಾ ಅರಸರ ಪೂರ್ಣಮಟ್ಟದ ಚಿತ್ರಗಳು ಇರುವುದು ಲೋಕಪ್ರಸಿದ್ಧಿ ಪಡೆದಿದೆ ಏಕೆಂದರೆ ಯದುವಂಶದ ಆರಾಧಕನಾದ ಕೃಷ್ಣನ ನೆನೆಪಿಸುವ ವೃಕ್ಷಾವನು ನೆನಪಿಸುತ್ತದೆ ಅಲ್ಲಿ ಅರಸರ ಹೆಸರು, ವಿವರವನ್ನು ಸಹಬರೆದಿದ್ದಾರೆ ಮತ್ತು ದಸರಾ ಮೆರವಣಿಗೆಯ ವಿಜೃಂಭಣೆಯನ್ನು ಪ್ರತಿಬಿಂಬಿಸುವಾಗೆ ಭಿತ್ತಿಚಿತ್ರ ರಚನೆಯಾಗಿದೆ. ಮೈಸೂರಿನ ಕಾಡುಗಳಲ್ಲಿ ಶಿಕಾರಿಯ ಚಿತ್ರಗಳು, ಆನೆಗಳನ್ನು ಖೆಡ್ಡಗಳಲ್ಲಿ ಪಳಗಿಸುವ ಚಿತ್ರಗಳು, ಹಲವು ಪಟ್ಟಿಗಳಲ್ಲಿ ಅನೇಕ ಅಲಂಕಾರಿಕ ಚಿತ್ರಗಳಲ್ಲಿ ಹೂಬಳ್ಳಿ, ಪ್ರಾಣಿ–ಪಕ್ಷಿಗಳ ಸುಂದರ ಚಿತ್ರಗಳು ಸಹ ಕಂಡು ಬರುತ್ತದೆ. ಮೇಲುಸಾಲಿನ ದೊಡ್ಡ ಪಟ್ಟಿಯಲ್ಲಿದ್ದು ಜೊತೆಗೆ ಹೆಚ್ಚಾಗಿ ದಸರಾದ ಮೆರವಣಿಗೆಯಲ್ಲಿ ಪಾಲುಗೊಳ್ಳುವ ಆನೆಸಾಲು, ಕುದುರೆಸಾಲು, ಒಂಟೆಸಾಲು, ಮತ್ತು ಅಶ್ವದಳ, ಗಜದಳ, ಕಾಲುದಳಗಳ ಸಾಲುಗಳಲ್ಲಿ ದಸರಾವನ್ನು ನೆನೆಪಿಸುತ್ತದೆ. ಅರಸರನ್ನು ಪಲ್ಲಕ್ಕಿಯಲ್ಲಿ ಹೊತ್ತ ಸೇವಕರುಗಳು, ಹಾಗೆ ರಥಚಿತ್ರಗಳು, ಸುಂದರವಾಗಿದೆ ಅಲ್ಲದೆ ಹಸುಕರುವಿನ ಮುಗ್ಧತೆಯು ಈ ಚಿತ್ರಗಳಲ್ಲಿ ಪ್ರದರ್ಶಿಸಿರುವಾಗೆ ಚಿತ್ರಸಿರುವರು. ಅಲಂಕಾರಿಕ ಹೆಂಗೆಳೆಯರುಗಳು ಸಹ ಸೌಂದರ್ಯ ಮೋಹಕನೋಟ ಬೀರುತ್ತಿರುವಾಗೆ ಚಿತ್ರಗಳು ಇವೆ. ಜೊತೆಗೆ ವರ್ಣಗಳು ಸಹ ಹಿತಾನುಭವದಿಂದ ಕೂಡಿದ ಶಾಂತರಸದಲ್ಲೊ ಸೌಂದರ್ಯವನ್ನು ಅದ್ಭುತದಡೆಗೆ ಅಲ್ಲದೆ, ಆಧ್ಯಾತ್ಮಕತೆಗೆ ಮನಸ್ಸನ್ನು ಕೊಂಡೊಯ್ಯುತ್ತದೆ.

ವರ್ಣಲೇಪನವು ಸಹ ಅಚ್ಚುಕಟ್ಟುತನವನ್ನು ತೋರಿಸುತ್ತದೆ. ಆಕೃತಿಗಳಲ್ಲಿ ಭಾವನೆಗಳನ್ನು ದೇಹದ ಮುಖ ಮತ್ತು ಅಂಗಾಂಗಗಳಲ್ಲಿ ಎದ್ದುಕಾಣುವ ಹಾಗೆ ತೋರಿಸುವ ಚಾಣಾಕ್ಷತನದ ಕಲಾವಿದನ ಕೌಶಲ್ಯ, ಕೋಣೆಯ ಸ್ಥಳಾವಕಾಶವನ್ನು ಸದ್ಬಳಕೆಗೊಂಡು ಚಿತ್ರಗಳ ಸಂಯೋಜನೆಯನ್ನು ನೋಡುಗರ ಭ್ರಮೆಮುಗ್ಧಗೊಳಿಸುತ್ತದೆ. ಪ್ರತಿ ಆಕೃತಿಗಳಲ್ಲದೆ ವಸ್ತುಗಳಾಗಲಿ ಮತ್ತು ದೇವ–ದೇವತೆ, ಪ್ರಾಣಿ–ಪಕ್ಷಿಗಳಾಗಳಲ್ಲಿ ಆಕಾರಗಳು ನೈಜತೆಗೆ ಹತ್ತಿರವಾಗಿ ದೇಶಿಯ ಲಕ್ಷಣಗಳನ್ನು ಹೊತ್ತುಕೊಂಡು ಕಲಾಪ್ರೇಮಿಗಳ ಜೊತೆಗೆ ಸಂಶೋಧಕರನ್ನು ಸಂಶೋಧನೆಗೆ ಆಹ್ವಾನಿಸುತ್ತದೆ. ಅಂಬಾವಿಲಾಸದಲ್ಲಿ ದಸರಾ ಮೆರವಣಿಗೆನ್ನು ಕೆಲವು ಆಧುನಿಕತೆಯ ಲಕ್ಷಣದಲ್ಲಿ ಚಿತ್ರಿಸಿದ್ದರೆ. ಇಲ್ಲಿ ಸವಾಲಾಗಿ ದೇಶಿಯ

ಕಲಾವಿದರುಗಳು ದಸರಾ ಮೆರವಣಿಗೆಯನ್ನು ಸಂಪ್ರದಾಯಿಕ ಭಿತ್ತಿಚಿತ್ರಕಲೆಯಲ್ಲಿ ಒಂದು ಕೈ ಮೇಲು ಯೆಂಬಂತೆ ತೋರಿಸಿದ್ದಾರೆ.

೩.೩.೧. ವಂಶವೃಕ್ಷಾದ ಚಿತ್ರ

ಈ ಕೋಣೆಯ ಎದುರುಗಡೆ ಇರುವಂತೆ ದೊಡ್ಡ ಅರಳಿಮರದ ಚಿತ್ರದಲ್ಲಿ ಯದುವಂಶದ ಎಲ್ಲಾ ಅರಸರ ಚಿತ್ರಗಳನ್ನು ಎಲ್ಲೆಗಳಲ್ಲಿ ರಚಿಸಿದ್ದಾರೆ. ಮೇಲೆ ಕೆಳಗೆ ದೇವರು ಗಂಧರ್ವರು, ಸೈನಿಕರು ಇರುವಂತಹ ಒಂದು ಉತ್ತಮಚಿತ್ರ ಇದಾಗಿದೆ. ಚಿತ್ರ ಸಂಯೋಜನೆಯು ಸಂಪ್ರದಾಯಿಕ ಶೈಲಿಯಲ್ಲಿಯೇ ವಿಶಿಷ್ಟವಾಗಿದೆ ಆಕೃತಿಗಳಲ್ಲಿ ಸ್ವಲ್ಪ ವೈವಿಧ್ಯತೆ ಕಂಡುಬರುತ್ತದೆ. ಈ ಚಿತ್ರವು ವೆಚ್ಚುಗೆಗಳಿಸಿದ ಭಿತ್ತಿಚಿತ್ರವಾಗದೆ. ಪ್ರಾರಂಭದಲ್ಲಿ ದೇವರ ಚಿತ್ರವಿದೆ ಅವು ಯಾವವೆಂದರೆ ನಂಜುಂಡೇಶ್ವರ, ಚಾಮುಂಡೇಶ್ವರಿ, ಅರಳಿ ಎಲೆಯವ ಮೇಲಿನ ಬಾಲಕೃಷ್ಣನ ಚಿತ್ರವನ್ನು ಚಿತ್ರಿಸಲಾಗಿದೆ. ಆನಂತರ ಒಲಭಾಗದಲ್ಲಿ ಸೂರ್ಯನ್ನು ಕೆಂಪುವರ್ಣದಿಂದ ತೋರಿಸಿ ಅದರಲ್ಲಿ ಸೂರ್ಯದೇವನ ಆಕೃತಿಯನ್ನು ರಚನೆಮಾಡಿರುತ್ತಾರೆ. ಎಡಭಾಗದಲ್ಲಿ ಚಂದ್ರವನ್ನು ಬಿಳಿವರ್ಣದಲ್ಲಿ ಚಿತ್ರಿಸಿ ಅದರಲ್ಲಿಯೂ ಚಂದ್ರದೇವನ ಆಕೃತಿಯನ್ನು ಚಿತ್ರಿಸಲಾಗಿದೆ. ಈ ಚಿತ್ರಗಳ ಎಡ ಮತ್ತು ಬಲಭಾಗ ಪುಷ್ಪವಿಮಾನಗಳಲ್ಲಿ ಏಂಟು ಜನಗಂಧರ್ವವರು ಕುಳಿತಿದ್ದಾರೆ. ಅದರಲ್ಲಿ ಒಂದು ಕಡೆ ನಾಲ್ಕು ಜನರುಇದ್ದು ಅವರು ಹೂವುಗಳನ್ನು ಚೆಲುತ್ತಿದ್ದಾರೆ. ಇನ್ನಿಬ್ಬರು ಸಂಗೀತ ನುಡಿಸುತ್ತಿದ್ದಾರೆ. ಅವರಿಗೆ ವಿಶೇಷವಾದ ರೆಕ್ಕೆಗಳಿರುತ್ತದೆ. ಅವರು ತಲೆಗಳಿಗೆ ಕಿರೀಟ, ಆಭರಣಗಳಿಂದ ಅಲಂಕರಣಗೊಂಡಿರುತ್ತಾರೆ.

ಆ ನಂತರದಲ್ಲಿ ವಂಶವೃಕ್ಷದ ಚಿತ್ರದಲ್ಲಿ ೪೧ ಎಲೆಗಳಲ್ಲಿ ಅರಸರು, ಅವರ ಮುಖ್ಯ ಪರಿವಾರದವರನ್ನು ಪೂರ್ಣಪ್ರಮಾಣದಲ್ಲಿ ಚಿತ್ರಿಸಲಾಗಿದೆ. ಎಲೆಗಳಲ್ಲಿ ಪ್ರತಿಯೊಬ್ಬ ಅರಸರ ಚಿತ್ರ ಹಾಗೂ ಅವರ ಹೆಸರು ಸಮೇತ ವಿವರವಿರುತ್ತದೆ. ವೃಕ್ಷದ ಆಕೃತಿಯಲ್ಲಿ ಅರಳಿಎಲೆಯಂತೆ ಇರುತ್ತದೆ ಅದರೊಳಗು ಎಲೆಗಳಿಂದ ಕೂಡಿದೆ. ದೊಡ್ಡದಾಗಿ ಯದುರಾಯನ ಚಿತ್ರವನ್ನು ಸಿಂಹಾಸನದ ಮೇಲೆ ಕುಳಿತಿರುವಂತೆ ಮಿಕ್ಕವರನ್ನು ಸಹ ಪೀಠದ ಮೇಲೆಯೇ ಕುಳಿತ್ತಿದ್ದಾರೆ. ಪ್ರತಿಯೊಬ್ಬರ ಅವರ ಹಿಂದೆ ಸೇವಕರನ್ನು ಸಹ ಚಿತ್ರಿಸಿದ್ದಾರೆ. ಪ್ರತಿ ಅರಸ ಮುಖ್ಯವಾದ ರಾಜಪೊಷಾಕಿನಲ್ಲಿ ಇರುವಂತೆ ಚಿತ್ರಿಸಿದ್ದಾರೆ. ಎಲ್ಲರ ವಸ್ತ್ರದ ವರ್ಣವು ಒಂದೇಯಾಗಿರುತ್ತದೆ. ಎಲೆಯು ಹಸಿರುಬಣ್ಣದಿಂದ ತೋರಿಸಿ ದೊಡ್ಡ ಎಲೆಗಳಲ್ಲಿ ಅನೇಕ ಚಿಕ್ಕ ಎಲಗಳ ಜೊತೆ ಹೂವುಗಳನ್ನು ರಚಿಸಿದ್ದಾರೆ. ಎಲೆಯ ಕೆಲಭಾಗವನ್ನು ಅಮೃತಕಳಸದಿಂದ ಬರುವಂತೆ ಚಿತ್ರಿಸಿಲಾಗಿದೆ. ಕಳಸ ನೀಲಿ ವರ್ಣದಲ್ಲಿದ್ದು ಕಳಸದ ಎಡಭಾಗ ಮತ್ತು ಬಲಭಾಗದಲ್ಲಿ ಅನೇಕ ಅರಮನೆಯ ಸೈನಿಕರು, ವಿದ್ವಾಂಸರುಗಳು ಸೇರಿ ಜಯದ ಘೋಷಣೆಯನ್ನು ಕೂಗುತ್ತಿರುವಂತೆ ಚಿತ್ರಿಸಿದ್ದಾರೆ. ಜೊತೆಗೆ ಸಾಮಾನ್ಯರು ಸಹ ಇರುವಂತೆ ಚಿತ್ರಿಸಲಾಗಿದೆ. ಚಿತ್ರಕಲಾಕೃತಿಯ ಹಿಂಬದಿ ಹಳದಿ ವರ್ಣದಿಂದ ತುಂಬಿರುತ್ತಾರೆ. ಈ ಕಲಾಕೃತಿಯ ಸುತ್ತಲು ಅಲಂಕಾರಿಕ ಪಟ್ಟಿವು ಸಹ ಇರುತ್ತದೆ.

೩.೩.೨, ಎಡಗೋಡೆಯ ಮೇಲಿನ ದಸರಾಮೆರವಣಿಗೆಯ ಭಿತ್ತಿಚಿತ್ರ

ಈ ಭಾಗದಲ್ಲಿಯೂ ದಸರಾ ಮೆರವಣಿಗೆ ಮುಂದುವರಿದ ಭಾಗವನ್ನು ಚಿತ್ರಿಸಿದ್ದಾರೆ. ಅದು ದೊಡ್ಡ ಅಳತೆಯಲ್ಲಿ ಇರುತ್ತದೆ. ದಸರಾ ಮೆರವಣಿಗೆಯು ರಾಜಬೀದಿಯಲ್ಲಿ ಸಾಗುತ್ತಿರುವ ಅಂದಿನ ಸನ್ನಿವೇಶವನ್ನು ಸಂಪ್ರದಾಯಶೈಲಿಯಲ್ಲಿ ರಚಿಸಿದ್ದಾರೆ. ಬೀದಿಯ ಒಂದು ಬಧಿಯಲ್ಲಿ ಮನೆಗಳ ಸಾಲುಗಳನ್ನು ಚಿತ್ರಿಸಿ ಅದರಲ್ಲಿ ಅನೇಕ ಸಾರ್ವಜನಿಕರಿರುವ ಸಾಲುಮನೆಗಳಲ್ಲಿ ತುಂಬ ಉತ್ಸಹದಿಂದ ದಸರಾಮೆರವಣಿಗೆಯನ್ನು ವಿಕ್ಷಿಸಲು ಸಾಲುಸಾಲಾಗಿ ನಿಂತಿರುತ್ತಾರೆ. ಈ ಮೆರವಣಿಗೆಯಲ್ಲಿ ಮುಖ್ಯವಾಗಿ

ಮೂರು ಸಾಲುಗಳು ಇರುತ್ತದೆ. ಬೀದಿಯ ಎಡಭಾಗದಲ್ಲಿ ಅಶ್ವಧಳದ ಸೈನಿಕರು ತಮ್ಮ ಆಯುಧಗಳ ಜೊತೆ ಮಧ್ಯದಲ್ಲಿ ಸಾಗುತ್ತಿರುವ ಪಲ್ಲಕ್ಕಿಯನ್ನು ಸೇವಕರು ಹೊತ್ತುಕೊಂಡು ಹೋಗುತ್ತಿರುವರು. ಸಣ್ಣರಥವನ್ನು ಅಶ್ವಗಳು ಎಳೆದುಕೊಂಡು ಹೋಗುತ್ತಿವೆ. ಅವುಗಳ ಮುಂದೆ ಅಶ್ವಗಳು ವಿವಿಧ ಬಣ್ಣಗಳಲ್ಲಿ ಅಶ್ವಸೈನಿಕರು ಸಾಲಾಗಿ ಮುನ್ನಡೆಯುತ್ತಿದ್ದಾರೆ. ಮೊದಲು ಮತ್ತು ಕೊನೆಯ ಭಾಗದಲ್ಲಿ ಗಜಧಳದ ಸೈನಿಕರು ತಮ್ಮ ಆನೆಯನ್ನು ನಿಯಂತ್ರಿಸುತ್ತ ಸಾಲಿನಲ್ಲಿ ಸಾಗುತ್ತಿದ್ದಾರೆ. ಆನೆಗಳನ್ನು ನೀಲಿವರ್ಣದಲ್ಲಿ ತೋರಿಸಿದ್ದಾನೆ ಕಲಾವಿದನು. ಕುದುರೆಗಳನ್ನು ಕಂದು, ಬಿಳಿ. ಕಪ್ಪುವರ್ಣದಲ್ಲಿ ಮುಖ್ಯವಾಗಿ ತೋರಿಸಿ ನೈಜತೆಗೆ ಹತ್ತಿರವಾದ್ದಂತೆ ರಚಿಸಿದ್ದಾರೆ. ಹಲವು ಸೈನಿಕರು ತಮ್ಮದೇ ಸಮವಸ್ತ್ರವನ್ನು ಧರಿಸಿ ಸಾಲಾಗಿ ಶಿಸ್ತಿನಿಂದ ಸಾಗುತ್ತಿದ್ದಾರೆ. ದಸರಾ ಮೆರವಣಿಗೆಗೆ ಕಳೆತಂದಿದ್ದಾರೆ. ಇಲ್ಲಿ ಚಿತ್ರಿಸಿರುವ ಪಲ್ಲಕ್ಕಿ, ರಥವನ್ನು ಇಂದು ಸಹ ಅರಮನೆಯಲ್ಲಿ ಕಂಡುಬರುತ್ತದೆ.

ಈಗಲೂಸಹ ದಸರಾ ಮೆರವಣಿಗೆಯಲ್ಲಿ ಸಹ ಕಾಣಸಿಗುತ್ತದೆ. ಎಲ್ಲಾಆಕೃತಿಗಳು, ವಸ್ತು, ಪ್ರಾಣಿಗಳನ್ನು ಸೂಕ್ಷ್ಮವಾಗಿ ಕಪ್ಪುರೇಖೆಯಿಂದ ರಚಿಸಿರುವುದು ಆಕೃತಿಗಳ ಸೌಂದರ್ಯವನ್ನು ಹೆಚ್ಚಿಸಿದೆ. ಖನಿಜ ವರ್ಣಗಳಿಂದ ಈ ಭಿತ್ತಿಚಿತ್ರ ಕಾರ್ಯಕ್ಕೆ ಬಳಸಿಕೊಂಡಿರುತ್ತಾರೆ. ಇಡಿ ಚಿತ್ರದ ಹಿನ್ನೆಲೆಯು ಹಳದಿ ವರ್ಣವೇ ಪ್ರಧಾನವಾಗಿ ಕಂಡುಬರುತ್ತದೆ. ಈ ಚಿತ್ರದ ಸುತ್ತಲು ಅಲಂಕಾರಿಕ ಪಟ್ಟಿಯು ಸಹ ರಚಿಸಿದ್ದಾರೆ. ಈ ದಸಾರ ಮೆರವಣಿಗೆ ಚಿತ್ರದ ಕೆಳಗೆ ದೊಡ್ಡ ಅಳತೆಯ ಚೌಕಕಾರದಲ್ಲಿ ಧಾರ್ಮಿಕ, ಸಾಮಾಜಿಕ ಮತ್ತು ಚದುರಂಗದಆಟದ ಚಿತ್ರಗಳನು ಬಿಡಿಸಿದ್ದಾರೆ. ಇಲ್ಲಿನ ಭಿತ್ತಿಚಿತ್ರವು ಶ್ರೇಷ್ಠ ಹಾಗೂ ವಿಶೇಷದಿಂದ ಕೂಡಿದ ಚಿತ್ರವಾಗಿದೆ. ಜಗನ್ಮೋಹನ ಅರಮನೆಯ ಘನತೆ ಹೆಚ್ಚಿಸಿದಂತಹ ದಸರಾ ಮೆರವಣಿಗೆ ಚಿತ್ರವು ಆಧುನಿಕರಿಗೆ ಆಶ್ಚರ್ಯವಾಗಿ ನೋಡುತ್ತಾರೆ. ಅಷ್ಟುಸೂಕ್ಷ್ಮವಾಗಿ ಸೌಂದರ್ಯದಿಂದ ಅಂದಿನವರು ಚಿತ್ರಿಸಿದ್ದಾರೆ.

೩.೩.೩, ಬಲಗೋಡೆಯ ಮೇಲಿನ ದಸರಾ ಮೆರವಣಿಗೆಯ ಭಿತ್ತಿಚಿತ್ರಗಳು

ಈ ದೊಡ್ಡಗೋಡೆಯ ಮೇಲೆ ದಸರಾ ಮೆರವಣಿಗೆಯ ಸಾಲಿನ ಚಿತ್ರ ಅದರ ಕೇಳಭಾಗದಲ್ಲಿ ಎರಡು ದೊಡ್ಡ ಅಳತೆಯಲ್ಲಿ ವಿವಿಧ ಅಳತೆಯ ಚಿಕ್ಕಚಿತ್ರಗಳನ್ನು ಈ ಗೋಡೆಯ ಬಲಭಾಗದಲ್ಲಿ ಚಿತ್ರಿಸಿಲಾಗಿದೆ. ದಸರಾ ಮೆರವಣಿಗೆಯ ಸಾಲು ರಸ್ತೆಯ ಮೇಲೆ ಸಾಗುತ್ತಿದೆ ಎಂಬಂತೆ ತೋರಿಸಲು ಮನೆಗಳನ್ನು ಚಿತ್ರಿಸಿ ಆ ಮನೆಗಳ ಮುಂದೆ ಜನರು ನಿಂತು ವಿಕ್ಷೀಸುತ್ತಿದ್ದಾರೆ. ರಸ್ತೆಯ ಎರಡು ಬದಿಯಲ್ಲಿ ಕಾಲುಧಳದ ಸೈನಿಕರು ಸಾಲಾಗಿ ಶಿಸ್ತಿನಿಂದ ಹೊರಟಿದ್ದಾರೆ. ಮೇಲುಸಾಲಿನ ಸೈನಿಕರು ತಿಳಿಕೆಂಪು ವರ್ಣದ ವಸ್ತ್ರಧರಿಸಿದ್ದಾರೆ. ಕೆಳಭಾಗದ ಸೈನಿಕರು ಕೆಂಪು ವರ್ಣದ ಬಟ್ಟೆಯನ್ನು ತೊಟ್ಟಿದ್ದಾರೆ. ಅವರ ಮಧ್ಯದಲ್ಲಿ ಕುದುರೆ ಮೇಲೆ ಕುಳಿತ ಸೈನಿಕರು, ವಿವಿಧ ಬಣ್ಣಗಳ ಉಡುಗೆ ತೊಟ್ಟು ಹಲವು ಬಗೆಯಲ್ಲಿ ಅಲಂಕಾರಗೊಂಡು ವಿವಿಧ ಆಯುಧ ಸಮೇತ ಪರೆಡ್‌ನಲ್ಲಿ ಮುನ್ನಡೆಯುತ್ತಿದ್ದಾರೆ. ಹಾಗೆ ಆನೆಗಳು ಸಹ ಸಾಲಿನಲ್ಲಿ ಸಾಗುತ್ತಿದೆ. ಅದರ ನಿಯಂತ್ರಣವನ್ನು ಮಾವುತ ನಿರ್ವಹಿಸುತ್ತಿದ್ದಾನೆ. ಸೈನಿಕರು ಹಲವು ತರಹದ ಸೈನಿಕರು ಕಂಡುಬರುತ್ತಾರೆ. ಹಸಿರುವರ್ಣದ ವಸ್ತ್ರತೋಟ್ಟಿರುವ ಸೈನಿಕರು. ಕೆಂಪು ವಸ್ತ್ರವನ್ನು ಉಟ್ಟಿರುವ ಸೈನಿಕರು ಮೆರವಣಿಗೆಯಲ್ಲಿ ಹೊರಟಿರುತ್ತಾರೆ. ಹಸಿರು ವರ್ಣದ ಸೈನಿಕರು ಬಂದೂಕು ಹಿಡಿದು ಹೊರಟರೆ, ಕೆಂಪುವರ್ಣದ ವಸ್ತ್ರದ ಸೈನಿಕರು ಖಡ್ಗಹಿಡಿದು ಮುನ್ನಡೆಯುತ್ತಿದ್ದಾರೆ. ಹಾಗೆ ಕೆಂಪು ಮತ್ತು ನೀಲಿವರ್ಣದ ಬಟ್ಟೆಧರಿಸಿದವರ ಸಂಗೀತ ತಂಡವಿದೆ. ಕೆಂಪುಅಂಗಿ ಬಿಳಿಪಂಚೆ ಧರಿಸಿರುವರು ಜನಪದ ತಂಡಕ್ಕೆ ಸೇರಿದ್ದಾರೆ. ಮತ್ತೊಂದು ತಂಡವು ರಾಜತಾಂತ್ರಿಕ ಪರಿವಾರದವರ ತಂಡ ಸಹ ಇಲ್ಲಿಇರುವಂತೆ ಚಿತ್ರಿಸಲಾಗಿದೆ.

ಕೆಳಭಾಗದಲ್ಲಿನ ಆಯತಕಾರದೊಳಗೆ ಚಿಕ್ಕದೊಡ್ಡ ಚೌಕಕಾರದಲ್ಲಿ ಹಲವು ರೀತಿಯ ಚಿತ್ರಗಳನ್ನು ಚಿತ್ರಿಸಿದ್ದಾರೆ. ಅದರಲ್ಲಿ ಹಲವು ರೀತಿಯ ಚದುರಂಗದ ಆಟಗಳ ವಿವಿಧ ಚಿತ್ರಗಳನ್ನು ಚಿತ್ರಿಸಿದ್ದಾರೆ. ಅದರಲ್ಲಿ ಹಾವುಏಣಿ ಆಟದಂತೆ ಬಸವ, ಹಂಸ, ಇತ್ಯಾದಿ ಚಿತ್ರಗಳು ಇದೆ. ಅವುಗಳನ್ನು ಮೈಸೂರುಶೈಲಿಯಲ್ಲಿ ಚಿತ್ರಿಸಿದ್ದಾರೆ. ಹಾವು–ಏಣಿ ಎಂದು ಕರೆಯುವ ಚಿತ್ರಗಳೇ ಪ್ರಧಾನವಾಗಿರುವ ಮೋಕ್ಷಪಟ ಕಳೆದ ಶತಮಾನದಲ್ಲಿ ಹೆಚ್ಚು ಜನಪ್ರಿಯ ಗಳಿಸಿದಂತೆ ಇದೆ. ಇದಕ್ಕೆ ಪರಮಪದ ಸೋಪಾನ ಪಟ ಎಂದೂ ಮತ್ತು ದೇವಿ ಸಾಮುಜ್ಯಂಮುಕ್ತಿ ಚಿತ್ರದ ಪಟದ ಆಟ ಎಂದು ಕರೆಯುತ್ತಾರೆ. ಹಿಂದೂ ಧರ್ಮಸಾರವನ್ನು ಈ ಪಟದ ಮೂಲಕ ನಿರೂಪಿಸುತ್ತ ಜೊತೆ ಜೊತೆಗೆ ಆ ಹಾದಿ ಎಷ್ಟೇಲ್ಲ ದುಸ್ತರ ಎಂಬುದನ್ನು ನಿರೂಪಿಸುವ ಪ್ರಯತ್ನ ಇಲ್ಲಿದೆ. ಇಲ್ಲಿ ಸುಗುಣಗಳು ಏಣಿಗಳಾಗಿ ಸ್ವರ್ಗದತ್ತ ಮೇಲೆರಿಸಿದರೆ ದುರ್ಗುಣಗಳು ಹಾವಾಗಿ ಹೀನ ಜನ್ಮಕ್ಕೆ ಕೆಳಗೆ ತಳ್ಳುತ್ತದೆ. ಎಂಬ ಮಾತಿನಂತೆ ಆಟದಂತಹ ಮನರಂಜನೆಯ ಮೂಲಕ ಧರ್ಮಪ್ರಜ್ಞೆ ಮೂಡಿಸುವ ಪ್ರಯತ್ನ ಈ ಚಿತ್ರಗಳು ಮಾಡುತ್ತಿದ್ದವು. ಜೊತೆಗೆ ಈ ಗೋಡೆಯ ಮೇಲೆ ಅಶ್ವ, ಹಂಸ, ಹಾವು, ಆನೆ ಇತ್ಯಾದಿಗಳ ಚಿತ್ರಗಳು ರಚಿಸಿದ್ದಾರೆ. ಹಲವು ವ್ಯಕ್ತಿಗಳಿರುವ ಚಿತ್ರಗಳು ಮತ್ತು ಸಾಮಾಜಿಕ, ಧಾರ್ಮಿಕ ಚಿತ್ರಗಳನ್ನು ಚಿತ್ರಿಸಲಾಗಿದೆ.

ನೂರಾರು ವರ್ಷಗಳು ಕಳೆದರೂ ಕುಂದದ ವರ್ಣಗಳು ದೇಶಿಯ ಕಲಾವಿದರ ಶ್ರಮದ ಫಲವಾಗಿದೆ, ಸಂಯೋಜನೆಯು ಅವರ ಸಾಮರ್ಥ್ಯವು ಸರಸಾಟಿಯಲ್ಲದ ಕೊಡುಗೆಯಾಗಿದೆ ಮತ್ತು ಭಿತ್ತಿಚಿತ್ರಕಲೆಯನ್ನು ನೋಡುವವರಿಗೆ ಭಕ್ತಿಭಾವ ಮೂಡಿಸುವ ಅವರ ಗುರಿಯನ್ನು ಮೆಚ್ಚುವಂತಹದಾಗಿದೆ. ಇಲ್ಲಿನ ಅರಸರ ಅರಮನೆಗಳಲ್ಲದೆ ಅನೇಕ ದೇವಾಲಯಗಳಲ್ಲಿ ವಿಷ್ಣುವಿನ ಅವತಾರವಾದ ಕೃಷ್ಣಬಾಲಲೀಲೆ, ಭಾಗವತ, ಪುರಾಣಗಳು, ರಾಮಾಯಣ, ಮಹಾಭಾರತ ಮತ್ತು ಶಿವನಿಗೆ ಸಂಬಂಧಪಟ್ಟಂತಹ ಹಾಗೂ ಅರಸರ ಮೆಚ್ಚುಗೆಯ ದೇವರು ಆದಂತಹ ವಿಷ್ಣು ಮತ್ತು ಕೃಷ್ಣನ ಸಂಬಂಧಪಟ್ಟಂತಹ ಭಿತ್ತಿಚಿತ್ರಗಳು ಹೇರಳವಾಗಿ ಅರಮನೆಯ ಆವರಣದ ದೇವಾಲಯಗಳಲ್ಲದೆ ಮೈಸೂರುನಗರದ ಸುತ್ತಮುತ್ತ ಇರುವ ಹಾಗೂ ತಾಲೂಕುಗಳಲ್ಲಿ ದೇವಾಲಯಗಳು ಕಂಡುಬರುತ್ತದೆ.

ಶಿಷ್ಟಪದ ಅಥವಾ ಸಂಪ್ರದಾಯದ ಮೈಸೂರುಶೈಲಿಯ ಭಿತ್ತಿಚಿತ್ರಗಳಾಗಿದೆ. ಒಣಗಾರೆಯ ವಿಧಾನಗಳಲ್ಲಿ ಭಿತ್ತಿಚಿತ್ರಗಳನ್ನು ನಿರ್ಮಿಸಿದ್ದಾರೆ. ಅರಮನೆಯ ಕೋಟೆಯೊಳಗಿನ ದೇವಾಲಯವಾದ ಪ್ರಸನ್ನ ಕೃಷ್ಣದೇವಾಲಯ, ಶ್ವೇತವಾರಹಸ್ವಾಮಿ, ಅಂಬುಜವಲ್ಲಿ ಲಕ್ಷ್ಮೀದೇವಿ ದೇವಾಲಯ ಮತ್ತು ಕೋಟೆಯ ಹೊರಭಾಗದಲ್ಲಿರುವ ಪ್ರಸನ್ನವೆಂಕಟರಣಸ್ವಾಮಿ ದೇವಾಲಯ, ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ ಅಲ್ಲದೆ ಮೈಸೂರಿನ ಸುತ್ತಮುತ್ತ ಇರುವ ದೇವಾಲಯಗಳಾದ ಅಗಸ್ತೇಶ್ವರ ದೇವಾಲಯ ಟಿ.ನರಸಿಪುರ ಮುಡುಕುತೊರೆಯ ಮಲ್ಲಿಕಾರ್ಜುನ, ಸಾಲಿಗ್ರಾಮದ ಪಾರ್ಶ್ವನಾಥ ಬಸದಿ, ಚುಂಚನಕಟ್ಟೆಯ ರಾಮದೇವಾಲಯ, ಬೆಟ್ಟದಪುರದ ಸಿಡ್ಲುಮಲ್ಲಿಕಾರ್ಜನ ದೇವಾಲಯಗಳಲ್ಲಿ ಅರಮನೆಆಶ್ರಿತ ಕಲಾವಿದರು ಭಿತ್ತಿಚಿತ್ರರಚನೆ ಮಾಡಿರುತ್ತಾರೆ. ಜಾವಗಲ್ಲು ನರಸಿಂಹಯ್ಯ, ನಗುವಿನಹಳ್ಳಿ ನಾರಾಯಣಪ್ಪ, ಮಲ್ಲಯ್ಯ, ಮಾಧಯ್ಯ, ವೀರಣ್ಣ, ಯಲ್ಲಯ್ಯ, ಸುಂದರಯ್ಯ, ವೀರಯ್ಯ, ಅಳಸಿಂಗಯ್ಯ, ದುರ್ಗದ ಕೃಷ್ಣಪ್ಪ, ನೆಲಮಂಗಲದ ರಂಗಪ್ಪ, ಶಿಕಾರಿಪುರದ ತಿಪ್ಪಾಜಿ, ಗುಡಿಕಾರ ತಿಪ್ಪಣ, ತಂಜಾವೂರಿನ ಕೊಂಡಯ್ಯ, ವೆಂಕಟಸುಬ್ಬು ಇವರಲ್ಲಾ ಭಿತ್ತಿಚಿತ್ರಕಲೆಯ ಪ್ರಮುಖ ಕಲಾವಿದರುಗಳು ೧೭ನೇ ಶತಮಾನ ನಂತರದ ಕಾಲಮಾನದಲ್ಲಿ ಎಲ್ಲಾಕಡೆ ಭಿತ್ತಿಚಿತ್ರ ರಚನೆಯಾಗಿರುತ್ತದೆ. ಹೆಮ್ಮೆಯ ಸಂಗತಿಯೆಂದರೆ ಕಂಪನಿಶೈಲಿಯ ಪ್ರಭಾವ ಬ್ರಿಟಿಷರ ಹಿಡಿತದಲ್ಲಿದ್ದರೂ ದೇಶಿಯತೆಗೆ ಹೆಚ್ಚು ಪ್ರೋತ್ಸಾಹ ನೀಡಿದರು ಮೈಸೂರು ಅರಸರು.

೩.೩.೪. ಪ್ರಸನ್ನಕೃಷ್ಣಸ್ವಾಮಿ ದೇವಾಲಯ

ಅರಮನೆ ಕೋಟೆಯ ಆವರಣದಲ್ಲಿರುವ ದೇವಾಲಯಗಳ ಭಿತ್ತಿಚಿತ್ರಗಳಲ್ಲಿ ಮೊದಲನೆದಾಗಿ ೧೮ನೇ ಶತಮಾನದಲ್ಲಿ ಮುಮ್ಮಡಿಕೃಷ್ಣರಾಜ ಒಡೆಯರ ಪ್ರಿಯಾ ದೇವರಾದ ಪ್ರಸನ್ನಕೃಷ್ಣದೇವರಿಗೆ ಮತ್ತು ಅವರ ತಾಯಿಯ ಆಸೆಯಂತೆ ಆ ದೇವರಿಗೆ ಒಂದು ದೇವಾಲಯ ಸ್ಥಾಪಿಸಿದರು. ಆ ದೇವಾಲಯದ ನವರಂಗದ ಸುತ್ತಲೂ ಅದ್ಭುತವಾದಂತಹ ಭಾಗವತದ ಕೃಷ್ಣನ ಬಾಲಲೀಲೆಗೆ ಸಂಬಂಧ ಪಟ್ಟಂತಹ ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ. ನವರಂಗದ ಸುತ್ತಲೂ ಸಾಲಾಗಿ ಉದ್ದಪಟ್ಟಿಗಳಲ್ಲಿ ಹಾಗೂ ಕಂಬಗಳ ಮೇಲೆ ಚಿತ್ರಿಸಿದ್ದಾರೆ. ಅದು ಹಳದಿ ಹಿನ್ನೆಲೆಯಿಂದ ಕೂಡಿದಲ್ಲದೆ ರೇಖೆಯು ಲಾಲಿತ್ಯ ಪೂರ್ಣದಿಂದ ಉತ್ತಮವಾಗಿದ್ದು, ಕಥೆಯು ಶೌಕಮುನಿಯಿಂದ ಪಿರಿಮಿಡ್ ರಾಜನ್ನು ಕೃಷ್ಣನ ಜನನ ಕಥೆಯನ್ನು ಕೇಳುತ್ತಿರುವುದರಿಂದ ಭಿತ್ತಿಚಿತ್ರಗಳು ಪ್ರಾರಂಭವಾಗುತ್ತದೆ. ವಿಷ್ಣುವನ್ನು ದೇವತೆಗಳು ಪಾರ್ಥಿಸುತ್ತಿರುವಚಿತ್ರ, ದೇವಕಿ ಮತ್ತು ವಸುದೇವನ್ನು ಕಂಸನು ಸಂತೋಷದಿಂದ ಕರೆದು ಹೋಗುತ್ತಿರುವ ಚಿತ್ರ, ನಾರಾಯಣನು ಪ್ರತ್ಯಕ್ಷವಾಗಿರುವ ಚಿತ್ರ, ಶಂಕಸುರವಧೆ, ವರ್ಕಾಸುರ ಸಂಹಾರ, ಮುಳಾರ್ಜುನ ಭಂಜನಚಿತ್ರ, ವೃಷಾಭಸೂರ ಸಂಹಾರ, ಪ್ರಲಂಭಾಸುರವಧೆ, ಜಲಕ್ರೀಡೆಚಿತ್ರ, ಗೋವರ್ಧನ ಪೂಜೆಯ ಚಿತ್ರ, ಗೋವಿಂದ ಪಟ್ಟಭೀಷೆಕದ ಚಿತ್ರ ಗುರುವಿನ ಬಳಿ ವಿದ್ಯಾಭ್ಯಾಸಾಂಗಚಿತ್ರ, ಇಲ್ಲಿನ ಚಿತ್ರಗಳಲ್ಲಿ ಅನೇಕ ರಾಕ್ಷಸರನ್ನು ಸಂಹಾರಮಾಡುವ ದೃಶ್ಯಗಳು, ರುಕ್ಷ್ಮಿಣಿಯ ಮದುವೆ, ಕಂಸಸಂಹಾರ, ಮಧುರೆಗೆ ಹೋಗುವರೆಗಿನ ಕಥೆಯ ಭಿತ್ತಿಚಿತ್ರಗಳು ಇಲ್ಲಿ ಕಂಡುಬರುತ್ತದೆ. ಹೆಚ್ಚು ರೇಖೆಗಳಿಂದಲೇ ಕೊಡಿ ಚಿಕ್ಕ ಚಿಕ್ಕ ಚಿತ್ರಗಳಾದರು ಸುಂದರವಾಗಿ ಮನಮೋಹಕ ಭಕ್ತಿ ಸಾರುವ ಚಿತ್ರಗಳಾಗಿದೆ. ವರ್ಣಸಂಯೋಜನೆ ಹಿತಮಿತವಾಗಿದ್ದು. ಹಿನ್ನೆಲೆಯ ವರ್ಣಸೇರಿಸಿ ಆಕೃತಿಗಳನ್ನು ರಚಿಸಿದ್ದಾರೆ.

೩.೪.೧, ಶೌಕಮುನಿ ಮತ್ತು ಶಿಷ್ಯರು ಪರಿಪಿಕ್ ರಾಜನಿಗೆ ಭಾಗವತ ಕಥೆ ಹೇಳುತ್ತಿರುವ ಚಿತ್ರ

ಶೌಕಮಿನಿ ಮಹರ್ಷಿ ಮತ್ತು ಶಿಷ್ಯರು ಜೊತೆಯಲ್ಲಿ ಪರಿಪಿಕ್ ರಾಜನಿಗೆ ಭಾಗವತ ಕಥೆ ಹೇಳುತ್ತಿರುವ ಚಿತ್ರವೇ ಮೊದಲನೆದಾಗಿರುತ್ತದೆ. ಈ ದೇವಾಲಯದ ನವರಂಗದಲ್ಲಿ ಈ ಚಿತ್ರವು ಎಡಭಾಗದಲ್ಲಿ ಸಾಲಾಗಿ ಚಿತ್ರಿಸಿರುತ್ತಾರೆ. ಚಿತ್ರದಲ್ಲಿ ಸೂತಪುರಾಣಿಕರು ತಮ್ಮ ಶಿಷ್ಯರಿಗೆ ಕೃಷ್ಣನ ಬಾಲಲೀಲೆಯನ್ನು ಹೇಳುತ್ತಿದ್ದಾರೆ. ಒಂದು ಮರದ ಕೆಳಗೆ ಪುರಾಣಿಕರು ಮತ್ತು ಮೂರು ಶಿಷ್ಯರು ಕುಳಿತು ಭಕ್ತಿವಿನಯದಿಂದ ಕಥೆಯನ್ನು ಕೇಳುತ್ತಿದ್ದಾರೆ. ಗುರುಶಿಷ್ಯರು ಪಂಚೆ ಮತ್ತು ಶಾಲನ್ನು ಮಾತ್ರ ಕಲಾವಿದ ತೋರಿಸಿದ್ದು. ಮೈವರ್ಣವು ತಿಳಿವರ್ಣದಿಂದ ತೋರಿಸಿ, ವಸ್ತ್ರವನ್ನು ಬಿಳಿ, ಹಳದಿ ಹಸಿರು ವರ್ಣಬಣ್ಣದಿಂದ ಲೇಪನ ಮಾಡಿದ್ದಾರೆ. ಆಗಿನ ಕಾಲದ ಗುರುಕುಲಪದ್ಧತಿಯ ಇದು ಪ್ರತಿನಿಧಿಸುತ್ತದೆ. ರಾಜಗುರುಗಳು ಕೊರಳಿಗೆ ಒಂದು ಖುದ್ರಾಕ್ಷಿ ಮಾಲೆಯನ್ನು ಹಾಕಿರುತ್ತಾರೆ. ಕೈತೋಳುಗಳಿಗೆ ಸಾಧಾರಣವಾದ ಆಭರವಣವನ್ನು ಕಲಾವಿದನು ತೋರಿಸಿರುತ್ತಾನೆ. ಹಿನ್ನೆಲೆಯ ವರ್ಣವು ಹಳದಿವರ್ಣವೇ ಮುಖ್ಯವಾಗಿ ಕಾಣುತ್ತದೆ.

ಇದರ ಮುಂದಿನ ಚಿತ್ರವಾದ ಶೌಣಕಾರಿ ಋಷಿ ಮತ್ತು ಪರಿಪಿಕ್ ರಾಜನ ಚಿತ್ರವು ಸಹ ಗಾಢಹಳದಿ ವರ್ಣವಿದ್ದು ರಾಜರ ಆಸ್ಥಾನದಲ್ಲಿ ಶೌಣಕಾರಿ ಋಷಿಯು ರಾಜನಿಗೆ ಕಥೆಹೇಳುತ್ತಿದ್ದಾರೆ. ಈ ಚಿತ್ರದಲ್ಲಿ ರಾಜನು ಶ್ರದ್ಧೆಭಕ್ತಿಯಿಂದ ಕೈಮುಗಿದು ಸಿಂಹಾಸನದ ಮೇಲೆ ಕುಳಿತು ಭಕ್ತಿಯಿಂದ ಆಲಿಸುತ್ತಿರುವಂತೆ ರಚನೆಮಾಡಿರುತ್ತಾರೆ ಕಲಾವಿದರು. ಅಲಂಕಾರಿಕ ಕುರ್ಚಿ ಮೇಲೆ ಋಷಿಮುನಿಗಳು ಸಹ ಕುಳಿತು ಕಥೆ ಹೇಳುತ್ತಿದ್ದಾರೆ. ರಾಜನ ಹಿಂಬದಿಯಲ್ಲಿ ಒಬ್ಬ ಸೇವಕನು ಗಾಳಿಬೀಸುತ್ತ ನಿಂತಿರುತ್ತಾನೆ. ಈ ಮೂರು ಆಕೃತಿಗಳು ಅರಮನೆಯ ಒಳಗೆ ಇರುವಂತೆ ಚಿತ್ರಿಸಲಾಗಿದೆ. ಶೌಣಕಾರಿಯ ಋಷಿಯ ಮೈವರ್ಣವು ಹಸಿರು ಹಾಗಿದ್ದು ಶಿರವು ಮಾತ್ರ ಗಿಣಿಯ ಮುಖಹೊಂದಿದ್ದು ದೇಹವು ಮಾತ್ರ ಮನುಷ್ಯ

ಆಕೃತಿಯದಾಗಿರುತ್ತದೆ. ಜೊತೆಗೆ ಆಭರಣಗಳನ್ನು ತೊಟ್ಟಿದ್ದು, ಅರಸ ಮತ್ತು ಸೇವಕರು ಸಹ ಅವರಿಗೆ ತಕ್ಕಂತೆ ಆಭರಣವನ್ನು ಕಲಾವಿದರು ಹಾಕಿರುವಂತೆ ರಚಿಸಿದ್ದಾರೆ. ಮುನಿಗಳು ಮಾತ್ರ ಪಂಚೆ ಮತ್ತು ಶಾಲುನ್ನು ಹೊಂದಿರುತ್ತಾರೆ. ಅರಸರ ಮತ್ತು ಸೇವಕನ್ನು ಪೂರ್ಣಪ್ರಮಾಣದ ದೇಹ ಮುಚ್ಚಿರುವ ವಸ್ತ್ರವನ್ನು ಧರಿಸಿರುತ್ತಾರೆ. ತಲೆಗೆ ಪೇಟವನ್ನು ಧರಿಸಿದ್ದಾರೆ. ಕಪ್ಪುರೇಖೆಯು ಪ್ರಧಾನವಾಗಿ ಕಂಡರು ಅವು ಸಣ್ಣಗೆರೆಗಳು ತುಂಬಸರಳವಾಗಿ ಇದೆ. ಈ ಚಿತ್ರ ಎರಡು ಅಡಿ ಅಗಲ, ಐದು ಅಡಿ ಉದ್ದದ ಅಳತೆಯಲ್ಲಿ ಚಿತ್ರಿಸಿದ್ದಾರೆ.

೩.೪.೨. ಪ್ರಲಂಬಾಸುರವಧೆ

ಈ ಚಿತ್ರದಲ್ಲಿ ಕೃಷ್ಣನು ರಕ್ಷಾಸರ ಸಂಹಾರ ಮಾಡುತ್ತಿರುವ ಚಿತ್ರವಾಗಿದೆ. ಚಿತ್ರವು ಎರಡು ಅಡಿ ಎತ್ತರ, ಎರಡುವರೆ ಅಡಿಉದ್ದ ಅಳತೆಯಲ್ಲಿ ಚಿತ್ರಿಸಿದ್ದಾರೆ. ಬಾಲಕರಾಗಿ ಕೃಷ್ಣ ಮತ್ತು ಬಲರಾಮ ಆಟವಾಡುವಾಗ ಬಲರಾಮನ್ನು ಹೊತ್ತುಕೊಂಡು ಗಾಳಿಯಲ್ಲಿ ಹಾರಾಡುತ್ತಿದ್ದಾನೆ ಕೃಷ್ಣನು ಹಾಗೂ ಆತನ ಸಹಪಾಠಿಗಳು ಆಶ್ಚರ್ಯದಿಂದ ನೋಡುತ್ತಿದ್ದಾರೆ. ಈ ದೃಶ್ಯವನ್ನು ದೇವಾಲಯದ ಎಡಭಾಗದ ಗೋಡೆಯ ಮೇಲೆ ಚಿತ್ರಿಸಿದ್ದಾರೆ. ರಾಕ್ಷನ್ನು ದೊಡ್ಡದಾಗಿರುವಂತೆ ಸಂಯೋಜಿಸಿ ಗಾಢಕೆಂಪುವರ್ಣದಿಂದ ತೋರಿಸಿದ್ದಾರೆ. ಬಲಶಾಲಿಯಾದ ಅವನ ದೇಹ, ಕೊರೆಹಲ್ಲು, ಸಾಧರಣ ಆಭರಣಗಳಿಂದ ಅಲಂಕಾರವಾಗಿರುವಂತೆ ಚಿತ್ರಿಸಿದ್ದಾರೆ. ಹಣೆಯಲ್ಲಿ ವಿಭೂತಿಪಟೆಯು ಧರಿಸಿದ್ದಾರೆ. ನಂತರದಲ್ಲಿ ಬಲರಾಮ ಮತ್ತು ಕೃಷ್ಣನ್ನು ಚಿತ್ರಿಸಿರುತ್ತಾರೆ. ಕೆಲವರನ್ನು ಬರಿ ಲಂಗೋಟಿ ತೋಟ್ಟಿರುತ್ತಾರೆ. ಕೊರಳಿಗೆ ಸರ ಕಾಲುಕೈಗಳಿಗೆ ಕಡಗ ಹಾಕಿರುತ್ತಾರೆ. ಕೃಷ್ಣ ಬಲರಾಮರು ಪಂಚೆ ಮತ್ತು ಶಾಲನ್ನು ಉಟ್ಟಿರುತ್ತಾರೆ. ಇಬ್ಬರ ಮೈವರ್ಣವು ಬೇರೆ ಭೇರೆಯಾಗಿದೆ. ಹಳದಿ, ತಿಳಿಕೆಂಪು ಹಾಗಿರುತ್ತದೆ. ಮಿಕ್ಕವರ ಮೈಬಣ್ಣ ಬಿಳಿ, ಹಳದಿ, ಗಾಢಹಸಿರು ಬಣ್ಣದಿಂದ ತೋರಿಸಿದ್ದಾರೆ. ಹಿಂಬಂದಿಯ ವರ್ಣ ಹಳದಿಯಾಗಿ ಕಂಡುಬರುತ್ತದೆ. ಚಿಕ್ಕ ಸಂಯೋಜನೆಯಾದರು ವಿಶೇಷವಾಗಿ ಪ್ರತಿ ಆಕೃತಿಯಲ್ಲಿ ಈ ಸಂದರ್ಭತಕ್ಕಂತೆ ಭಾವನೆಗಳಾದ ಭಯ, ಆತಂಕ ಬಾಲಕರಲ್ಲಿ ತುಂಬಿರುವಂತೆ ಚಿತ್ರಿಸಿದ್ದಾರೆ. ಆದರೆ ಕೃಷ್ಣ ಮತ್ತು ಬಲರಾಮನ ಮುಖದಲ್ಲಿ ಧೈರ್ಯ ಇರುವಂತೆ ಕಲಾವಿದನ್ನು ಚಿತ್ರಿಸಿದ್ದಾನೆ. ಈ ಚಿತ್ರಗಳಲ್ಲಿ ರೇಖೆಯು ಪ್ರಧಾನ ನಿರ್ಣಯವಾಗಿರುತ್ತದೆ. ಕಪ್ಪು ರೇಖೆಯು ಚಲನಭರಿತವಾಗಿ ರೇಖಿಸಿದ್ದಾರೆ.

೩.೪.೩, ಗೋವರ್ಧನಧಾರ ಚಿತ್ರ

ಈ ಭಿತ್ತಿಚಿತ್ರವು ಎರಡು ಅಡಿ ಎತ್ತರ, ಎರಡು ಅಡಿ ಉದ್ದದ ಚೌಕಕಾರದೊಳಗೆ ಸಂಯೋಜಿಸಿದ್ದಾರೆ. ವಿಶೇಷ ಆಕರ್ಷಣೆ ಹೊಂದಿರುವ ಚಿತ್ರವಾಗಿದೆ. ಎಲ್ಲರು ಇಷ್ಟಪಡುವಂತಹ ಚಿತ್ರಇದಾಗಿರುತ್ತದೆ. ಬ್ರಹ್ಮನಿಗೆ ಬುದ್ಧಿಕಲಿಸಿದ ಹೊಸ ಪೂಜಾವಿಧಾನಕ್ಕೆ ದಾರಿಮಾಡಿದನ್ನು ಶ್ರೀಕೃಷ್ಣ. ತನ್ನ ಎಡಕೈ ಕಿರುಬೆರಳಿನಿಂದ ಬೆಟ್ಟವನ್ನು ಎತ್ತಿದ್ದಾನೆ. ತನ್ನ ಸಂಗಡಿಗರು, ಭಕ್ತರು, ಗೋವುಗಳ ರಕ್ಷಣೆಗೆ ಬೆಟ್ಟವನ್ನು ಎತ್ತಿಹಿಡಿದ್ದಾನೆ. ಬೆಟ್ಟ ಮತ್ತು ಕೃಷ್ಣನ್ನು ಸಂಯೋಜನೆಯಲ್ಲಿ ದೊಡ್ಡವರಾಗಿ ಚಿತ್ರಿಸಿದ್ದಾನೆ ಕಲಾವಿದರು, ಉಳಿದವರನ್ನು ಚಿಕ್ಕದಾಗಿ ಸಂಯೋಜನೆ ಮಾಡಿರುತ್ತಾರೆ. ಹಲವರ ಮೈವರ್ಣವು ಗಾಢಹಸಿರು, ಬಿಳಿ, ಕೇಸರಿ, ತೆಳುಕೆಂಪು ಬಣ್ಣದಿಂದ ತೋರಿಸಿ ಕೃಷ್ಣನ್ನು ಬಿಳಿವರ್ಣ ಲೇಪನಮಾಡಿರುತ್ತಾರೆ. ಗೋವರ್ಧನಧಾರನಾದ ಕೃಷ್ಣನು ಅಲಂಕಾರ ಭೂಷಿತನಾಗಿ ತನ್ನ ಬಲಕೈಯಲ್ಲಿ ಕೊಳಲನ್ನು ಹಿಡಿದು ಸಂಗಡಿಗರಿಗೆ ಆಭಯವನ್ನು ನೀಡುತ್ತಿದ್ದಾನೆ. ಬೆಟ್ಟವನ್ನು ಬಿಳಿವರ್ಣದಿಂದ ರಚಿಸಿ, ಹಿಂಬದಿವರ್ಣವು ಸಾಧರಣ ಹಳದಿ ಬಣ್ಣವೆ ಮುಖ್ಯವಾಗಿದೆ. ತಕ್ಷಣ ಈ ಚಿತ್ರವನ್ನು ನೋಡಿದರೆ ಬಾಲಕೃಷ್ಣನು ಬೆಟ್ಟವನ್ನು ಎತ್ತಿ ನೃತ್ಯಮಾಡುತ್ತಿರುವಾಗೆ ಕಂಡುಬರುತ್ತದೆ. ಸಂಗಡಿಗರು, ಗೋವುಪಾಲಕರು, ಭಕ್ತರು ಎಲ್ಲರು ಕೈಮುಗಿದು ಕೃಷ್ಣನು ಭಕ್ತಿಯಿಂದ ಕೈಮುಗಿದುಕೊಂಡು ನಿಂತಿರುತ್ತಾನೆ. ಜೊತೆಗೆ

ಗೋವುಗಳು ಸಹ ಭಕ್ತಿಯಿಂದ ಕೃಷ್ಣನನ್ನು ನೋಡುತ್ತಿವೆ ಆಶ್ಚರ್ಯದಿಂದ ಎಂದು ನಮಗೆ ತೋರುವಂತೆ ಕಲಾವಿದರು ಚಿತ್ರಿಸಿದ್ದಾರೆ. ಈ ಚಿತ್ರವನ್ನು ಗೋವರ್ಧನ ಪೂಜೆ ಎಂದು ಸಹ ಕರೆಯುತ್ತಾರೆ.

೩.೪.೪, ಯಮಳಾರ್ಜುನ ಭಂಜನ ಚಿತ್ರ

ಇದು ಒಂದು ಶಾಪವಿಮೋಚನೆ ಮಾಡುವ ಸನ್ನಿವೇಶದ ಚಿತ್ರವಾಗಿದೆ. ಕೃಷ್ಣನು ಶಿಶುವಾಗಿದಾಗಲೇ ತನ್ನ ಶಕ್ತಿಯಿಂದಲೇ ಶಾಪದಿಂದ ಮರವಾಗಿದ ಯಮಳಾರ್ಜುನನಿಗೆ ಶಾಪದಿಂದ ಮುಕ್ತಿ ದೊರಕಿಸುವ ಈ ಚಿತ್ರದಲ್ಲಿ ಕೃಷ್ಣನು ಬೆಣ್ಣೆಯನ್ನು ಕೈಯಲ್ಲಿ ಹಿಡಿದು ಕೊಂಡಿರುವಂತೆ ಕಲಾವಿದನ್ನು ಚಿತ್ರಿಸಿದ್ದಾನೆ. ಅವನ ದೇಹವು ಸಹ ಬೆಣ್ಣೆಯಂತೆ ಮುದ್ದೆಯಂತೆ ಕಂಡುಬರುತ್ತದೆ. ಆಭರಣದಿಂದ ಅಲಂಕೃತಗೊಂಡು ತಲೆಗೆ ಜುಟುಕಟ್ಟಿ ನವಿಲುಗರಿಯನ್ನು ಸಿಗಿಸಿಕೊಂಡಿರುತ್ತಾನೆ. ಪಕ್ಕದಲ್ಲಿ ಯಶೋಧಯು ಬೆಣ್ಣೆಯನ್ನು ತಿನ್ನಿಸಿಲು ದಾವಿಸಿ ಕೃಷ್ಣನ ಎಡಭಾಗದಲ್ಲಿ ಬರುತ್ತಿದ್ದಾಳೆ. ಮೈ ಮೇಲೆ ಸಾಧಾರಣವಾದ ಆಭರಣಮಾತ್ರ ಇರುತ್ತದೆ. ಬಲಭಾಗದಲ್ಲಿ ಶಾಪವಿಮೋಚನೆಗೊಂಡ ಭಕ್ತನು ಕೈಮುಗಿದು ಗೌರವಸೂಚಿಸುತ್ತಿದ್ದಾನೆ. ಹಿಂಬದಿಯಲ್ಲಿ ಪುಷ್ಪಕ ವಿಮಾನದಲ್ಲಿ ಗಂದರ್ವರು ಸಹ ಕೈಮುಗಿದು ಭಕ್ತಿ ಪ್ರದರ್ಶನ ಮಾಡುತ್ತಿದ್ದಾರೆ. ಯಮಳಾರ್ಜುನ ಹೋಗಲು ಇನ್ನೊಂದು ಪುಷ್ಪಕವಿಮಾನವು ಇರುವಂತೆ ಚಿತ್ರಿಸಿದ್ದಾರೆ. ಹಿನ್ನಲೆಯು ಹಳದಿ ಇದ್ದರು ಸ್ವಲ್ಪಭಾಗದಲ್ಲಿ ಆಕಾಶವನ್ನು ತೋರಿಸಿದ್ದಾರೆ. ಮರವನ್ನು ಚೆನ್ನಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಆ ಮರದಲ್ಲಿ ಹೂವುಗಳು ತುಂಬಿ ನಳನಳಿಸುತ್ತಿದೆ. ಮಗುವನ್ನು ಕಟ್ಟಿಹಾಕಿದ್ದರು, ಅದನ್ನು ಎಳೆದುಕೊಂಡು ಬಂದಿರುವುದನ್ನು ನೋಡಿ ತಾಯಿಯ ಆಶ್ಚರ್ಯವನ್ನು ಸಹ ಮುಖದಲ್ಲಿ ಕಲಾವಿದರು ತೋರಿಸಿದ್ದಾರೆ. ಈ ಚಿತ್ರವು ಒಂದು ಶಾಪವಿಮೋಚನೆ ಮಾಡುವ ಕಥೆ ಆಧಾರಿತ ಸೋಗಸಾದ ಭಿತ್ತಿಚಿತ್ರವಾಗಿರುತ್ತದೆ. ಉತ್ತಮ ಸಂಯೋಜನೆ ಹೊಂದಿದ್ದೆ. ಈ ಚಿತ್ರದಲ್ಲಿ ರೇಖೆಯೇ ಚಿತ್ರದ ಜೀವಾಳವಾಗಿದೆ. ಕಪ್ಪುರೇಖೆಯು ಲಾಲಿತ್ಯ ಪೂರ್ಣದಿಂದ ಕೂಡಿದು ಚಿತ್ರವನ್ನು ಕಲಾವಿದರು ಅಚ್ಚುಕಟ್ಟಾಗಿ ರಚನೆ ಮಾಡಿರುತ್ತಾರೆ.

೩.೪.೫, ನವರಂಗದ ಎಡಭಾಗದಲ್ಲಿರುವ ಭಿತ್ತಿಚಿತ್ರ

ಈ ಭಾಗದಲ್ಲಿಯೂ ಭಾಗವತ ಕಥೆಗೆ ಸೇರಿದ ಚಿತ್ರದಲ್ಲಿ **ಕಂಸನವಧೆ ಮತ್ತು ಮಲ್ಲಯುದ್ದದ** ಚಿತ್ರವು ದೊಡ್ಡದಾಗಿ ಮತ್ತು ಈ ದೇವಾಲಯದಲ್ಲಿಯೇ ಇದು ತುಂಬ ದೊಡ್ಡಅಳತೆಯ ಭಿತ್ತಿಚಿತ್ರವಾಗಿದೆ. ಮತ್ತೇ ಈ ಭಾಗದಲ್ಲಿ ರುಕ್ಮೀಣಿ ಮದುವೆಯವರೆಗೆ ಚಿತ್ರಗಳನ್ನು ಬಿಡಿಸಿರುವುದು ಕಾಣುತ್ತದೆ. ಅದರಲ್ಲಿ ಕಂಸನವಧೆ ಚಿತ್ರವು ಒಂದು. ಈ ಚಿತ್ರದಲ್ಲಿ ಕೃಷ್ಣ ಬಲರಾಮರು ಸೇರಿ ಮೊದಲು ಕುಸ್ತಿಪಂದ್ಯವನ್ನು ಗೆದ್ದು ನಂತರ ಕೃಷ್ಣನು ಕಂಸನ್ನು ಅರಮನೆಯಲ್ಲಿ ಕೊಲ್ಲುತ್ತಿರುವ ಚಿತ್ರಸಂಯೋಜನೆಯದಾಗಿದೆ. ಅರಮನೆಯ ಸಂಯೋಜನೆಯ ಮೊಘಲ್‌ಚಿತ್ರಕಲೆಯ ನೆರಳು ಇದರ ಮೇಲೆ ಹಾಗಿರುತ್ತದೆ. ವಿಶೇಷವಾಗಿ ಯಥಾದರ್ಶನದಲ್ಲಿ ಅರಮನೆಯನ್ನು ಚಿತ್ರಿಸಿದ್ದಾರೆ. ಕೃಷ್ಣ ಬಲರಾಮರು ಜಟಿಗಳ ಹತ್ತಿರ ಮಲಯುದ್ಧ ಮಾಡಿದ ದೃಶ್ಯದಲ್ಲಿ ಕಾದಾಡುತ್ತಿರುವ ಚಿತ್ರದಲ್ಲಿ ಅನೇಕ ಮಲ್ಲರ ಯುದ್ದ, ಮದವೇರಿದ ಆನೆಯನ್ನು ಸಹ ಪಳಗಿಸುತ್ತಿರುವ ದೃಶ್ಯಸಂಯೋಜನೆಯನ್ನು ಮಾಡಿದ್ದಾರೆ. ಅದರಲ್ಲಿ ಆನೆಯನ್ನು ನೀಲಿವರ್ಣದಿಂದ ತೋರಿಸಿ ಜಟ್ಟಿಗಳನ್ನು ಕಂದು, ಗಾಢಕೆಂಪುವರ್ಣದಿಂದ ರಚಿಸಿದ್ದಾರೆ. ಹಲವು ಆಕೃತಿಗಳನ್ನು ಚಿತ್ರಿಸಿದ್ದಾರೆ. ಆ ನಂತರದ ಚಿತ್ರವಾದ ಕಂಸವನವಧೆ ಚಿತ್ರವನ್ನು ರಚಿಸಿದ್ದಾರೆ. ಆದೆ ಚಿತ್ರದೊಳಗೆ ಕೃಷ್ಣನು ಬಾಲಕನಾಗಿದ್ದರೂ ಬಲಶಾಲಿಯಾದ ಮಾವ, ಕಂಸವನ್ನು ವಧೆಮಾಡುತ್ತಿರುವ ದೃಶ್ಯವನ್ನು ಕಂಸನ ಆಶ್ರಯ ರಾಜರು, ಹೆಂಗಳೆಯರು ಭಯದಿಂದ ನೋಡುತ್ತಾ ಕೈಮುಗಿದುಕೊಂಡು ಇರುವಂತೆ ಕಲಾವಿದನು ರಚಿಸಿದ್ದಾನೆ. ಮೂರನೆಯ ಅಂತಸ್ತಿನಲ್ಲಿ ಹೆಂಗಳೆಯರು ಇರುತ್ತಾರೆ. ಎರಡನೆಯ ಅಂತಸ್ತಿನಲ್ಲಿ ಕಂಸನ್ನು ವಧೆಮಾಡುತ್ತಿರುವ ಚಿತ್ರ ಸಂಯೋಜಿಸಿ ವರ್ಣ ಮತ್ತು ಕಪ್ಪು ರೇಖೆಗಳಿಂದ ಆಕೃತಿಗಳ ನಿರ್ಮಾಣ ಮಾಡಿರುತ್ತಾರೆ. ಮೊದಲನೆಯ ಕೆಳಹಂತಸ್ತಿನಲ್ಲಿ ಸೇವಕರು ಕತ್ತಿಹಿಡಿದು ನೀಲಿ

ಕೆಂಪುಪ್ಯಾಂಟ್ ಮತ್ತು ಅಂಗಿತೊಟ್ಟರುತ್ತಾರೆ. ಅಲಂಕಾರಿಕ ಕಂಬಗಳು ಅರಮನೆಯ ಚಿತ್ರಕ್ಕೆ ಸೌಂದರ್ಯ ತುಂಬಿದೆ. ಮೇಲುಹಂತಸ್ತಿಗೆ ಹೋಗಲು ಎರಡುಕಡೆ ಮೆಟ್ಟಲುಗಳು ಇರುತ್ತದೆ. ಕೃಷ್ಣನ್ನು ಬಿಳಿವರ್ಣದಿಂದ ತೋರಿಸಿ, ಕಂಸನ್ನು ಕಂದುವರ್ಣದಿಂದ ಚಿತ್ರಿಸಿದ್ದಾರೆ. ಹಿಡಿಚಿತ್ರವು ಅತ್ಯಂತ ಸುಂಧರವಾಗಿದೆ. ಇಲ್ಲಿಯೂ ಹಳದಿವರ್ಣವೇ ವಿಶೇಷವಾಗಿದೆ.

೩.೫. ಶ್ವೇತವಾರಹಸ್ವಾಮಿ ದೇವಾಲಯ ಮತ್ತು ಅಂಬುಜವಲ್ಲಿ ದೇವಾಲಯದ ಭಿತ್ತಿಚಿತ್ರಗಳು

೧೮ನೇ ಶತಮಾನದಲ್ಲಿ ದಿವಾನ್ ಪೂರ್ಣಯ್ಯ ಅವರ ಆಸಕ್ತಿಯಿಂದ ನಿರ್ಮಿಸಿದ್ದರು. ಅರಮನೆಯ ಕೋಟೆಯ ಒಳಗೆ ಇರುವ ಈ ದೇವಾಲಯು ಶ್ವೇತವಾರಹ ಹಾಗೂ ಅಂಬುಜವಲ್ಲಿ ದೇವಿಯ ದೇವಾಲಯದ ಭಿತ್ತಿಚಿತ್ರ ಕಲೆಯು ಹಿಂದಿನ ದೇವಾಲಯದ ಕಥಾವಸ್ತುವೇ ಇದ್ದರೂ ರಾಮಾಯಣದ ವಸ್ತುವಿಷಯ ಸಹ ಈ ದೇವಾಲಯಗಳಲ್ಲಿ ಚಿತ್ರಿಸಿದ್ದಾರೆ. ಎಡಭಾಗದಲ್ಲಿ ಕೃಷ್ಣಬಾಲಲೀಲೆಗಳು ಕೃಷ್ಣನಕಥೆಗೆ ಸೇರಿದ ಚಿತ್ರಗಳು ಸೂತಪುರಾಣಿಕರ ಚಿತ್ರ, ಶೌಣಕಾರಿ ಮಹಾರ್ಷಿಯು ಪರಿಪಿಕ್ ರಾಜನಿಗೆ ಕಥೆಹೇಳುತ್ತಿರುವ ಚಿತ್ರ, ವಿಷ್ಣುವನ್ನುದೇವತೆಗಳು ಪ್ರಾರ್ಥಿಸುತ್ತಿದ್ದು, ಆಕಾಶವಾಣಿ ನುಡಿಯುತ್ತಿರುವಚಿತ್ರ, ಕಂಸನು ದೇವಕಿಯನ್ನು ವಧೆಮಾಡುವಾಗ ವಸುದೇವನು ಬೇಡಿಕೊಳ್ಳುತ್ತಿರುವ ಚಿತ್ರ, ವತ್ಸಾವತಾರಚಿತ್ರ, ಕುಬ್ಜೆಯನ್ನು ಸುಂದರಿ ಮಾಡಿದ್ದು, ಕೃಷ್ಣರಾಧೆಯನ್ನು ಸಹಕರಿಸಿದ್ದು, ರಾಮಕೃಷ್ಣರ ಮಲ್ಲಯುದ್ಧ, ಪಾಂಚಜನ್ಯಕಂಡಿದ್ದು, ಕೇಶಿಮಥನ, ಮಚ್ಚುಕುಂದನಿಗೆ ವರಪ್ರಸಾದ ಚಿತ್ರ, ರಾಜನಂದನಯುದ್ಧ, ಅಘಾಸೂರುವಧೆ, ರಾಮಕೃಷ್ಣರ ಅಗ್ನಿಪ್ರವೇಶ, ರಕ್ಷ್ಮೀಣಿಯು ಕಾಳಿಕಾದೇವಾಲಯಕ್ಕೆ ಹೋಗುವಚಿತ್ರ, ರುಕ್ಷ್ಮೀಯ ಕಾಳಿಕಾ ಅಮ್ಮನವರನ್ನು ಪೂಜಿಸುವ ಚಿತ್ರವಿದೆ.

೩.೫.೧, ಕಂಸನು ತನ್ನ ತಂಗಿಯನ್ನುಕೊಲಲ್ಲು ಮುಂದಾಗಿರುವ ಚಿತ್ರ

ಕೃಷ್ಣನ್ನು ಹುಟ್ಟುವ ಮೊದಲೆ ಆಕಾಶವಾಣಿಯು ಕಂಸನಿಗೆ ನಿನ್ನ ತಂಗಿಯ ಹೊಟ್ಟೆಯಲ್ಲಿ ಹುಟ್ಟುವ ಕೃಷ್ಣನಿಂದ ನಿನ್ನಗೆ ಸಾವು ಎಂದು ಹೇಳುತ್ತದೆ. ಆನಂತರದಲ್ಲಿ ಈ ಚಿತ್ರದ ಪ್ರಸಂಗವಾಗಿರುತ್ತದೆ. ಈ ಚಿತ್ರವು ಚಿಕ್ಕದಾಗಿ ನವರಂಗದ ಎಡಭಾಗದ ಗೋಡೆಯ ಮೇಲ್ಭಾವಣಿಯ ಭಾಗದಲ್ಲಿ ಚಿತ್ರವನ್ನು ಸಂಯೋಜಿಸಿರುತ್ತಾರೆ. ಚಿಕ್ಕದಾಗಿದ್ದು ಸುಂದರವಾಗಿ ಚಿತ್ರಿಸಿರುತ್ತಾರೆ. ದೇವಕಿ ಮದುವೆಯ ನಂತರ ಗಂಡನ ಮನೆಗೆ ಕಂಸನು ತನ್ನ ತಂಗಿಯನ್ನು ಕರೆದುಕೊಂಡು ಹೋಗುವಾಗ ಆಕಾಶವಾಣಿ ನುಡಿದ ಮಾತುಗಳಿಂದ ಕುಪಿತಗೊಂಡ ಕಂಸನು ಖಡ್ಗವನ್ನು ಎತ್ತಿಕಡಿಯಲ್ಲು ಮುಂದಾಗುತ್ತಾನೆ. ಆಗ ವಸುದೇವನು ವಿನಯದಿಂದ ಬೇಡಿಕೊಳ್ಳುತ್ತಿದ್ದಾನೆ. ಇಲ್ಲಿ ಹಾಗೆ ಚಿತ್ರಿಸಿದ್ದಾರೆ. ಕಂಸನ್ನು ನೀಲಿವರ್ಣದಿಂದ ಕೂಡಿದ್ದು ಕೋಪದಿಂದ ಉಗ್ರರೂಪ ತಾಳಿದ್ದಾನೆ. ತನ್ನ ದೇವಕಿಯನ್ನು ಉಳಿಸಿಕೊಳ್ಳಲ್ಲು ವಸುದೇವನ್ನು ವಿನಯದಿಂದ ಕಂಸನ ಹತ್ತಿರ ಬೇಡಿಕೊಳ್ಳುತ್ತಿದ್ದಾನೆ. ಕಂಸರಾಜನು ಚಕ್ರವರ್ತಿಯಂತೆ ತೋರಿಸಲು ಕಿರೀಟ, ಆಭರಣವನ್ನು ತೊಟ್ಟಿರುತ್ತಾನೆ. ಬಿಳಿವರ್ಣದ ಪಂಚೆಯನ್ನು ಉಟ್ಟಿರುತ್ತಾನೆ. ವಸುದೇವನು ಸಹ ಕಿರೀಟವನ್ನು ಆಭರಣವನ್ನು ತೊಟ್ಟಿರುತ್ತಾನೆ. ನಡುವಿಗೆ ಹಸಿರು ಮತ್ತು ಬಿಳಿಯಪಂಚೆಯನು ಹುಟ್ಟಿರುತ್ತಾನೆ. ದೇವಕಿಯು ಕೆಳಗೆ ಕುಳಿತಿದ್ದಾಳೆ ಆದರೆ ಅವಳ ಮುಂದಲೆಯ ಕೂದಲನ್ನು ಕಂಸನು ಕೈಯಲ್ಲಿ ಹಿಡಿದ್ದಾನೆ. ಆಕೆ ಹಸಿರು ಸೀರೆ ಬಿಳಿರವಿಕೆಯನ್ನು ತೊಟ್ಟಿರುತ್ತಾಳೆ. ಹಿನ್ನೆಲೆಯ ವರ್ಣವು ಕೆಂಪುವರ್ಣವೇ ಪ್ರಧಾನವಾಗಿದೆ. ಅದರ ಮೇಲೆ ವಿವಿಧ ವರ್ಣಗಳಿಂದ ಚಿತ್ರಿಸಿದ್ದಾರೆ. ಕಪ್ಪು ರೇಖೆಯೇ ಆಕೃತಿಗಳನ್ನು ಪೂರ್ಣಗೊಳಿಸಿರುವುದು ಕಾಣಬಹುದು.

೩.೫.೨. ದೇವಕಿ ವಸುದೇವನಿಗೆ ನಾರಯಣಸ್ವಾಮಿ ಅಭಯ ನೀಡುತ್ತಿರುವ ಚಿತ್ರ

ಈ ಚಿತ್ರವು ಭಾಗವತದ ಕಥೆಯ ಕೃಷ್ಣನ ಜನುಮದ ಸನ್ನಿವೇಶಕ್ಕೆ ಸಂಬಂದಿಸಿದ ಚಿತ್ರವಾಗಿದೆ. ಚಿತ್ರದಾಗಿದ್ದರು ಅದ್ಭುತವಾಗಿ ಚಿತ್ರ ಸಂಯೋಜಿಸಿದ್ದಾರೆ. ಕಲಾವಿದನು ಈ ಚಿತ್ರದಲ್ಲಿ ನಾಲ್ಕು ಭಾಗವನ್ನು ಮಾಡಿಕೊಂಡು ಒಂದರಲ್ಲಿ ದೇವಿಕೆ ಕೃಷ್ಣನಿಗೆ ತನ್ನ ಎದೆಯ ಹಾಲನ್ನು ಕುಡಿಸುತ್ತಿರುವುದು. ಎರಡನೆಯ ಭಾಗದಲ್ಲಿ ದೇವಕಿ ಕೈಮುಗಿದು ನಿಂತಿರುವಚಿತ್ರ, ಮೂರನೆಯ ಭಾಗದಲ್ಲಿ ನಾರಾಯಣಸ್ವಾಮಿಯು ಪ್ರತ್ಯಕ್ಷನಾಗಿ ಆಭಯನೀಡುತ್ತಿರುವ ಚಿತ್ರ, ನಾಲ್ಕನೆಯ ಭಾಗದಲ್ಲಿ ವಸುದೇವನ್ನು ಕೈಮುಗಿದು ನಿಂತಿರುತ್ತಾನೆ. ದೇವಕಿಯ ವಸುದೇವನ್ನು ಸೆರೆಮನೆಯಲ್ಲಿ ಸೆರೆಯಿಟ್ಟಿರುವ ಕಂಸನು ಅಲ್ಲಿ ನಡೆದ ಪ್ರಸಂಗವನ್ನು ತಿಳಿಸುವ ಚಿತ್ರವನ್ನು ಹೀಗೆ ವಿಭಾಗಿಸಿಕೊಂಡು ಚಿತ್ರಿಸಿರುತ್ತಾನೆ. ನಾರಾಯಣನು ನೀಲಿವರ್ಣ ಹೊಂದಿದ್ದು ಅಲಂಕಾರಗೊಂಡು ಇರುವಂತೆ ಚಿತ್ರಿಸಿದ್ದಾರೆ. ನಾಲ್ಕು ಕೈಗಳನ್ನು ಹೊಂದಿದ್ದು ಪೀಠದ ಮೇಲೆ ನಿಂತಿರುತ್ತಾನೆ. ಮೇಲೆ ಎರಡು ಕೈಗಳಲ್ಲಿ ಶಂಖಚಕ್ರ ಹಿಡಿದ್ದಾನೆ. ಇನ್ನೂ ಎರಡುಕೈಯಲ್ಲಿ ವಸ್ತುಹಿಡಿದ್ದಾರೆ. ವಿಷ್ಣುವಿನ ಎಡಬಲ ಭಾಗದಲ್ಲಿ ದೇವಕಿ ಮತ್ತು ವಸುದೇವನು ಕೈಮುಗಿದು ಭಕ್ತಿಯಿಂದ ನಿಂತಿರುತ್ತಾರೆ. ದೇವಕಿಯೂ ನೀಲಿಸೀರೆಯನ್ನು ಉಟ್ಟಿರುತ್ತಾಳೆ. ವಸುದೇವನು ಬಿಳಿಪಂಚೆ ಹಸಿರುಶಾಲು ಧರಿಸಿರುತ್ತಾನೆ. ಜೊತೆಗೆ ಕಿರೀಟವನ್ನು ಧರಿಸಿದ್ದಾರೆ. ಆ ನಂತರದ ಚಿತ್ರದಲ್ಲಿ ದೇವಕಿಯು ಕೃಷ್ಣನಿಗೆ ಜನುಮ ಕೊಟ್ಟು ಹಾಲನು ಕುಡಿಸುತ್ತಿರುವ ಚಿತ್ರವು ಸೇರಿದೆ. ಹಸಿರು ಸೀರೆ ಉಟ್ಟಿರುವ ದೇವಕಿಯು ಸೇರೆಮೆನೆಯಲ್ಲಿ ಇರುವಂತೆ ಕಲಾವಿದನ್ನು ಚಿತ್ರಿಸಿದಾನೆ. ಸೆರೆಮನೆಯನು ಕಲಾವಿದನು ಅಲಂಕಾರಿಕ ತಂತ್ರವನ್ನು ಉಪಯೋಗಿಸಿ ಚಿತ್ರಿಸಿದ್ದಾನೆ. ಸೆರೆಮನೆಯ ಒಳಗೆ ಹಸಿರುವಸ್ತ್ರವು ಅಲಲ್ಲಿ ಹಿಳಿಬಿಟ್ಟಿರುವಾಗೆ ಚಿತ್ರಿಸಿದ್ದಾರೆ. ಚಿತ್ರದಲ್ಲಿ ಆಕಾಶವನ್ನು ನೀಲಿವರ್ಣದಿಂದ ತೋರಿಸಿದ್ದಾರೆ. ಒಟ್ಟು ಚಿತ್ರದ ಹಿಂಬದಿಯಲ್ಲಿ ವರ್ಣವು ಕೆಂಪುಬಣ್ಣವು ಸಾಧಾರಣವಾಗಿ ಲೇಪಿಸಿದ್ದಾರೆ.

ಬಲಭಾಗದಲ್ಲಿ ರಾಮಾಯಣಕ್ಕೆ ಸಂಬಂಧಪಟ್ಟ ರಾಮರಾವಣರ ಯುದ್ಧ, ಹನುಮನು ರಾಮಲಕ್ಷ್ಮಣರನ್ನು ಹೊತ್ತು ಹೋಗುತ್ತಿರುವ ಚಿತ್ರ, ಹನುಮಂತನು ಸಂಜೀವಿನಿ ಬೆಟ್ಟವನ್ನು ಹೊತ್ತು ತರುತ್ತಿರುವ ದೃಶ್ಯ, ಕುಂಭಕರ್ಣ ಯುದ್ದ ಮಾಡುತ್ತಿರುವ ಮತ್ತು ರಾವಣನ ಯುದ್ದಕ್ಕೆ ಹೋಗುತ್ತಿರುವ ಚಿತ್ರಗಳು ರಚನೆಗೊಂಡಿದೆ. ಅದು ನವರಂಗದ ಅರ್ಧಭಾಗದ ಬಲಭಾಗದಲ್ಲಿ ಚಿತ್ರಿಸಿದ್ದಾರೆ.

೩.೫.೩. ರಾಮನನ್ನು ಹನುಮಂತ ತನ್ನ ಹೆಗಲ ಮೇಲೆ ಹೊತ್ತು ಯುದ್ದಕ್ಕೆ ಹೋಗುತ್ತಿರುವ ಚಿತ್ರ

ರಾಮನ್ನು ಹನುಮಂತ ಹೆಗೆಲಮೇಲೆ ಹೊತ್ತು ಯುದ್ದಕ್ಕೆ ಹೋಗುತ್ತಿರುವ ಚಿತ್ರವನ್ನು ಬಲಭಾಗದಲ್ಲಿ ಚಿತ್ರಿಸಿದ್ದಾರೆ. ರಾಮನು ಯುದ್ದಕ್ಕೆ ರಥವಿಲ್ಲದೆ ಮತ್ತು ಕಾಡಿನಲ್ಲಿ ವನವಾಸಕ್ಕೆ ಬಂದಿದ್ದರಿಂದ ರಾವಣನ ಮೇಲೆ ಯುದ್ದಕೆ ಹನುಮಂತನೆ ಶ್ರೇಷ್ಟವಾದ ರಥವಾಗಿದ್ದಾನೆ. ಹಾಗಾಗಿ ಹನುಮಂತನ ಹೆಗಲಮೇಲೆ ರಾಮನ್ನು ಭದ್ರವಾಗಿ ಕುಳಿತ್ತಿದ್ದಾನೆ. ಬಿಲ್ಲು ಬಾಣಗಳಿಂದ ಸಿದ್ದನಾಗಿ ಯುದ್ದಕ್ಕೆ ಹೋಗುತ್ತಿದ್ದಾರೆ. ಇವರ ಹಿಂದೆ ಮುಂದೆ ಕಪಿಸೈನ್ಯವು ಇದ್ದು. ಅವರನ್ನು ಗಾಢಹಸಿರು, ನೀಲಿ, ತಿಳಿಕೆಂಪು ವರ್ಣಗಳಿಂದ ತೋರಿಸಿದಾರೆ. ಸಮರಕ್ಕೆ ಕಪಿಗಳು ಗಿಡ, ಮರಗಳನ್ನು ಕಿತ್ತುಕೊಂಡು ಹೊತ್ತುಯುದ್ದಕ್ಕೆ ಹನುಮಂತನ ಜೊತೆ ಹೋಗುತ್ತಿದ್ದಾರೆ. ನೆಲವನ್ನು ಹಸಿರುನಿಂದ ಕೂಡಿರುವಾಗೆ ಕಲಾವಿದನು ರಚಿಸಿದ್ದಾನೆ. ಹಿನ್ನೆಲೆಯು ಕೆಂಪುವರ್ಣದಿಂದ ಸಾಧರಣವಾಗಿ ತೋರಿಸಿದ್ದಾರೆ. ಕಲಾವಿದನು ಸಂಯೋಜಿಸಿ ಚೆನ್ನಾಗಿ ಚಿತ್ರಿಸಿದ್ದಾರೆ. ಪ್ರತಿಯೊಬ್ಬರಲ್ಲಿ ರೋಷವೇಷವು ಮುಖದಲ್ಲಿ ಎದ್ದು ಕಾಣುತ್ತಿರುವಾಗೆ ರಚಿಸಿದ್ದಾರೆ. ಸಾಗುವ ಸಾಲಿನಲ್ಲಿ ಕಪಿಗಳ ಚೇಷ್ಟಯು ಸಹ ತೋಡಗಿರುವುದನ್ನು ಕಾಣಬಹುದು. ಪ್ರತಿಯೊಬ್ಬರು ಕಚ್ಚೆಯನ್ನು ಮಾತ್ರ ಉಟ್ಟಿರುತ್ತಾರೆ. ಕೈ, ಕೊರಳಿನಲ್ಲಿ ಸಾಧರಣವಾದ ಕಡಗ, ತೋಳಬಂಧಿ, ಸರವನ್ನು ಧರಿಸಿದ್ದಾರೆ. ಈ ಚಿತ್ರಸಂಯೋಜನೆಯ ಕೇಂದ್ರದ ಮಧ್ಯದಲ್ಲಿ

ರಾಮಹನುಮಂತರ ಚಿತ್ರರಚಿಸಿರುವುದು ಕಲಾವಿದನ ಸಂಯೋಜನೆಯ ತಂತ್ರವಾಗಿದೆ. ಈ ದೇವಾಲಯವು ವೈಷ್ಣವ ಪಂಥಕ್ಕೆ ಸೇರಿದರಿಂದ ಇಲ್ಲಿ ವಿಷ್ಣುವಿಗೆ ಸಂಬಂಧಸಿದ ಚಿತ್ರಗಳನ್ನು ಮಾತ್ರ ಚಿತ್ರಿಸಿದ್ದಾರೆ. ಖನಿಜವರ್ಣಗಳನ್ನು ಉಪಯೋಗಿಸಿದ್ದಾರೆ. ರಾಮನ್ನು ದೈತ್ಯರಾಕ್ಷಸ ಗುಣಕ್ಕೆ ಸೇರಿದ ರಾವಣನ ಮೇಲೆ ತನ್ನ ಹೆಂಡತಿ ಸೀತೆಯನ್ನು ಹೊತ್ತು ಹೋದ ಕಾರಣದಿಂದ ರಾಮನು ರಾವಣನ ಮೇಲೆ ಯುದ್ದಕ್ಕೆ ಹೋಗುತ್ತಿದ್ದಾನೆ. ಈ ಭಿತ್ತಿಚಿತ್ರವು ಆಯಾತಕಾರದಲ್ಲಿ ಸಂಯೋಜಿಸಿದ್ದಾರೆ. ಒಂದುವರೆ ಅಡಿ ಎತ್ತರ ನಾಲ್ಕುಅಡಿ ಉದ್ದದ ಅಳತೆಯಲ್ಲಿ ಚಿತ್ರಿಸಿದ್ದಾರೆ.

೩.೫.೪, ಕುಂಭಕರ್ಣನು ರಾಮನ ಮೇಲೆ ಯುದ್ದಕ್ಕೆ ಬರುತ್ತಿರುವ ಚಿತ್ರ

ಈ ಚಿತ್ರವು ಒಂದುವೆರೆ ಅಡಿ ಎತ್ತರ ನಾಲ್ಕುಅಡಿ ಉದ್ದದ ಅಳತೆಯಲ್ಲಿ ರಚಿಸಿದ್ದಾರೆ. ನವರಂಗದ ಬಲಭಾಗದ ಗೋಡೆಯ ಮೇಲೆ ಕುಂಭಕರ್ಣನು ರೋಷ ಆವೇಷದಿಂದ ಯುದ್ದಕ್ಕೆ ಹೋಗುತ್ತಿದ್ದಾರೆ. ರಾವಣನ ತಮ್ಮನಾಗಿ ತುಂಬ ಬಲಿಷ್ಟವಾದ ದೊಡ್ಡದಾದ ದೇಹವನ್ನು ದೊಡ್ಡದಾಗಿಯೇ ಚಿತ್ರಿಸಿದ್ದಾರೆ. ರಾಮನ ಮೇಲೆ ಅಣ್ಣನ ಆಜ್ಞೆಯ ಮೇರೆಗೆ ದೊಡ್ಡ ಕಾಲುಧಳ ಸೈನ್ಯದೊಂದಿಗೆ ಯುದ್ದ ಮಾಡಲು ರಣರಂಗಕ್ಕೆ ಕೋಪದಿಂದ ಯುದ್ದಕ್ಕೆ ಬೇಕಾದ ಆಯುಧಗಳನ್ನು ತನ್ನ ಎಡಕೈಯಲ್ಲಿ ಗಧೆ ತ್ರಿಶೂಲ ಎತ್ತಿಕೊಂಡು ಹೋಗುತ್ತಿದ್ದಾನೆ. ಸೈನಿಕರ ಕೈಯಲ್ಲಿಯೂ ಕತ್ತಿಗುರಾಣಿ ಜಳಪಳಿಸುತ್ತ ಕುಂಭಕರ್ಣನ ಹಿಂದೆ ಮುಂದೆ ರಕ್ಷಕರಂತೆ ಸೈನಿಕರು ಬಲಕೈಯಲ್ಲಿ ಕತ್ತಿ ಎಡಕೈಯಲ್ಲಿ ಗುರಾಣಿಯನ್ನು ಹಿಡಿದು ಯುದ್ದಕ್ಕೆ ಮುನ್ನುಗುತ್ತಿದ್ದಾರೆ. ಪ್ರತಿಯೊಬ್ಬರು ಕಚ್ಚೆಯನ್ನು ಮಾತ್ರ ಉಟ್ಟಿರುತ್ತಾರೆ. ಸಾಧರಣವಾದ ಆಭರಣದಿಂದ ಅಲಂಕೃತರಾಗಿದ್ದಾರೆ. ಕುಂಭಕರ್ಣನು ಈ ಚಿತ್ರದಲ್ಲಿ ಮುಖ್ಯವಾಗಿ ಹಾಗೂ ದೊಡ್ಡದಾಗಿ ಚಿತ್ರಿಸಿದ್ದಾರೆ. ಕುಂಭಕರ್ಣನು ಕಿರೀಟ, ಕೈಕಾಲು ಕಡಗವನ್ನು ಮತ್ತು ಕೊರಳಿಗೆ ಮುತ್ತಿನಹಾರವನ್ನು ಹಾಗೂ ರಕ್ಷಕವಚವನ್ನು ಧರಿಸಿದ್ದಾನೆ. ಮೈವರ್ಣವು ಹಸಿರು ಆಗಿದ್ದು ದೈತ್ಯ ಪುರುಷನಾಗಿ ಕಥೆಯಲ್ಲಿ ಇವನ ವರ್ಣನೆಯ ತಕ್ಕಂತೆ ದೊಡ್ಡದಾಗಿ ಚಿತ್ರಿಸಿದ್ದಾರೆ. ರಾಮಾಯಣದ ಕೊನೆಯ ಹಂತದ ಯುದ್ದದ ಸಮಯದ ಚಿತ್ರವಾಗಿದೆ. ಸೈನಿಕರ ಮೈವರ್ಣವು ಹಸಿರು, ಕಂದು ತೆಳುಕೆಂಪು ವರ್ಣದಲ್ಲಿ ತೋರಿಸಿದ್ದಾರೆ. ಸೈನಿಕರು ಸಹ ದಷ್ಟಪುಷ್ಟವಾಗಿಯೇ ಕಲಾವಿದರು ಚಿತ್ರಿಸಿದ್ದಾರೆ. ನಾಯಕನ ಪರವಾಗಿ ಯುದ್ದ ಮಾಡಲು ಹೋರಟಿದ್ದಾರೆ. ನೆಲವನ್ನು ಹಸಿರುಹುಲ್ಲುನಿಂದ ತೋರಿಸಿದ್ದಾನೆ. ಅದರ ಮೇಲೆ ರುಂಡಗಳು ಬಿದ್ದರುತ್ತವೆ. ಹಿನ್ನೆಲೆಯನ್ನು ಕೆಂಪುವರ್ಣದಿಂದ ಸಾಧಾರಣವಾಗಿ ತೋರಿಸಿದ್ದಾರೆ. ಈ ಸನ್ನಿವೇಶಕ್ಕೆ ಸರಿಹೊಂದುವ. ಕೆಂಪುವರ್ಣವೇ ಸೂಕ್ತವಾಗಿ ಕಂಡುಬರುತ್ತದೆ. ಈ ಚಿತ್ರದ ಮೇಲೆಕೆಳಗೆ ಚಿಕ್ಕದಾಗಿ ಅಲಂಕಾರಿಕ ನಕ್ಷಚಿತ್ರವನ್ನು ಬಿಡಿಸಿದ್ದಾರೆ.

೩.೫.೫, ಹತ್ತು ತಲೆಯ ರಾವಣ ಯುದ್ದಕ್ಕೆ ಹೋಗುತ್ತಿರುವ ಚಿತ್ರ

ರಾಮನ ಮೇಲೆ ಯುದ್ದಕ್ಕೆ ಹೋಗುತ್ತಿರುವ ಈ ಚಿತ್ರವು ಸಹ ಆಯಾತಾಕಾರದಲ್ಲಿ ಸಂಯೋಜಿಸಿದ್ದಾರೆ. ಎಲ್ಲಾಚಿತ್ರಗಳ ಅಳತೆ ಒಂದೇ ರೀತಿಯಲ್ಲಿ ಇರುತ್ತದೆ. ರಾಮಾಯಣದ ಕೊನೆಯ ಯುದ್ದ ಸನ್ನಿವೇಶ ಸಾರುವ ದೃಶ್ಯಹೊಳಗೊಂಡಿದೆ. ರಾವಣನು ರಥದಲ್ಲಿ ಕುದುರೆಯೊಂದಿಗೆ ಯುದ್ದಕ್ಕೆ ಹೋಗುತ್ತಿರುವ ಅವನ ರಥದಲ್ಲಿ ಎರಡುಬಿಳಿ ಕುದುರೆಗಳೊಂದಿಗೆ ಆಯುಧಗಳ ಸಮೇತವಾಗಿ ವೇಗವಾಗಿ ಹೋಗುತ್ತಿದ್ದಾರೆ. ರಥಕ್ಕೆ ಎರಡು ದೊಡ್ಡದಾದ ಹಸಿರಿನ ಬಾವುಟವನ್ನು ಹಾರಾಡುತ್ತಿದೆ. ರಥದ ಚಾಲಕನ್ನು ಜೋಡಿ ಬಿಳಿಕುದುರೆಯನ್ನು ಮುನ್ನಡೆಸುತ್ತಿದ್ದಾನೆ. ರಥವನ್ನು ತುಂಬ ಕೌಶಲ್ಯ ಪೂರ್ಣದಿಂದ ಅಲಂಕರಣಗೊಂಡಿರುವಂತೆ ಕಲಾವಿದನು ಚಿತ್ರಿಸಿದ್ದಾನೆ. ಚಿನ್ನದ ರಥದಂತೆ ಕಲಾವಿದನು ರಾವಣನ ವೈಭೋಗವನ್ನು ಸಹ ತೋರಿಸಿದ್ದಾನೆ. ರಾವಣನ್ನು ಹಸಿರು ವರ್ಣದಿಂದ ತೋರಿಸಿ, ಹತ್ತುತಲೆಗೂ ಒಂದೊಂದು ಕಿರೀಟವನ್ನು ಧರಿಸಿದ್ದಾನೆ. ೨೦ಕೈಗಳನ್ನು ಅವನು ಹೊಂದಿರುತ್ತಾನೆ. ಅದರಲ್ಲಿ

ಪ್ರತಿಯೊಂದರಲ್ಲಿಯೂ ಆಯುಧಗಳು ಇದ್ದು, ರಥದಲ್ಲಿ ಮಂಡಿಯೂರಿ ರಥದಲ್ಲಿ ಕೋಪವೇಷದಿಂದ ಯುದ್ಧಕ್ಕೆ ಸಿದ್ದಗೊಂಡು ಕುಳಿತ್ತಿದ್ದಾನೆ. ಆದರೆ ಈ ಚಿತ್ರದಲ್ಲಿ ರಥವೇರಿ ಬರುತ್ತಿರುವ ರಾವಣನ ಚಿತ್ರವೇ ಅಳತೆಯಲ್ಲಿ ಚಿಕ್ಕದಾಗಿದೆ. ಸೈನಿಕರ ಆಕೃತಿಗಳು ದೊಡ್ಡದಾಗಿ ಇರುವ ಜಾಗದಲ್ಲಿಯೇ ಚೆನ್ನಾಗಿ ವಿಶಿಷ್ಟವಾಗಿ ಸಂಯೋಜಿಸಿದ್ದಾರೆ. ಸೈನಿಕರ ದೊಡ್ಡ ಕತ್ತಿಗಳನ್ನು ಹಿಡಿದು ವೀರವೇಶದಿಂದ ಯುದ್ಧಕ್ಕೆ ಹೋಗುತ್ತಿದ್ದಾರೆ. ಅವರ ಮೈವರ್ಣವು ಹಸಿರು, ಕೇಸರಿ, ತೆಳುಕೆಂಪು ಬಣ್ಣದಿಂದ ತೋರಿಸಲಾಗಿದೆ. ಪ್ರತಿಯೊಬ್ಬರು ಕಚ್ಚೆ ಉಟ್ಟಿರುತ್ತಾರೆ. ಕತ್ತಿ ಗುರಾಣಿ ಹಿಡಿದ್ದಾರೆ. ಕೊರಳಿಗೆ ಮಣಿಸರ ಹಾಕಿರುತ್ತಾರೆ. ಅವರ ಕಾಲುಗಳ ಅಡಿಯಲ್ಲಿ ಕೆಲವು ರಂಡಗಳು ಕಂಡು ಬರುತ್ತಿದೆ. ಇದು ಯುದ್ಧದ ಭೀಕರತೆಗೆ ಸಾಕ್ಷಿಯಂತೆ ಕಲಾವಿದನು ತೋರಿಸಿದ್ದಾನೆ. ಈ ಚಿತ್ರದ ಹಿಂಬದಿಯ ವರ್ಣವು ಕೆಂಪುವರ್ಣವೇ ಮುಖ್ಯವಾಗಿ ಇರುತ್ತದೆ.

೩.೬, ಅಂಬುಜವಲ್ಲಿ ದೇವಾಲಯ : ಅಂಬುಜವಲ್ಲಿ ದೇವಾಲಯವು ಸಹ ವಾರಹಸ್ವಾಮಿಯ ದೇವಾಲಯ ಆವರಣದಲ್ಲಿಯೇ ನಿರ್ಮಿಸಿದ್ದಾರೆ. ಇದು ಹೊಯ್ಸಳಶೈಲಿಯಿಂದ ದೇವಾಲಯದ ಕಟ್ಟಡವಿದೆ. ಇಲ್ಲಿಯೂ ಸಹ ನವರಂಗದ ಗೋಡೆಯ ಮೇಲೆ ಹಾಗೂ ಕಿಟಕಿಯ ಮೇಲೆ ಚಿತ್ರಿಸಿದ್ದಾರೆ. ಈ ದೇವಾಲಯದಲ್ಲಿ ಸಹ ನವರಂಗದ ಸುತ್ತಲು ಅಲ್ಲಿ ಚಿತ್ರಗಳನ್ನು ಚಿಕ್ಕದಾಗಿ ದೊಡ್ಡದಾಗಿಯೂ ಚಿತ್ರಿಸಿದ್ದಾರೆ. ರಾಮಾಯಣದ ಚಿತ್ರಗಳು ಇದೆ. ಅದರಲ್ಲಿ ಹನುಮಂತನು ಲಂಕದ ವನದಲ್ಲಿ ಸೀತೆದೇವಿಯ ಹತ್ತಿರ ಚೂಡಮಣಿಯನ್ನು ಪಡೆಯುತ್ತಿರುವ ಚಿತ್ರ, ಮತ್ತು ರಾಮನು ಸಂಸಾರ ಸಮೇತ ಸಿಂಹಾಸನದ ಮೇಲೆ ಕುಳಿತಿರುವ ಚಿತ್ರ, ಮತ್ತು ಭಾಗವತಕ್ಕೆ ಸೇರಿದ ಭಿತ್ತಿಚಿತ್ರಗಳನ್ನು ಚಿತ್ರಿಸಿದ್ದಾರೆ. ಅದರಲ್ಲಿ ಶಂಬರಾಸುರವಧೆ, ಕೇಶಿಮಥನ, ಗೋವರ್ಧನ ಪೂಜೆ, ಖರಾಸುರ ಸಂಹಾರ, ಕೃಷ್ಣರುಕ್ಮೀಣಿ ಮದುವೆ, ಗುರುವಿನ ಬಳಿ ವಿದ್ಯೆ ವ್ಯಾಸಂಗ, ಇತ್ಯಾದಿ ಚಿತ್ರಗಳನ್ನು ಬಿಡಿಸಿದ್ದಾರೆ. ಇಲ್ಲಿಯೂ ಸಹ ಕೃಷ್ಣನ ಮತ್ತು ರಾಮಾಯಾಣದ ಸಂಬಂಧಪಟ್ಟಂತಹ ಭಿತ್ತಿಚಿತ್ರಗಳು ಕಂಡುಬರುತ್ತದೆ. ಗೋಡೆಯ ಮೇಲೆ, ಕಿಟಕಿಯ ಮರದ ಬಾಗಿಲುಗಳ ಮೇಲೆ, ಕೃಷ್ಣನ ಬಾಲಲೀಲೆಯ ಚಿತ್ರಗಳು ಇದೆ. ಭಾವಣಿಯ ಗೋಡೆಯ ಮೇಲೆ ವರಾಹಸ್ವಾಮಿ, ಲಕ್ಷ್ಮೀದೇವಿ, ಕೃಷ್ಣ ಮತ್ತು ರಾಮನ ಚಿತ್ರಗಳಿದ್ದು ಅದು ಮಳೆ ಬಿಸಿಲಿಗೆ ಸಿಲುಕಿ ಅಸ್ಪಷ್ಟವಾಗಿ ಕಾಣುತ್ತದೆ.

೨.೬. ೧, ಕೊಳಲು ಉದೂತ್ತಿರುವ ಬಾಲಕ ಕೃಷ್ಣನ ಚಿತ್ರ

ಈ ದೇವಾಲಯದ ಬಲಭಾಗದ ಕಿಟಕಿಯ ಮರದ ಹಲಗೆಯ ಮೇಲೆ ಕೃಷ್ಣನು ಬಾಲಲೀಲೆಗಳ ಚಿತ್ರಿಸಿದ್ದಾರೆ. ಒಂದು ಅಡಿ ಎತ್ತರ ಒಂದು ಅಡಿ ಅಗಲ ಅಳತೆಯ ಜಾಗದಲ್ಲಿ ಉತ್ತಮವಾದ ಚಿತ್ರಗಳನ್ನು ಚಿತ್ರಿಸಿದ್ದಾರೆ. ಅದರಲ್ಲಿ ಕೃಷ್ಣನು ಗೋವುಗಳ ಕಾಯುವ ಹುಡುಗರ ಜೊತೆಯಲ್ಲಿ ಸೇರಿ ಒಂದು ಮರದ ಕೆಳಗೆ ನಿಂತಿರುವ ಕೃಷ್ಣನು ತ್ರಿಭಂಗಿಯಲ್ಲಿ ನಿಂತು ಕೊಳಲನ್ನು ಉದೂತ್ತಿರುವನ್ನು ಸುತ್ತಲು ಹುಡುಗರು ಗೋವುಗಳು ಸುತ್ತುವರಿದಿದೆ. ಕೃಷ್ಣನು ಕೇಸರಿ ಮತ್ತು ಹಸಿರುವರ್ಣದ ಪಂಚೆ ಮತ್ತು ಶಾಲನ್ನು ಉಟ್ಟಿರುತ್ತಾನೆ. ಗೋವುಗಳನ್ನು ಬಿಳಿವರ್ಣದಿಂದ ತೋರಿಸಿ ಕೃಷ್ಣನ್ನು ಕಂದು ವರ್ಣದಿಂದ ರಚಿಸಲಾಗಿದೆ. ಗೋವುಪಾಲಕರನ್ನು ಸಹ ಕಂದುವರ್ಣದ ಮೈಹೊಂದಿರುತ್ತಾರೆ. ಹಿನ್ನೆಲೆಯು ಕೆಂಪವರ್ಣವೇ ಮುಖ್ಯವಾಗಿದೆ. ಮರದಲ್ಲಿ ಹೂವು ಕಾಯಿಗಳು ತುಂಬಿರುವಂತೆ ಚಿತ್ರಿಸಲಾಗಿದೆ. ಕಪ್ಪುವರ್ಣದ ರೇಖೆಯಿಂದ ಆಕೃತಿ ನಿರ್ಮಾಣವಾಗಿದೆ. ಈ ಸಂಯೋಜನೆಯು ವಿಶಿಷ್ಟವಾದ ಹಾಗೂ ಮೆಚ್ಚುಗೆಯ ಚಿತ್ರರಚನೆಯಾಗಿದೆ.

೩.೬.೨. ಖರಸುರ ಸಂಹಾರ ಚಿತ್ರ

ಎಡಭಾಗದ ಕಿಟಕಿಯ ಮರದ ಹಲಗೆಯ ಮೇಲೆ ಈ ಚಿತ್ರವನ್ನು ಚಿತ್ರಿಸಲಾಗಿದೆ. ಚಿಕ್ಕದಾಗಿದ್ದರು ಸುಂದರವಾಗಿ ಚಿತ್ರಿಸಿದ್ದಾರೆ. ಈ ಚಿತ್ರದ ಸುತ್ತಲು ಅಲಂಕಾರಿಕ ಪಟ್ಟಿಯನ್ನು ಚಿತ್ರಿಸಿರುವುದು ಕಂಡುಬರುತ್ತದೆ. ಈ ಪಟ್ಟಿಯ ಒಳಭಾಗದ ಮಧ್ಯದಲ್ಲಿ ಈ ಸನ್ನಿವೇಷದ ಚಿತ್ರವನ್ನು ಸೂಕ್ಷ್ಮವಾಗಿ ಕಲಾವಿದರು ರಚನೆ ಮಾಡಿರುತ್ತಾರೆ. ಖರಸೂರನ್ನು ಕತ್ತೆಯ ರೂಪಾವತಾಳಿ ಕೃಷ್ಣನ ಸಂಹಾರಿಸಲು ಬರುತ್ತಾನೆ. ಆದರೆ ಕೃಷ್ಣನು ಖರಸೂರನ ಮರ್ಮವನ್ನು ಹರಿತು ಸಂಹಾರಮಾಡುತ್ತಾನೆ ಈ ಪ್ರಸಂಗದ ಚಿತ್ರವಾಗಿರುತ್ತದೆ ಚಿತ್ರದಲ್ಲಿ ಬಾಲಕೃಷ್ಣನು ಕತ್ತೆಯ ರೂಪಹೊಂದಿದ ರಾಕ್ಷಸನ್ನು ತನ್ನ ಎಡಗಾಲಿನಿಂದ ಮೆಟ್ಟಿ, ಎಡಕೈಯಿಂದ ಕತ್ತೆಯ ನಾಲಿಗೆ ಇಡಿದುಕೊಂಡು ಬಲಕೈಯಿಂದ ಮುಷ್ಠಿಯಿಂದ ಬಲವಾಗಿ ಹೊಡಯುತ್ತಿರುವಂತೆ ಕಲಾವಿದನ್ನು ಚಿತ್ರಿಸಿರುತ್ತಾರೆ. ಕತ್ತೆಯನ್ನು ಬಿಳಿವರ್ಣದಿಂದ ತೋರಿಸಿ, ಕೃಷ್ಣ ಮತ್ತು ರಾಕ್ಷಸನ್ನು ಕೇಸರಿ ವರ್ಣ ಪಂಚೆ ಉಟ್ಟಿರುತ್ತಾರೆ. ಅಲಂಕಾರಕ್ಕೆ ತಲೆ, ಕೊರಳು, ಕೈಕಾಲುಗಳಿಗೆ ಆಭರಣವನ್ನು ಕಲಾವಿದನ್ನು ಚಿತ್ರಿಸಿರುತ್ತಾನೆ. ರಾಕ್ಷಸನು ಮಾತ್ರ ಕೆಂಪು ವಸ್ತ್ರವನ್ನು ನಡುವಿಗೆ ಬಿಗಿಯಾಗಿ ಸುತ್ತಿರುತ್ತಾನೆ. ಸಾಧರಣ ಆಭರಣವನ್ನು ಇವನು ಸಹ ತೋಟ್ಟಿ, ಬಲಕೈಯಲ್ಲಿ ಕತ್ತಿಹಿಡಿದು ಸತ್ತಿರುತ್ತಾನೆ. ಪಕ್ಕದಲ್ಲೆ ಗುರಾಣಿಯು ಬಿದ್ದಿರುತ್ತದೆ. ಹಸಿರುನೆಲದ ಮೇಲೆ ಸತ್ತು ಬಿದ್ದಿದ್ದಾನೆ. ಕತ್ತೆಯ ರೂಪಾಹೋಗಿ ರಾಕ್ಷಸನ ಸ್ವರೂಪತಾಳಿದ್ದಾನೆ. ಹಿಂಬಂದಿಯಲ್ಲಿ ಕೆಂಪುವರ್ಣದಿಂದ ಸಾಧರಣವಾಗಿ ತೋರಿಸಿದ್ದಾರೆ. ಮರದ ಎಲೆಗಳನ್ನು ಸ್ವಲ್ಪತೋರಿಸಿದ್ದಾರೆ. ಈ ಚಿತ್ರವು ಒಂದು ಅಡಿ ಅಗಲ ಒಂದು ಅಡಿ ಉದ್ದದಿಂದ ಕೂಡಿರುತ್ತದೆ. ಯಥಾದರ್ಶನದ ಅಂಶ ಸ್ವಲ್ಪ ಉಪಯೋಗಿಸಿರುವುದು ಕಂಡುಬರುತ್ತದೆ.

೩.೬,೧, ರುಕ್ಷ್ಮೀಣಿಯ ಮದುವೆಯ ಚಿತ್ರ

ರುಕ್ಷ್ಮೀಣಿಯ ಮದುವೆಯ ಸನ್ನಿವೇಷದ ಚಿತ್ರವು ಮಹಾಭಾರತದಲ್ಲಿ ಮತ್ತು ಭಾಗವತದಲ್ಲಿಯೂ ಸಹ ಕಂಡುಬರುತ್ತದೆ. ಈ ದೇವಾಲಯದ ನವರಂಗದ ಎಡಭಾಗದ ಗೋಡೆಯ ಮೇಲೆ ಚಿತ್ರಿಸಿದ್ದಾರೆ. ಅದು ದೊಡ್ಡದಾಗಿದ್ದು ಎರಡುವರೆ ಅಡಿ ಎತ್ತರ ಎರಡು ಅಡಿ ಅಗಲದ ಅಳತೆಯಲ್ಲಿ ರಚಿಸಿದ್ದಾರೆ. ಈ ಚಿತ್ರದಲ್ಲಿ ಮೂರುಭಾಗವಾಗಿ ಮಾಡಿಕೊಂಡು ಆಕೃತಿಗಳನ್ನು ಸಂಯೋಜಿಸಿ ಚಿತ್ರಿಸಿದ್ದಾರೆ. ಮೊದಲನೆ ಭಾಗದಲ್ಲಿ ಮಂಟಪದ ಮೇಲೆ ಈ ಭಾಗವನ್ನು ತೋರಿಸಿದ್ದಾರೆ. ಎರಡನೆಯ ಭಾಗದಲ್ಲಿ ಕೃಷ್ಣರುಕ್ಷ್ಮೀಣಿ ಮದುವೆಯ ದೃಶ್ಯವನ್ನು ಚಿತ್ರಿಸಿದ್ದಾರೆ. ಮೂರನೆಯ ಭಾಗದಲ್ಲಿ ಯಜ್ಞಮಾಡುತ್ತ ಸಪ್ತಋಷಿಮುನಿಗಳು ಸೇರಿ ಮದುವೆ ಕಾರ್ಯವನ್ನು ನೇರವೆರಿಸುತ್ತಿದ್ದಾರೆ. ಹೀಗೆ ವಿಭಾಗಿಸಿಕೊಂಡು ಸುಂದರವಾಗಿ ಕೃಷ್ಣನ ಮದುವೆಯ ಚಿತ್ರವನ್ನು ರಚಿಸಲಾಗಿದೆ. ಸಪ್ತಋಷಿಮುನಿಗಳು ಸೇರಿ ಮದುವೆಯ ಕಾರ್ಯಕ್ಕೆ ಮಂಗಳ ಉಂಟುಮಾಡಲು ಯಜ್ಞಕುಂಡವನ್ನು ನಿರ್ಮಿಸಿ ಮೇದಮಂತ್ರಗಳನ್ನು ಪಟಿಸುತ್ತಾ ಮದುವೆಯ ಕಾರ್ಯಕ್ಕೆ ಸಾಕ್ಷಿಯಾಗಿದ್ದಾರೆ. ಅವರ ಸುತ್ತ ಪೂಜಾಕಾರ್ಯ ಕ್ರಮಕ್ಕೆ ಬೇಕಾದ ವಸ್ತುಸಲಕರಣೆಗಳು ಇರುತ್ತದೆ. ಇವರ ಮುನಿಗಳು ಆಭರಣ ಪಂಚೆ, ಶಾಲು ವಿವಿಧಬಣ್ಣದಿಂದ ಕೂಡಿದ ವಸ್ತ್ರವನ್ನು ತೊಟ್ಟಿರುತ್ತಾರೆ. ಎರಡನೆಯ ಭಾಗದಲ್ಲಿ ಕೃಷ್ಣರುಕ್ಷ್ಮೀಣಿಯ ಮರದ ಕೆಳಗೆ ಮದುವೆ ಕಾರ್ಯವು ನೆರವೇರುತ್ತಿದೆ. ರುಕ್ಷ್ಮೀಣಿಯು ಹಸಿರುಸೀರೆಯಿಂದ ಶೃಂಗರಿಸಿಕೊಂಡು ಕೃಷ್ಣನ ಕೈಹಿಡಿದಿರುತ್ತಾಳೆ. ಕೃಷ್ಣನು ಸಹ ಹಸಿರು ವರ್ಣದಿಂದ ಕೂಡಿದ ಪಂಚೆ ಶಾಲನ್ನು ಆಭರಣಗಳನ್ನು ಹಾಕಿಕೊಂಡು, ತಲೆಗೆ ನವಿಲುಗರಿಯನ್ನು ಜೋಡಿಸಿಕೊಂಡು ಮದುವೆಗೆ ಅಲಂಕಾರಮಾಡಿಕೊಂಡು ನಿಂತಿರುತ್ತಾನೆ. ಸುತ್ತಲು ಇವರ ಪರಿವಾರದವರು ಇರುತ್ತಾರೆ. ಅವರು ಸಹ ಮದುವೆಗೆ ಅಲಂಕಾರಗೊಂಡು ಹರಸಲು ಬಂದಿರುತ್ತಾರೆ. ಅವು ಕೇಸರಿ, ಹಸಿರು, ಕೆಂಪವರ್ಣದ ವಸ್ತ್ರವನ್ನು ತೊಟ್ಟಿರುತ್ತಾರೆ. ಈ ಕಲಾವಿದನು ಮದುವೆಯ ಚಿತ್ರವನ್ನು ಚಿತ್ರಿಸಲಾಗಿದೆ. ಹಿಂಬದಿಯ ಭಾಗವು ಕೆಂಪಾಗಿದ್ದು ಮಂಟಪಕ್ಕೆ ಹಸಿರು ವಸ್ತ್ರವನ್ನು ಹಿಳಿಬಿಟ್ಟಿರುತ್ತಾರೆ. ಮಂಟಪವು

ತುಂಬ ಕುಸರಿಕೆಲಸದಿಂದ ಮಾಡಿದ ಮಂಟಪದಂತೆ ಚಿತ್ರಿಸಿದ್ದಾನೆ. ಇದರ ಹಿಂಬಂದಿಯ ಗಾಢಹಸಿರು ವರ್ಣ ತುಂಬಿದಿದ್ದಾರೆ. ಇದು ಒಂದು ವಿಶೇಷ ಚಿತ್ರವೇನುಸುತ್ತದೆ.

೩.೬.೪, ಬಲಭಾಗದ ಗೋಡೆಯ ಮೇಲಿನ ರಾಮಾಯಣದ ಭಿತ್ತಿಚಿತ್ರ

ಈ ಚಿತ್ರವು ರಾಮಾಯಣದ ಒಂದು ಸನ್ನಿವೇಶಕ್ಕೆ ಸೇರಿದ ಚಿತ್ರವಾಗಿರುತ್ತದೆ. ದೊಡ್ಡದಾಗಿ ಚಿತ್ರಿಸಲಾಗಿದೆ. ಇದರ ಅಳತೆವು ಎರಡು ಅಡಿ ಅಗಲ ಎರಡುವರೆ ಅಡಿಎತ್ತರದಿಂದ ಕೂಡಿದೆ. ಇದರಲ್ಲಿ ಹನುಮಂತನ್ನು ಸೀತೆಯ ಬಳಿ ಬಂದು ರಾಮನ ವಿಚಾರವನ್ನು ತಿಳಿಸಿ ಗುರುತಿಗೆ ಅವಳ ಹತ್ತಿರ ತಲೆಯಲ್ಲಿ ಇದ್ದ ಒಂದು ಆಭರಣವನ್ನು ಪಡೆಯುತ್ತಿದ್ದಾನೆ. ಹನುಮಂತನಿಗೆ ಈ ಚಿತ್ರವು ರಾಮಾಯಣದಲ್ಲಿ ರಾಮನ ಪತ್ನಿಯಾದ ಸೀತೆಯನು ರಾವಣನ್ನು ಅಪಹರಿಸಿಕೊಂಡು ಬಂದು ಆತನ ರಾಜ್ಯದ ಅಶೋಕವನದಲ್ಲಿ ಸೆರೆಹಿಟ್ಟಿರುತ್ತಾನೆ. ಆಗ ಹನುಮಂತನು ಇಲ್ಲಿ ಕಂಡು ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದಾನೆ. ಈ ಚಿತ್ರದಲ್ಲಿ ಮೂರುಭಾಗವಾಗಿಸಿಕೊಂಡು ಕಲಾವಿದನ್ನು ಚಿತ್ರಿಸಿದ್ದಾನೆ. ಮೇಲಿನ ಭಾಗದಲ್ಲಿ ಹಸಿರಿನ ಎಲೆಗಳು ಇರುತ್ತದೆ. ನಂತರದಲ್ಲಿ ಸೀತೆದೇವಿ ಮರದ ಕೆಳಗೆ ಸಣ್ಣ ಜಗುಲಿಯ ಮೇಲೆ ಕುಳಿತ್ತಿದ್ದಾಳೆ. ಕೆಳಭಾಗದಲ್ಲಿ ರಾವಣನ ಭಂಟರು ಸೀತಾದೇವಿಯನ್ನು ಕಾವಲುಕಾಯುತ್ತಿದ್ದಾರೆ. ಈ ಸೇವಕರು ಕತ್ತಿ ಗುರಾಣಿ ಕೈಗಳಲ್ಲಿ ಹಿಡಿದು ಆರ್ಭಟಿಸುತ್ತಿದ್ದಾರೆ. ಹನುಮಂತನಿಗೆ ಹೊಡೆಯಲು ಮೇಲೆ ಎರುಗುತ್ತಿದ್ದಾರೆ. ಆದರೆ ಹನುಮಂತನು ಇವರಿಗೆ ಬಲವಾಗಿ ತನ್ನ ಬಲಗಾಲಿನಿಂದ ಹೊದೆಯುತ್ತಿದ್ದಾನೆ. ಹಸಿರು ವರ್ಣದಿಂದ ಮೈವರ್ಣಕೂಡಿದೆ. ರಾಕ್ಷಸರು ಸಹ ತಿಳಿಹಸಿರು, ಕೇಸರಿ, ಕೆಂಪು, ಕಂದು ವರ್ಣದಿಂದ ಕಲಾವಿದನು ತೋರಿಸಿದ್ದಾನೆ. ಕಪ್ಪುರೇಖೆಯಿಂದ ಆಕೃತಿಯ ಚಿತ್ರವನ್ನು ರಚಿಸಿದ್ದಾರೆ.

ಎರಡನೆಯ ಭಾಗದಲ್ಲಿ ಸೀತಾ ದೇವಿಯು ಕಟ್ಟೆಯ ಮೇಲೆ ಕುಳಿತ್ತಿದ್ದಾಳೆ ಹಿಂದೆ ಮುಂದೆ ಸೇವಕಿಯರು ಕತ್ತಿ ಮತ್ತು ವಸ್ತುಗಳನ್ನು ಹಿಡಿದುನಿಂತಿರುತ್ತಾರೆ. ಸೀತಾದೇವಿಯನ್ನು ಸ್ವಲ್ಪ ಎತ್ತರವಾಗಿ ಚಿತ್ರಿಸಿದ್ದಾರೆ. ಇಲ್ಲಿ ಸೀತೆಯನ್ನು ಚೆನ್ನಾಗಿ ಖುಷಿಯಾಗಿರುವಾಗೆ ರಚನೆಮಾಡಿದ್ದಾರೆ. ಹನುಮಂತನು ಭಕ್ತಿಯಿಂದ ಕಾಣಿಕೆ ಪಡೆಯುತ್ತಿದ್ದಾನೆ. ರಾಕ್ಷಿಸಿಯರು ಸಹ ಸುಂದರವಾಗಿಯೇ ಚಿತ್ರಿಸಿದ್ದಾನೆ. ಸೀತೆಯನ್ನು ಸ್ವಲ್ಪ ಬಿಳಿವರ್ಣದಿಂದ ಸೂಕ್ಷ್ಮವಾಗಿ ತೋರಿಸಿ ಸೇವಕಿಯರನ್ನು ಕೇಸರಿವರ್ಣದಿಂದ ರಚನೆಮಾಡಿದ್ದಾರೆ. ಹಿಂಬದಿಯವರ್ಣವು ಕೆಂಪುವರ್ಣ ಹಾಗಿದ್ದು ಚಿತ್ರಕ್ಕೆ ಅದು ಒಂದು ಮೆರಗನ್ನು ತಂದಿದೆ.

ಈ ಎಲ್ಲಾ ದೇವಾಲಯಗಳಲ್ಲಿ ಆಕೃತಿಯ ಸಂಯೋಜನೆಯು ಅತ್ಯುತ್ತಮವಾಗಿ ಚಿತ್ರಿಸಿದ್ದಾರೆ ರಾಮಾಯಣ ಮತ್ತು ಕೃಷ್ಣನ ಚಿತ್ರಗಳನ್ನು ಚಿಕ್ಕದಾಗಿದೆ, ಹಾಗೆ ಕೃಷ್ಣನ ಕಥೆಯುಳ್ಳ ಚಿತ್ರಗಳು ಚಿಕ್ಕದಾಗಿದ್ದರೂ ತುಂಬ ಸುಂದರವಾಗಿ ಸಂಯೋಜಿಸಿ ಹೆಚ್ಚಿನ ಚಿತ್ರಗಳನ್ನು ರಚಿಸಿದ್ದಾರೆ. ಎರಡು ದೇವಾಲಯಗಳಲ್ಲಿಯೂ ಕೆಂಪು ವರ್ಣವು ಹಿನ್ನೆಲೆಯ ವರ್ಣವಾಗಿದ್ದು ಪ್ರಧಾನವಾಗಿ ಕಂಡುಬರುತ್ತದೆ. ಭಿತ್ತಿಚಿತ್ರಗಳಲ್ಲಿ ರೇಖೆಯೆ ಜೀವಾಳವಾಗಿದ್ದು ಅದನ್ನು ಸರಿಯಾಗಿ ಕಲಾವಿದರು ನಿರ್ವಹಿಸಿರುತ್ತಾರೆ. ಈ ಶೈಲಿಯ ಉನ್ನತವಾದ ಚಿತ್ರಗಳಿಗೆ ಮಾದರಿಯೆಂಬಂತೆ ಚಿತ್ರಿಸಿರುವರು. ಉತ್ತಮ ತಂತ್ರಗಾರಿಕೆಯಿಂದ ಕಥೆಯನ್ನು ಸ್ಪಷ್ಟವಾಗಿ ಸಾರುವ ಧಾರ್ಮಿಕ ಕಥಾನಿರೂಪಣ ಚಿತ್ರವಾಗಿರುತ್ತದೆ. ವರ್ಣಗಾರಿಕೆ ಅತ್ಯುತ್ತಮವಾಗಿ ಲೇಪನ ಮಾಡಿರುತ್ತಾರೆ. ಇಲ್ಲಿ ಕೆಂಪುವರ್ಣವೇ ಪ್ರಧಾನವಾಗಿದ್ದರೂ ಜೊತೆ ಬೇರೆ ಬೇರೆ ವರ್ಣವನ್ನು ದುಡಿಸಿಕೊಂಡಿರುವುದು ಕಲಾವಿದರ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ರೇಖೆಯು ಚಲನಶೀಲವಾಗಿದ್ದು ಬಹುಮುಖ್ಯ ಪಾತ್ರವಹಿಸಿದೆ.

೩.೭. ಕೋಟೆಯ ಹೊರಭಾಗದ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ ಭಿತ್ತಿಚಿತ್ರಗಳು

ಈ ದೇವಾಲಯವನ್ನು ೧೮೩೬ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಸುಬ್ಬರಾಯದಾಸ ಎನ್ನುವರು ಸೇರಿ ಈ ದೇವಾಲಯವು ನಿರ್ಮಿಸಿದ್ದಾರೆ. ಇದು ಕೃಷ್ಣಾಂಬ ಅಗ್ರಹಾರದಲ್ಲಿ ಈ ದೇವಾಲಯವಿರುತ್ತದೆ. ಚಿತ್ರಮಂಟಪದಲ್ಲಿ ರಚಿಸಲ್ಪಟ್ಟ ಭಿತ್ತಿಚಿತ್ರಗಳು ವಿಭಿನ್ನವ್ಯಾಪ್ತಿಗೆ ಸೇರುತ್ತದೆ. ಇಲ್ಲಿನ ಪ್ರಾರಂಭ ಮನೆತನದ ಎಲ್ಲಾ ಅರಸರ ಭಾವಚಿತ್ರ ಗಳು ಕೊನೆಯ ರಾಜರವರೆಗಿನ ಎಲ್ಲರ ಭಾವಚಿತ್ರಗಳು ಇಲ್ಲಿ ರಚನೆಯಾಗಿರುತ್ತದೆ. ದಕ್ಷಿಣ ತೀರ್ಥಕ್ಷೇತ್ರಗಳನ್ನು ಬಿಂಬಿಸುವಂತಹ ವಿಶಿಷ್ಟ ಭಿತ್ತಿಚಿತ್ರಗಳನ್ನು ಚಿತ್ರಬಿಡಿಸಿದ್ದಾರೆ ಹಾಗೂ ಭಾಗವತಕ್ಕೆ ಸಂಬಂಧಪಟ್ಟಂತಹ ಕೆಲವು ದೃಶ್ಯಗಳ ಮತ್ತು ಪೌರಾಣಿಕ ಕಥಾನಕ ದೃಶ್ಯಗಳಿವೆ. ಇಲ್ಲಿ ಭಿತ್ತಿಚಿತ್ರಗಳು ಸಾಧಾರಣ ವಿಸ್ತೀರ್ಣವುಳ್ಳ ಕೊಠಡಿಯು ಆಯಾತಕಾರದಲ್ಲಿದ್ದು ಇಲ್ಲಿನ ಈ ಜಾಗದ ಗೋಡೆಯ ಮೇಲೆ ವಿಶೇಷತೆಯಿಂದ ನೇರವಾಗಿ ಚಿತ್ರಿಸದೆ ತಾಂತ್ರಿಕವಾಗಿ ಗೋಡೆಯ ಮೇಲೆಯೆ ಮರದ ಹಲಗೆಗಳನ್ನು ಜೋಡಿಸಿ ಬಟ್ಟೆಯನ್ನು ಅಂಟಿಸಿ ಅವುಗಳಲ್ಲಿ ಆಕರ್ಷಕವಾದ ತೆಳು ಉಬ್ಬುನಿರ್ಮಿಸಿ ಕಟ್ಟುಗಳನ್ನು ಮಾಡಿ, ಪ್ರತಿಯೊಂದನ್ನು ಹೀಗೆಯೇ ಚಿತ್ರಿಸಿದ್ದಾರೆ. ಈ ರೀತಿಯ ಸಂಯೋಜನೆ ಮರದ ಭಾವಚಿತ್ರಗಳಿಗೆ ಒಂದು ರೀತಿಯ ಆಕರ್ಷಕ ಮೆರಗನ್ನು ನೀಡಿದೆ. ಹಿಂದಿನ ದೇವಾಲಯದ ಪದ್ಧತಿಯಂತೆ ವರ್ಣ ಹಾಗೂ ಆಕೃತಿ ಸಂಯೋಜನೆ ನಡೆದಿರುತ್ತದೆ.

ಕೃಷ್ಣನನ್ನು ನೀಲಿವರ್ಣದಿಂದ ತೋರಿಸಿದ್ದಾರೆ. ಇಲ್ಲಿಯ ಹಾಗೆಯೇ ಬೇರೆ ಬೇರೆ ದೇವಾಲಯಗಳ ವರ್ಣಸಂಯೋಜನೆ ಸಾಮ್ಯತೆ ಹೊಂದಿದೆ. ಎಲ್ಲಾ ಕಡೆ ಸಾಮಾನ್ಯವಾಗಿ ಚಪ್ಪಟೆ ಎನ್ನಿಸುವಂತಹ ಬಣ್ಣವನ್ನು ಎಲ್ಲಾ ಭಿತ್ತಿಚಿತ್ರಗಳಲ್ಲಿ ಬಳಸಲಾಗಿದೆ. ಕೆಲವು ಚಿತ್ರಗಳಲ್ಲಿ ವರ್ಣವೈವಿಧ್ಯತೆ ಮತ್ತು ವಿಶೇಷವೆನ್ನುವಂತ ಬಣ್ಣ ಉಪಯೋಗಿಸಿದ್ದಾರೆ. ಆದರೆ ಕಾಲದ ವೈಚಿತ್ರದ ಸುಳಿಗೆ ಸಿಲುಕಿ ತುಂಬ ಸವಕಲಾಗಿ, ಮಬ್ಬಾಗಿ ಕಂಡು ಬರುತ್ತದೆ. ಕಾರಣ ಮಳೆಯಿಂದ ಗೋಡೆಯು ವಸ್ತಿ ಹಿಡಿದು ಹಾಳಾಗುತ್ತಿದೆ.

ಮೈಸೂರು ನಗರದಲ್ಲಿರುವಂತೆ ತಾಲೂಕುಗಳಲ್ಲಿ ಅನೇಕ ದೇವಾಲಯಗಳಿವೆ. ಅಲ್ಲಿಯೂ ೧೮-೧೯ನೇ ಶತಮಾನ ಅಂತರದಲ್ಲಿ ಭಿತ್ತಿಚಿತ್ರಕಾರ್ಯ ಹೆಚ್ಚಾಗಿ ಈ ಭಾಗದಲ್ಲಿ ನಡೆದಿರುತ್ತದೆ. ಅರಸರ ಪ್ರೋತ್ಸಾಹದಿಂದ ರಾಜಾಶ್ರಯದ ಕಲಾವಿದರುಗಳು ಸೇರಿ ಅಲ್ಲಿಯೂ ಭಿತ್ತಿನಿರ್ಮಾಣ ಕಾರ್ಯವು ಅಚ್ಚುಕಟ್ಟಾಗಿ ನಡೆಸಿ ಭಿತ್ತಿಚಿತ್ರ ರಚನೆಯನ್ನು ಮಾಡಿರುತ್ತಾರೆ. ಅದರಲ್ಲಿ ಮೊದಲನೆದಾಗಿ ಮುಡುಕುತೊರೆ ಮಲ್ಲಿಕಾರ್ಜುನ ದೇವಾಲಯದ ಮಂಟಪದಲ್ಲಿ ಭಿತ್ತಿಚಿತ್ರಗಳು ಇದೆ.

೩.೮. ಮುಡುಕುತೊರೆಯ ಗುಡ್ಡದ ಮೇಲೆ ಮಲ್ಲಿಕಾರ್ಜುನ ದೇವಾಲಯ

ತಲಕಾಡಿನ ಹತ್ತಿರವಿರುವ ಬೆಟ್ಟದಹಳ್ಳಿ ಅಥವಾ **ಮುಡುಕುತೊರೆಯ ಗುಡ್ಡದ ಮೇಲೆ ಮಲ್ಲಿಕಾರ್ಜುನ ದೇವಾಲಯದಲ್ಲಿ** ಶಿವಪುರಾಣಕ್ಕೆ ಸೇರಿದ ಗಿರಿಜಾಕಲ್ಯಾಣದ ಸನ್ನಿವೇಶದ ಭಿತ್ತಿಚಿತ್ರಗಳು ಇವೆ. ಅದು ಗರ್ಭಗುಡಿಯ ಎದುರುಗಡೆ ಇರುವ ಕಲ್ಯಾಣ ಮಂಟಪದೊಳಗೆ ಮೇಲ್ಚಾವಣಿ ಹಾಗೂ ಮಂಟಪ ಪ್ರವೇಶದ ಎದುರಿಗೆ ವಿಶಾಲಗೋಡೆಯ ಮೇಲೆ ಅನೇಕ ಸಾಲುಗಳಲ್ಲಿ ಕೋಲಾಟದ ಹೆಂಗಳೆಯರ ಸಾಲು, ಮೇಲುಗಡೆ ಸಾಲಿನಲ್ಲಿ ಹಂಸ ಹಾಗೂ ಅಲಂಕಾರಿಕ ಸಾಲು, ಇವರೆಡರ ಮದ್ಯ ದೊಡ್ಡಪಟ್ಟಿಕೆಯಲ್ಲಿ ಶಿವನಸುತ್ತ ಅನೇಕ ದೇವತೆಗಳು ನೆರೆದಿರುವಾಗೆ ಇನ್ನೂ ಬೇರೆ ಪಟ್ಟಿಕೆಯಲ್ಲಿ ಅರಸರನ್ನು ಪಲ್ಲಕ್ಕಿಯ ಮೇಲೆ ಮದುವೆಗೆ ಹೋಗುತ್ತಿರುವಾಗೆ ದೃಶ್ಯಸಂಯೋಜನೆಯು ಇರುತ್ತದೆ.

೩.೮.೧, ಗಿರಿಜೆಯನ್ನು ಮದುವೆ ಕರೆದುಕೊಂಡು ಹೋಗುವ ಚಿತ್ರ

ಮದುವೆಗೆ ಗಿರಿಜೆಯನ್ನು ಸಿಂಗರಿಸುತ್ತ ಅವರ ಪರಿವಾರದವರು ಮದುವೆಗೆ ಕರದುಕೊಂಡು ಹೋಗಲು ಸಿದ್ದರಿರುವಂತೆ ಇದ್ದಾರೆ. ಮತ್ತು ಶಿವನ್ನು ತನ್ನ ವಾಹನವಾದ ಬಸವನ ಮೇಲೆ ಕುಳಿತು ಮದುವೆಯ ಮಂಟಪದ ಕಡೆಗೆ ಸಾಗುತ್ತಿರುವಾಗೆ ಸರಣಿಯ ಚಿತ್ರವಾಗಿದೆ. ಈ ಚಿತ್ರದಲ್ಲಿ ಎರಡು ಸನ್ನಿವೇಶ ಒಳಗೊಂಡದೆ. ಗಿರಿಜೆಯು ಮದುವೆಗೆ ಅಲಂಕರಿಸಿಕೊಳ್ಳುತ್ತಿದ್ದು ಅವಳಿಗೆ ಅವರ ಪರಿವಾವದವರು ಮದುವೆಗೆ ಮಂಟಪಕ್ಕೆ ಹೋಗಲು ಕರೆಯುತ್ತಿದ್ದಾರೆ. ಗಿರಿಜೆಯು ಒಂದು ದೊಡ್ಡ ಪೀಠದ ಮೇಲೆ ಕುಳಿತಿದ್ದಾಳೆ. ಸುತ್ತಲು ಅವರ ಪರಿವಾರದರು ಸೇರಿದ್ದಾರೆ. ಅನೇಕ ಶಿವನ ಭಂಟರು ಬೇಡರು ಹುಲಿಯ ಚರ್ಮವನ್ನು ಧರಿಸಿದ್ದಾರೆ. ತಲೆಗೆ ಅಲಂಕಾರಿಕ ಪಟ್ಟಿಯನ್ನು ಕಟ್ಟಿದ್ದಾರೆ. ಅವರ ಮೈವರ್ಣವನ್ನು ನೀಲಿಕೇಸರಿ ವರ್ಣದಿಂದ ಕೂಡಿದಂತೆ ಇರುತ್ತದೆ. ಏಕೆಂದರೆ ವರ್ಣವೆಲ್ಲ ಅಳಿಸಿಹೋಗಿದೆ. ಆದರೆ ಆಕೃತಿಯನ್ನು ಗುರುತಿಸಬಹುದು. ಗಿರಿಜೆಯು ಕಿರೀಟ ಧರಸಿಕೊಂಡು ಶೃಂಗರವಾಗ ತೊಡಗಿದ್ದಾಳೆ. ಅನೇಕ ವಸ್ತುವಿನ ವರ್ಣಗಳು ಕಂಡುಬರುವುದಿಲ್ಲ. ಶಿವನ್ನು ಸಹ ನಂದಿಯ ಮೇಲೆ ಕುಳಿತು ಸಾಗುತ್ತಿದ್ದಾನೆ. ಅವರ ರಕ್ಷಣೆಗಾಗಿ ಅವನ ಮುಂದೆ ಅನೇಕ ಶಿವನಿಗೆ ಸಂಬಂದಿಸಿದ ಗಣಗಳು ಕತ್ತಿ ಹಿಡಿದು ಹೊರಟಿದ್ದಾರೆ. ಈ ಚಿತ್ರವು ಉದ್ದವಾಗಿ ಸಂಯೋಜಿಸಿದ್ದಾರೆ. ಎರಡು ಅಡಿ ಎತ್ತರ ನಾಲ್ಕು ಅಡಿ ಉದ್ದವಾಗಿ ಚಿತ್ರಿಸಿದ್ದಾರೆ. ಕೆಲವು ಕಪ್ಪು ರೇಖೆಯು ಅಲ್ಲಲ್ಲಿ ಕಂಡುಬರುತ್ತದೆ.

ಮದುವೆಗೆ ಮುಖ್ಯವಾಗಿ ವಿಷ್ಣು, ಬ್ರಹ್ಮ ಹಲವು ದೇವತೆಗಳು ಮದುವೆಗೆ ಹೋಗುತ್ತಿದ್ದಾರೆ. ಮತ್ತು ದಿಕ್ಪಾಲಕರು ಇಂದ್ರ, ಸರಸ್ವತಿ, ಋಷಿಮುನಿಗಳು, ನಟರಾಜನ್ನು ಹುಲಿಯ ಚರ್ಮದ ಪಂಚೆಯನ್ನು ಕಟ್ಟಿದ್ದು, ರಥದಲ್ಲಿ ಪಾರ್ವತಿ, ಯುದ್ದದ ಭಂಗಿಯಲ್ಲಿ ನಿಂತಿರುವ ಮಹಿಷ, ಮತ್ತು ಇನ್ನೊಂದು ಪಟ್ಟಿಯಲ್ಲಿ ಮೈಸೂರಿನ ಅರಸರು ಕುಳಿತಿರುವಚಿತ್ರ, ಹಾಗೇ ಮೇಲ್ಛಾವಣಿಯ ಮೇಲೆ ಹೂಬಳ್ಳಿಯ ನಕ್ಷಾ ಸಾಲುಗಳನ್ನು ಚಿತ್ರಸಿದ್ದಾರೆ. ಆದರೆ ಹೀಗಾಗಿ ಅಲ್ಲಿ ಮೇಲ್ಛಾವಣಿಯಲ್ಲಿ ಅಲ್ಪಸ್ವಲ್ಪ ಚಿತ್ರಗಳು ಕಾಣುತ್ತವೆ. ವರ್ಣಗಾರಿಕೆ ಉತ್ತಮವಾಗಿ ಮಾಡಿರುತ್ತಾರೆ ಆದರೆ ದೇವರಿಗೆ ನಿತ್ಯದ ಪೂಜಾಕಾರ್ಯ ನೇರವೆರುವುದರಿಂದಲೇ ಅಲ್ಲಿನ ಭಿತ್ತಿಚಿತ್ರಗಳು ಹಾಳಾಗಲು ಮತ್ತು ಮಸುಕಾಗಲೂ ಒಂದು ಪ್ರಮುಖ ಕಾರಣವಾಗಿದೆ. ಹಾಗಾಗಿ ಎಲ್ಲಾ ಭಿತ್ತಿಚಿತ್ರಗಳು ಅಸ್ಪಷ್ಟತೆಯಿಂದಕೂಡಿದ್ದು ಕೆಲವು ಚಿತ್ರಗಳು ಸ್ವಲ್ಪಮಟ್ಟಿಗೆ ಗೋಚರಿಸುತ್ತದೆ. ವರ್ಣಸಂಯೋಜನೆಯಲ್ಲಿ ಹಸಿರು, ಕೆಂಪು, ಬಿಳಿ, ಹಳದಿ, ಸೌಮ್ಯವರ್ಣಗಳನ್ನು ಹೆಚ್ಚಾಗಿ ಬಳಸಿದ್ದಾರೆ. ರೇಖೆಗಳು ಸಹ ಈ ಬಣ್ಣಗಳಿಂದಲೆ ರೇಖಿಸಿದ್ದಾರೆ. ವರ್ಣವನ್ನು ಗಮನಿಸಿದ್ದಾರೆ ಸಸ್ಯ ಮತ್ತು ಖನಿಜಮೂಲದಿಂದ ಪಡೆದಿರುತ್ತಾರೆ. ಆಕೃತಿಗಳ ಸಂಯೋಜನೆಯೂ ಎಂತವರಹನ್ನು ಉಬ್ಬೆರೆಸುವಂತೆ ಮಾಡುತ್ತದೆ. ವರ್ಣವನ್ನು ಸಪ್ಪಟಾಗಿ ಹಚ್ಚಿರುತ್ತಾರೆ. ವಿಶೇಷವೆಂದರೆ ಇಡಿ ಭಿತ್ತಿಚಿತ್ರಣದಲ್ಲಿ ಎಲ್ಲಾ ಆ ಚಿತ್ರಗಳ ಪಟ್ಟಿಯೊಳಗೆ ಅಂಚಿನಲ್ಲಿ ಚಿತ್ರದ ವಿಷಯಗಳು ಶಾಸನದಂತೆ ಬರೆದಿರುವುದು ಕಂಡುಬರುತ್ತದೆ. ದೀಪದಗೂಡುಗಳ ಸುತ್ತಲೂ ಅಲಂಕಾರಿಕ ಚಿತ್ರಣವಿದೂ ಈ ಭಿತ್ತಿಚಿತ್ರಗಳು ಕರ್ನಾಟಕದ ಅಪರೂಪದ ಭಿತ್ತಿಚಿತ್ರಗಳಾಗಿದೆ.

೩.೯, ಅಗಸ್ತೇಶ್ವರ ದೇವಾಸ್ಥಾನ :

ತಿರುಮಕೂಡಲು ಅಥವಾ ಟಿ. ನರಸಿಪುರವೆಂದು ಇದನ್ನು ದಕ್ಷಿಣಭಾರತದ ಪ್ರಯಾಗ ಎಂದು ಸಹ ಕರೆಯುತ್ತಾರೆ. ಅಗಸ್ತ ಮಹರ್ಷಿಯು ಮರಳಿನಿಂದ ಶಿವಲಿಂಗವನ್ನು ಮಾಡಿ ಈ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದಾರೆ, ಎಂದು ಸ್ಥಳದ ಪುರಾಣ ತಿಳಿಸುತ್ತದೆ. ಈ ಶಿವಲಿಂಗಕ್ಕೆ ಅಗಸ್ತೇಶ್ವರ ಎಂದು ಹೆಸರು ಈ ದೇವಾಲಯದ ಕೆಲವು ಭಾಗಗಳು ಬೇರೆ ಬೇರೆ ಕಾಲದಲ್ಲಿ ಜೀರ್ಣೋಧ್ಧಾರವಾಗಿರುತ್ತದೆ. ಮುಂದಿನ ಮಂಟಪದಲ್ಲಿ ಮೇಲ್ಛಾವಣಿಯ ಮೇಲೆ ೧೯ನೇಯ ಶತಮಾನದಲ್ಲಿ ಭಿತ್ತಿಚಿತ್ರಗಳನ್ನು ರಚನೆಮಾಡಿರುತ್ತಾರೆ.

ಆದರೆ ಹೀಗಾ ದುರ್ದೈವದ ಸಂಗತಿಯೆಂದರೆ ಎಲ್ಲಾ ಚಿತ್ರಗಳನ್ನು ಕೆಲವು ಸುಣ್ಣದಿಂದ ಮುಚ್ಚಲುಪಟ್ಟಿದೆ. ಇನ್ನೂ ಕೆಲವು ಚಿತ್ರಗಳು ಕಾಲದ ವೈಪರಿತ್ಯಕ್ಕೆ ಸಿಲುಕಿ ಹಾಳಾಗಿದರೂ ಕೆಲವು ಭಾಗಗಳಲ್ಲಿ ಅಲ್ಪಸ್ವಲ್ಪ ಕಂಡುಕೊಳ್ಳಬಹುದೂ. ಇನ್ನೂ ಕೆಲವು ಭಾಗದಲ್ಲಿ ಇದ್ದವೂ ಎಂಬತೆ ಕಾಣುತ್ತವೆ.

ಕೆಲವು ಗ್ರಂಥಗಳ ಮಾಹಿತಿಯಂತೆ ಹಲವು ಬ್ರಿಟಿಷ್ ಅಧಿಕಾರಿಗಳ ಮತ್ತು ಮುಮ್ಮಡಿಕೃಷ್ಣರಾಜ ಒಡೆಯರ ಚಿತ್ರವು ಮತ್ತು ಹೂಬಳ್ಳಿ ಹಾಗೂ ಅಲಂಕಾರಿಕ ನಕ್ಷೆಗಳು, ಶಿವನ ಅನೇಕ ಭಂಗಿಗಳಲ್ಲಿನ ಚಿತ್ರಗಳನ್ನು ಹಾಗೂ ಶಿವನು ಅಲಂಕಾರ ಭೂಷಿತನಾಗಿ ಸಿಂಹಾಸನದ ಮೇಲೆ ಕುಳಿತಿರುವ ಆ ಒಂದು ಚಿತ್ರವು ಅಸ್ಪಷ್ಟವಾಗಿ ಕಂಡುಬರುತ್ತದೆ. ಶಿವನ ಪಾದದ ಕೆಳಗೆ ನಂದಿ ಮತ್ತು ಗಣಗಳು ಇರುವ ಚಿತ್ರವು ಇರುತ್ತವೆ. ಕಲ್ಲಿನ ತೊಲೆಯ ಮೇಲೆ ಅಲಂಕಾರಿಕ ಹೂವಿನ ನಕ್ಷೆಯ ಚಿತ್ರವು ಸ್ವಲ್ಪಭಾಗ ಕಂಡುಬರುತ್ತದೆ ಇನ್ನೂ ಅನೇಕ ಚಿತ್ರಗಳು ಇತ್ತು ಎಂದು ಹೇಳಿರುತ್ತಾರೆ. ಏನೇಯಾದರು ೯೫% ಭಾಗದಷ್ಟು ಇಲ್ಲಿನ ಭಿತ್ತಿಚಿತ್ರಗಳು ಹಾಳಾಗಿರುತ್ತದೆ

ಪಿರಿಯಾಪಟ್ಟಣದ ಬೆಟ್ಟದಪುರ ಸಿಡ್ಲು ಮಲ್ಲಿಕಾರ್ಜುನ ದೇವಾಲಯ ೧೮ನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ಶಿವನಿಗೆ ಸಂಬಂಧಪಟ್ಟಂತಹ ಭಿತ್ತಿಚಿತ್ರಗಳು ಇಲ್ಲಿ ಚಿತ್ರಿಸಿದ್ದಾರೆ.. ಮತ್ತು ಕೆ.ಆರ್. ನಗರದ ಸಾಲಿಗ್ರಾಮದ ಪಾರ್ಶ್ವನಾಥ ಬಸದಿ ೧೮ನೇ ಶತಮಾನದಲ್ಲಿ ನಿರ್ಮಿಸಿದ್ದಾರೆ, ಅದು ಉತ್ತಮ ಸ್ಥಿತಿಯಲ್ಲಿದೆ. ಅದೇ ಊರಿನ ಹತ್ತಿರದಲ್ಲಿರುವ ಚುಂಚುನಕಟ್ಟೆ ರಾಮದೇವಾಲಯದಲ್ಲಿಯೂ ೧೯ನೇ ಶತಮಾನದಲ್ಲಿ ನಿರ್ಮಿತವಾಗಿದೆ. ಅಲ್ಲಿ ವಿಷ್ಣುವಿನ ಸಂಬಂಧಪಟ್ಟಂತಹ ಕೆಲವು ಚಿತ್ರಗಳನ್ನು ಮುಖ್ಯವಾಗಿ ಇದೆ. ಆದರೆ ಕಾಲದ ವೈಚಿತ್ರಕ್ಕೆ ಸಿಲುಕಿ, ಜನರ ನಿರ್ಲಕ್ಷ್ಯತೆಯು ಸೇರಿ ನಾಶವಾಗಿರುತ್ತದೆ. ಇದನ್ನು ಸಂಶೋಧನೆಯ ಮುಖ್ಯ ಕಾರ್ಯವಾದಂತಹ ಕ್ಷೇತ್ರಕಾರ್ಯಕ್ಕೆ ಹೋದಾಗ ಕೆಲವು ಕಡೆ ನಾಶವಾಗಿರುವುದು ತಿಳಿದು ಬಂದಿದೆ. ಮೈಸೂರು ಜಿಲ್ಲೆಯಲ್ಲಿಯೂ ಪಾರಂಪರಿಕತೆಯ ಕಲೆಯು ಸಹ ನಿರ್ಲಕ್ಷ್ಯತೆಗೊಳಾಗಿದೆ. ಮೈಸೂರು ನಗರದಲ್ಲಿ ಮಾತ್ರ ಕೆಲವು ಕಡೆ ಚೆನ್ನಾಗಿ ಉಳಿಸಿ ಕಾಪಾಡಿ ಕೊಂಡು ಬರುತ್ತಿರುವುದು ತಿಳಿಯಬಹುದು.

೩.೧೧, ಸಿಡಿಲುಮಲ್ಲಿಕಾರ್ಜುನ ದೇವಾಲಯದ ಭಿತ್ತಿಚಿತ್ರ

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಒಂದು ಗ್ರಾಮವಾಗಿರುವ ಬೆಟ್ಟದಪುರ, ಪುರಾಣದ ಪ್ರಕಾರದಲ್ಲಿ ಸಿರಿಗಿರಿ ಎಂದು ಕರೆಯುತ್ತಾರೆ. ಐತಿಹಾಸಿಕ ಕಾಲದಲ್ಲಿ ಗಂಗರು, ಚೋಳ, ಹೊಯ್ಸಳ ಆಡಳಿತಕ್ಕೆ ಒಳಪಟ್ಟ ನಂತರ ವಿಜಯನಗರ ಕಾಲದಲ್ಲಿ ಭಿತ್ತಿಚಿತ್ರಕಲೆಯು ಇಲ್ಲಿ ರಚಿಸಿದ್ದಾರೆ. ನಿರ್ಮಾಣವಾಗಿದೆ ಮತ್ತು ಚೆಂಗಾಳ್ವರ ಮತ್ತು ಟಿಪ್ಪುವಿನ ಆಳ್ವಿವಿಕೆ ಕಂಡ ಪ್ರಸಿದ್ದ ಸ್ಥಳವಾಗಿದೆ.

ಈ ಸ್ಥಳದಲ್ಲಿ ವಿಶೇಷವಾದ ಭಿತ್ತಿಚಿತ್ರಗಳಿದೂ ಅದು ವಿಜಯನಗರ ಕಾಲಕ್ಕೆ ಸೇರಿದ ಭಿತ್ತಿಚಿತ್ರಗಳಾಗಿರುತ್ತದೆ. ಅವು ಮೆಟ್ಟಿಲು ಎರುವ ಪ್ರಾರಂಭದಲ್ಲಿ ಒಂದು ಸೋಪಾನವಿದೆ. ಆ ಸೋಪಾನದ ಒಳಗಿನ ಗೋಡೆಯ ಮೇಲ್ಛಾವಣಿ, ಕಂಬ, ತೊಲೆ, ಜಂತಿಯ ಚಿತ್ರಿಸಿದ್ದಾರೆ. ಆದರೆ ದೃರದೃಷ್ಟಕ್ಕೆ ೯೦% ಭಾಗದಷ್ಟು ನಾಶವಾಗಿದೆ. ಈಗಿನ ಕಲಾಸಕ್ತರ ಅದೃಷ್ಟವೇನೊ ೧೦% ಭಾಗ ಉಳಿದಿದೆ. ಅದೂ ಪುಂಡರ ಕೈ ಮತ್ತು ದೃಷ್ಟಿಗೆ ಇಡಾಗಿ ಈಗಲೂ ಸಹ ಹಾಳಾಗುತ್ತಿದೆ. ಯಾವುದೇ ರಕ್ಷಣೆಕಾರ್ಯ ಕೈಗೊಂಡಿಲ್ಲದ ಕಾರಣದಿಂದ ಇರುವುದು ಹಾಳಾಗುತ್ತಿದೆ. ಇಲ್ಲಿನ ಭಿತ್ತಿಚಿತ್ರಗಳು ಕಪ್ಪು-ಕೆಂಪು ರೇಖೆಗಳಿಂದ ರಚಿಸಿ, ಕೆಲವೊಂದನ್ನು ಕೆಂಪು ವರ್ಣದಿಂದಲೇ ಚಿತ್ರಿಸಿದ್ದಾರೆ. ಬಿಳಿವರ್ಣ, ಹಳದಿ, ಕೆಂಪುವರ್ಣಗಳಿಂದ ಒಳಭಾಗವನ್ನು ತುಂಬಿರುತ್ತಾರೆ. ಚಿತ್ರದಲ್ಲಿ ಯಾವುದೇ ನೆರಳಿನ ಬೆಳಕಿನ ಸಂಯೋಜನೆ ಕಂಡು ಬರುವುದಿಲ್ಲ ಚಿತ್ರಗಳನ್ನು ಅನೇಕ ಸಾಲುಪಟ್ಟಿಕೆಗಳಂತೆ ಮಾಡಿಕೊಂಡು ಗುಂಪುಗುಂಪಾಗಿ ಚಿತ್ರಿಸಿದ್ದಾರೆ.

ಅದರಲ್ಲಿ ಆನೆಸಾಲು, ದೇವತೆಗಳ ಸಾಲು ಶಿವನ ಅನೇಕ ರೀತಿಯ ಚಿತ್ರಗಳು ಇದೆ. ಜೊತೆಗೆ ಅನೇಕ ಸಿದ್ದರು, ಶರಣರು ಮತ್ತು ಶಿವಯೋಗಿಗಳು ಕುಳಿತಿರುವ ಭಂಗಿಯಲ್ಲಿ ಶಿವಲಿಂಗವನ್ನು ಎಡಗೈಯಲ್ಲಿ ಹಿಡಿದು ಪೂಜಿಸುವಾಗ ಬಲಗೈಯಲ್ಲಿ ಆಶೀರ್ವಾದ ಸಹ ಮಾಡುತ್ತಿರವಾಗಿನ ಚಿತ್ರಗಳು ಹೆಚ್ಚಾಗಿ ಇಲ್ಲಿ ಕಂಡುಬರುತ್ತದೆ.

ಕಾಲಭೈರವನ ವಿವಿಧ ರೀತಿಯ ಅವತಾರಗಳ ಚಿತ್ರಗಳು ದೊಡ್ಡದಾಗಿ ಮೇಲ್ಛಾವಾಣಿಯಲ್ಲಿದೆ. ಆಯಾತಕಾರದ ಜಾಗದಲ್ಲಿ ಹೂಗಳನ್ನು ಅನೇಕ ಅಳತೆಯಲ್ಲಿಯು ಚಿತ್ರಿಸಿದ್ದಾರೆ. ಗಿಣಿಗಳು, ಬಸವನ ಚಿತ್ರಗಳು, ಶಿವಲಿಂಗಗಳ ಚಿತ್ರಗಳು ಹೆಚ್ಚಾಗಿ ಕಂಡುಬರುತ್ತದೆ. ಅದು ಸೂಕ್ಷ್ಮವಾಗಿ ಗಮನಿಸಿ ನೋಡಿದರೆ ಮಾತ್ರ ಹೆಂಗಳೆಯರು, ಶಿವಯೋಗಿಗಳು ಸೇರಿ ಶಿವನನ್ನು ಪೂಜಿಸುತ್ತಿರುವಾಗೆ ಇರುವ ಚಿತ್ರಗಳು ಇಲ್ಲಿ ಚಿತ್ರಿಸಿರುತ್ತಾರೆ. ವಿಜಯನಗರದ ಚಿತ್ರಗಳ ರಚನೆಯ ಕಾಲಮಾನದಲ್ಲಿ ಆನೆಗುಂದಿಯ ಹುಚ್ಚಪ್ಪಯ್ಯನ ಮಂಟಪದಲ್ಲಿ ಚಿತ್ರಿಸಿರುವಾಗೆ ಇಲ್ಲಿಯ ಸಹ ಚಿತ್ರಿಸಿರುತ್ತಾರೆ.

ಅದೇ ಕಲಾಮಾನದಲ್ಲಿ ವಿಜಯನಗರದಕ್ಕೆ ಈ ಪ್ರಾಂತ್ಯವೂ ಸಹ ಅವರ ಆಳ್ವಿಕೆಗೆ ಒಂದು ಕಾಲದಲ್ಲಿ ಒಳಪಟ್ಟಿತ್ತು. ಎಂಬುದನ್ನು ಸರ್ಕಾರಿ ದಾಖಲೆಗಳಲ್ಲಿ ಇರುತ್ತದೆ.

೩.೧೦.೧, ಋಷಿಮುನಿಗಳು ಮತ್ತು ಅಲಂಕಾರಿಕದ ಹೂವಿನ ರೇಖಾಚಿತ್ರ

ಈ ಚಿತ್ರವು ಈ ಜಿಲ್ಲೆಯ ವಿಶೇಷವಾದ ಭಿತ್ತಿಚಿತ್ರವಾಗಿದೆ. ಏಕೆಂದರೆ ವಿಭಿನ್ನವಾದ ಚಿತ್ರತಂತ್ರಗಳಿಂದ ಕೂಡಿದೆ. ವರ್ಣಲೇಪನವು ಸಹ ವೈವಿಧ್ಯತೆಗಳಿಂದ ಇದ್ದಂತೆ ಕಾಣುತ್ತದೆ. ಆದರೆ ಎಲ್ಲಾ ಅಳಿಸಿಹೋಗಿರುತ್ತದೆ ಬರಿ ಸುಣ್ಣದ ಮೇಲೆ ಕಪ್ಪು ರೇಖೆಯಿಂದ ಚಿತ್ರಸಿದಂತೆ ಮಾತ್ರ ಕಂಡುಬರುತ್ತದೆ.

ಮೂರುಮುನಿಗಳ ಚಿತ್ರ

ಋಷಿಮುನಿಗಳು ಮೂವರು ಇರುವಂತೆ ಚಿತ್ರವು ಸುಣ್ಣದ ಒಣಗಾರೆಯ ಮೇಲೆ ಚಿತ್ರಿಸಿದ್ದಾರೆ. ಅದು ಸಹ ಸ್ವಲ್ಪಸ್ವಲ್ಪ ಮಾತ್ರ ಕಂಡುಬರುತ್ತದೆ. ಋಷಿಮುನಿಗಳು ಕೈಯಲ್ಲಿ ಲಿಂಗವನ್ನು ಹಿಡಿದುಕೊಂಡು ಪೂಜಿಸುತ್ತಿರುವಂತೆ ಚಿತ್ರಿಸಲಾಗಿದೆ. ಅವರ ಎಡಕೈಯಲ್ಲಿ ಲಿಂಗ ಹಿಡಿದು ಬಲಕೈಯಿಂದ ಆಶೀರ್ವಾದ ಮಾಡುತ್ತಿರುವಾಗೆ ಇದ್ದು, ಮೂವರು ಕುಳಿತಿರುತ್ತಾರೆ. ಈ ಚಿತ್ರವು ಕಂಬ, ಗೋಡೆಯ ಮೇಲೆ ಚಿಕ್ಕದಾಗಿ ದೊಡ್ಡದಾಗಿ ಚಿತ್ರಿಸಿರುತ್ತಾರೆ. ಆದರೆ ಕೆಲವುಮಾತ್ರ ಕಣ್ಣಿಗೆ ಕಂಡುಬರುತ್ತದೆ. ಮುನಿಗಳು ಕಿವಿಗೆ ಹೂವನ್ನು ಮುಡಿದ್ದಾರೆ. ದೇಹದ ಮೇಲೆ ವಿಭೂತಿ ಪಟ್ಟೆಯನ್ನು ಅಲ್ಲಲ್ಲಿ ಹಾಕಿಕೊಂಡಿರುತ್ತಾರೆ. ಮೂವರು ಸಮಾನರಾಗಿ ಚಿತ್ರಿಸಿದ್ದಾರೆ. ಆದ್ದರಿಂದ ಇವರು ಶಿವಶರಣರು ಹಾಗಿರುತ್ತಾರೆ. ಇವರು ಪಂಚೆಯನ್ನು ಮಾತ್ರ ಉಟ್ಟಿರುತ್ತಾರೆ.

೩.೧೦.೨, ಹೂವಿನ ರೇಖಾಚಿತ್ರ

ಈ ಹೂವಿನ ಚಿತ್ರವು ರೇಖೆಯಿಂದಲೆ ರಚಿಸಿದ್ದಾರೆ. ಯಾವುದೇ ವರ್ಣವನು ಇದರಲ್ಲಿ ಕಂಡುಬುರುವುದಿಲ್ಲ ಬಳಿವರ್ಣವನು ಅಲ್ಪಸ್ವಲ್ಪ ಮಾತ್ರ ಅಲಲ್ಲಿ ಕಾಣುತ್ತದೆ. ಮೇಲ್ಛಾವಣಿಯಲ್ಲಿ ಈ ಚಿತ್ರವನ್ನು ಸಂಯೋಜಿಸಿದ್ದಾರೆ. ಇದು ಒಂದು ದೊಡ್ಡ ಹೂವಿನ ಚಿತ್ರವಾಗಿ ಅನೇಕ ಧಳವು ಇರುವುದು ತಿಳಿದು ಬರುತ್ತದೆ. ದೊಡ್ಡಹೂವಿನ ಚಿತ್ರದ ಸುತ್ತ ಚಿಕ್ಕದಾಗಿ ಹೂವಿನ ಚಿತ್ರವು ಇರುವಂತೆ ಕ ಕಾಣಬಹುದು. ವೃತ್ತಕಾರದೊಳಗೆ ಚಿತ್ರಿಸಿದ್ದಾರೆ.

೩.೧೧. ಚುಂಚನಕಟ್ಟೆಯ ಶ್ರೀರಾಮದೇವರ ದೇವಾಲಯದ ಭಿತ್ತಿಚಿತ್ರ

ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನಲ್ಲಿರುವ ಈ ದೇವಾಲಯವು ಅನೇಕ ಪುರಾಣಗಳಲ್ಲಿ ಈ ಸ್ಥಳ ಕೇಳಿಬರುತ್ತದೆ. ರಾಮಾಯಣದಲ್ಲಿಯೂ ಸಹ ಚುಂಚನಕಟ್ಟೆ ಹೆಸರು ಉಲ್ಲೇಖವಿದೆ. ಇದು ಒಂದು ಪ್ರಸಿದ್ಧ ಪುಣ್ಯಸ್ಥಳದ ಧಾರ್ಮಿಕ ಕೇಂದ್ರವಾಗಿದೆ. ಮೈಸೂರಿನ ಅರಸರಾದ ನರಸಪತಿ ಬಿರುದೆಂತೆಂಬರ ಗಂಡ, ಮಹಾರಾಜನಾದ ಶ್ರೀ ಕೃಷ್ಣರಾಜ ಒಡೆಯರು ೧೯ನೇ ಶತಮಾನದ ಕಾಲದಲ್ಲಿ ಅನೇಕ ಭಿತ್ತಿಚಿತ್ರಗಳು ನಿರ್ಮಾಣವಾಗಿದವು ಎಂದು ಸಾಹಿತ್ಯದಲ್ಲಿ ಉಲ್ಲೇಖವಿದೆ. ಉದಾ: ಕರ್ನಾಟಕದಲ್ಲಿ ಭಿತ್ತಿಚಿತ್ರಕಲೆ ಪರಂಪರೆ ಎಂಬ ಗ್ರಂಥದಲ್ಲಿ ಉಲ್ಲೇಖವಿದೆ.

ಈ ಸ್ಥಳವು ಮೈಸೂರಿನಿಂದ ೬೦ಕಿಮೀ ದೂರದಲ್ಲಿ ಇರುತ್ತದೆ. ಆಗಿನ ಕಾಲದ ಭಿತ್ತಿಚಿತ್ರಗಳು ಮಾತ್ರ ಈಗ ಕಂಡುಬರುತ್ತಿಲ್ಲ ಆದರೆ ಇತ್ತೀಚಿನ ಆಧುನಿಕ ಭಿತ್ತಿಚಿತ್ರಗಳು ಮಾತ್ರ ಇಲ್ಲಿ ಈಗ ಕಂಡುಬರುತ್ತದೆ. ಅದು ವಿಷ್ಣುವಿನ ಹಲವು ಅವತಾರಗಳ ಚಿತ್ರ ಆಗಿರುತ್ತದೆ. ಸ್ವಲ್ಪ ದೊಡ್ಡ ಪ್ರಮಾಣದಲ್ಲಿಯೇ ಚಿತ್ರಿಸಿರುತ್ತಾರೆ. ವೃತ್ತಾಕಾರ ಹಾಗೂ ಚೌಕಾಕಾರದಲ್ಲಿ ಒಳಗೆ ಚಿತ್ರಿಸಿರುತ್ತಾರೆ. ಅವುಗಳು ಇಂತಿವೆ ನರಸಿಂಹ ಅವತಾರ, ವರಾಹಅವತಾರ, ಕೂರ್ಮವಾತಾರ, ಬುದ್ಧವಾತಾರ, ಕಲ್ಕಿಅವತಾರ, ಮತ್ಸ್ಯಾವತಾರ, ಕೃಷ್ಣವಾತಾರ ಮತ್ತು ರಾಮನನ್ನು ಸಿಂಹಾಸನದ ಮೇಲೆ ಕುಳಿತಿರುವ ಚಿತ್ರ, ಪರಶುರಾಮಾವತಾರಗಳ ಚಿತ್ರಗಳು ಇಲ್ಲಿರುತ್ತದೆ. ಇವುಗಳು ಆಧುನಿಕ ಭಿತ್ತಿಚಿತ್ರಗಳ ಅಡಿಯಲ್ಲಿ ನೋಡಬಹುದು. ಕೆಲವನ್ನು ತೈಲವರ್ಣದಲ್ಲಿ ಮತ್ತು ಆಧುನಿಕ ಪರಿಕರಗಳನ್ನು ಉಪಯೋಗಿಸಿ ಗೋಡೆ ಮೇಲೆ ಚಿತ್ರಿಸಿದ್ದಾರೆ.

ಸುಂದರವಾಗಿ ದೇವತೆಗಳನ್ನು ರಚಿಸಿ ಕಪ್ಪು, ಕೆಂಪು, ಕಂದುವರ್ಣಗಳಿಂದ ರೇಖೆಗಳನ್ನು ಎಳೆದಿದ್ದಾರೆ. ಪ್ರಕೃತಿ ಹಿನ್ನೆಲೆಯಿಂದ ಆಕೃತಿಗಳನ್ನು ಸಂಯೋಜಿಸಿದ್ದಾರೆ, ಧಾರ್ಮಿಕ ಹಿನ್ನೆಲೆಯ ವಿಷ್ಣುವಿನ ಅವತಾರಗಳನ್ನು ಗೋಡೆಯ ಮೇಲೆ ಚಿತ್ರಿಸಿದ್ದಾರೆ ಹಾಗೂ ಯಾವುದರಲ್ಲೂ ಕಲಾವಿದರ ಹೆಸರು ಕಂಡುಬರುವುದಿಲ್ಲ. ಈ ದೇವಾಲಯದ ಗರ್ಭಗುಡಿಯ ಹೊರ ಪ್ರಾಣಾಂಗದ ಕೆಲವು ಜಾಗದಲ್ಲಿ ಮಾತ್ರ ಭಿತ್ತಿಚಿತ್ರ ರಚಿಸಿದ್ದಾರೆ. ಎಲ್ಲಾ ವಿಷ್ಣುಪಂಥಕ್ಕೆ ಸೇರಿದ ಭಿತ್ತಿಚಿತ್ರಗಳು ಇಲ್ಲಿ ಇವೆ. ಈ ಆಧುನಿಕ ಭಿತ್ತಿಚಿತ್ರಗಳು ಯಾವಾಗ ರಚಿತವಾಗಿವೆ. ಎಂಬ ವಿವರಗಳು ಲಭ್ಯವಾಗಿಲ್ಲ.

೩.೧೨. ಸಾಲಿಗ್ರಾಮದ ಭಗವಾನ್ ಅನಂತನಾಥ ಅಥವಾ ಮಾದನನಾಥಸ್ವಾಮಿ ದೇವಾಲಯದ ಭಿತ್ತಿಚಿತ್ರ

ಮೈಸೂರು ಜಿಲ್ಲೆಯ ಕೃಷ್ಣರಾಜನಗರ, ಎಡತೊರೆ ತಾಲೂಕಿಗೆ ಸೇರಿದ ದೊಡ್ಡ ಹೋಬಳಿ ಕೇಂದ್ರ ಸಾಲಿಗ್ರಾಮ ಇದಾಗಿದೆ. ಸಾಲಿಗ್ರಾಮ ಎಂಬ ಹೆಸರೇ ಹಲವು ಕಾರಣಗಳಿಂದ ಬಂದಿರುತ್ತೆ. ಮೊದಲನೆಯದು ಶಂಖಚಕ್ರ ಚಿಹ್ನೆಗಳು ಇರುವಂತ ಹಾಗೂ ಲಿಂಗಕಾರದ ಹಲವು ವಿವಿಧ ಕಪ್ಪು ಸಾಲಿಗ್ರಾಮ ಕಲ್ಲುಗಳು ಇಲ್ಲಿ ಸಿಕ್ಕುವುದರಿಂದ ಸಾಲಿಗ್ರಾಮ ಎಂದು ಕರೆಯುತ್ತಾರೆ. ಇಲ್ಲಿ ಪಾಠಹೇಳಿಕೊಡುವ ಬ್ರಾಹ್ಮಣರು ಹೆಚ್ಚಾಗಿ ವಾಸಿಸುವ ಅಗ್ರಹಾರವೇ ಸಾಲಿಗ್ರಾಮ ಎಂದು ಇದೆ. ಹಿಂದೆ ಅಗ್ರಹಾರವಾಗಿತ್ತೆಂದು ಪುರಾವೆಗಳಿಂದ ತಿಳಿದುಬರುತ್ತದೆ. ಮೂರನೆಯದಾಗಿ ಇಲ್ಲಿ ಅತಿ ಹೆಚ್ಚಾಗಿ ಭತ್ತ ಬೆಳೆಯುವುದರಿಂದ, ಭತ್ತ ಎಂಬುದಕ್ಕೆ ಶಾಲಿಎನ್ನುವ ಪದದಿಂದ ಸಾಲಿಗ್ರಾಮ ಎಂಬ ಹೆಸರು ಬಂದಿದೆ ಎಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ.

ಪುರಾಣ ಕಾಲದಿಂದಲೂ ಈ ಊರು ಪ್ರಸಿದ್ಧ ಕ್ಷೇತ್ರವಾಗಿದೆ. ಇತಿಹಾಸ ತೆರೆದು ನೋಡಿದರೆ ನಮಗೆ ಗಂಗರು, ಚೋಳರು, ಹೊಯ್ಸಳರು, ಚಂಗಾಳ, ಕೊಂಗಾಳ್ವ, ವಿಜಯನಗರ, ಮೈಸೂರು ರಾಜರ ಆಡಳಿತ ಕಾಲದಲ್ಲಿ ಸಾಲಿಗ್ರಾಮ ತನ್ನದೇ ವಿಶಿಷ್ಟಪಾತ್ರವಹಿಸಿ ತನ್ನ ಸುತ್ತ ಪುಟ್ಟಇತಿಹಾಸವನ್ನು

ನಿರ್ಮಿಸಿಕೊಂಡಿದೆ. ಈ ದೇವಾಲಯದಲ್ಲಿ ಜೈನಮುನಿಗಳ ಜನನ ಕಥೆ ಹಾಗೂ ಧಾರ್ಮಿಕ, ಪೂಜೆ, ಮುನಿಗಳ ಸಾಧನೆ ಮತ್ತು ಭೀಕ್ಷೆ ಸ್ವೀಕರಿಸುತ್ತಿರುವ ಮುನಿಗಳ ಮತ್ತು ಹಲವು ಬಗೆಗಳ ಚಿತ್ರಗಳನ್ನು ಇಲ್ಲಿ ಚಿತ್ರಿಸಿದ್ದಾರೆ. ಅವುಗಳು ದೇವಾಲಯದ ಒಳ ನವರಂಗದ ಕಂಬಗಳ, ಜಂತಿ, ತೊಲೆಗಳ ಮೇಲೆ ಚಿತ್ರಿಸಿರುತ್ತಾರೆ. ಮೊದಲು ಸಸ್ಯ ಮತ್ತು ಖನಿಜವರ್ಣಗಳನ್ನು ಬಳಸಿಚಿತ್ರಿಸಿದ್ದರೂ, ಕಾಲನಂತರದಲ್ಲಿ ಈಗ ತೈಲವರ್ಣವನ್ನು ಉಪಯೋಗಿಸಿ ಮರುಜೀವ ನೀಡಿರುತ್ತಾರೆ ಮೊದಲು ಅರಮನೆಯ ಕಲಾವಿದರು ಇಲ್ಲಿ ಚಿತ್ರಿಸಿದ್ದು ಅರಮನೆ ದಾಖಲೆಯಲ್ಲಿ ಉಲ್ಲೇಖವಿದೆ. ಅದರಲ್ಲಿ ೧೮೭೮ರಲ್ಲಿ ವೀರಪ್ಪ-ತಿಮ್ಮಪ್ಪ ಮೈಸೂರಿನ ಶ್ರೀಮಂತರು ವರ್ಧಮಾನ ಮನೆತನದವರು ಈ ದೇವಾಲಯ ಕಟ್ಟಿಸಿದ್ದಾರೆ. ಇಲ್ಲಿ ಭಿತ್ತಿಚಿತ್ರಕಲೆಯು ಸರಳವಾಗಿ ರೇಖಾ ಪ್ರದಾನವಾಗಿ ಚಿತ್ರಿತವಾಗಿದ್ದು, ಮೂಲತಃ ಮೈಸೂರು ಶೈಲಿಯಲ್ಲದೆ ಇತೀಚೆಗೆ ಹಳೆಯ ಚಿತ್ರದ ಆಕಾರಗಳನ್ನು ಉಳಿಸಿಕೊಂಡು ತೈಲವರ್ಣದಲ್ಲಿ ಇಡಿ ಚಿತ್ರಗಳನ್ನು ತಿದ್ದಿಬರೆದಿದ್ದಾರೆ.

ಇಲ್ಲಿನ ಭಿತ್ತಿಚಿತ್ರಗಳಲ್ಲಿ ಎರಡು ರೀತಿ ಕಂಡುಬರುತ್ತದೆ. ಒಂದು ಗೋಡೆಯ ಮೂಲೆ ೧೪ನೆಯ ಜೈನಮುನಿಗಳ ಜನನದ ಕಥಾಆಧಾರದ ಭಿತ್ತಿಚಿತ್ರಗಳು, ಸ್ಥಳಮಹಾತ್ಮೆಯ ಚಿತ್ರಗಳು, ಅಂದರೆ ಇಲ್ಲಿನ ಅರಸರ ಕೆಲವು ಚಿತ್ರಗಳು, ಜೈನಮುನಿಗಳ ಧಾನ್ಯ, ಆಹಾರ ಸ್ವೀಕರಣಚಿತ್ರಗಳು, ಸ್ಥಳಿಯ ದೇವಾಲಯ ಪುರಾಣಗಳ ಚಿತ್ರಗಳು ಇದರಲ್ಲಿ ಸೇರಿದೆ. ಎರಡನೆಯದ ಗೋಡೆಯ ಮೇಲೆ ಜೈನಸಂಪ್ರದಾಯ ಎರಡು ದೊಡ್ಡ ಚಿತ್ರಗಳು ಇದೆ. ಅದು ನಂದೀಶ್ವರ ದೀಪಾ, ಮೂರು ಲೋಕದ ಚಿತ್ರ, ಜಂಬೋದಿಂದ ಜೈನಧರ್ಮದ ಸಾರ ತಿಳಿಸುವ ಚಿತ್ರವಾಗಿರುತ್ತದೆ. ಎರಡು ಭಾವಚಿತ್ರಗಳು ಮೋತಿಖಾನೆ ತಿಮ್ಮಪ್ಪ, ಶ್ರೀಮತಿ ಪೊಮಕ್ಕಮ್ಮ ಎಂಬ ಭಾವಚಿತ್ರಕಲಾಕೃತಿಗಳು ಇರುತ್ತದೆ. ಮೇಲ್ಛಾವಣಿಯಲ್ಲಿ ಅನೇಕ ಅಲಂಕಾರಿಕ ನಕ್ಷಾಚಿತ್ರಗಳು ಸಹ ಇರುತ್ತದೆ.

ತೊಲೆ ಮತ್ತು ಕಂಬ, ಜಂತಿಗಳ ಮೇಲೆ ರಚಿಸಿರುವ ಭಿತ್ತಿಚಿತ್ರಗಳು ಕಥಾ ಆಧಾರಿತಗಳು ಚಿಕ್ಕದಾಗಿ, ಉದ್ದವಾಗಿ ಸಂಯೋಜಿಸಿ ಚಿತ್ರಿಸಿದ್ದಾರೆ. ಮೈಸೂರು ಶೈಲಿಯಲ್ಲಿ ಎಲ್ಲಾ ಆಕೃತಿಗಳು ರಚನೆಗೊಂಡಿರುತ್ತದೆ. ಚಲನಭರಿತವಾದ ರೇಖಾಸೌಂದರ್ಯ ಆಕೃತಿಯಲ್ಲಿ ಇದೆ. ಮೈಸೂರು ಶೈಲಿಯ ದುಂಡು ಆಕಾರ ತುಂಬು ದೇಹಾಕೃತಿ ಒಡವೆಆಭರಣಗಳು, ಅಲಂಕಾರಭರಿತ ಮತ್ತು ಸೀರೆ ಮತ್ತು ಕುಪ್ಪಸ ರವಿಕೆ ತೊಟ್ಟ ಸ್ತ್ರೀಯರು ಬಣ್ಣ ಬಣ್ಣದ ಅಂಗಿ ಮತ್ತು ಪಂಚೆ ತೊಟ್ಟ ಗಂಡಸರ ಆಕೃತಿಗಳನ್ನು ಚಿತ್ರಿಸಿ, ಅರಮನೆಯ ವೈಭವ ಸಾರುವ ಜೊತೆ ರಾಜರಾಣಿ, ಸೇವಕರನ್ನು ಸರಿಯಾಗಿ ಸಂಯೋಜಿಸಿ ಚಿತ್ರದ ಸೌಂದರ್ಯಕ್ಕೆ ಶೋಭೆ ತಂದಿದ್ದಾರೆ. ಪಟ್ಟಣ ತೋರುವ ಮನೆಗಳು ಬೀದಿ, ಮರಗಿಡಗಳ ಜೊತೆ ಪರಿಸರವನ್ನು ಬಳಸಿಕೊಂಡು ಚಿತ್ರಿಸಿದ್ದಾರೆ.

೩.೧೨.೧, ಜೈನಮುನಿಗಳ ಮೊದಲನೆಯ ಚಿತ್ರ

ಈ ಚಿತ್ರವು ಜೈನಮುನಿಗಳಿಗೆ ಸಂಬಂಧಿಸಿದ ಈ ಸರಣಿಚಿತ್ರವನ್ನು ಚಿತ್ರಿಸಿದ್ದಾರೆ. ಮೊದಲನೆಯ ಸಾಲಿನಲ್ಲಿ ಅರಸರ ಆಸ್ಥಾನದಲ್ಲಿ ಮುನಿಗಳ ಬಗ್ಗೆ ಅರಸರು ವಿಚಾರಿಸುತ್ತಿದ್ದಾರೆ. ಅರಸನು ಮುನಿಗಳಿಗೆ ನೀಡಲು ಆಹಾರ, ಫಲಗಳನ್ನು ಸಿದ್ದಪಡಿಸಿ ಇಟ್ಟಿರುವುದು, ಮುನಿಗಳಿಗೆ ರಾಜನ್ನು ಬಿಕ್ಷೆ ನೀಡುತ್ತಿರುವ ಚಿತ್ರ ಮತ್ತು ಮುನಿಗಳು ಧರ್ಮದ ಬಗ್ಗೆ ಭೋಧನೆ ಮಾಡುತ್ತಿರುವ ಚಿತ್ರವು ಒಂದು ಅಡಿ ಎತ್ತರ ಆರುಅಡಿ ಉದ್ದವಿರುವಂತೆ ಚಿತ್ರಿಸಿದ್ದಾರೆ. ಧರ್ಮಭೋಧನೆ ಚಿತ್ರದಲ್ಲಿಊರಿನ ಮುಖಂಡರು ಸೇರಿದ್ದಾರೆ. ಮತ್ತು ಒಂದು ಉಗ್ರಹುಲಿಯು ಶಾಂತವಾಗಿ ಇವರ ಬಳಿ ಕುಳಿತಿದೆ. ಮುನಿಗಳು ಬೆತ್ತಲೆಯಾಗಿರುತ್ತಾರೆ. ಅವರ ಧರ್ಮದ ನಿಯಮದಂತೆ ದಿಕ್ಷೇಪಡೆದ ಮುನಿಗಳು ಹೀಗೆ ಇರುತ್ತಾರೆ. ಜನರು, ರಾಜನು ಮಾತ್ರ ಬಟ್ಟೆಧರಿಸಿದ್ದಾರೆ. ಗಿಡಮರಗಳನ್ನು ಅಲಂಕಾರಿಕವಾಗಿ ಚಿತ್ರಿಸಿದ್ದು ಅದರಲ್ಲಿ ಹೂವುಗಳು ಅರಳಿದೆ. ಹಿನ್ನೆಲೆಯ ವರ್ಣವು ಹಿಂದಿನ ದೇವಾಲಯಗಳು ಇರುವಂತೆ ಕೆಂಪುವರ್ಣ ಇಲ್ಲಿ ಪ್ರಧಾನವಾಗಿ

ಬಳಸಿದ್ದಾರೆ. ಕಪ್ಪು ಮತ್ತು ಕೆಂಪು ರೇಖೆಗಳು ಈ ಚಿತ್ರಗಳಲ್ಲಿ ಕಂಡುಬರುತ್ತದೆ. ಈ ಚಿತ್ರದಲ್ಲಿ ಯಾವುದೇ ನೆರಳು ಬೆಳಕನ್ನು ಚಿತ್ರದಲ್ಲಿ ತೋರಿಸದೆ ಕೇವಲ ಆಕೃತಿಗಳ ದುಂಡುತನವನ್ನು ಮಾತ್ರ ವರ್ಣದಿಂದ ತೋರಿಸಿದ್ದಾರೆ. ಅಂದರೆ ಅದಕ್ಕೆ ಮಾತ್ರ ಪ್ರಧಾನ್ಯತೆಕೊಟ್ಟಿರುತ್ತಾರೆ. ಸನ್ನಿವೇಶತಕ್ಕಂತೆ ಮತ್ತು ಕಥೆಗೆ ತಕ್ಕಂತೆ ದೃಶ್ಯಸಂಯೋಜನೆಯನ್ನು ಮಾಡಿರುತ್ತಾರೆ.

೩.೧೨.೨, ಜೈನಮುನಿಗಳ ಎರಡನೆಯ ಸರಣಿಯ ಚಿತ್ರ

ಈ ಸರಣಿಯ ಚಿತ್ರವು ಸಹ ಒಂದು ಅಡಿ ಎತ್ತರ ಆರು ಅಡಿ ಉದ್ದದ ಅಳತೆಯಲ್ಲಿ ಚಿತ್ರಿಸಿದ್ದಾರೆ. ಇಲ್ಲಿಯೂ ಸಹ ಇಬ್ಬರು ಮುನಿಗಳು ಕುಳಿತು ಊರಿನ ಜನರಿಗೆ ಶಾಂತಿ, ಧರ್ಮದ ಬಗ್ಗೆ ಭೋಧನೆ ಮಾಡುತ್ತಾ ಆಶೀರ್ವಾದ ಮಾಡುತ್ತಿದ್ದಾರೆ. ಮುನಿಗಳು ಸಾಧಾರಣ ಪೀಠದ ಮೇಲೆ ಕುಳಿತಿದ್ದಾರೆ. ಈ ಚಿತ್ರದಲ್ಲಿ ಹುಲಿ, ಆನೆ, ಕೋತಿ ಮತ್ತು ಜಿಂಕೆ ಇವುಗಳು ಸಹ ಮುನಿಗಳ ಹತ್ತಿರ ಬಂದು ಶಾಂತತೆಯಿಂದ ಇರುವಂತೆ ಕಲಾವಿದ ಚಿತ್ರಿಸಿರುತ್ತಾನೆ. ಮತ್ತೊಂದರಲ್ಲಿ ಮರದ ಕೆಳಗೆ ಮುನಿಗಳ ಹತ್ತಿರ ಹೆಣ್ಣುಮಗಳು ಆಶೀರ್ವಾದ ಪಡೆಯುತ್ತಿದ್ದಾಳೆ. ಇವರ ಮುಂದೆ ಬಂಡೆಕಲ್ಲುಗಳು ಇರುತ್ತದೆ. ಅದರ ಪಕ್ಕದಲ್ಲಿಯೂ ಪ್ರಾಣಿಗಳು ಇದ್ದು ನಂತರದ ಚಿತ್ರದಲ್ಲಿ ಮುನಿಗಳಿಗೆ ಒಂದು ಮಂಟಪವನ್ನು ಕಟ್ಟಿ ಅದರಲ್ಲಿ ಅವರಿಗೆ ಒಂದು ತೂಗುಊಯ್ಯಾಲೆ ಸಿದ್ದ ಮಾಡಿರುತ್ತಾರೆ. ಭಕ್ತರು ಭಕ್ತಿಯಿಂದ ಕೈಮುಗಿದು ನಿಂತಿದ್ದಾರೆ. ನೆಲದಲ್ಲಿ ಹಸಿರು ಹುಲ್ಲು ತೋರಿಸಿ ಮರವನ್ನು ಅಲಂಕಾರಿಕವಾಗಿ ಚಿತ್ರಿಸಿ ಅದರಲ್ಲಿ ಹೂವುಗಳನ್ನು ತೋರಿಸಿದ್ದಾರೆ.

ಹಿನ್ನೆಲೆಯ ವರ್ಣವನ್ನು ಅರಮನೆಯ ಭಿತ್ತಿಚಿತ್ರಗಳಂತೆ ಕೆಂಪು ವರ್ಣದಿಂದಲೇ ಪೂರ್ಣ ಪ್ರಮಾಣದಲ್ಲಿ ಅವರಿಸಿ ಚಿತ್ರಕಲೆಗೆ ಒಂದು ಮೆರಗನ್ನು ತಂದಿದ್ದಾರೆ. ಉಳಿದ ವರ್ಣವನ್ನು ನೀಲಿ, ಬಿಳಿ, ಹಳದಿ, ಹಸಿರು, ತಿಳುಕೆಂಪು ಮತ್ತು ಕಪ್ಪು ರೇಖೆಗಳಿಂದ ಸುಂದರ ಭಿತ್ತಿಚಿತ್ರಗಳನ್ನು ಚಿತ್ರಿಸಿದ್ದಾರೆ, ಮೇಲ್ಚಾವಣಿಯ ಮೇಲಿನ ಚಿತ್ರಗಳಲ್ಲಿ ವರ್ಣಸಂಯೋಜನೆಯು ಕೆಂಪು, ನೀಲಿ, ಪ್ರಧಾನವಾಗಿ ಕಂಡುಬರುತ್ತದೆ. ಗೋಡೆಯ ಮೇಲಿನ ಚಿತ್ರಗಳಲ್ಲಿ ಹಳದಿವರ್ಣವೇ ಪ್ರಧಾನವಾಗಿದ್ದು, ಒಟ್ಟಾಗಿ ಅದ್ಭುತ ವರ್ಣ ಸಂಯೋಜನೆಯಲ್ಲಿ ಆಕೃತಿಗಳಲ್ಲಿ ಭಾವನೆಯನ್ನು ಸ್ಪಷ್ಟವಾಗಿ ಹೊರಹೊಮ್ಮುತ್ತಿರುವ ಚಿತ್ರಗಳನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಇವು ಮೈಸೂರು ಶೈಲಿಯ ಅದ್ಭುತವಾದ ಭಿತ್ತಿಚಿತ್ರಗಳಾಗಿವೆ.

ಜೈನಚಿತ್ರಕಲೆಯ ಕುರಿತು ಜೈನಸಾಹಿತ್ಯದಲ್ಲಿ ಚಿತ್ರಕಲಾತಂತ್ರ ಕುರಿತು ಅನೇಕ ವಿಚಾರಗಳು ಬರೆಯಲ್ಪಟ್ಟಿವೆ. ಜೈನಚಿತ್ರಕಲೆಯ ಕಾಲ ೧೧ರಿಂದ ೧೫ನೇ ಶತಮಾನದ್ದೆಂದು ಹೇಳುತ್ತಾರೆ. ಕರ್ನಾಟಕಕ್ಕಿಂತ ಗುಜರಾತ್, ರಾಜಾಸ್ಥಾನ ಮುಂತಾದ ಭಾಗಗಳಲ್ಲಿ ಹೆಚ್ಚು ಕಂಡುಬರುತ್ತದೆ. ಜೈನ ಚಿತ್ರಗಳಲ್ಲಿ ವಿಶಾಲವಾದ ಎದೆ. ಅಗಲವಾಗಿ ಚಿತ್ರಿಸಿದ್ದ ಕಣ್ಣುಗಳಿರುತ್ತವೆ. ತ್ರಿಕೋನಾಕಾರದ ಮೂಗು, ದೀರ್ಘವಾದ ಕಣ್ಣಿನ ಮೇಲೆ, ಬಿಲ್ಲಿನಾಕಾರದ ಹುಬ್ಬುಗಳು, ಕೋನಯುಕ್ತವಾದ ಮುಖ, ಸಪೂರವಾದ ಸೊಂಟ, ಮೊದಲಾದ ವೈಶಿಷ್ಟ್ಯಗಳು ಇಲ್ಲಿ ಕಂಡುಬರುತ್ತದೆ.

ಮೈಸೂರಿನ ಭಿತ್ತಿಚಿತ್ರಕಲೆಯು ಪರಂಪರಾಗತವಾಗಿ ಬಂದ ಶಿಷ್ಟಪದಕ್ಕೆ ಸೇರಿ ಕಲಾತ್ಮಕ ಸಂವೇದನೆಗಳು ಸಂದರ್ಭದಲ್ಲಿ ಉಂಟಾದ ಸನ್ನಿವೇಶವನ್ನು ಮೈಗೂಡಿಸಿಕೊಂಡು ಪ್ರಾರಂಭಿಸಿದ್ದರು. ಅದು ದೇಶದಲ್ಲಿ ಕ್ರಾಂತಿ ಎಬ್ಬಿಸಿದ ಪಾಶ್ಚಿಮಾತ್ಯ ಚಿತ್ರಕಲೆಯ ಶೈಲಿಯಾದ ಕಂಪನಿಸ್ಕೂಲ್ ಮತ್ತು ವಿಕ್ಟೋರಿಯನ್ ಶೈಲಿಯ ಪ್ರಭಾವದಿಂದ ಮುಕ್ತವಾಗಿ ವಿದೇಶಿ ಸಂವೇದನೆಗಳಿಗೆ ಮಾರುಹೋಗದೇ, ನಮ್ಮ ಕಲಾವಿದರು ಆದಷ್ಟೂ ನೈಜತೆ ತರುವ ಪ್ರಯತ್ನ ಆಕೃತಿಗಳಲ್ಲಿ ಕಂಡುಬರುತ್ತದೆ. ಆಕೃತಿಗಳಲ್ಲಿ ಕೊಂಚ ಕುಳ್ಳು ಎನಿಸಿದ್ದರು, ದೇಹಕೃತಿಯಲ್ಲಿ ಅಗಲವಾದ ಎದೆಭಾಗವಿದ್ದು. ಸ್ತ್ರೀಯಾಗಿದ್ದಲ್ಲಿ ದುಂಡಾಗಿ ಪುಷ್ಟವಾಗಿ

ಕಾಣುವ ರೇಖೆಗಳನ್ನು ವಕ್ರವಾಗಿ ಚೆನ್ನಾಗಿ ದುಡಿಸಿಕೊಂಡಿರುತ್ತಾರೆ. ಒಟ್ಟಾರೆ ಹೇಳಬೇಕಾದರೆ ಸ್ಥಳೀಯ ಲಕ್ಷಣಹೊಂದಿರುತ್ತದೆ. ವಿಜಯನಗರದ ಭಿತ್ತಿಚಿತ್ರಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ. ಮೈಸೂರಿನ ಭಿತ್ತಿಚಿತ್ರಕಲೆಯು ತನ್ನದೆ ತಂತ್ರ, ಶೈಲಿಯಿಂದ ಪ್ರಸಿದ್ಧಿ ಪಡೆದಿರುತ್ತದೆ. ಇಲ್ಲಿನ ಅರಸರು ಎಲ್ಲಾ ತರಹದ ಭಿತ್ತಿಚಿತ್ರಕಲೆಯ ಪ್ರಕಾರಕ್ಕೆ ಪ್ರೋತ್ಸಾಹ ನೀಡಿದ್ದರಿಂದ ಈ ಸಂಪ್ರದಾಯದ ಭಿತ್ತಿಚಿತ್ರಕಲೆ, ಮಧ್ಯಸಮಕಾಲೀನ ಭಿತ್ತಿಚಿತ್ರಕಲೆ ಮತ್ತು ಆಧುನಿಕ ಭಿತ್ತಿಚಿತ್ರಕಲೆಯು ಈ ಜಿಲ್ಲೆಯಲ್ಲಿ ಬೆಳೆದಿರುತ್ತದೆ.

ಆಧುನಿಕತೆಯ ಕಾಲದಲ್ಲಿ ಚಿತ್ರಿಸಿರುವ ಭಿತ್ತಿಚಿತ್ರಕಲೆಯೂ ಮೈಸೂರು ಜಿಲ್ಲೆ ಮತ್ತು ತಾಲೂಕುಗಳಲ್ಲಿ ಕಂಡುಬರುತ್ತದೆ. ಅದು ಆಧುನಿಕತೆಯ ಪ್ರಭಾವ ಹಾಗೂ ಹೊಸ ಮಾಧ್ಯಮಗಳು ಅಲ್ಲದೆ ರಾಸಾಯನಿಕ ವರ್ಣಗಳು, ಸಿಂಥೆಟಿಕ್ ಬ್ರೇಸ್‌ಗಳು, ಡಿಸ್ಟಂಪರ್ ಹಾಗೂ ಯಂತ್ರಸಲಕರಣೆಗಳಿಂದಲೂ ಭಿತ್ತಿಚಿತ್ರಗಳನ್ನು ಚಿತ್ರಿಸಿದ್ದಾರೆ. ಅದರಲ್ಲಿ ಪುರಾಣ, ಭಗವದ್ಗೀತೆ ರಾಮಾಯಣ, ಮಹಾಭಾರತ, ಆಲಂಕಾರಿಕ ಮತ್ತು ಜ್ಯಾಮಿತಿ ನಕ್ಷಾಚಿತ್ರಗಳು ಇದೆ ಭಿತ್ತಿಚಿತ್ರಗಳಲ್ಲಿ ವಸ್ತುವಿಷಯವಾಗಿ ಧಾರ್ಮಿಕತೆಯೇ ಹೆಚ್ಚಾಗಿ ಕಂಡುಬರುತ್ತದೆ. ಅದು ದೇವಾಲಯಗಳಲ್ಲಿ, ಮ್ಯೂಸಿಯಂ ಮತ್ತು ರಂಗಮಂಟಪಗಳಲ್ಲಿ ಕಂಡುಬರುತ್ತದೆ.

೩.೧೩, ಸುತ್ತೂರುಮಠದ ವಸ್ತುಸಂಗ್ರಹಾಲಯದಲ್ಲಿನ ಭಿತ್ತಿಚಿತ್ರಗಳು

ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ಸುತ್ತೂರಿನ ಮಠದಲ್ಲಿ ಸುಂದರ, ವ್ಯವಸ್ಥಿತವಾದ ಒಂದು ಸಂಗ್ರಹಾಲಯವಿದೆ ಅದು ಸ್ವಾಮಿಜೀಯವರುಗಳ ಆಸಕ್ತಿಯಿಂದ ಜನ್ಮ ತಳೆದಿರುತ್ತದೆ. ಇಲ್ಲಿನ ಎರಡು ಭಿತ್ತಿಚಿತ್ರಗಳು ವಾರ್ಲಿಗೆ ಸಂಬಂಧಪಟ್ಟ ಭಿತ್ತಿಚಿತ್ರವಾಗಿರುತ್ತದೆ. ಭಿತ್ತಿನಿರ್ಮಾಣವು ಆಧುನಿಕ ಸಿಮೆಂಟ್ ಗಾರೆಯಿಂದ ಮತ್ತು ಆಕ್ರಲಿಕ್ ವರ್ಣದಿಂದ ದೊಡ್ಡದಾಗಿ ಚಿತ್ರಿಸಿರುತ್ತಾರೆ. ಅದರಲ್ಲಿ ಅನೇಕ ಕಥಾ ಸನ್ನಿವೇಶಗಳಿದ್ದು, ಅವು ಹಳ್ಳಿಗಾಡಿನ ಪರಿಸರ, ಪ್ರಾಣಿ, ಪಕ್ಷಿ, ಗಿಡ, ಮರ, ಹಬ್ಬಹರಿದಿನದ ಸಂಭ್ರಮದ ಸನ್ನಿವೇಶಗಳ ಕುರಿತಾದ ಎರಡು ಪ್ಯಾನಲ್‌ಗಳಲ್ಲಿ ಸಂಯೋಜನೆ ಮಾಡಿ ಚಿತ್ರಿಸಲಾಗಿದೆ. ಹಿನ್ನೆಲೆಯ ವರ್ಣವು ಕಾವಿಬಣ್ಣದಿಂದ ಕೂಡಿ ಚಿತ್ರದಲ್ಲಿ ಕೃತಿಗಳು ಮಾತ್ರ ಬಿಳಿಯ ವರ್ಣದಿಂದ ಚಿತ್ರಿಸಿರುತ್ತಾರೆ. ಇದು ಜಾನಪದ ಶೈಲಿ ಭಿತ್ತಿಚಿತ್ರಕಲೆಯಾಗಿದೆ.

ಈ ಚಿತ್ರವು ಮಹಾರಾಷ್ಟ್ರದ ಥಾನಾ ಜಿಲ್ಲೆಯ (ಮುಂಬಯಿ ಸಮೀಪ) ವಾರ್ಲಿ ಬುಡಕಟ್ಟು ಜನರ ಕಲೆಯಾಗಿದೆ. ಇದಕ್ಕೆ ವಾರ್ಲ್ಲಿ ಚಿತ್ರಗಳು ಎನ್ನುತ್ತಾರೆ. ಈ ಚಿತ್ರದಲ್ಲಿ ರೇಖೆಗಳು ಸಮರ್ಥವಾದ ಸಂವೇದನಾಶೀಲ ಹಾಗೂ ಚಲನೆಯೊಂದಿಗೆ ಜೀವಂತ ರೇಖೆಯಿರುವ ಆಕೃತಿಗಳು ತುಡಿತಗಳನ್ನುಂಟು ಮಾಡುತ್ತವೆ. ಮಾನವನ ಅಪೂರ್ವ ಹಾಗೂ ಆತ್ಮೀಯ ಸಂಬಂಧಗಳನ್ನು ಈ ಚಿತ್ರಗಳಲ್ಲಿ ಕಾಣಬಹುದು. ಇವರುಗಳು ರೈಲುಗಳು, ಮೋಟಾರು, ಕಾರುಗಳು ಪರಿಸರ ಮತ್ತು ಪಕ್ಷಿ–ಪ್ರಾಣಿಗಳು ಮಾನವ, ಅನೇಕ ವಸ್ತುಗಳು, ಪ್ರತಿಮೆಗಳನ್ನು ಸಹ ಅವರ ಜಾಯಮಾನಕ್ಕೆ ತಕ್ಕಂತೆ ಒಳಪಡಿಸಿಕೊಂಡಿದ್ದಾರೆ.

೩.೧೪, ಮಾನವ ಮತ್ತು ಪ್ರಾದೇಶಿಕ, ಪ್ರಾಕೃತಿಕ ವಿಜ್ಞಾನ ವಸ್ತುಸಂಗ್ರಹಾಲಯ

ಭಾರತ ಸರ್ಕಾರದ ಅಡಿಯಲ್ಲಿ ಕರ್ನಾಟಕದ ಮೈಸೂರಿನ ಸಿದ್ಧಾರ್ಥನಗರದ ಈ ವಸ್ತುಸಂಗ್ರಹಾಲಯದಲ್ಲಿ ಇರುವ ಪ್ರಕೃತಿಯ ಚಿತ್ರಗಳು ಮತ್ತು ಪ್ರಾಣಿ, ಪಕ್ಷಿ ಭಿತ್ತಿಚಿತ್ರಗಳನ್ನು ಒಟ್ಟಾಗಿ ಸೇರಿಸಿ ನಿಸರ್ಗಚಿತ್ರಗಳನ್ನು ಸುಂದರವಾಗಿ ಗೋಡೆಗಳ ಮೇಲೆ ಚಿತ್ರಿಸಿದ್ದಾರೆ. ಜೊತೆಗೆ ಆದಿಮಾನವನ ಅನೇಕ ಸನ್ನಿವೇಶಗಳಿಂದ ಕೂಡಿದ ಬೇಟೆ ದೃಶ್ಯಗಳು, ಆಹಾರ ಹುಡುಕುತ್ತಿರುವ, ಬೇಟೆಹಾಡಿ ಆಹಾರ ಹೊತ್ತು ಹೋಗುತ್ತಿರುವ ಚಿತ್ರಗಳನ್ನು ಕೆಲವು ವಿಷಯಕ್ಕೆ ತಕ್ಕಂತೆ ಹಾಗೂ ಕೆಲವು ಜಾಗದಲ್ಲಿ ಹಿನ್ನೆಲೆಯ

ತೊರುವಿಕೆಗಾಗಿಯೂ ಚಿತ್ರಗಳನ್ನು ರಚಿಸಿರುವರು. ಆಧುನಿಕ ಕಾಲದಲ್ಲಿ ಹೊಸಪರಿಕರಗಳನ್ನು ಬಳಸಿ ಕಲಾವಿದರುಗಳು ಚೆನ್ನಾಗಿಯೇ ಭಿತ್ತಿಚಿತ್ರಗಳನ್ನು ಚಿತ್ರಿಸಿರುತ್ತಾರೆ.

೩.೧೫, ಶ್ರೀಲಕ್ಷ್ಮೀನರಸಿಂಹಸ್ವಾಮಿ ಸನ್ನಿಧಿ ಪರಕಾಲಮಠದ ಹತ್ತಿರ.

ಈ ದೇವಾಲಯದಲ್ಲಿ ತೈಲವರ್ಣ ಮತ್ತು ಖನಿಜಮೂಲ ವರ್ಣಗಳಿಂದಲೂ ಭಿತ್ತಿಚಿತ್ರಗಳನ್ನು ಚಿತ್ರಿಸಿರುವರು, ಗರ್ಭಗುಡಿಯ ಮುಂಭಾಗದ ಗೋಡೆಯ ಮೇಲೆ ಮತ್ತು ಮರದ ಬಾಗಿಲು ಕಿಟಕಿಗಳ ಮೇಲೆ ಅಲಂಕಾರಿಕ ಚಿತ್ರಗಳನ್ನು ಖನಿಜಮೂಲ ವರ್ಣವನ್ನು ಈ ಭಿತ್ತಿಚಿತ್ರಗಳಿಗೆ ಬಳಸಿರುವರು ಈಗ ಅವುಗಳು ಸ್ವಲ್ಪ ಮಂಕಾಗಿ ಕಂಡುಬರುತ್ತವೆ. ಜೊತೆಗೆ ಆಧುನಿಕ ತೈಲವರ್ಣದಲ್ಲಿಯೂ ಗೋಡೆಯ ಮೇಲೆಯು ಲಕ್ಷ್ಮೀನರಸಿಂಹದೇವರು ತನ್ನ ಹೆಂಡತಿಯಾದ ಲಕ್ಷ್ಮೀದೇವಿಯನ್ನು ಎಡತೊಡೆಯ ಮೇಲೆಯೇ ಕುಳಿತಿರುವಳು, ಹಾಗೇ ಆಂಜನೇಯ ಮತ್ತು ಗರುಡದೇವರು ಇಬ್ಬರು ಕೈಮುಗಿದು ನಿಂತಿರುವ ಚಿತ್ರವಿದೆ. ಹಿನ್ನೆಲೆಯ ವರ್ಣವು ನೀಲಿವರ್ಣವನ್ನು ಚಪ್ಪಟೆಯಾಗಿ ಬಳಸಿದ್ದಾರೆ. ದೇಹಕ್ಕೆ ತಿಳಿಕೆಂಪುವರ್ಣ ಹಚ್ಚಿರುತ್ತಾರೆ, ಸರಳ ಉಡುಗೆತೊಡುಗೆ, ಆಭರಣವನ್ನು ಧರಿಸಿರುವಂತೆ ಚಿತ್ರಸಿದ ಕಲಾವಿದನ ಹೆಸರು ತಿಳಿದುಬರುವುದಿಲ್ಲ.

೩.೧೬, ರಾಮ್‌ಸನ್ಸ್ ಬೊಂಬೆಮನೆಯಲ್ಲಿರುವ ಮದುವೆ ಸಂಭ್ರಮದ ಒಂದು ಭಿತ್ತಿಚಿತ್ರ :

ಮೈಸೂರು ನಗರದ ನಜರಾಬಾದ್ ಪೋಲಿಸ್ ಸ್ಟೇಷನ್ ಹತ್ತಿರ, ಇರುವ ರಾಮಸನ್ಸ್ ಕಲಾಪ್ರತಿಷ್ಠಾನ ರವರು ಕಲಾಪೋಷಕರಾಗಿ ಈ ಜಿಲ್ಲೆಯಲ್ಲಿ ಗುರುತಿಸಿಕೊಂಡಿರುತ್ತಾರೆ. ಅವರದೇ ಆದ ಈ ಅಂಗಡಿಯ ಗೋಡೆಯ ಮೇಲೆ ಮದುವೆ ಸಂಭ್ರಮದ ಒಂದು ಭಿತ್ತಿಚಿತ್ರವನ್ನು ಕಲಾವಿದರಿಂದ ಚಿತ್ರಿಸಿರುತ್ತಾರೆ. ಅದು ಮೈಸೂರು ಶೈಲಿಯಲ್ಲಿ ರಚನೆಗೊಂಡಿದೆ. ಸರಳಸುಂದರವಾಗಿಯೂ ಇದ್ದು ಅದರಲ್ಲಿ ಮದುವೆ ಗಂಡು ಹೆಣ್ಣಿಗೆ ತಾಳಿಕಟ್ಟುತ್ತಿದ್ದು ಸುತ್ತಲೂ ಹೆಂಗೆಳೆಯರು ಮತ್ತು ಮಕ್ಕಳು ಸಂತೋಷ ಸಡಗರದಿಂದ ಅಲಂಕರಿಸಿಕೊಂಡು ನೋಡುತ್ತಿರುವರು. ಇನ್ನೂ ಕೆಲವರು ಅಲಂಕರಿಸಿಕೊಂಡು ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದಾರೆ ಮಕ್ಕಳು ಸಹ ಕುತೂಹಲದಿಂದ ನೋಡುತ್ತಾ ಸಂತೋಷಪಡುತ್ತಿದ್ದಂತೆ ಇದ್ದು. ಈ ಚಿತ್ರದಲ್ಲಿ ಹಿನ್ನೆಲೆಯ ವರ್ಣವು ಬಿಳಿಬಣ್ಣದಿಂದ ಕೊಡಿದ್ದು, ಈ ಚಿತ್ರದಲ್ಲಿ ರೇಖೆಯೆ ಆಕೃತಿಯ ಜೀವಾಳವಾಗಿ ಕಂಡುಬರುತ್ತೆ. ಕೆಲವೆ ವರ್ಣಬಳಸಿ ಕಲಾವಿದನ್ನು ಹಿತಮಿತವಾಗಿ ಭಿತ್ತಿಚಿತ್ರವನು ರಚಿಸಿದ್ದಾರೆ.

೩.೧೭, ಸತ್ಯನಾರಾಯಣಸ್ವಾಮಿ ದೇವಸ್ಥಾನದಲ್ಲಿರುವ ಎರಡು ಭಿತ್ತಿಚಿತ್ರ

ಮೈಸೂರು ನಗರದ ಸಯ್ಯಾಜಿರಾವ್‌ರಸ್ತೆಯ ಖಾಸಗಿ ಬಸ್ ನಿಲ್ದಾಣ ಹತ್ತಿರ ಇರುವ ದೇವಾಲಯದೊಳಗೆ ಎರಡು ಭಿತ್ತಿಚಿತ್ರಗಳು ಇದ್ದು ಈ ದೇವಾಲಯದೊಳಗೆ ಹೋಗುವಾಗ ಎಡಬಲಗಳ ಗೋಡೆ ಮತ್ತು ಮೇಲ್ಛಾವಣಿಯ ಮೇಲೆಯ ಅಲಂಕಾರಿಕ ಹೂವಿನ ನಕ್ಷೆ ಮತ್ತು ಗಂಧರ್ವರು ಹೂವಿನ ಬುಟ್ಟಿಯಲ್ಲಿ ಹೂವು ಚೆಲ್ಲುತ್ತಿರುವ ಚಿತ್ರಗಳನ್ನು ಚಿತ್ರಿಸಿರುವರು. ಗೋಡೆಯ ಮೇಲೆ ಗಿರಿಜಾಕಲ್ಯಾಣದ ಸಂದರ್ಭ ಸಾರುವಚಿತ್ರ, ಮತ್ತೊಂದು ಮಹಾಭಾರತದಲ್ಲಿ ಕೃಷ್ಣನು ಅರ್ಜುನನಿಗೆ ಭಗವತ್‌ಗೀತೆ ಹೇಳುತ್ತಿರುವ ಭಿತ್ತಿಚಿತ್ರವಿದು ಈ ಚಿತ್ರಗಳನ್ನು ಆಧುನಿಕ ಮಾಧ್ಯಮ ಪರಿಕರಬಳಸಿದ್ದರು ಸಹ, ಧಾರ್ಮಿಕ ಸಂಬಂಧಪಟ್ಟ ಭಿತ್ತಿಚಿತ್ರವಾಗಿದ್ದು, ಅದರಲ್ಲಿ ಸಮಕಾಲೀನ ಚಿತ್ರತಂತ್ರವನ್ನು ಬಳಸಿಕೊಂಡು ಚಿತ್ರಿಸಿದ್ದಾರೆ ಕಲಾವಿದರು.

ಆಕೃತಿಗಳು ಜೀವಂತಿಕೆ ಲವಲವಿಕೆಯಿಂದ ಕೂಡಿದ ಸುಂದರವಾದ ಆಕೃತಿಗಳು ಇರುತ್ತದೆ. ವರ್ಣಗಾರಿಕೆಯೂ ಅದ್ಭುತವಾಗಿ ನಿರ್ವಹಿಸಿ ಶ್ರೀಮಂತಗೊಳಿಸಿದ್ದರಿಂದಲೇ ಎಲ್ಲರ ಕಣ್ಣುಮನ್‌ಗಳನ್ನು ಸೆಳೆಯುತ್ತದೆ. ಗಿರಿಜಾಕಲ್ಯಾಣದ ಚಿತ್ರದಲ್ಲಿ ಎಲ್ಲಾ ಸಮೂಹಗೊಂಡ ಎಲ್ಲಾದೇವತೆಗಳನ್ನು ಸುಂದರವಾಗಿ ಚಿತ್ರಿಸಿ, ಭಾವನೆಗಳನ್ನು ಮುಖ, ದೇಹದಲ್ಲಿ ಕಲಾವಿದನು ಸರಿಯಾಗಿ ತೋರಿಸಿ ಮದುವೆಯ ಸಂಭ್ರಮದ ಖುಷಿಯು ಎಲ್ಲರ ಮುಖದಲ್ಲಿ ಕಾಣುವ ಹಾಗೆ ವರ್ಣಗಾರಿಕೆಯು ಶ್ರೀಮಂತಿಕೆಯಿಂದ ಕಣ್ಣುಮನ ಸೆಳೆಯುತ್ತದೆ. ಸಾಮೂಹಿಕವಾಗಿ ಎಲ್ಲಾ ದೇವತೆಗಳ ಸಂತೋಷದಿಂದ ಕೂಡಿರುವಂತೆ ಮತ್ತು ಸನ್ನಿವೇಶಕ್ಕೆ ತಕ್ಕ ಹಾಗೆ ರಚಿಸಿರುವುದು ಕಲಾವಿದನ ವಿದ್ವತ್ ಸಹ ತೋರುತ್ತದೆ.

ಮತ್ತೊಂದು ಭಗವದ್ಗೀತೆ ಸಾರುವ ಭಿತ್ತಿಚಿತ್ರದಲ್ಲಿಯೂ ಯುದ್ಧರಂಗದ ದೃಶ್ಯವನ್ನು ಕಲಾವಿದನು ಮನೋಜ್ಞವಾಗಿ ತನ್ನ ಕೈಚಳಕದಿಂದ ಸುಂದರವಾಗಿ ಚಿತ್ರಿಸಿರುತ್ತಾನೆ. ಹಿನ್ನೆಲೆಯೂ ಯುದ್ಧ ಸನ್ನಿವೇಶಕ್ಕೆ ತಕ್ಕಹಾಗೆ ಆಕಾಶವು ಕೆಂಪೇರುತ್ತಿರುವ ಹಾಗೆ ನೆಲವು ಸಹ ಪ್ರತಿಫಲದಿಂದ ಕೆಂಪೇರುತ್ತಿದೆ ಮತ್ತು ಯುದ್ಧಕ್ಕೆ ನಿಂತಿರುವ ಅನೇಕ ಸೈನಿಕರುಗಳು ಮತ್ತು ಅರಸರು ರಥದಲ್ಲಿ ಯುದ್ಧಕ್ಕೆ ಸನ್ನದ್ಧರಾಗಿದ್ದಾರೆ. ಎಂಬಂತೆ ಇದ್ದು ಒಂದು ಉತ್ತಮವಾದ ಭಿತ್ತಿಚಿತ್ರಗಳಾಗಿದೆ.

೩.೧೮, ಗಣಪತಿ ಸಚ್ಚಿದಾನಂದ ಆಶ್ರಮದೊಳಗಿನ ಭಿತ್ತಿಚಿತ್ರಗಳು

ಮೈಸೂರಿನಿಂದ ನಂಜನಗೂಡಿಗೆ ಹೋಗುವರಸ್ತೆಯ ಬಲಬದಿಯ ದತ್ತಾನಗರದಲ್ಲಿ ಸುಂದರವಾದ ಆಶ್ರಮವಿದೆ. ಈ ಆಶ್ರಮದಲ್ಲಿ ಲಲಿತಕಲೆಯ ಮೇರು ದಾಖಲೆಗಳ ಸ್ಥಳವೆಂದರೆ ತಪ್ಪಾಗುವುದಿಲ್ಲ ಏಕೆಂದರೆ ಹನುಮಂತನ ದೊಡ್ಡ ವಿಗ್ರಹ, ಟೆರಕೂಟದ ಶಿವನಮೂರ್ತಿ, ಸ್ತಂಭಗಳು, ಪಕ್ಷಿಗಳರಕ್ಷಣೆ, ಬೋನಾಯ್ ಸಸ್ಯಪಾರ್ಕ್, ವಸ್ತುಸಂಗ್ರಹಾಲಯ, ದೇವಾಲಯಗಳು, ನಾದಮಂಟಪದಲ್ಲಿದು ಇವುಗಳೆಲ್ಲಾ ಲಲಿತಕಲೆಯ ಸಂಗಮವಾಗಿ ಈ ಆಶ್ರಮವಿದೆ. ಅಲ್ಲಿ ಆಧುನಿಕ ಮಾಧ್ಯಮದೊಳಗೊಂಡ ಭಿತ್ತಿಚಿತ್ರಗಳು ಎರಡು ದೇವಾಲಯದಲ್ಲಿ ಕಂಡುಬರುತ್ತದೆ. ವಿಶೇಷ ವಿಶ್ವವಿಖ್ಯಾತ ಕಲಾಸಾಧಕರಾದ ಶ್ರೀ ಜಯಚಾಮರಾಜೇಂದ್ರಒಡೆಯರು, ಬಿಡಾರಕೃಷ್ಣಪ್ಪ, ತಾನ್‌ಸೇನ್, ಜಯದೇವ, ತ್ಯಾಗರಾಜರು, ಪುರಂದರದಾಸರು, ವೀಣ್ಣೆಶೇಷಣ್ಣ, ವೇದವ್ಯಾಸರು, ವಾಲ್ಮಿಕೀ ಅವರಗಳ ತೈಲಚಿತ್ರಗಳು ನಾದಮಂಟಪದಲ್ಲಿ ಕಲಾಕೃತಿಗಳು ಇರುತ್ತದೆ.

ಎರಡನೆದಾಗಿ ವೆಂಕಟೇಶ್ವರ ದೇವಾಲಯದ ನವರಂಗದ ಮೇಲ್ಭಾವಣಿಯ ಮೇಲೆ ಅನೇಕ ಅಲಂಕಾರಿಕ ಹೂವಿನಚಿತ್ರಗಳು ಮತ್ತು ಗಂಧರ್ವ ಬಾಲಕರು ಹೂಮಾಲೆಯನ್ನು ಹಿಡಿದಿರುತ್ತಾರೆ. ಹಾಗೆ ದತ್ತ ದೇವಾಲಯದ ಒಳಗೆ ಕಂಬಗಳ ಮೇಲೆ ಅನೇಕ ಸಾಧುಸನ್ಯಾಸಿಗಳ ಭಿತ್ತಿಚಿತ್ರಗಳು ಇರುತ್ತದೆ, ಅವುಗಳು ಸಾಧಾರಣ ಅಳತೆಯೊಳಗೆ ಕಂಬದ ಎರಡು ಬದಿಯಲೂ ಸುಂಧರವಾದ ಕೌಶಲ್ಯದಿಂದ ಕೂಡಿದ ಚಿತ್ರಗಳನ್ನು ರಚಿಸಿರುತ್ತಾರೆ.

೩.೧೯, ಪುಷ್ಪಾಶ್ರಮದಲ್ಲಿನ ಕ್ರೈಸ್ತಧರ್ಮಕ್ಕೆ ಸಂಬಂಧಪಟ್ಟಂತಹ ಭಿತ್ತಿಚಿತ್ರ

ಬಾಲಯೇಸುವಿನ ಪುಣ್ಯಕ್ಷೇತ್ರ ಕಾರ್ಮೆಲ್ ಸಭೆ ಪುಷ್ಪಾಶ್ರಮ ಎಂದು ಕರೆಯುತ್ತಾರೆ. ಇದು ಆರ್.ಎಸ್.ನಾಯ್ಡುನಗರ, ಮೈಸೂರುನಲ್ಲದೆ. ಇಲ್ಲಿನ ಚರ್ಚ್‌ನಲ್ಲಿ ಯೇಸುವಿನ ಅಂತಿಮ ಭೋಜನದ ತೈಲವರ್ಣದ ಭಿತ್ತಿಚಿತ್ರವು ತುಂಬ ದೊಡ್ಡದಾಗಿ ಚಿತ್ರಿಸಿರುವರು, ಇಟಲಿಯ ವಿಲಾನ್‌ನಲ್ಲಿರುವ ಸಂತಮೇರಿಯ ಡೆಲ್ಲೆಗ್ರೇಜಿ ಚರ್ಚ್‌ನಲ್ಲಿ ಜಗತ್ಪ್ರಸಿದ್ಧ ಕಲಾಕಾರ ಲಿಯೋನಾರ್ಡೋ ಡಾವಿಂಚಿಯು ಬರೆದ ತೈಲವರ್ಣದ ಪುನರ್‌ಸೃಷ್ಟಿಯು ಮನಮೋಹಕವಾಗಿ ಇಲ್ಲಿಯೂ ಚಿತ್ರರಚನೆಮಾಡಿರುತ್ತಾರೆ. ಈ ಚಿತ್ರದಲ್ಲಿ ಯೇಸು ಸ್ವಾಮಿಯು ತನ್ನ ಹನ್ನೊಂದು ಜನರ ಸಹ ಶಿಷ್ಯರೊಂದಿಗೆ ಸೇರಿ ತಿಂಡಿ ತಿನ್ನುತ್ತಿರುವ

ದೃಶ್ಯವಾಗಿದೆ. ಇಲ್ಲಿ ಯೇಸುಸ್ವಾಮಿಯು ತನ್ನ ಶಿಷ್ಯರಿಗೆ ಆಹಾರ ತಿನ್ನಲೂ ಆಹ್ವಾನ ನೀಡುತ್ತಿದ್ದರೆ. ಇಲ್ಲಿ ಬನ್ನೂ, ದ್ರಾಕ್ಷರಸ ಮತ್ತು ಹಣ್ಣುಗಳನ್ನು ಇಟ್ಟಿರುತ್ತಾರೆ. ಅವುಗಳನ್ನು ಸುಂದರವಾಗಿ ನೈಜತೆಗೆ ಹತ್ತಿರ ಎಂಬಂತೆ ಕಲಾವಿದ ಚಿತ್ರಿಸಿರುತ್ತಾರೆ. ಆಕೃತಿಗಳಲ್ಲಿ ಭಾವನೆಗಳಾದ ದುಃಖ, ಸಂತೋಷ, ಭಯ-ಭಕ್ತಿಯು ಸಂಮ್ಮಿಲನತೆಯನ್ನು ಕಲಾವಿದರು ಎದ್ದು ಕಾಣುವ ಹಾಗೆ ಮತ್ತು ಒಂದು ಕೋಣೆಯಲ್ಲಿ ಎಲ್ಲಾಸೇರಿ ಭೋಜನಕೂಟಕ್ಕೆ ಸೇರಿರುವ ದೃಶ್ಯವು ಕ್ರೈಸ್ತರ ಚಿತ್ರಕಲಾಕೃತಿಯಲ್ಲಿ ಅತಿ ಮೆಚ್ಚುಗೆ ಗಳಿಸಿದ ಚಿತ್ರವಾಗಿದೆ. ಈ ದೃಶ್ಯದಲ್ಲಿ ಹಿನ್ನೆಲೆಯಲ್ಲಿ ರೂಮಿನ ಕಿಟಕಿಯ ಹೊರಗೆ ಕಾಣುವ ಪ್ರಕೃತಿಚಿತ್ರವನ್ನು ಸಹ ಚೆನ್ನಾಗಿ ಚಿತ್ರಿಸಿದ್ದಾರೆ. ಕಲಾವಿದನು ಇಲ್ಲಿ ಪ್ರತಿಕೃತಿ ಮಾಡುವಾಗ ತೋರಿರುವ ಜಾಣ್ಮೆ ಇರುವ ಸ್ಥಳವಾಕಾಶವನ್ನು ಬಳಸಿಕೊಂಡು ಉತ್ತಮ ಭಿತ್ತಿಚಿತ್ರವನ್ನು ಇಲ್ಲಿ ರಚಿಸಿದ್ದಾನೆ.

೩.೨೦, ಮೈಸೂರಿನ ಪ್ರಾಂತ್ಯದಲ್ಲಿ ಟಿಬೇಟಿನ ಥಾಂಕ ಭಿತ್ತಿಚಿತ್ರಕಲೆ

ಆಧುನಿಕ ಕಾಲವಾದ ೧೯ನೇ ಶತಮಾನದಲ್ಲಿ ನಿರ್ಮಾಣಗೊಂಡರು ಸಹ ಅಲ್ಲಿನ ಸಂಪ್ರದಾಯ ಬದ್ಧ ಕಲೆಯಾಗಿ ಸ್ವಲ್ಪ ಆಧುನಿಕ ಮಾಧ್ಯಮ ಜೊತೆಗೆ ಸೇರಿ ಗೋಡೆಗಳ ಮೇಲೆ ಚಿತ್ರನಿರ್ಮಾಣವಾಗಿದೆ.

ಈ ಭಿತ್ತಿಚಿತ್ರಕಲೆಯಲ್ಲಿ ವಸ್ತುವಿಷಯ, ಶೈಲಿ, ವರ್ಣಗಾರಿಕೆ, ರಚನೆಯ ಶಿಸ್ತು, ಕಲಾವಿದನ ಶ್ರದ್ಧೆ, ಅಮೋಘ ತಾಳ್ಮೆ ಇದೆಲ್ಲಾ ತಪ್ಪಸ್ಸು ಎಂದೆ ಈ ಭಿತ್ತಿಚಿತ್ರಗಳನ್ನು ನೋಡಿದವರಿಗೆ ಅನ್ನಿಸುತ್ತದೆ. ಮೈಸೂರಿನಿಂದ ೯೦ ಕಿ.ಮೀ ದೂರದಲ್ಲಿರುವ ಕುಶಾಲನಗರದ ಕೊಪ್ಪ ಪ್ರಾಂತ್ಯದಲ್ಲಿ ಬೌದ್ಧಮತ ದೇವಾಲಯಗಳಲ್ಲಿ ಒಂದಾದ ಬೌದ್ಧವಿಹಾರ, ಪ್ರಾರ್ಥನಾಮಂದಿರ, ಶಾಲೆಗಳಲ್ಲಿಯೂ ಸಹ ಭಿತ್ತಿಚಿತ್ರಗಳು ಹೇರಳವಾಗಿದ್ದು ಅದರಲ್ಲಿ ಬುದ್ಧನ ಜೀವನ ಕಥೆಗಳು, ಹಲವು ಧರ್ಮಾಗುರುಗಳು ಹಾಗೂ ಹಿಂದೂ ದೇವ-ದೇವತೆಗಳಾದ ಯಮ, ಶಿವ, ಪಾರ್ವತಿ, ಗಣೇಶ, ಗಣಗಳು, ಯಕ್ಷದೇವತೆಗಳನ್ನು ಹಾಗೂ ಕೆಲವು ಭೂತದೇವತೆಗಳನ್ನು ಸಹ ಇಲ್ಲಿ ಚಿತ್ರಿಸಿದ್ದಾರೆ.

ಟಿಬೆಟನಲ್ಲಿರುವ ತಾರದೇವಿಯ ಹಲವು ಅವತಾರ, ಮಂಜುಶ್ರೀ, ಮೇಡಿಷನ್‌ಬುದ್ಧ, ಅವಲೋಕೇಶ್ವರ, ಬೌದ್ಧಧರ್ಮದ ಅನೇಕ ಪೂಜ್ಯಗುರುಗಳು ಹಾಗೂ ಅಲ್ಲಿನ ದೇವತೆಗಳ ನೂರಾರು ಭಿತ್ತಿಚಿತ್ರಗಳನ್ನು ಇಲ್ಲಿಯೂ ರಚಿಸಿದ್ದಾರೆ.

ವರ್ಣಗಳ ಬಳಕೆಯು ಸಹ ಖನಿಜ ವರ್ಣಗಳನ್ನು ಬಳಸಿದ್ದಾರೆ. ಅವರದೆ ಆದ ಶೈಲಿ, ವರ್ಣಗಾರಿಕೆ ಪದ್ಧತಿ, ಸಂಯೋಜನೆಯ ನಿರ್ವಹಣೆ ವೈವಿಧ್ಯತೆಗಳ ಸಂಗಮ, ದೈವತ್ವದ ಕಲ್ಪನೆ, ತಾಳಮಾನಗಳ ಲೆಕ್ಕಚಾರದ ಗುಣಗಳನ್ನು ಚಿತ್ರರಚನೆಯಲ್ಲಿ ಚಾಚೂತಪ್ಪದೆ ನಿರ್ವಹಿಸಿದ್ದಾರೆ ಮತ್ತು ಧಾರ್ಮಿಕ ವಿಧಿವಿಧಾನಗಳೂ ಹಾಗೂ ಚಿತ್ರಗಳನ್ನು ನೋಡುಗರಲ್ಲಿ ಶ್ರದ್ದೆ, ಭಕ್ತಿ ಮೂಡುತ್ತವೆ. ಸಿಮೆಂಟು ಸುಣ್ಣದ ಗಾರೆಯ ಮೇಲೆ ಭಿತ್ತಿಚಿತ್ರ ರಚನೆಗೊಂಡಿರುತ್ತದೆ. ಯಾವುದೇ ಕಲಾವಿದನ ಹೆಸರು ಎಲ್ಲಿಯೂ ಹಾಕಿರುವುದಿಲ್ಲ.

ಈ ಮೈಸೂರು ಜಿಲ್ಲೆಯ ಭಿತ್ತಿಚಿತ್ರಕಲೆಯು ವೈವಿಧ್ಯತೆಯಿಂದ ಕೂಡಿದ್ದೂ ಇಲ್ಲಿಯೇ **ತೌಲನಿಕಕ್ಕೆ** ಒಂದು ಒಳ್ಳೆಯ ಮಾದರಿಗಳಾಗಿದೆ. ಏಕೆಂದರೆ ಸಂಪ್ರದಾಯ ಬದ್ಧ ಶೈಲಿಗಳಲ್ಲಿ ಚಿತ್ರಿಸಿರುವ ಭಿತ್ತಿಚಿತ್ರಗಳು, ಮತ್ತೊಂದು ಕಡೆ ಕಂಪನಿ ಸ್ಕೂಲ್‌ನ ಪದ್ದತಿಯ ಅವಲಂಬಿಸಿದ ಚಿತ್ರಗಳು, ವಿಜಯನಗರ ಶೈಲಿಯ ಭಿತ್ತಿಚಿತ್ರಗಳು ಈ ಪ್ರಾಂತ್ಯದಲ್ಲಿ ಕಂಡುಬರುವುದರ ಜೊತೆಗೆ ಐತಿಹಾಸಿಕ ನಿಲುವಿನ ಆಧಾರದಲ್ಲಿ ನೋಡಿದಾಗ ವಿಜಯನಗರ ಮತ್ತು ಮೈಸೂರು ಶೈಲಿಯ ಭಿತ್ರಿಚಿತ್ರಗಳು ತೌಲಿನಿಕವಾಗಿ ನೋಡುವಾಗ ಅನೇಕ ಪ್ರಬುದ್ಧತೆಯ ಸ್ಥಳಿಯ ಮುಖ್ಯ ಅಂಶಗಳನ್ನು ಸಾರುವ ಸುಂದರ ಭಿತ್ತಿಚಿತ್ರಗಳೇ ಆಗಿವೆ. ಕೇರಳ, ತಮಿಳುನಾಡು, ಆಂಧ್ರಪ್ರದೇಶದಲ್ಲಿರುವ ಭಿತ್ತಿಚಿತ್ರಗಳನ್ನು ಸಹ ತೌಲನಿಕವಾಗಿಯೂ ನೋಡಿದರೆ

ಮೈಸೂರು ಜಿಲ್ಲೆಯಲ್ಲಿ ವೈವಿಧ್ಯತೆಯಿಂದ ಕೂಡಿದ ಭಿತ್ತಿಚಿತ್ರಗಳನ್ನು ಇಲ್ಲಿ ಮಾತ್ರ ನೋಡಬಹುದು. ಮಗದೊಂದು ಕಡೆ ಆಧುನಿಕತೆಯ ಕಾಲದಲ್ಲಿಯೂ ಅನೇಕ ಪುರಾಣಗಳಿಗೆ ಸೇರಿದ ದೇವ-ದೇವತೆಗಳ ಚಿತ್ತಗಳು ಸಂಪ್ರದಾಯ ಭಿತ್ತಿಚಿತ್ರವನ್ನು ಇಲ್ಲಿ ಚಿತ್ರಿಸಿರುತ್ತಾರೆ. ಆದರೂ ಇನ್ನೊಂದು ರೀತಿ ಬೌದ್ಧರ ಥಾಂಕಚಿತ್ರಗಳು ಸಹ ವಿಭಿನ್ನವಾಗಿ ಧಾರ್ಮಿಕ ಹಿನ್ನೆಲೆ ಸಾರುವ ಭಿತ್ತಿಚಿತ್ರಗಳಾಗಿ ಕಂಡುಬರುತ್ತದೆ.

ಪ್ರತಿಯೊಂದು ಚಿತ್ರಕಲೆಯಲ್ಲಿಯೂ ಚಿತ್ರ, ವರ್ಣ ಮತ್ತು ಆಕೃತಿಯ ಸಂಯೋಜನೆಯು ಬೇರೆ ಬೇರೆ ರೀತಿಯಲ್ಲಿದ್ದು ಕಾಲಮಾನಗಳು ಸಹ ಹೆಚ್ಚು ಕಡಿಮೆ ಸಮಾನವಾಗಿರುವುದು ಸಂಶೋಧನೆಯಿಂದ ತಿಳಿದುಬರುತ್ತದೆ. ಇಲ್ಲಿನ ವಿವಿಧ ಪ್ರಕಾರಗಳಿಂದ ಕೂಡಿದರೂ ಎಲ್ಲಾ ರೀತಿಯ ಭಿತ್ತಿಚಿತ್ರಗಳು ಧಾರ್ಮಿಕ ಹಿನ್ನೆಲೆಯುಳ್ಳ ಚಿತ್ರಗಳಾಗಿದೆ. ಕೆಲವು ವಿಷಯಗಳು ಧಾರ್ಮಿಕ ಹಿನ್ನೆಲೆಯಲ್ಲಿ ಒಂದೆಯಾಗಿದ್ದರೂ ತಂತ್ರ, ಶೈಲಿ, ವರ್ಣಲೇಪನಗಳು ವಿವಿಧ ರೀತಿಯಲ್ಲಿರುವುದು ಕಂಡುಬರುತ್ತದೆ. ಆದರೆ ಎಲ್ಲಾ ಮತ, ಧರ್ಮದವರು ಒಣಗಾರೆಯ ಭಿತ್ತಿಯ ಮೇಲೆಯೇ ಚಿತ್ರಿಸಿದ್ದಾರೆ.

ಭಿತ್ತಿಚಿತ್ರಕ್ಕಾಗಿ ವರ್ಣವನ್ನು ಹೆಚ್ಚಾಗಿ ಖನಿಜ ಮತ್ತು ಸಸ್ಯಮೂಲದಿಂದ ಪಡೆದಿರುತ್ತಾರೆ. ಆದರೆ ಆಧುನಿಕ ಕಾಲದಲ್ಲಿ ವರ್ಣವು ರಾಸಾಯನಿಕ ಮೂಲದಿಂದ ಪಡೆದಿರುತ್ತಾರೆ. ಚಿತ್ರ ಸಲಕರಣೆ ಮತ್ತು ಮಾಧ್ಯಮಗಳು ಮಾತ್ರ ಕೆಲವು ವೇಳೆಯಲ್ಲಿ ಬೇರೆಯಾಗಿರುತ್ತದೆ. ಕಾಲವು ೧೭ನೇ ಶತಮಾನದಿಂದ ೧೯ನೇ ಶತಮಾನದ ಅಂತರದಲ್ಲಿ ಈ ಎಲ್ಲಾ ಭಿತ್ತಿಚಿತ್ರಗಳು ರಚನೆಯಾಗಿರುವುದು ತಿಳಿದು ಬರುತ್ತದೆ.

ಭಿತ್ತಿಚಿತ್ರ ಪರಂಪರೆಯೂ ಅಜಂತಾ ಗುಹೆಗಳಿಂದಲ್ಲೇ ಗುರುತಿಸಬಹುದು. ಕರ್ನಾಟಕದಲ್ಲಿ ಚಾಲುಕ್ಯರ ಹಿಂದಿನಿಂದಲೂ ಸಹ ಭಿತ್ತಿಚಿತ್ರಪರಂಪರೆ ಬೆಳೆದಿದ್ದು, ಮೈಸೂರು ಜಿಲ್ಲೆ ಹಾಗೂ ತಾಲೂಕಿನ ಮೈಸೂರು ಒಡೆಯರ ಅರಸುಗಳ ಕಾಲದಿಂದಲೂ ನಿರ್ಮಿಸಲು ಪ್ರಾರಂಭವಾಗಿ ೧೭ನೇ ಶತಮಾನದ ನಂತರದಲ್ಲಿ ಈ ಕಲಾಚಟುವಟಿಕೆ ಹೆಚ್ಚಾಗಿ ನಡೆದಿರುವುದು ತಿಳಿದುಬರುತ್ತದೆ. ಇದಕ್ಕೆ ಅಂದಿನ ಅರಸರ ಕಾಲದಲ್ಲಿ ವಿಶೇಷ ಪ್ರೋತ್ಸಾಹವೇ ಬಹುಮುಖ್ಯ ಕಾರಣ. ಇಲ್ಲಿ ಶೈವ, ವೈಷ್ಣವ, ಕ್ರೈಸ್ತ, ಬೌದ್ಧಧರ್ಮಕ್ಕೆ ಸೇರಿದ ಭಿತ್ತಿಚಿತ್ರಗಳು ಇಲ್ಲಿ ಕಂಡುಬರುತ್ತದೆ. ಇಲ್ಲಿನ ಅರಸರು ಎಲ್ಲಾ ಧರ್ಮದವರಿಗೆ ಕಲೆಯ ಪ್ರೋತ್ಸಾಹ ನೀಡಿದ್ದರಿಂದ ಇಲ್ಲಿ ಹಲವು ವೈವಿಧ್ಯಪೂರ್ಣ ಭಿತ್ತಿಚಿತ್ರಗಳು ಇರುವುದನ್ನು ನೋಡಬಹುದು.

ಈ ಆಧುನಿಕ ಕಾಲದಲ್ಲಿ ಖಾಸಗಿಯವರಿಂದಲೂ ದೇವಾಲಯ ನಿರ್ಮಿಸಿ ಅಲ್ಲಿಯೂ ಸಹ ಧಾರ್ಮಿಕತೆಯ ಭಿತ್ತಿಚಿತ್ರ ರಚನೆಯಾಗಿರುವುದು ಕಾಣಬಹುದು. ಹಾಗೆಯೇ ಹೊರಗಿನವರಿಂದಲೂ ವಿವಿಧ ರೂಪವುಳ್ಳಂತಹ ಭಿತ್ತಿಚಿತ್ರಗಳಾದ ಪ್ರಕೃತಿಚಿತ್ರ, ವಿವಿಧ ಸಂದರ್ಭಭರಿತ ಚಿತ್ರಗಳು ಅಲ್ಲದೆ ದೇವ-ದೇವತೆಗಳ ಚಿತ್ರಗಳು ರಚಿಸಿರುತ್ತಾರೆ. ಹೆಚ್ಚಾಗಿ ರಾಮಾಯಣ, ಮಹಾಭಾರತ, ಪೌರಾಣಿಕ ಸಂಬಂಧಕ್ಕೆ ಸೇರಿದ ಚಿತ್ರಗಳೇ ಸಾಂಪ್ರದಾಯಿಕಕಲೆ. ಮತ್ತೊಂದು ಬಗೆಯಲ್ಲಿ ಪುನರುಜ್ಜೀವನ ಪಡೆಯುತ್ತಿರುವ ಸ್ವಾರಸ್ಯಕರ ಸಂಗತಿಯೊಂದು ನಮ್ಮ ಮಧ್ಯೆ ಬೆಳೆಯುತ್ತಿದೆ. ಇದು ಒಂದು ಬಗೆಯಲ್ಲಿ ಭಾರತೀಯ ಸಾಂಪ್ರದಾಯಿಕ ಚಿತ್ರಕಲೆಯ ಪುನರ್‌ಸೃಷ್ಟಿಯ ಮತ್ತೊಂದು ಪ್ರಯೋಗದ ಹೊಸ ಪರಂಪರೆಯಾಗಿ ಬೆಳೆಯುತ್ತಿದೆ. ಈ ಭಾಗದಲ್ಲಿ ದೇವಾಲಯಗಳಲ್ಲಿ ಹಾಗೂ ಧಾರ್ಮಿಕ ಹಿನ್ನೆಲೆಯೇ ಹೆಚ್ಚು ನಡೆಯುತ್ತಿದೆ. ಈ ಭಾಗದಲ್ಲಿ ಕೆಲವು ಕಡೆ ರಕ್ಷಣೆಯಿಂದ ಭಿತ್ತಿಚಿತ್ರಗಳನ್ನು ಉಳಿದುಬಂದಿರುತ್ತವೆ. ಇನ್ನೂ ಕೆಲವು ಕಡೆ ಮಾತ್ರ ರಕ್ಷಣೆ, ತಿಳುವಳಿಕೆಯು ಇಲ್ಲದೆ ನಾಶವಾಗಿವೆ. ಇರುವುದನ್ನು ಮಾತ್ರ ಉಳಿಸುವ ಅನಿವಾರ್ಯತೆ ಸ್ಥಿತಿ ಎಲ್ಲರಿಗೂ ಒದಗಿ ಬಂದಿದ್ದು ಅದನ್ನು ನಿರ್ವಹಿಸಿದರೆ ಉತ್ತಮ ಕಾರ್ಯವಾದತಾಗುತ್ತದೆ.

~~~~~~~~~~~~~~oo~~~~~~~~~~~~~~
~~~~~~~~~~~~~~

ಕಲ್ಯಾಣಮಂಟಪದ ದಸರಾ ಭಿತ್ತಿಚಿತ್ರಗಳು



೧



೨



೩

ದರ್ಬಾರ್‌ಹಾಲ್ ಭಿತ್ತಿಚಿತ್ರಗಳು



೧



೨

ಜಗನ್ಮೋಹನ ಅರಮನೆಯ ಭಿತ್ತಿಚಿತ್ರಗಳು



೧

ಜಗನ್ಮೋಹನ ಅರಮನೆಯ ಭಿತ್ತಿಚಿತ್ರಗಳು



೧



೨

ಪ್ರಸನ್ನಕೃಷ್ಣ ದೇವಾಲಯದ ಭಿತ್ತಿಚಿತ್ರಗಳು



೧



೨



೩



೪



೫

ಶ್ವೇತವಾರಹಸ್ವಾಮಿ ದೇವಾಲಯದ ಕೃಷ್ಣನ ಭಿತ್ತಿಚಿತ್ರಗಳು



೧



೨

ಶ್ವೇತವಾರಹಸ್ವಾಮಿ ದೇವಾಲಯದ ರಾಮಾಯಣದ ಭಿತ್ತಿಚಿತ್ರಗಳು



೩



೪



೫

ಅಂಬುಜವಲ್ಲಿ ದೇವಾಲಯದ ಕೃಷ್ಣನ ಭಿತ್ತಿಚಿತ್ರಗಳು



೧



೨

ಅಂಬುಜವಲ್ಲಿ ದೇವಾಲಯದ ಭಿತ್ತಿಚಿತ್ರಗಳು



೩



೪

ಮುಡುಕುತೊರೆಯ ಮಲ್ಲಿಕಾರ್ಜುನ ದೇವಾಲಯದ ಭಿತ್ತಿಚಿತ್ರ




ಅಗಸ್ತೇಶ್ವರ ದೇವಾಸ್ಥಾನದ ಭಿತ್ತಿಚಿತ್ರಗಳು



ಸಿದ್ದಮಲ್ಲಿಕಾರ್ಜುನ ದೇವಾಸ್ಥಾನದ ಭಿತ್ತಿಚಿತ್ರಗಳು



೧



೨

ಚುಂಚನಕಟ್ಟೆಯ ಶ್ರೀರಾಮದೇವರ ದೇವಾಲಯದ ಭಿತ್ತಿಚಿತ್ರಗಳು





ಸಾಲಿಗ್ರಾಮ ಅನಂತನಾಥ ದೇವಾಲಯದ ಭಿತ್ತಿಚಿತ್ರಗಳು



೮



೧

ಸುತ್ತೂರು ಮಠದ ವಸ್ತುಸಂಗ್ರಹಾಲಯದ ಭಿತ್ತಿಚಿತ್ರಗಳು



ರಾಮ್‌ಸನ್ಸ್ ಬೊಂಬೆಮನೆಯ ಭಿತ್ತಿಚಿತ್ರ





ಸತ್ಯನಾರಾಯಣಸ್ವಾಮಿ ದೇವಾಸ್ಥಾನದ ಭಿತ್ತಿಚಿತ್ರ



ಕೊನೆಭೋಜನದ ಭಿತ್ತಿಚಿತ್ರ





ಮೈಸೂರು ಪ್ರಾಂತ್ಯದ ಟಿಬೇಟಿನ ಥಾಂಕಭಿತ್ತಿಚಿತ್ರಗಳು

ಅಧ್ಯಾಯ : ನಾಲ್ಕು

ಮೈಸೂರು ಜಿಲ್ಲೆಯ ಹಸ್ತಪ್ರತಿ ಚಿತ್ರಕಲೆ.

ಅಧ್ಯಾಯ: ನಾಲ್ಕು

ಮೈಸೂರು ಜಿಲ್ಲೆಯ ಹಸ್ತಪ್ರತಿಚಿತ್ರಕಲೆ

ಮಾನವನ ಮನಸ್ಸಿನ ಅಭಿವ್ಯಕ್ತಿಯು ಹಲವು ಮಾಧ್ಯಮಗಳಲ್ಲಿ ಅಭಿವ್ಯಕ್ತವಾಗಿದೆ. ಮೊದಲು ಗುಹೆಗಳಲ್ಲಿ, ಬಂಡೆಗಳ ಮೇಲೆ ಭಿತ್ತಿಚಿತ್ರಗಳ ಪ್ರಕಾರವಾಗಿ ತೋರ್ಪಪಡಿಸಿಕೊಂಡರು. ಆನಂತರ ನಾಗರಿಕತೆಯೂ ಒಂದೊಂದೇ ಮೆಟ್ಟಿಲು ಏರುತ್ತ ಹೊದಂತೆ ಮೌಖಿಕವಾಗಿದ ಸಾಹಿತ್ಯದ ರಚನೆಗೆ ಬರಹ ರೂಪು ಕೊಟ್ಟಾಗಿನಿಂದ ಸಾಮಾಗ್ರಿಯಾಗಿ ತಾಳೆವೃಕ್ಷದ ಎಲೆಯನ್ನು ಬಳಸಿಕೊಂಡಿದ್ದಾನೆ. ಅದು ದಕ್ಷಿಣ ಭಾರತದಲ್ಲಿ ಈ ವೃಕ್ಷಗಳು ಹೇರಳವಾಗಿ ಬೆಳೆಯುತ್ತಿದ್ದರಿಂದ ಇಲ್ಲಿನವರು ಅದನ್ನು ಉಪಯೋಗಿದರು. ಅದು ನಮ್ಮ ಪ್ರಾಚೀನ ಜನಾಂಗದ ಅಭಿವ್ಯಕ್ತಿಯ ಉತ್ತಮ ಸಂಪತ್ತು, ಅದುವೆ ಹಸ್ತಪ್ರತಿ. ಇವುಗಳ ಆಕಾರ, ಗಾತ್ರ, ರಚನೆಯಿಂದ, ಲಘುವಾಗಿದ್ದು, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸುಲಭವಾಗಿ ಒಯ್ಯಲು ಸಾಧ್ಯವಾಗಿರುವುದರಿಂದ ಹಾಗೂ ಕೈಬರಹದಿಂದ ರಚನೆಯಾದ್ದರಿಂದ ಇವುಗಳನ್ನು ಹಸ್ತಪ್ರತಿ ಎಂದು ಕರೆಯಲಾಗಿದೆ.[೧]

ಹಸ್ತಪ್ರತಿ ಎಂಬ ಪದ ಕನ್ನಡದಲ್ಲಿ ಬಳಕೆಗೆ ಬಂದಿದ್ದು ಈ ಶತಮಾನದ ಗ್ರಂಥಸಂಪಾದನಾ ಕಾರ್ಯ ಕೈಗೊಳ್ಳುವಾಗ, ಹಸ್ತಪ್ರತಿಗೆ ಮಾನ್ಯೋಸ್ಕ್ರಿಪ್ಟ್ ಎಂದು ತಾಳೆಗರಿಗೆ ಪಾಮ್‌ಲೀಫ್ ಎಂದು ಆಂಗ್ಲ ಭಾಷೆಯಲ್ಲಿ ಕರೆಯುತ್ತಾರೆ. ಪ್ರಾಚೀನರಲ್ಲಿ ಹೊತ್ತಿಗೆ, ಪೊತ್ತಗೆ, ಕವಳಿಗೆ, ಪುಸ್ತಕ, ಕಟ್ಟು, ವಹಿ, ಗ್ರಂಥ, ಓಲೆಕಟ್ಟು, ನೀಲಿಹೊತ್ತಿಗೆ ಎಂಬಿತ್ಯಾದಿ ಹೆಸರುಗಳು ಬಳಕೆಯಲ್ಲಿತ್ತು. ಡಾ.ಬಿ.ಕೆ. ಹಿರೇಮಠ ಅವರು ಭಾರವಲ್ಲದ ಲೇಖ್ಯ ವಸ್ತುವಿನ ಮೇಲೆ ಕೈಯಿಂದ ಬರೆದ ಜೀವನಾವಶ್ಯಕ ಜ್ಞಾನಪ್ರಧಾನವಾದ ಕೃತಿ ಮತ್ತು ಅದರ ಪ್ರತಿಕೃತಿಗಳೆ ಹಸ್ತಪ್ರತಿಗಳು ಎನ್ನುತ್ತಾರೆ.[೨]

೧. ಡಾ.ಬಿ.ಕೆ.ಹಿರೇಮಠ, ಕನ್ನಡ ಹಸ್ತಪ್ರತಿ ಒಂದು ಅಧ್ಯಯನ, ಪು.ಸಂ–೧೦
೨. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ (ಸಂ), ನಿಜದನೆಲೆ, ಪು.ಸಂ_೩೮

ಹಸ್ತಪ್ರತಿ ಚಿತ್ರಕಲೆಯೆಂದರೆ ಕೈಯಿಂದ ಬರವಣಿಗೆಗಾಗಿ ಸಿದ್ಧಗೊಂಡ ವಸ್ತು ಪಟ, ವೃಕ್ಷಪತ್ರ(ತಾಡೋಲೆ) ಭೋರ್ಜಪತ್ರ, ಕಾಗದ, ಚರ್ಮದಂತಹ ಹಗುರವಾದ ವಸ್ತು ಅಥವಾ ಕಟ್ಟುಗಳ ರಕ್ಷಾ ಕವಚಗಳ ಮೇಲೆ ಮತ್ತು ಒಳಗಡೆ ಅಲಂಕಾರಕ್ಕಾಗಿ ಬರವಣಿಗೆ ವಿಷಯದ ಹಿನ್ನೆಲೆಯಲ್ಲಿ ಆಯಾಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಚಿತ್ರಿಸಿದ ವರ್ಣಚಿತ್ರ, ರೇಖಾವಿನ್ಯಾಸಗಳನ್ನೆಲ್ಲಾ ಹಸ್ತಪ್ರತಿಚಿತ್ರಕಲೆಯೆಂದು[೩] ಡಾ.ಎಸ್.ಸಿ.ಪಾಟೀಲರು ಇದರ ವ್ಯಾಖ್ಯಾನವೊಂದನ್ನು ನೀಡಿದ್ದಾರೆ.

ಧರ್ಮಕ್ಕೆ ಬಹಳ ಮಹತ್ವವಿದ್ದಂತಹ ಕಾಲದಲ್ಲಿ ಪ್ರಾಚೀನ ಧಾರ್ಮಿಕ ಗ್ರಂಥಗಳನ್ನು ಪ್ರತಿಮಾಡುತ್ತಿದ್ದರು, ಭಕ್ತಿಯಿಂದ ಮತ್ತು ಧರ್ಮ ಪ್ರಚಾರ, ಜನಾಕರ್ಷಣೆ ಹಾಗೂ ವೈಯಕ್ತಿಕ ಅಭಿರುಚಿಯ ಕಾರಣಕ್ಕಾಗಿ ಕಲಾತ್ಮಕ ವಿನ್ಯಾಸಗೊಳಿಸಲು ಯತ್ನಿಸಿದ್ದ ಫಲವಾಗಿ ಹಸ್ತಪ್ರತಿಗಳಲ್ಲಿ ಚಿತ್ರಕಲೆ ಕಾಣಿಸಿಕೊಂಡಿತ್ತು. ಅದುವೇ ಗ್ರಂಥದ ಸಂರಕ್ಷಣೆಗೋಸ್ಕರ ಐದಾರು ಓಲೆಗಳನ್ನು ಬಿಟ್ಟು ನಂತರ ಗ್ರಂಥ ಪ್ರಾರಂಭಿಸುತ್ತಿದ್ದರು. ಹಾಗೆ ಕೊನೆಯ ಭಾಗದಲ್ಲಿಯೂ ಬಿಡುತ್ತಿದ್ದರಿಂದ, ಅದು ಲಿಖಿತ ಓಲೆಗಳು ಪುನಃ ಪುನಃ ಪಠಣ ಸಮಯದಲ್ಲಿ ಅಂಚುಗಳು ಮುದ್ದೆಯಾಗಿ ಹಾಳಾಗುವ ಸಂಭವನೀಯತೆ ಇರುತ್ತಿದ್ದರಿಂದ ಸುತ್ತಲೂ ಖಾಲಿಜಾಗ ಬಿಡುತ್ತಿದ್ದರು. ಅದು ರಕ್ಷಣೆ ಹಾಗೂ ಅನಿಷ್ಠ ಸಂಪ್ರದಾಯ ಎಂಬ ನಂಬಿಕೆಯು ಸಹ ಇತ್ತು. ಹಾಗಾಗಿ ಆ ಜಾಗದಲ್ಲಿ ಚಿತ್ರ ರಚಿಸುತ್ತಿದ್ದರು, ಅದರಲ್ಲಿ ತ್ರಿಜ್ಯಚಿತ್ರ, ಸುಳುಹುಚಿತ್ರ, ಸಾಮಾನ್ಯ ಚಿತ್ರ, ಸಾಂದರ್ಭಿಕ ಚಿತ್ರಗಳೆಂದು ಎಂ.ಎಂ.ಕಲಬುರ್ಗಿಯವರು ವರ್ಗೀಕರಿಸಿದ್ದಾರೆ.[೪] ಹಾಗೆ ಡಾ.ಎಸ್.ಸಿ.ಪಾಟೀಲರು ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆ, ಶಿಷ್ಟಪದ ಮೂಲದ ಹಸ್ತಪ್ರತಿ ಮತ್ತು ಶಿಷ್ಟ ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆಯೆಂದು ವಿಂಗಡಿಸಿದ್ದಾರೆ.

ವರ್ಣಹಸ್ತಪ್ರತಿಗಳಲ್ಲಿ ವಿಷಯಾಧಾರಿತ ಹಸ್ತಪ್ರತಿಗಳು, ಸಾಂದರ್ಭಿಕಚಿತ್ರ ರಚನೆಯನ್ನೊಳಗೊಂಡ ಹಸ್ತಪ್ರತಿ ಹಾಗೂ ಚಿತ್ರಪ್ರಧಾನ ಹಸ್ತಪ್ರತಿಗಳನ್ನು ಸುಚಿತ್ರ ಹಸ್ತಪ್ರತಿಗಳೆಂದು ಕರೆಯುತ್ತಾರೆ. ಮುದ್ರಣ ಯಂತ್ರ ಬರುವುದಕ್ಕಿಂತ ಪೂರ್ವದಲ್ಲಿ ಬರವಣಿಗೆಯ ಸಾಧನವಾಗಿ ಹಸ್ತಪ್ರತಿಗಳು ನಿರ್ವಹಿಸಿದ ಪಾತ್ರ ಅನನ್ಯವಾದ್ದುದಾಗಿದೆ. ಇದರಲ್ಲಿ ತಾಳೆಗರಿ ಹಸಪ್ರತಿ, ಕಾಗದದ ಹಸ್ತಪ್ರತಿಗಳಲ್ಲಿ ಚಿತ್ರಕಲೆಯೂ ಸಹ ಹೇರಳವಾಗಿ ಇರುವುದು. ಈ ಭಾಗದಲ್ಲಿ ಕಂಡುಬರುತ್ತದೆ. ಅದರಲ್ಲಿ ಬಹುಮುಖ್ಯವಾಗಿ ರಾಜಾಶ್ರಯದಲ್ಲಿರುವ ಸರಸ್ವತಿಭಂಡಾರ, ಓರಿಯಾಂಟಲ್ ಲೈಬ್ರರಿ, ಕುವೆಂಪು ಕನ್ನಡ ಅಧ್ಯಯನಗಳಲ್ಲಿ ವರ್ಣಚಿತ್ರ ಹಾಗೂ ಅಲಂಕಾರಿಕ ನಕ್ಷೆವುಳ್ಳಂತಹ ಹಸ್ತಪ್ರತಿ ಸಂಗ್ರಹಗೊಂಡಿರುತ್ತದೆ.

ಹಸ್ತಪ್ರತಿ ಚಿತ್ರಕಲೆಯು ಅರಸರ ಸಪ್ತಸಂತಾನದ ಕರ್ತವ್ಯಗಳಲ್ಲಿ ಒಂದೆಂದೂ ಶಾಸ್ತ್ರದಾನ ಗ್ರಂಥಪ್ರತಿಷ್ಠೆಯ ಪುಣ್ಯ ಪ್ರತೀಕವೆಂದು, ಧರ್ಮಪೀಠರೋಹಣ ಪ್ರಸಂಗದ ಜ್ಞಾನದುಡುಗೊರೆಗಳೆಂದೂ, ಬದುಕಿನ ಸ್ವ-ಸುಖದ ಪರಮಸುಖದ ಕಾಮಧೇನುಗಳೆಂದೋ ಭಾವಿಸಿ ಇಂದಿನವರೆಗೂ ಅವುಗಳನ್ನು ಪೂಜ್ಯ ಭಾವನೆಯಿಂದ ಸಂರಕ್ಷಿಸಿಕೊಂಡು ಬಂದಿದ್ದಾರೆ. ಸಾಮಾನ್ಯ ಜನರು ಸಹ ಪ್ರಯೋಜನದ ಮೂಲದ, ವೃತ್ತಿಮೂಲ ಸಾಧನವಾಗಿಯೂ ಅವುಗಳನ್ನು ಬಳಸುತ್ತಿದ್ದಾರೆ. ಇದರಲ್ಲಿ ಚಿತ್ರಕಲೆ ಅಳವಡಿಸುವ ಕ್ರಮವನ್ನು ಪರ್ಶಿಯನ್ ಮೂಲದಿಂದ ಬಂದುದಾದರೂ ನಮ್ಮ ದೇಶದಲ್ಲಿ ಹತ್ತು-ಹನ್ನೊಂದನೆಯ ಶತಮಾನದ ಹೊತ್ತಿಗೆ ಬಳಕೆಗೆ ಬಂದಿತೆಂದು ಹೇಳುತ್ತಾರೆ. ಸಾಮಾನ್ಯವಾಗಿ ಹಸ್ತಪ್ರತಿಯೂ ಕವಿ ನಿರ್ಮಿತಕೃತಿ ಮತ್ತು ಲಿಪಿಕಾರನ ನಿರ್ಮಿತಿಪ್ರತಿ ಎಂಬ ಘಟ್ಟಗಳಿವೆ ಅದರಲ್ಲಿ ಲಿಪಿಕಾರನು ಬರವಣಿಗೆ ಜೊತೆಗೆ ಚಿತ್ರಕಲೆಯನ್ನು ರೂಢಿಸಿಕೊಂಡಿದ್ದರಿಂದ ಹಸ್ತಪ್ರತಿಗಳಲ್ಲಿ ಚಿತ್ರಕಲೆ ರೂಪುಗೊಂಡಿತ್ತು. ಎಂದು ತಿಳಿದುಬರುತ್ತದೆ.[೫]

೩. ಡಾ.ಎಸ್.ಸಿ.ಪಾಟೀಲ; ವರ್ಣಸಂಚಯರ ಪು.ಸಂ._೨೯
೪, ಟಿ.ನಾಗಶ್; ಹಸ್ತಪ್ರತಿಯಲ್ಲಿ ಚಿತ್ರಕಲೆ,ಬಿ.ವಿ.ಎ.ಪದವಿಗಾಗಿ ಸಲ್ಲಿಸಿದ ಅಪ್ರಕಟಿತ ಕಿರುಪ್ರಬಂಧ ಕ.ವಿ.ವಿ.ಹಂಪಿ, ಪು.ಸಂ_೨೫
೫, ಬಿ.ಎಸ್.ಸಣ್ಣಯ್ಯ; ಹಸ್ತಪ್ರತಿಶಾಸ್ತ್ರ, ಪು.ಸಂ_೧೫

ಹಸ್ತಪ್ರತಿ ಇತಿಹಾಸವನ್ನು ನೋಡಿದಾಗ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದ ಅನೇಕ ರಾಜವಂಶಸ್ಥರು, ಪಾಳೇಗಾರಿಕೆ, ಸುಸಂಸ್ಕೃತ ಮನೆತನಗಳಿಂದಲೂ ಹಸ್ತಪ್ರತಿ ರಚನೆ ಮಾಡಿಸಲಾಗಿದೆ. ಮುಖ್ಯವಾಗಿ ಕದಂಬರಿಂದಲೂ ಪ್ರಾರಂಭವಾಗಿ ಮೈಸೂರು ಅರಸರ ಅಳ್ವಿಕೆಯ ಕಾಲದವರೆಗೆ ರಚನೆಯಾಗಿದ್ದು. ಅವನ್ನು ಹೀಗೆ ಗುರುತಿಸಬಹುದಾಗಿದೆ.

ಪ್ರಕೃತಿಯುಗದ ಹಸ್ತಪ್ರತಿಚಿತ್ರಕಲೆ (ಕ್ರಿ.ಶ ೪ಶತಮಾನ) ಎರಡನೆಯದಾಗಿ ಕವಿರಾಜಮಾರ್ಗ ಯುಗದ ಹಸ್ತಪ್ರತಿಚಿತ್ರಕಲೆ (೮ನೇ ಶತಮಾನ), ಮೂರನೆಯದು ಪಂಪಯುಗದ ಹಸ್ತಪ್ರತಿಚಿತ್ರಕಲೆ (೧೦ನೇ ಶತಮಾನ). ನಾಲ್ಕನೆಯದು ವಚನಯುಗದ ಹಸ್ತಪ್ರತಿಚಿತ್ರಕಲೆ (೧೧-೧೨ನೇ ಶತಮಾನ). ಐದನೆಯದು ದಾಸಯುಗದ ಹಸ್ತಪ್ರತಿಚಿತ್ರಕಲೆ (೧೫-೧೬ನೇ ಶತಮಾನ). ಆಧುನಿಕ ಯುಗದ ಹಸ್ತಪ್ರತಿ ಚಿತ್ರಕಲೆ (ಕ್ರಿ.ಶ೧೬ನೇ ಶತಮಾನದ ನಂತರ ಪ್ರಾರಂಭವಾದ ಹಸ್ತಪ್ರತಿ ಚಿತ್ರಕಲೆಯು ಯುಗದಿಂದ ಯುಗಕ್ಕೆ) ತೀವ್ರವಾಗಿ ರೂಪಾಂತರಗೊಳ್ಳುತ್ತಾ ಸಾಗಿರುವುದು ತಿಳಿದುಬರುತ್ತದೆ. ಉದಾ. ಮೊದಲೂ ಚರ್ಮ, ಲೋಹದಹಾಳೆ, ಮಣ್ಣಿನಬಿಲ್ಲೆ, ಸ್ಪಟಿಕ, ಮರದಹಲಗೆ, ಕಡತ, ರೇಷ್ಮೆಬಟ್ಟೆಯ ಮಾಧ್ಯಮ ಉಪಯೋಗಿಸಲಾಗಿದೆ.[೬]

ನಂತರ ತಾಳೆಗರಿ ಬಳಕೆ ತಾಳೆಗರಿಯು ಚಿಕ್ಕದು ಮತ್ತು ಸಂಸ್ಕರಣೆಯು ದೀರ್ಘಕಾಲ ಹಿಡಿಯುವುದರಿಂದ ಹಾಗೂ ಕ್ರಿ.ಶ. ೧೯ನೇ ಶತಮಾನದ ಮಧ್ಯಭಾಗದಲ್ಲಿ ಯೂರೋಪ್ ರಾಷ್ಟ್ರಗಳ ಪ್ರಭಾವ ನಮ್ಮ ಕಲೆಯ ಮೇಲೆ ಆಗಿ ಅವರ ಕಲಾ ಸೊಬಗಿಗೆ ಮಾರುಹೋಗಿದರಿಂದಲೂ, ತಾಳೆಗರಿ ರಕ್ಷಣೆಯು ಕಷ್ಟ ಹಾಗೂ ನಿರ್ವಹಣೆ, ರಚನೆ ಶೇಖರಣೆಯೂ ಕಷ್ಟವಾಗಿದ್ದುದರಿಂದಲೂ ಸಹ ಕಾಗದ, ರಟ್ಟು, ಮಿಶ್ರಮಾಧ್ಯಮದ ಬಳಕೆಗೆ ಎಲ್ಲರೂ ಒಳಗಾದರು.

ತಾಳೆಗರಿ ಓಲೆಯನ್ನು ತಯಾರಿಸುವ ವಿಧಾನ

ತಾಳೆಮರದಲ್ಲಿ ಸುಳಿ ಚಿಗುರುಗಳು ಬಿಚ್ಚಿಕೊಳ್ಳಬೇಕೆನ್ನುವ ಮೊದಲೆ ಅದನು ಕತ್ತರಿಸಿ ತಂದು ಬಿಸಿಲಿನಲ್ಲಿ ಒಣಗಿಸಿ ನಂತರ ಬಿಸಿನೀರಿನಲ್ಲಿ ಬೇಯಿಸಿ, ನೆರಳಿನಲ್ಲಿ ಒಣಗಾಸುವ ವಿಧಾನವಾಗಿದೆ. ನಂತರ ಕಲ್ಲಿನಿಂದ ಉಜ್ಜಿ ನುಣುಪಾಗಿ ಮಾಡುತ್ತಾರೆ. ಆಗ ಕೈಬರಹಕ್ಕೆ ಮತ್ತು ಚಿತ್ರರಚನೆಗೆ ಯೋಗ್ಯವಾಗಿದೆ. ಇದನ್ನೇ ಡಿ.ಎಲ್.ಎನ್. ರವರು, ಬರೋಡ ಶ್ರೀ ಬಿ.ಭಟ್ಟಾಚಾರ್ಯ ಮತ್ತು ಶ್ರೀ ರಾಜೇಂದ್ರಲಾಲ ಮಿತ್ರರು ಸಹ ಹೀಗೆಯೇ ಹೇಳುತ್ತಾರೆ.[೭]

ಹಸ್ತಪ್ರತಿ ಆಕಾರ ಹಾಗೂ ಸ್ವರೂಪ

ಪ್ರಾಚೀನ ತಾಳೆಗರಿಯ ಉಗಮದ ಕಾಲದಲ್ಲಿ ನಿರ್ದಿಷ್ಟವಾದ ಅಳತೆಗಳಲ್ಲಿ ರೂಪುಗೊಂಡಿರಲ್ಲಿಲ್ಲ, ಸಾಮಾನ್ಯ ಅಳತೆಗಳಲ್ಲಿ ನಿರ್ಮಾಣವಾಗುತ್ತಿತ್ತು. ಮುಂದುವರಿದ ಹಂತದಲ್ಲಿ ಶಿಸ್ತಿಗೆ ಒಳಗಾಗಿ ವಿವಿಧ ಅಳತೆಗಳಲ್ಲಿ ರಚನೆಯಾಗಿದೆ. ಭವಿಷ್ಯ ಪುರಾಣದಲ್ಲಿ ಓಲೆಗರಿಗಳ ಕಡತವನ್ನು ಉತ್ತಮ, ಮಧ್ಯಮ ಮತ್ತು ಕನಿಷ್ಠ ಎಂಬುದಾಗಿ ವಿಭಾಗಿಸಿ ಕ್ರಮವಾಗಿ ಮೂವತ್ತೆರಡು ಅಂಗುಲ ಉದ್ದದ ಕಡತವನ್ನು ವಿಷ್ಣುವಿನ ಸ್ವರೂಪವೆಂದೂ, ಇಪ್ಪತ್ನಾಲ್ಕು ಅಂಗಲದ್ದನ್ನು ಶಂಕರಸ್ವರೂಪವೆಂದು, ಎಂಟು ಅಂಗುಲದ ಕಡತವನ್ನು ಬ್ರಹ್ಮ ಸ್ವರೂಪವೆಂದು ಪರಿಗಣಿಸಿ, ಜೊತೆಗೆ ಕಡತಗಳನ್ನು ಕಟ್ಟಿಡುವ ಬಟ್ಟೆಗಳಾದ ಹಳದಿ, ಕೆಂಪು ಹಾಗೂ ಧಾರ ಇತ್ಯಾದಿಗಳ ಬಗೆ ವಿವರಣೆ ಇರುತ್ತದೆ.[೮]

೬ ,೭ ಬಿ.ಎಸ್.ಸಣ್ಣಯ್ಯ; ಹಸ್ತಪ್ರತಿಶಾಸ್ತ್ರ, ಪು.ಸಂ_೧೫,-೨೧

೮ ಟಿ.ನಾಗಶ್ ;ಬಿ.ವಿ.ಎ., ಹಸ್ತಪ್ರತಿಯಲ್ಲಿ ಚಿತ್ರಕಲೆ, ಬಿ.ವಿ.ಎ.ಪದವಿಗಾಗಿ ಸಲ್ಲಿಸಿದ ಅಪ್ರಕಟಿತ ಕಿರುಪ್ರಬಂಧ ಕ.ವಿ.ವಿ.ಹಂಪಿ, ಪು.ಸಂ_೩೬

ಕಾಗದ ಹಸ್ತಪ್ರತಿಯು ಹಲವು ಅಳತೆಯಲ್ಲಿ ಕಂಡುಬರುತ್ತದೆ. ಆಧುನಿಕ ಕಾಲದಲ್ಲಿ ಬಟ್ಟೆ ಮತ್ತು ತಾಳೆಗರಿ ಸೇರಿಸಿ ಹಾಗೂ ಮಿಶ್ರ ಮಾಧ್ಯಮದಲ್ಲಿಯೂ ಇರುವುದು ಕಂಡುಬರುತ್ತದೆ.

ಚಿತ್ರರಚನಾ ವಿಧಾನ

ಹಸ್ತಪ್ರತಿ ಚಿತ್ರಕಲೆ ರಚಿಸುವ ಮುನ್ನ ಕಲಾವಿದರು ಮತ್ತು ಲಿಪಿಕಾರ ಅನೇಕ ಸಂಪ್ರದಾಯ ಬದ್ಧ ವಿಧಿ-ವಿಧಾನಗಳನ್ನು ಅನುಸರಿಸುತ್ತಿದ್ದರು ಎಂದು ಅರಬ್ಬೀದೇಶದ ಪ್ರವಾಸಿ ಅಲ್ಬರೂನಿಯ ಹಿಂದೂಗಳು ಓಂ ಎಂಬ ಪದದಿಂದ ಗ್ರಂಥವನ್ನು ಪ್ರಾರಂಭಿಸುತ್ತಾರೆ. ಮತ್ತು ಪೂಜ್ಯ ಭಾವನೆ, ಒಳ್ಳೆಯ ದಿನ, ಘಳಿಗೆ, ಜ್ಯೋತಿಷ್ಯಶಾಸ್ತ್ರದ ಪ್ರಕಾರ ಮತ್ತು ಶುಚಿರ್ಭೂತರಾಗಿ ತಮ್ಮ ಆರಾಧ್ಯದೈವವನ್ನು ಪೂಜಿಸಿ ಕೃತಿ, ಹಾಗೂ ಚಿತ್ರರಚನೆ ಮಾಡುತ್ತಾರೆ ಎಂದು ತಿಳಿಸುತ್ತಾನೆ.

ವರ್ಣಗಳು ಮತ್ತು ಕುಂಚಗಳ ತಾಯಾರಿಕೆ

ಬಿಳಿ, ಕಪ್ಪು, ನೀಲಿ, ಕೆಂಪು, ಹಳದಿ, ಈ ಷಡ್ ವರ್ಣಗಳು ಹೆಚ್ಚಾಗಿ ಕಂಡಬರುತ್ತದೆ. ಸಾಮಾನ್ಯವಾಗಿ ಖನಿಜ ಮತ್ತು ಸಸ್ಯಮೂಲದಿಂದಲೇ ಪಡೆಯುತ್ತಿದ್ದರು.

ಬಿಳಿಯ ವರ್ಣ ಸಾಮಾನ್ಯವಾಗಿ ಸುಣ್ಣದಕಲ್ಲು, ಬಿಳಿ ಖನಿಜ ಮೂಲದಿಂದ ಪಡೆಯುತ್ತಾರೆ. ಕರಿಯ ವರ್ಣ ಕರ್ಪೂರ ಸಂಯುಕ್ತವಾದ ಬತ್ತಿ ಎಣ್ಣೆದೀಪವನ್ನು ಉರಿಸಿದ ಮೇಲೆ ಸಂಗ್ರಹಿಸಿದ ಕಾಡಿಗೆ ಮತ್ತು ಕರಟವನ್ನು ಸುಟ್ಟು ಸಂಗ್ರಹಿಸಿದ ಕಪ್ಪು ಪದಾರ್ಥವನ್ನು ಚಿತ್ರಗಳಿಗೆ ಬಳಸಲಾಗುತ್ತಿತ್ತು. ಕೆಂಪುವರ್ಣವನ್ನು ಸಹ ಖನಿಜ ಹಾಗೂ ಸಸ್ಯಮೂಲದಿಂದ ಪಡೆಯುತ್ತಾ, ಹಳದಿ ವರ್ಣವನ್ನು ಇದು ಸಹ ಶಿಲೆ, ಗಂಧಕ ಮತ್ತು ಸೋಮಲಗಳ ಸಂಯುಕ್ತದಿಂದಲೂ ಮತ್ತು ಗೌರಿಮರದ ಎಲೆಗಳ ರಸದಿಂದಲೂ ಈ ವರ್ಣವನ್ನು ತಯಾರಿಸಿಕೊಳ್ಳುತ್ತಿದ್ದರು. ಹಾಗು ಈ ವರ್ಣಗಳೊಂದಿಗೆ ಅಂಟು, ನೀರು ಸೇರಿಸಿ ಚಿತ್ರರಚಿಸಲು ಬಳಸುತ್ತಾರೆ.[೯]

ಕುಂಚ ತಾಯಾರಿಕೆಯು ಸಸ್ಯ ಮತ್ತು ಪ್ರಾಣಿಜನ್ಯದಿಂದಲೇ ಇದನ್ನು ಪಡೆಯುತ್ತಿದ್ದರು, ಆಧುನಿಕತೆಯಲ್ಲಿ ಪ್ರಾಣಿ ಮತ್ತು ಸಿಂಥೆಟಿಕ್ ಬ್ರೆಸ್‌ನ್ನು ಉಪಯೋಗಿಸುತ್ತಾರೆ. ಹಸು, ಅಳಿಲುಗಳ ರೋಮಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ವರ್ತಿಕಾ, ಲಂಬ, ಕೂರ್ಚ, ತೂಲಿಕಾ ಎಂಬ ಹೆಸರು ಕನ್ನಡದಲ್ಲಿದ್ದರೆ. ಹಿಂದಿಯಲ್ಲಿ ಲೇಖನಿ, ಪರ್ಶಿಯನ್‌ನಲ್ಲಿ ಕಲಮ್ ಎಂಬ ಪದ ಇದೆ.

ಹಸ್ತಪ್ರತಿಯಲ್ಲಿ ವರ್ಣ ಚಿತ್ರಕಲೆಯ ವರ್ಗೀಕರಣ

ಹಸ್ತಪ್ರತಿಯಲ್ಲಿ ವರ್ಣಚಿತ್ರಕಲೆಯು ತಾಳೆಗರಿ, ಫಲಕ ಅಥವಾ ರಕ್ಷಾಫಲಕ ಮತ್ತು ಕಾಗದದ ಹಸ್ತಪ್ರತಿಗಳಲ್ಲಿ ವರ್ಣಚಿತ್ರಕಲೆ ಕಂಡುಬರುತ್ತದೆ.

ತಾಳೆಗರಿ : ತಾಳೆಗರಿ ಅಥವಾ ಓಲೆಗರಿಗಳ ಮೇಲ್ಮೈ ನುಣುಪಾಗಿದ್ದು ವರ್ಣಗಳು ನಿಲ್ಲುವುದು ತುಂಬಾ ಕಷ್ಟದ ಕೆಲಸ ಹಾಗೂ ಆಕಾರ ಮತ್ತು ಗಾತ್ರದಲ್ಲಿ ತೀರಾ ಚಿಕ್ಕದಿರುವುದರಿಂದ ವರ್ಣಚಿತ್ರಗಳು ಇರುವುದು ತೀರ ಕಮ್ಮಿ ಆದರೆ ರೇಖಾಚಿತ್ರಗಳು ಇರುವ ಹಸ್ತಪ್ರತಿಗಳೆ ಹೆಚ್ಚಾಗಿ ಕಂಡುಬರುತ್ತದೆ.

೯. ವಿ.ಟಿ.ಕಾಳೇ.; ಕರ್ನಾಟಕದ ಬಣ್ಣಗಳ ಬಳಕೆ ಪು.ಸಂ.೫೬

ರೇಖಾಚಿತ್ರಚಿತ್ರಣ: ಇದರಲ್ಲಿ ಜಾಮಿತಿನಕ್ಷೆ, ಅಲಂಕಾರಿಕನಕ್ಷೆ ಮತ್ತು ಆಕೃತಿಚಿತ್ರ ಮತ್ತು ಸುಳಿವುಗಳ ರೇಖಾಚಿತ್ರಗಳು ಹೆಚ್ಚಾಗಿ ಕಂಡುಬರುತ್ತದೆ. ರೇಖಾಚಿತ್ರಗಳು ಅಂದಿನ ಕಾಲದ ಕಲಾ ಪ್ರಾವೀಣ್ಯತೆಯ ಕುರುಹುಗಳಾಗಿದೆ. ರೇಖಾಚಿತ್ರ ರಚಿಸುವುದೆಂದರೆ ಸುಲಭವೇನಲ್ಲ ಸಾಧನೆಯ ಮೂಲಕ ಪಳಗಿದ ಸತತ ಪರಿಶ್ರಮದ ಸಾಧ್ಯತೆ ಅದನ್ನು ಕಂಠ ಸಾಧನದಿಂದ ರಚಿಸುತ್ತಾರೆ, ಲೋಹದ ಲೇಖನಿಗೆ ಕಂಠ ಎಂದು ಹೆಸರಿನಿಂದ ಕರೆಯುತ್ತಾರೆ. ಅದು ಕಬ್ಬಿಣದ ಸಾಮಾಗ್ರಿಯಾಗಿದ್ದು ಮುಳ್ಳಿನಂತೆ ಚೂಪಾಗಿದ್ದು ಬರೆಯುಲು, ಚಿತ್ರಿಸಲೂ ಸಹಾಯಕಾರಿಯಾಗಿದೆ. ಕೈವಾರ ಸಹಾಯದಿಂದ ಬಳಸಿ ಅನೇಕ ಬಗೆಯ ನಮೂನೆಯ ಚಿತ್ರಗಳನ್ನು ಮೂಡಿಸಿದ ನಂತರ ಕಪ್ಪು ಲೇಯವನ್ನು ಲೇಪಿಸಿ, ಚಿತ್ರಗಳನ್ನು ಸ್ಪುಟವಾಗಿ ಕಾಣುವಂತೆ ಮಾಡುತ್ತಾರೆ. ಚಿತ್ರಗಳನ್ನು ತಿದ್ದಿ ರೂಪಿಸುವುದು ಕಲಾವಿದನ ಚತುರತೆಯ ಕಠಿಣತೆಯ ಪರಿಶ್ರಮದ ಕೆಲಸ. ಇಲ್ಲಿನ ಹಸ್ತಪ್ರತಿಚಿತ್ರಗಳನ್ನು ಈ ರೀತಿಯ ತಂತ್ರ ಉಪಯೋಗಿಸಿ ಚಿತ್ರರಚಿಸಿರುವುದು ಕಂಡುಬರುತ್ತದೆ.

ಫಲಕ ಅಥವಾ ರಕ್ಷಾಫಲಕದ ಮೇಲೆ ವರ್ಣಚಿತ್ರಗಳು

ಪ್ರತಿಕಡತ, ಓಲೆಗರಿಯ ಮೇಲೆ ಕೆಳಗೆ ಎರಡು ಕಡೆಯೂ ಸಂರಕ್ಷಣೆಗೋಸ್ಕರ ಮರದ ಪಟ್ಟಿಯನ್ನು ಬಳಸಲಾಗುತ್ತದೆ. ಅದನ್ನೆ ಫಲಕಗಳೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಗ್ರಂಥದ ಒಳಗಿರುವ ವಿಷಯಗಳ ಕುರಿತ ಚಿತ್ರವನ್ನು ಬಿಡಿಸಿ ಜಲವರ್ಣ ಮತ್ತು ತೈಲವರ್ಣವನ್ನು ಲೇಪಿಸಿರುತ್ತಾರೆ. ಈ ಚಿತ್ರಗಳನ್ನು ನೋಡಿಯೇ ಯಾವ ಧರ್ಮದ್ದೂ ಎಂದು ಸಹ ಹೇಳಬಹುದು.

ಕಾಗದದ ಹಸ್ತಪ್ರತಿಗಳು

೧೪-೧೫ನೇ ಶತಮಾನದ ನಂತರ ಕಾಗದ ಬಳಕೆ ಬಂದ ನಂತರ ವರ್ಣಚಿತ್ರ ನಿರ್ಮಿಸಲು ಹೆಚ್ಚಾಗಿ ಪ್ರಾರಂಭಿಸಿದ್ದರು.

ಮೈಸೂರು ಜಿಲ್ಲೆಯಲ್ಲಿ ೧೭-೧೮ನೇ ಶತಮಾನದಲ್ಲಿ ಕಾಗದ ಹಸ್ತಪ್ರತಿಗಳಲ್ಲಿ ಕೆಲವು ವರ್ಣಚಿತ್ರಗಳು ಇರುವುದು ಸಂಶೋಧನೆಯಲ್ಲಿ ಕಂಡುಬಂದಿದೆ. ಹಾಗೆ ನಕ್ಷಾ ರೇಖಾಚಿತ್ರಗಳು ಇರುವ ಅನೇಕ ಹಸ್ತಪ್ರತಿಗಳು ಸಹ ಹೆಚ್ಚಾಗಿ ಈ ಭಾಗದಲ್ಲಿ ಇರುತ್ತದೆ. ಬರವಣಿಗೆಯ ರೇಖೆಯೂ ಸಹ ಚಿತ್ರಕಲೆಯ ಭಾಗವೇ ಆಗಿದೆ.

ಗ್ರಂಥ ರಚನೆಗಾಗಿ ತಾಳೆಗರಿಗಳ ಬಳಕೆ ಕಡಿಮೆಯಾಗುವಂತೆ ಮಾಡಿದ ಮುಖ್ಯ ಮಾಧ್ಯಮವೇ ಕಾಗದ. ಕಾಗದ ತಾಳೆಗರಿ ಬಳಕೆ ಕ್ರಿ.ಶ. ೪ನೇ ಶತಮಾನದಲ್ಲಿ ಕಂಡುಬಂದರೆ ೧೪ನೇ ಶತಮಾನದಲ್ಲಿ ಮಹಮ್ಮದಿಯರ ಕಾಲಕ್ಕೆ ಕಾಗದ ಬಳಕೆ ಭಾರತದ ಅನೇಕ ಸ್ಥಳಗಳಲ್ಲಿ ಮುಖ್ಯವಾದ ಮೈಸೂರುನಲ್ಲಿಯೂ ಬಳಕೆ ಪ್ರಾರಂಭವಾಯಿತು. ಕಾಗದದಲ್ಲಿ ಕಲಾವಿದರು ವಿಶೇಷವಾಗಿ ಸ್ವತಂತ್ರದಿಂದ ದೊಡ್ಡ, ಚಿಕ್ಕ ಅಳತೆಯಲ್ಲಿ ಚಿತ್ರವನ್ನು ಕುಂಚ ಲೇಖನಿ ಹಾಗೂ ವರ್ಣಚಿತ್ರವನ್ನು ರಚಿಸಿದ್ದರು ಅದು ಜನಪದ ಮತ್ತು ಶಿಷ್ಟಪದ ಕಲಾಪರಂಪರೆಗಳಲ್ಲಿ ಬಳಕೆ ತಂದರು.

ಹಸ್ತಪ್ರತಿಗಳು ಕಾವ್ಯ, ಶಾಸ್ತ್ರ, ಪುರಾಣ ಹಾಗೂ ಸಾಂದರ್ಭಿಕ ಚಿತ್ರರಚನೆ ಹಸ್ತಪ್ರತಿಕಾರನ ಕಲಾಕೌಶಲ್ಯ ಹಾಗೇ ಹಸ್ತಪ್ರತಿ ಯಾಜಮಾನನ ಕಲಾಭಿರುಚಿಯು ಪ್ರತಿನಿಧಿಸುತ್ತದೆ. ಮುಮ್ಮಡಿ ಅವರು ಕಾಲದಲ್ಲಿ ಪುಸ್ತಕಗಳಲ್ಲಿ ಚಿತ್ರಗಳ ರಚನೆ ಅಧಿಕವಾಗಿ ಕಂಡುಬರುತ್ತದೆ. ಶ್ರೀತತ್ವನಿಧಿ, ಸ್ವರಚೂಡಾಮಣಿ, ದೇವಾತಾನಾಮ ಕುಸುಮ ಮಂಜರಿ ಮುಂತಾದ ಹಸ್ತಲಿಖಿತ ಗ್ರಂಥಗಳಲ್ಲಿ ಬಹುಪಾಲು ಕಾಗದದಲ್ಲಿ ವರ್ಣಚಿತ್ರಗಳಿವೆ. ಅದರಲ್ಲಿ ಅರಸರ ವಂಶಾವಳಿಯನು ಆಲದವೃಕ್ಷ ಚಿತ್ರದಲ್ಲಿ ಬರೆಸಿದ್ದಾರೆ. ಈ ಚಿತ್ರಗಳಿಲ್ಲಿ

ತಮ್ಮದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ. ಚಿತ್ರಗಳಲ್ಲಿ ಸ್ಪಷ್ಟರೇಖೆಗಳು ಬಣ್ಣಗಳ ಬಳಕೆ ಅಲಂಕರಣ, ಸಹಜತೆ ಮುಂತಾದವುಗಳನ್ನು ಕಾಣಬಹುದು.

ಕಾವಿಕೆಂಪು, ಬಿಳಿ, ನೀಲಿ. ಹಳದಿ, ಕಪ್ಪು ಬಣ್ಣಗಳು ಮುಖ್ಯವಾಗಿ ಬಳಸಿದ್ದಾರೆ. ಭಾವನೆ, ಅಲಂಕರಣಕ್ಕೆ ಹೆಚ್ಚು ಮಹತ್ವ ನೀಡಲಾಗಿದೆ. ಹೆಚ್ಚು ಕಲಾತ್ಮಕತೆ ಚಿತ್ರಗಳ ಸ್ಥಳಾವಕಾಶ ಹೆಚ್ಚಾಗಿದೆ ಮತ್ತು ಸ್ಥಳದಲ್ಲಿ ಅಂಕಣಗಳ ವಿಂಗಡಣೆ ಹಾಗೂ ಅಲಂಕಾರಯುಕ್ತವಾಗಿದೆ. ರೇಖೆಗಳಲ್ಲಿ ಸೂಕ್ಷ್ಮತೆ, ಹಿತಮಿತವಾದ ಬಣ್ಣಗಳ ಬಳಕೆ ಇಲ್ಲಿನ ಭಾಗದಲ್ಲಿ ಹಸ್ತಪ್ರತಿಗಳಲ್ಲಿ ಇದೆ. ಅವುಗಳು ಅಶ್ವಶಾಸ್ತ್ರ, ವೀರಶೈವ ಉದ್ದರಣೆ ಚಿತ್ರಗಳು, ಕಲ್ಲಚ್ಚಿನಲ್ಲಿ ಮುದ್ರಿತವಾದಂತಹ ವೃಷಭೇಂದ್ರ ವಿಲಾಸ, ಶ್ರೀತತ್ವನಿಧಿ, ವಿಷ್ಣು, ಶಕ್ತಿ, ಬ್ರಹ್ಮ ಹೀಗೆ ಒಂಭತ್ತು ನಿಧಿಗಳು ಇನ್ನೂ ಅನೇಕ ಕಾಗದದ ಹಸ್ತಪ್ರತಿಯಲ್ಲಿ ವರ್ಣಹಸ್ತಪ್ರತಿಚಿತ್ರಗಳು ಕಂಡುಬರುತ್ತದೆ.

ವರ್ಣಚಿತ್ರ ರಚನೆಯ ನಾಲ್ಕು ಪ್ರಮುಖ ಹಂತಗಳಲ್ಲಿ ನಿರ್ಮಾಣವಾಗಿರುತ್ತವೆ. ಅನೇಕ ಶಾಸ್ತ್ರ ಮತ್ತು ಸಾಹಿತ್ಯ ಗ್ರಂಥಗಳಲ್ಲಿ ಚಿತ್ರರಚನೆಯ ಬಗ್ಗೆ ಉಲ್ಲೇಖ ಇರುತ್ತದೆ. ಉದಾ ವಿಷ್ಣುಧರ್ಮೋತ್ತರ ಪುರಾಣ, ಶಿವತತ್ವರತ್ನಕರ ಮುಂತಾದವುಗಳಲ್ಲಿ ರೇಖಾಪಾತ, ಅಲಂಕಾರ, ವರ್ಣಲೇಪನ ಮತ್ತು ಉನ್ಮೀಲನ ಗಳೆಂದು ಗುರುತಿಸುತ್ತಾರೆ.

ರೇಖಾಪಾತ: ಚಿತ್ರರಚಿಸಬೇಕಾದ ವಸ್ತು, ಪ್ರಾಣಿ, ಮಾನವ ಮತ್ತು ದೇವತೆಗಳ ಭಂಗಿಗಳು ಇತ್ಯಾದಿ ಸೇರಿ ಹೇಗಿರಬೇಕೆಂದು ತಾಳಮಾನ, ಶಾಸ್ತ್ರಗಳ ಅರಿವಿನಿಂದ ತಿಳಿದು ವರ್ಣಚಿತ್ರಕ್ಕೆ ಹಾದಿ ಮಾಡಿಕೊಡುವುದು ಮೊದಲನೆಹಂತ.

ಅಲಂಕಾರ: ಎರಡನೇಯ ಹಂತ ಚಿತ್ರಿತ ಆಕೃತಿಗಳ ಅಂಗಾಂಗಗಳ ಮೇಲೆ ದೇವತೆ, ಮಾನವ, ಪಕ್ಷಿ–ಪ್ರಾಣಿ ಮತ್ತು ಕಿರೀಟ, ಹಾರ, ಆಯುಧ, ಉಡಿಗೆ–ತೊಡುಗೆಗಳನ್ನು ಬರೆಯುವುದು ಆಗಿರುತ್ತದೆ.

ಮೂರನೆಯ ಹಂತವೇ **ವರ್ಣಲೇಪನ** ಅಥವಾ ವರ್ಣಗಾರಿಕೆ, ಈ ವರೆಗಿನ ಚಿತ್ರರಚನೆ ಒಂದೇ ವರ್ಣದಿಂದ ರೇಖಾಪಾತ ಮಾಡಿಕೊಂಡುದಾದರೆ ಮುಂದೇ ರೇಖಾಗಳ ಮಧ್ಯದಲ್ಲಿ ವಿವಿಧ ಬಣ್ಣಗಳನ್ನು ಚಪ್ಪಟೆಯಾಗಿ ತುಂಬಿಕೊಂಡಿರುವು ಕಾಣಬಹುದಾಗಿದೆ.

ಅಂತಿಮ ಹಂತವೇ **ಉನ್ಮೀಲನ,** ಉನ್ಮೀಲನವೆಂದರೆ ಪರಿಪೂರ್ಣ, ಭಾವಾಭಿವ್ಯಕ್ತಿಯ ಮತ್ತು ತಾಂತ್ರಿಕ ಹಂತವಾಗಿರುತ್ತದೆ. ಈ ಹಂತದ ಕೆಲಸ ಮಾತ್ರ ನುರಿತ ಒಳ್ಳೆಯ ಪರಿಶ್ರಮವಿದ್ದ ಚಿತ್ರಕಾರನೇ ಮಾಡುವ ಕೆಲಸ ಆಗಿರುತ್ತದೆ. ರೇಖಾಪಾತ ಹಂತದಲ್ಲಿದ ತಪ್ಪು ತಿದ್ದುವುದು, ತೆಳುವರ್ಣದಿಂದ ಎಳೆದ ರೇಖೆಯನ್ನು ಕಪ್ಪು ವರ್ಣದಿಂದ ಸಾಮಾನ್ಯವಾಗಿ ಸ್ಪುಟಗೊಳಿಸುವುದಾಗಿರುತ್ತದೆ. ಹಾಗೂ ಜೀವಕಳೆಯಂತಿರುವ ಕಣ್ಣು, ಮೂಗು, ಬಾಯಿ, ಅಂದಗೊಳಿಸಿವುದಾಗಿದೆ. ಚಿತ್ರಗಳಿಗೆ ಬಣ್ಣವೇ ದೇಹವಾದರೆ ಭಾವವೇ ಪ್ರಾಣವಾಗಿರುತ್ತದೆ. ಇಲ್ಲಿನ ವರ್ಣಚಿತ್ರಗಳನ್ನು ಈ ತಂತ್ರ ಉಪಯೋಗಿಸಿ ಚಿತ್ರರಚಿಸಿರುತ್ತಾರೆ.[೧೦]

ನಮ್ಮ ಅಖಂಡ ಪರಂಪರೆಯನ್ನು ಸಾಹಿತ್ಯ ಚಿತ್ರಕಲೆಗಳ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದವುವೆಂದರೆ ಹಸ್ತಪ್ರತಿಗಳೆ ಆಗಿದೆ. ಇದರಲ್ಲಿ ನಮ್ಮ ಪ್ರಾಚೀನರ ಮನದಲ್ಲಿ ಅರಳಿದ ಭಾವನವಿಲಾಸದ ವೈಭವೀಕರಣದ,

---

೧೦. ಟಿ.ನಾಗಶ್ ;ಬಿ.ವಿ.ಎ., ಹಸ್ತಪ್ರತಿಯಲ್ಲಿ ಚಿತ್ರಕಲೆ, ಬಿ.ವಿ.ಎ. ಪದವಿಗಾಗಿ ಸಲ್ಲಿರುವ ಅಪ್ರಕಟಿತ ಕಿರುಪ್ರಬಂಧ ಕ.ವಿ.ವಿ.ಹಂಪಿ, ಪು.ಸಂ_೩೪

ಕಲ್ಪನಾತೀತವಾದ ಸಾಹಿತ್ಯದ ಬರಹ ಹಾಗೂ ರೇಖೆ, ವರ್ಣಗಳಿಂದ, ಒಂದು ಪುಟಕ್ಕೆ ಕವಿ ಕಲಾವಿದ, ಸಾಹಿತ್ಯಗಳು ತಲಾತಲಾಂತರದಿಂದ ಹೊತ್ತು ತಂದ ತನ್ನ ಅನುಭವದ ಸಾರವನ್ನು ಕಂಠದಿಂದ ಮತ್ತು ವರ್ಣ, ಬ್ರೇಶ್‌ಗಳಿಂದ ಕಾಗದ, ಓಲೆಗರಿಗಳ ಮೇಲೆ ತನ್ನ ಕೌಶಲ್ಯದಿಂದ ಚಿತ್ರಿಸಿರುವುದು ಕಲಾವಿದನ ಮೇರುಶ್ರಮದ ಫಲವೇ ಆಗಿದೆ. ವಿಶೇಷವಾಗಿ ಹಸ್ತಪ್ರತಿಚಿತ್ರಕಲೆಯಲ್ಲಿ ಇತಿಹಾಸವನ್ನು ಸಹ ಗುರುತಿಸಬಹುದಾಗಿದೆ. .

ಈ ಜಿಲ್ಲೆಯಲ್ಲಿ ರೇಖೆ ಮತ್ತು ವರ್ಣಚಿತ್ರಗಳ ಹಸ್ತಪ್ರತಿಗಳು ಕಾಗದ ಮತ್ತು ತಾಳೆಗರಿಯಲ್ಲಿದ್ದು ಅವು ಸಂಗ್ರಹಾಲಯಗಳಲ್ಲಿ ಇದೆ. ಅವುಗಳನ್ನು ಆಧುನಿಕತೆಯ ತಂತ್ರ ಉಪಯೋಗಿಸಿ ಸಂರಕ್ಷಿಸಲಾಗಿದೆ. ರಚಿಸಿದ ಹಲವು ವರ್ಣ ಮತ್ತು ರೇಖಾಹಸ್ತಪ್ರತಿ ಚಿತ್ರಕಲೆಗಳಿದ್ದು ಅವುಗಳನ್ನು ತಮ್ಮದೇ ಶೈಲಿಯಲ್ಲಿ ದೇಶಿಯ ಪ್ರಮುಖ ಲಕ್ಷಣಗಳಿಂದ ಜಗತ್ ಪ್ರಸಿದ್ಧಿಹೊಂದಿದೆ. ಇಲ್ಲಿನ ಹಸ್ತಪ್ರತಿಗಳನ್ನು ಒಟ್ಟಾಗಿ ಡಾ.ಎಸ್.ಸಿ. ಪಾಟೀಲರು ತಮ್ಮ ಸಂಶೋಧನೆಯ ಕರ್ನಾಟಕದ ಹಸ್ತಪ್ರತಿಗಳಲ್ಲಿ ಚಿತ್ರಕಲೆಯನ್ನು ಪರಿಗಣಿಸಿದ್ದಂತೆ ಜನಪದ, ಶಿಷ್ಟಪದ ಮೂಲದ ಹಸ್ತಪ್ರತಿಚಿತ್ರಗಳು ಮುಖ್ಯವಾಗಿ ಇಲ್ಲಿ ಕಂಡುಬರುತ್ತದೆ. ಅದರಲ್ಲಿ ರೇಖಾಚಿತ್ರ ಮತ್ತು ವರ್ಣಚಿತ್ರ ಒಳಗೊಂಡಂತಹ ಕಾಗದ ಹಾಗೂ ಓಲೆಗರಿಯ ಹಸ್ತಪ್ರತಿಗಳು ಹೇರಳವಾಗಿ ಕಂಡುಬರುತ್ತದೆ.

ಜನಪದ ಮೂಲದ ತಾಳೆಗರಿಯಲ್ಲಿ ಚಿತ್ರಕಲೆ ತಾಳೆಗರಿಯಲ್ಲಿ ಅಲಂಕಾರಿಕ ಹಾಗೂ ದೇವತೆಗಳ ರೇಖಾಚಿತ್ರ ಇರುವಂತಹ ಹಸ್ತಪ್ರತಿಗಳು ಮೈ.ವಿ.ವಿ.ಕ.ಕು.ಅ.ಮೈ.ನಲ್ಲಿರುವ ಹಸ್ತಪ್ರತಿವಿಭಾಗದಲ್ಲಿ ಶಿವನ ಕಥೆಗೆ ಸೇರಿದ ಒಂದು ತಾಳೆಗರಿಯಲ್ಲಿಯೂ ಅಲಂಕಾರಿಕ ನಕ್ಷಾ ಚಿತ್ರವು ಒಂದು ಕಟ್ಟಿನಲ್ಲಿ ಇರುತ್ತದೆ. ಅದು ತಾಳೆಗರಿಯ ಮಧ್ಯದಲ್ಲಿ ಶಿವನು ಪೀಠದ ಮೇಲೆ ಕುಳಿತಿರುವನ್ನು ನಾಲ್ಕು ಕೈಗಳನ್ನು ಹೊಂದಿದ್ದಾನೆ. ತ್ರಿಶೂಲ, ಡಮರು ಹಿಡಿದ್ದಾನೆ. ಪಾರ್ವತಿಯು ಕೈಮುಗಿದು ನಿಂತಿದ್ದು ಉದ್ದ ಜಡೆಯೊಂದುರುತ್ತಾಳೆ, ಶಿವನ ಹಿಂದೆ ದೊಡ್ಡ ಹಾವು ಇರುವಂತೆ ಚಿತ್ರಿಸಿದ್ದಾರೆ. ಕಲಾವಿದ ಚಿಕ್ಕ ಯಜ್ಞಕುಂಡ, ಬಸವ, ಸೂರ್ಯ, ನವಿಲು, ಸೇವಕ, ಚಾಮರಬೀಸುವ ಚಿತ್ರವು ರೇಖೆಯಿಂದಲೆ ಈ ತಾಳೆಗರಿಯಲ್ಲಿ ಜನಪದಶೈಲಿಯಲ್ಲಿ ಚಿತ್ರಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಕಂಡುಬರುವ ಹಸ್ತಪ್ರತಿಚಿತ್ರಕಲೆಗಳು ಮತ್ತು ನೆಲೆಗಳು ಈ ರೀತಿ ಇವೆ.

೪.೧ ಕಾಗದದಲ್ಲಿ ಜನಪದ ಚಿತ್ರಕಲೆಯ ಹಸ್ತಪ್ರತಿ
೪.೧.೧, ಮುಮ್ಮಡಿ ಕೃಷ್ಣರಾಜ ಒಡೆಯರ ಚಿತ್ರ
೪.೧.೨, ಗಣೇಶನಚಿತ್ರ
೪.೨, ಅರಮನೆಯ ಸರಸ್ವತಿ ಭಂಡಾರದ ಸೌಗಂಧಿಕಾ ಪರಿಣಯ
೪.೨.೧, ಸೌಗಂಧಿಕಾರಾಜನು ದಾರ್ಬರ್ ನಡೆಸುತ್ತಿರುವ ಚಿತ್ರ
೪.೨.೨, ಸೌಗಂಧಿಕಾರಾಜನುಸಲ್ಲಾಪದಲ್ಲಿ ತೊಡಗಿರುವ ಚಿತ್ರ
೪.೩, ಪ್ರಾಚ್ಯ ಸಂಶೋಧನಾಲಯ
೪.೪, ಮೈಸೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಸಂಸ್ಥೆ,
೪.೪.೧, ಬಸವಪುರಾಣದ ಮುಂಬಾಗದ ಹಲಗೆಯ ಮೇಲಿನ ಚಿತ್ರ
೪.೪.೨, ಬಸವಪುರಾಣದ ಹಿಂಬಾಗದ ಹಲಗೆಯ ಮೇಲಿನ ಚಿತ್ರ
೪.೫, ಅಲಂಕಾರಿಕ ಮತ್ತು ಬರವಣಿಗೆಯ ಚಿತ್ರ
೪.೫.೧, ಅಲಂಕಾರಿಕ ಪಟ್ಟಿ
೪.೫.೨, ಅಕ್ಷರದ ತಾಳೆಗರಿ

೪.೬, ಅಶ್ವಪರೀಕ್ಷೆ
೪.೬.೧, ಅಶ್ವಪರೀಕ್ಷೆ ಕುದುರೆ ಚಿತ್ರಗಳು
೪.೭, ಉದ್ದರಣೆ ಪಟಲ
೪.೭.೧, ಅಘೋರ ಮೂರ್ತಿ ಚಿತ್ರ
೪.೭.೨, ಊರ್ಧ್ವಮುಖ ಕುಂಡಲಿ ಚಿತ್ರ
೪.೭.೩, ಬಸವನ ಚಿತ್ರ
೪.೮, ಶಿವನಿಧಿ
೪.೮.೧, ಚಂದ್ರಶೇಖರ ಮೂರ್ತಿ
೪.೮.೨, ಕಾಲಭೈರವನ ಚಿತ್ರ
೪.೯, ವಿಷ್ಣು ನಿಧಿ
೪.೯.೧, ವೇಣುಗೋಪಾಲ ಚಿತ್ರ
೪.೯.೨, ವೀರರಾಮನ ಚಿತ್ರ
೪.೧೦, ಶಕ್ತಿ ನಿಧಿ
೪.೧೦.೧, ಕಾತ್ಯಯನಿ ದುರ್ಗಾದೇವಿಯ ಚಿತ್ರ
೪.೧೦.೨, ಗೌರಿದುರ್ಗಾದೇವಿಯ ಚಿತ್ರ
೪.೧೧, ಸ್ವರಚೂಡಾಮಣಿ

೪.೧ ಕಾಗದದಲ್ಲಿ ಜನಪದ ಚಿತ್ರಕಲೆಯ ಹಸ್ತಪ್ರತಿ

ಕಾಗದದಲ್ಲಿ ಜನಪದ ವರ್ಣಹಸ್ತಪ್ರತಿ ಚಿತ್ರಕಲೆ ಇರುವುದನ್ನು ಎರಡು ರೀತಿಯಲ್ಲಿ ಗುರುತಿಸಬಹುದು. ಒಂದನೆಯದು ನೀಲಿ ಹೊತ್ತಿಗೆ ಅಂದರೆ ಜ್ಯೋತಿಷ್ಯಾಲಯಗಳಲ್ಲಿ ಕಂಡುಬರುವ ಹಸ್ತಪ್ರತಿ ಹಾಗೂ ಗಿಣಿಶಾಸ್ತ್ರ ಹೇಳುವವರ ಹತ್ತಿರ ಇರುವ ಹಸ್ತಪ್ರತಿಗಳು ಇದರಲ್ಲಿರುವ ಚಿತ್ರಗಳಿಗೆ ಉತ್ತಮ ಉದಾ: ರಾಕ್ಷಸ, ಪ್ರಾಣಿ, ಪಕ್ಷಿಗಳು, ಹಲ್ಲಿ, ಸೂರ್ಯ, ಚಂದ್ರ, ಇಲಿ, ಬೆಕ್ಕು, ಹಾವು, ಇತ್ಯಾದಿಗಳ ಮೇಲೆ ರೇಖೆ ಮತ್ತು ವರ್ಣಚಿತ್ರದಲ್ಲಿ ಇರುತ್ತದೆ. ಅವುಗಳು ಚಿಕ್ಕ ಚಿಕ್ಕ ಅಳತೆಯಲ್ಲಿ ಕಾಗದ ಮತ್ತು ರಟ್ಟುಗಳಿಂದ ಮಾಡಿರುತ್ತಾರೆ. ಅದರ ಮೇಲೆ ಚಿತ್ರಗಳು ಇರುತ್ತದೆ. ಮಂತ್ರ, ತಂತ್ರ, ಭಾನಾಮತಿಗೆ ಸಂಬಂಧಪಟ್ಟಂತಹ ಚಿತ್ರಗಳು ಆಗಿರುತ್ತದೆ.

ಜನಪದ ವಿಷಯಗಳಗೊಂಡಂತಹ ಕಾಗದ ವರ್ಣಚಿತ್ರ ಹಸ್ತಪ್ರತಿಯಾದ **ವೃಷಭೇಂದ್ರ ವಿಲಾಸ** ಎಂಬ ಯಕ್ಷಗಾನ ರೂಪದಲ್ಲಿ ಬಸವಣ್ಣನ ಕಥೆ ಸಾರುವ ಹಸ್ತಪ್ರತಿಯು ಸುತ್ತೂರು ಮಠದಲ್ಲಿರುತ್ತದೆ. ಅದು ಕಲ್ಲಚ್ಚಿನಲ್ಲಿ ಮುದ್ರಣಗೊಂಡಿರುತ್ತದೆ. ಅದನ್ನು ಪುಸ್ತಕ ರೂಪದಲ್ಲಿ ಈ ಮಠದವರೆ ಹೊರತಂದಿರುತ್ತಾರೆ.[೧೧]

ದಪ್ಪ ಬಿಳಿಕಾಗದದಲ್ಲಿ ರಚಿತವಾದಂತಹ ಗ್ರಂಥ ಆಕಾರದಲ್ಲಿದ್ದು ಒಂದಡಿಗಿಂತಲೂ ಸ್ವಲ್ಪ ಹೆಚ್ಚು ಉದ್ದವಿದೆ. ಅರ್ಧಅಡಿಗಿಂತಲೂ ಸ್ವಲ್ಪ ಹೆಚ್ಚು ಅಗಲವಾಗಿಯೂ ಇರುತ್ತದೆ. ಒಂದೊಂದು ಪುಟದ ಸುತ್ತಲೂ ಹಳದಿ ಬಣ್ಣದ ಅಂಚನ್ನು ಕಟ್ಟಲಾಗಿದೆ. ಅದರಲ್ಲಿ ಮುಮ್ಮಡಿಕೃಷ್ಣರಾಜ ಒಡೆಯರ ಚಿತ್ರ ಹಾಗೂ ಗಣಪತಿ, ಮಹಿಷಾಸುರಮರ್ದಿನಿ, ಸರಸ್ವತಿ, ಲಕ್ಷ್ಮೀ ಮೊದಲಾದ ವರ್ಣಚಿತ್ರಗಳು ಕಂಡುಬರುತ್ತದೆ. ಜೊತೆ

೧೧. ಮುಮ್ಮಡಿಕೃಷ್ಣರಾಜ ಒಡೆಯರು, ವೃಷಭೇಂದ್ರ ವಿಲಾಸ, ಜೆ.ಎಸ್.ಎಸ್.ಸುತ್ತುರು.

ಲಿಂಗವನ್ನು ಶಿವಯೋಗಿ ಕೈಯಲ್ಲಿ ಹಿಡಿದು ನಿಂತಿರುವ ಚಿತ್ರವಿದೆ. ಸುಂದರವಾಗಿ ಚಿತ್ರಗಳನ್ನು ರಚಿಸಿದ್ದಾರೆ. ಅದು ಬಸವಣ್ಣನ ಐಕ್ಯವಾಗಿರುವ ವರೆಗೆ ಅನೇಕ ಶರಣರ ಕಥೆ ಹಾಗೂ ಚಿತ್ರಗಳು ಇಲ್ಲಿ ಇರುತ್ತದೆ.

೪.೧.೧. ಮುಮ್ಮಡಿ ಕೃಷ್ಣರಾಜ ಒಡೆಯರ ಚಿತ್ರ

ಈ ಚಿತ್ರವು ಮೊದಲು ಕಾಗದ ಮೇಲೆ ಕಲಾವಿದರಿಂದ ಮುಮ್ಮಡಿಯವರು ಬರೆಸಿದ್ದಾರೆ. ಚಿತ್ರದಲ್ಲಿ ಸೂಕ್ಷ್ಮವಾಗಿ ಕಲಾವಿದರು ಚಿತ್ರಬರೆದಿರುತ್ತಾರೆ. ಇಲ್ಲಿ ವಿಶೇಷವೆಂದರೆ ಬಸವಣ್ಣನವರ ಕುರಿತಾದ ಜಾನಪದ ಕಲೆಯ ಅಂಶವನು ಹೊಂದಿರುವ ಈ ಪುಸ್ತಕದಲ್ಲಿ ಮುಮ್ಮಡಿ ಅವರಚಿತ್ರದಲ್ಲಿ ಮತ್ತೊಂಬ್ಬ ಜಂಗಮನ್ನು ಸೇರಿಸಿ ನೈಜರೀತಿಯ ಮೈಸೂರು ಸಂಪ್ರದಾಯಶೈಲಿಯಲ್ಲಿ ಚಿತ್ರರಚಿಸಿದ್ದಾರೆ. ಮುಮ್ಮಡಿಯವರು ಒಂದು ಪೀಠದ ಮೇಲೆ ಕುಳಿತ್ತಿದ್ದಾರೆ. ದಪ್ಪಮೀಸೆ ತಲೆಗೆ ಕೆಂಪುಪೇಟ ಅದಕ್ಕೆ ಕುಸುರಿ ಕೆಲಸದಿಂದ ಅಲಂಕಾರ ಮಾಡಲಾಗಿದೆ. ಹಣೆಗೆ ಗಂಧದ ದೊಡ್ಡ ಬೊಟ್ಟು ಕೊರಳಿಗೆ ರುದ್ರಾಕ್ಷಾ ಮಣಿಸರ, ದೊಡ್ಡ ಪದಕ ಇರುವಂತ ಮಣಿಸರ ಕೈಯಲ್ಲಿ ಜಪಮಾಲೆ ಇರುತ್ತದೆ. ಪದ್ಮಹಾಸನದಲ್ಲಿ ಕುಳಿತಿರುವ ಒಡೆಯರು ಪಾರದರ್ಶಕ ಬಿಳಿವರ್ಣದ ತುಂಬುತೋಳಿನ ಅಂಗಿ, ಅದೇವರ್ಣದ ಪಂಚೆಯನ್ನು ಸಹ ಉಟ್ಟಿರುತ್ತಾರೆ. ಎದುರಿಗೆ ಇರುವ ಜಂಗಮನು ಸಹ ಸಾಧರಣ ಕೆಂಪುಪೇಟ, ಬಿಳಿ, ಕೆಂಪು ವರ್ಣದ ಜುಬ್ಬ ಪೈಜಾಮ ತೊಟ್ಟಿರುತ್ತಾನೆ. ಕೈಯಲ್ಲಿ ಗ್ರಂಥವಿದ್ದು ಬಲಕೈಯಲ್ಲಿ ಸಣ್ಣವಸ್ತುವನ್ನು ಮುಮ್ಮಡಿಯವರಿಗೆ ಕೊಡುತ್ತಿದ್ದಾನೆ. ಕಾಲಿಗೆಗೆಜ್ಜೆ ಹಾಕಿರುತ್ತಾನೆ. ಜನಪದ ಅಂಶ ಇಲ್ಲಿ ತೋರಿಸಿದ್ದಾನೆ. ರಾಜರ ಪೀಠಕ್ಕೆ ಮೆಟ್ಟಿಲುಗಳು ಇರುತ್ತದೆ. ನೆಲಕ್ಕೆ ಹಸಿರು ವರ್ಣದ ಬಳ್ಳಿಚಿತ್ರವಿರುವ ನೆಲಹಾಸುವ ವಸ್ತ್ರವನ್ನು ಹಾಸಿರುತ್ತಾರೆ. ಎರಡು ಭಾಗದಲ್ಲಿ ಕೆಂಪು ಅಲಂಕಾರಿಕ ಪಟ್ಟಿಇರುತ್ತದೆ. ಪ್ರಭಾವಳಿಯಲ್ಲಿ ಅಲಂಕಾರಿಕ ಚಿತ್ರಗಳನ್ನು ಬಿಡಿಸಿದ್ದಾರೆ. ಹಳದಿವರ್ಣದಲ್ಲಿ ಪ್ರಭಾವಳಿಗೆ ತೀರ್ಥಇಡುವ ವಸ್ತುವನ್ನು ಬಿಳಿವರ್ಣದಲ್ಲಿ ತೋರಿಸಲಾಗಿದೆ. ಹಿನ್ನೆಲೆಯ ಸಹಜವಾಗಿ ಹಸಿರುವರ್ಣದಿಂದ ತೋರಿಸಿದ್ದಾರೆ. ಕಪ್ಪು, ಕೆಂಪು ರೇಖೆಗಳಿಂದ ರೇಖೆಗಳನ್ನು ಎಳೆದಿರುತ್ತಾರೆ.

೪.೧.೨. ಗಣೇಶನಚಿತ್ರ

ಮೈಸೂರುಶೈಲಿಯಲ್ಲಿ ಇರುವ ಗಣೇಶನ ಚಿತ್ರವು ಕಾಗದದ ಮೇಲೆ ರಚಿಸಿದ್ದಾರೆ. ಈ ಗ್ರಂಥದ ಒಳಗೆ ಚಿಕ್ಕದಾಗಿ ಮುದ್ರಿಸಲಾಗಿದೆ. ದೈತ್ಯಕಾರದ ಗಣೇಶನ ಡೋಳುಹೊಟ್ಟೆಯನ್ನು ಹೊಂದಿದ್ದು ಬಿಳಿಮೈವರ್ಣದಿಂದ ಗಣೇಶನು ಕುಳಿತಿರುವಾಗೆ ಕಲಾವಿದ ರಚಿಸಿದ್ದಾನೆ. ನಾಲ್ಕು ಕೈಗಳು ಇದ್ದು ನಾಲ್ಕರಲ್ಲಿಯೂ ಒಂದೊಂದು ಆಯುಧವನ್ನು ಕೈಯಲ್ಲಿ ಹಿಡಿದಿದ್ದಾನೆ. ಮೇಲಿನ ಕೈಗಳಲ್ಲಿ ಆಕುಶ ದಂಢವಿದರೆ, ಕೆಳಗಿನ ಕೈಗಳಲ್ಲಿ ದಂತ ಎಡಕೈಯಲ್ಲಿ ಕಡುಬುನ್ನು ಹಿಡಿದಿದ್ದಾನೆ. ಹೊಟ್ಟೆಗೆರ ಹಾವು ಹೊಂದನ್ನು ಸುತ್ತಿರುತ್ತಾನೆ. ತಲೆಗೆ ಕಿರೀಟ ಕಾಲು, ಕೈಗಳಿಗೆ ಕಡಗಗಳನ್ನು ತೊಟ್ಟಿರುವಾಗೆ ಕಲಾವಿದನ್ನು ಚಿತ್ರಿಸಿದ್ದಾನೆ. ಕಿವಿ ಕೊರಳಿಗೆ ಆಭರಣ ಧರಿಸಿದ್ದು ಕಿವಿಯನ್ನು ಕೆಂಪುವರ್ಣದಿಂದ ತೋರಿಸಲಾಗಿದೆ. ಗಣೇಸನ್ನು ಪೀಠದ ಮೇಲೆ ಕುಳಿತಿದ್ದು ಪೀಠದ ಕೆಳಭಾಗದಲ್ಲಿ ಒಂದು ಸಣ್ಣ ಇಲಿಯು ಬಿಳಿವರ್ಣದಿಂದ ಕೂಡಿದೆ. ಅದರ ಬೆನ್ನಮೇಲೆ ಕೆಂಪುವಸ್ತ್ರವನ್ನು ಕಲಾವಿದನ್ನು ರಚಿಸಿದ್ದಾನೆ. ಹಳದಿ ಪಂಚೆ, ಕೆಂಪುಶಾಲು ಉಟ್ಟಿರುತ್ತಾನೆ. ಹಿನ್ನೆಲೆಯು ಸಾಧರಣವಾಗಿ ಬಿಳಿವರ್ಣದಿಂದ ಕೂಡಿದೆ. ಕಾಗದದ ಹಸ್ತಪ್ರತಿಯಲ್ಲಿ ಎಳ ಅಳತೆಯ ಗ್ರಂಥದಲ್ಲಿ ಚಿಕ್ಕದಾಗಿದೆ ಮುದ್ರಿಸಲಾಗಿದೆ. ಮೂಲಪ್ರತಿಯಲ್ಲಿ ದೊಡ್ಡದಾಗಿ ಚಿತ್ರಿಸಿಲಾಗಿದೆ. ನಯವಾದ ಕಪ್ಪುರೇಖೆಯು ಪ್ರಧಾನವಾಗಿ ಆಕೃತಿಗಳಲ್ಲಿ ಉಪಯೋಗಿಸಿ ಚಿತ್ರಿಸಿದ್ದಾರೆ. ಚಿತ್ರವು ಲಂಬಕಾರದ ಅಳತೆಯಲ್ಲಿ ಸಂಯೋಜಿಸಿದ್ದಾರೆ. ಗಣೇಶನ ಚಿತ್ರದ ಎಡಬಲಕ್ಕೆ ಕೆಂಪು ಪಟ್ಟಿಯ

ಅಲಂಕಾರಿಕ ಚಿತ್ರವಿದೆ. ಆನಂತರದಲ್ಲಿ ಪ್ರಭಾವಳಿ ಚಿತ್ರ ಇದೆ. ಆ ಪ್ರಭಾವಳಿಯಲ್ಲಿ ಹೂವಿನ ಬಳ್ಳಿ ಮತ್ತು ತಾವರೆಹೂವನ್ನು ಕಲಾವಿದನ್ನು ಅಲಂಕಾರಕ್ಕಾಗಿ ಚಿತ್ರಿಸಿದ್ದಾನೆ.

ಶಿಷ್ಟಪದ ಮೂಲದ ಹಸ್ತಪ್ರತಿ ಚಿತ್ರಕಲೆ.

ಜನಪದ ಕಲೆಯಿಂದ ಬೇರ್ಪಟ್ಟು ತನ್ನಗೆ ಬೇಕಾದ ನಿರ್ಧಿಷ್ಟ ಚೌಕ್ಕಟ್ಟನ್ನು ನಿರ್ಮಿಸಿಕೊಂಡು ಸ್ವತಂತ್ರವಾಗಿ ಸೃಷ್ಟಿಸಿದ ಕಲಾ ವಿನ್ಯಾಸವನ್ನು ಶಿಷ್ಟಪದ ಹಸ್ತಪ್ರತಿಚಿತ್ರಕಲೆ ಎಂದು ಕರೆಯುತ್ತಾರೆ.

ಇಲ್ಲಿ ವಾತ್ಸಾಯನನ ಷಡಂಗಗಳು, ಭಾವಭಿವ್ಯಕ್ತಿ, ತಾಳಮಾನ ತಿಳುವಳಿಕೆಯ ನುರಿತ ಕಲಾವಿದರಿಂದ ಚಿತ್ರರಚನೆಯನ್ನು ತಾಂತ್ರಿಕವಾಗಿ ಬೆಳೆದ ಕಲೆ, ಶಾಸ್ತ್ರೋಕ್ತವಾದ ವಿವಿಧ ವಿಧಾನಗಳು ಮತ್ತು ಸಂಕೇತವುಳ್ಳ ಪ್ರತೀಮೆಗಳು ಹಾಗೆಯೇ ಸತ್ವಶಾಲಿ ರೇಖಾ ವಿನ್ಯಾಸಗಳು, ಪ್ರೌಢವಾದ ವರ್ಣಗಳ ಸಮ್ಮೀಳನ ಪ್ರಕೃತಿಯ ಅನೇಕ ಆಕೃತಿಯ ಬೆಡಗಿನ ವಿನ್ಯಾಸಗಳು ಹೆಚ್ಚಾಗಿ ಸಂಪ್ರದಾಯದಲ್ಲಿ ಕಂಡುಬರುತ್ತದೆ.

ಕರ್ನಾಟಕದ ಇತಿಹಾಸದಲ್ಲೇ ಹೆಚ್ಚು ಪ್ರೋತ್ಸಾಹ ಹಾಗೂ ಸಂರಕ್ಷಣೆ ನೀಡಿದಂತಹ ಅರಸಮನೆತನವೆಂದರೆ ಮೈಸೂರಿನ ಒಡೆಯರು ಆ ಕಾಲವು ಸ್ವರ್ಣಯುಗವೆನ್ನಬಹದು. ಏಕೆಂದರೆ ಇಲ್ಲಿ ಸಂಗ್ರಹ ಮತ್ತು ರಚನಗೆ ಸೌಕರ್ಯವನ್ನು ನೀಡಿದವರು ಇತಿಹಾಸದಲ್ಲಿ ಇವರಷ್ಟು ಯಾರು ಕಂಡುಬರುವುದಿಲ್ಲ ಹಸ್ತಪ್ರತಿ ಪರಂಪರೆಯ ಕಲೆಯ ಉತ್ತಾರಾಧಿಕಾರಿಯಾಗಿ ಸುಮಾರು ಐನೂರು ಆರುನೂರು ವರ್ಷಗಳ ಕಾಲ ಮೈಸೂರು ಒಡೆಯರು ಮೆರೆದಿದ್ದಾರೆ. ಅವರಲ್ಲಿ ಶಿಷ್ಟಪದ ಹಸ್ತಪ್ರತಿ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದಾರೆ. ಎನ್ನುವುದನ್ನು ಅಧ್ಯಯನದಿಂದ ತಿಳಿದು ಬಂದಿದೆ. ಇಲ್ಲಿನ ಅರಸರಲ್ಲಿ ಆರನೇಯ ಚಾಮರಾಜ ಒಡೆಯರು, ಚಾಮರಾಜೋಕ್ತಿ ವಿಲಾಸ, ಮುಂದೆ ಬಂದಂತಹ ಚಿಕ್ಕ ದೇವರಾಜ ಒಡೆಯರು ಸಲಹೆ ಸೂಚನೆಗಳೊಂದಿಗೆ ಮತ್ತು ಸ್ವತಃ ಅನೇಕ ಗ್ರಂಥ ರಚನೆ ಮಾಡಿದ್ದಾರೆ, ಮುಖ್ಯವಾಗಿ ಭಾಗವತ, ಭಾರತ, ಶೇಷಧರ್ಮ, ಗೀತಗೋಪಾಲ ಇತ್ಯಾದಿಗಳು ನಡೆದಿದೆ. ಇವರ ನಂತರ ಕಾಲವು ತುಂಬ ಸಂಕಷ್ಟ ಕಾಲದ ಸಮಯದಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳೆಂಡರಲ್ಲೂ ಸಹ ಈ ಕಲಾಮಾಧ್ಯಮವು ಹೇರಳವಾಗಿ ಸೃಷ್ಟಿಗೊಂಡಿದೆ.

ಅದುವೇ ೧೭ನೇ ಶತಮಾನದ ನಂತರವಂತು ಖಾಸಾಚಾಮರಾಜ ಒಡೆಯರು, ಮುಮ್ಮಡಿಕೃಷ್ಣರಾಜ ಒಡೆಯರು ಇವರ ಕಾಲದಲ್ಲಿ ಕಾಗದದಲ್ಲಿ ವರ್ಣಹಸ್ತಪ್ರತಿ ಚಿತ್ರಕಲೆ ಹೆಚ್ಚಾಗಿ ಸೃಷ್ಟಿಯಾಗಿದೆ. ಜೊತೆಗೆ ತಾಳೆಗರಿಯಲ್ಲಿ ಅಲಂಕಾರಿಕ ನಕ್ಷಾಚಿತ್ರಗಳು ಸಹ ಸೃಷ್ಟಿಯಾಗಿರುತ್ತೆ. ಒಟ್ಟಾರೆಯಾಗಿ ಈ ಜಿಲ್ಲೆಯಲ್ಲಿ ಪರ್ಶಿ, ಸಂಸ್ಕೃತ, ಹಳಗನ್ನಡ ಮತ್ತು ಕನ್ನಡಭಾಷೆಯಲ್ಲಿ ರಚನೆಗೊಂಡಿರುತ್ತದೆ. ಇವುಗಳ ಸಂಗ್ರಹವು ಮುಖ್ಯವಾಗಿ ಅರಮನೆಯ ಸರಸ್ವತಿಭಂಡಾರ, ಸಂಸ್ಕೃತ ಪಾಠಶಾಲೆ, ಓರಿಯೆಂಟಲ್ ಲೈಬ್ರರಿ ಮೈಸೂರು, ಮತ್ತು ಮೈ.ವಿ.ವಿ.ದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ಇವುಗಳಲ್ಲಿ ಮುಖ್ಯವಾಗಿ ಸಂಗ್ರಹ ಗೊಂಡಿರುತ್ತದೆ.

೪.೨, ಅರಮನೆಯ ಸರಸ್ವತಿ ಭಂಡಾರ:

ಈ ಜಿಲ್ಲೆಯ ಪ್ರಾಚೀನ ಹಸ್ತಪ್ರತಿಭಂಡಾರಗಳಲ್ಲಿ ಇದು ಮೊದಲನೆಯದು, ಅರಮನೆಯ ಪ್ರಾಚೀನ ಹಸ್ತಪ್ರತಿ ಮತ್ತು ಗ್ರಂಥ ಭಂಡಾರಕ್ಕೆ ಸರಸ್ವತಿ ಭಂಡಾರವೆಂದು ಕರೆಯುತ್ತಾರೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಾಪನೆಯಾಗಿ ೧೮ನೇ ಶತಮಾನದವರೆಗೆ, ಅರಮನೆಯ ಚಾಮುಂಡಿ ತೊಟ್ಟಿಯಲ್ಲಿ ಇತ್ತು. ೧೮೭೭ರಲ್ಲಿ ಮರದ ಅರಮನೆಗೆ ಬೆಂಕಿಬಿದ್ದ ಕಾರಣ ಅಳಿದು ಉಳಿದ ಗ್ರಂಥಗಳನ್ನು

ಜಗನ್ಮೋಹನ ಅರಮನೆಗೆ ವರ್ಗಯಿಸಲಾಯಿತು. ಆ ನಂತರ ೧೯೨೮ರಲ್ಲಿ **ಮಹಾರಾಜ ಸಂಸ್ಕೃತ ಪಾಠಶಾಲೆಗೆ** ವರ್ಗಾಯಿಸಿದ್ದರು ಅಲ್ಲಿ ತಾಳೆಗ್ರಂಥಗಳು ಮತ್ತು ಮುದ್ರಿತ ಗ್ರಂಥಗಳು ಎಂಬ ಎರಡು ಭಾಗಗಳಿದ್ದು ೬೫೦೦ ಮುದ್ರಿತ ಗ್ರಂಥಗಳು. ೨೫೦೦ ಪ್ರಾಚೀನ ಹಸ್ತಪ್ರತಿಗಳು ಇವೆ. ಕಥೆ, ಪುರಾಣ, ಶಿಲ್ಪಶಾಸ್ತ್ರ, ಸುಭಾಷಿತ, ನಿಬಂಧ, ಕಾವ್ಯ, ನಾಟಕ, ಇತಿಹಾಸ, ಗಣಿತಸಂಗ್ರಹ, ಸ್ವರಚೂಡಾಮಣಿ, ಪ್ರಭಾವಳಿ ವ್ಯಾಖ್ಯಾನ ಇನ್ನೂ ಕೆಲವು ಗ್ರಂಥಗಳಲ್ಲಿ ರೇಖಾಚಿತ್ರಗಳು ಸಹ ಇಲ್ಲಿ ಕಂಡುಬರುತ್ತದೆ.

ಮುದ್ರಿತ ಗ್ರಂಥಗಳಲ್ಲಿ ಸಂಖ್ಯಾರತ್ನಕೋಶ ಮುಮ್ಮಡಿಯರ ಸೌಗಂಧಿಕಾ ಪರಿಣಯ, ಶೀಕೃಷ್ಣ ಕಥಾಸಾರ ಸಂಗ್ರಹ, ಆರ್ಯರಾಮಯಣ, ಶ್ರೀತತ್ವನಿಧಿ, ಸಹಸ್ರಾಯುಕಥೆ, ಅಲಂಕಾರಿಕಶಾಸ್ತ್ರ, ಶಿವಪೂಜಾವಿಧಿ, ಭಗವದ್ಗೀತಾ ಮುದ್ರಾರಾಕ್ಷಸ, ಗೀತಗೋವಿಂದ, ಶಿಲ್ಪಶಾಸ್ತ್ರ, ಭರತಶಾಸ್ತ್ರ, ಕಾಮಶಾಸ್ತ್ರ, ವೇದ, ಪುರಾಣ, ಆಗಮಸೂತ್ರ, ೧೫೪ ಪಂಚಾಂಗಗಳು, ೪೫೫ಪುಸ್ತಕಗಳು, ೨೭೨೪ ಓಲೆಗರಿಯ ಗ್ರಂಥಗಳು, ೯೮೬ಮುದ್ರಿತ ಪುಸ್ತಕಗಳು ಇತ್ಯಾದಿಗಳು ಇಲ್ಲಿ ಇರುತ್ತದೆ. ಏಳುನೂರು ವರ್ಷಗಳ ಹಿಂದೆ ಬರ್ಮಾ ಭಾಷೆಯಲ್ಲಿ ಬರೆದ ಬೌದ್ಧಮತದ ತ್ರಿಪಿಟಕಾ ಗ್ರಂಥ ಕಲ್ಲಚ್ಚಿನಲ್ಲಿದ್ದು ಅದು ಕಾಗದದಿಂದ ಮುದ್ರಿತವಾಗಿರುತ್ತದೆ. ಅಲ್ಲದೆ ಈ ಸಂಗ್ರಹಾಲಯದಲ್ಲಿ ಭಾರತದ ಉತ್ತರ ಮತ್ತು ದಕ್ಷಿಣ ಭಾಗದ ಅನೇಕ ಹಸ್ತಪ್ರತಿಗಳು ಇಲ್ಲಿ ಇರುವುದು ಕಂಡುಬರುತ್ತದೆ.

೪.೨, ಸೌಗಂಧಿಕಪರಿಣಯ ಈ ಗ್ರಂಥವನ್ನು ಮುಮ್ಮಡಿಕೃಷ್ಣರಾಜ ಒಡೆಯರ್ ರಚಿಸಿದ್ದನ್ನು(ಸಂ) ಡಾ.ಎಚ್.ಎಸ್.ಶ್ರೀಮತಿಯವರ ೨೦೦೪ರಲ್ಲಿ ಸಂಪಾದಿಸಿದ್ದಾರೆ. ಮೊದಲು ಈ ಗ್ರಂಥವನ್ನು ಕಲ್ಲಿಚ್ಚಿನಿಂದ ಮುದ್ರಣವಾಗಿದೆ. ಈ ಗ್ರಂಥವು ಅನೇಕ ರೇಖಾ ಚಿತ್ರಗಳಿಂದ ಕೂಡಿರುತ್ತದೆ. ಇಂದ್ರನ ಕಥೆಯಾದರಿತ ಗ್ರಂಥವಾಗಿರುತ್ತದೆ.[೧೨] ಸೌಗಂಧಿಕಾ ಪರಿಣಯ ಒಂದು ಕಲ್ಪಿತ ಕಥೆಯನ್ನು ಹೊಂದಿದೆ. ಮತ್ತು ಮುಮ್ಮಡಿಯವರ ಆತ್ಮಕಥೆಗೆ ಸ್ವಲ್ಪ ಹೋಲುತ್ತದೆ ಎಂದು ಕೆಲವು ವಿದ್ವಾಂಸರು ವಾದಿಸುತ್ತಾರೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಮುಖ ಕೊಂಡಿಯಾಗಬಲ್ಲದು ಮತ್ತು ಮುಮ್ಮಡಿಯವರ ಗ್ರಂಥವು ಗದ್ಯ ಪ್ರಬಂಧವು ಸಹ ಆಗಿರುತ್ತದೆ. ಇದರಲ್ಲಿ ನೂರಾರು ರೇಖಾಚಿತ್ರಗಳು ಕಥೆಗೆ ಸಂಬಂಧಪಟ್ಟಂತೆ ಇರುತ್ತದೆ.

ದೇವೇಂದ್ರನ ಅನೇಕ ಆಯುಧಗಳು ದುರ್ವಾಸಮುನಿ ಶಾಪದಿಂದ ಧರೆಗೆ ಸೇರಿರುತ್ತದೆ. ಅದನ್ನು ಪುನಃ ತನ್ನ ಲೋಕಕ್ಕೆ ಸೇರಿಸಿಕೊಳ್ಳುವ ಕಥಾ ಆಧಾರಿತ ಗ್ರಂಥವಾಗಿದೆ.

೪.೨.೧, ಸೌಗಂಧಿಕಾ ರಾಜನು ದಾರ್ಬರ್ ನಡೆಸುತ್ತಿರುವ ಚಿತ್ರ

ಈ ಚಿತ್ರವು ಸಹ ಕಲ್ಲಚ್ಚಿನಲ್ಲಿ ಮುದ್ರಿತವಾಗಿರುಚಿತ್ರವಾಗಿ ಇದರ ಮೂಲ ಪ್ರತಿಯು ದೊಡ್ಡದಾಗಿದ್ದು ಅದರಲ್ಲಿಯೂ ರೇಖೆಗಳಿಂದಲ್ಲೆ ಚಿತ್ರಿಸಲಾಗಿದೆ. ಈ ಗ್ರಂಥದಲ್ಲಿಯೂ ರೇಖೆಯಲ್ಲಿದ್ದು ಚಿಕ್ಕದಾಗಿ ಮುದ್ರಿತವಾಗಿದೆ. ಈ ಚಿತ್ರದಲ್ಲಿ ಸೌಗಂಧಿಕಾ ರಾಜನ್ನು ತನ್ನ ಅರಮನೆಯಲ್ಲಿ ಒಂದು ಪೀಠದ ಮೇಲೆ ಕುಳಿತು, ಕುಂದುಕೊರತೆಗಳನ್ನು ವಿಚಾರಸುತ್ತಿದ್ದಾನೆ. ರಾಜನು ಕಿರೀಟ ಆಭರಣಗಳನ್ನು ತೊಟ್ಟಿರುತ್ತಾನೆ. ಅವನ ಮುಂದೆ ಮತ್ತೊಂಬ್ಬ ಮುಖ್ಯವಾಗಿರುವ ಸಮಾಂತರಾಜನಿಗೆ ಶಾಲುಹೊದಿಸಿ ಗೌರವ ನೀಡುತ್ತಾನೆ. ಇವನ ಹಿಂದೆ ಮೂರುಸೇವಕರು ಸೇರಿ ಗಾಳಿಯನ್ನು ಬೀಸುತ್ತಿದ್ದಾರೆ. ಅರಮನೆಯ ಆವರಣವಿದ್ದರು ಸಹ ಚಿತ್ರದಲ್ಲಿ ಎಡಬಲಭಾಗದಲ್ಲಿ ಸ್ವಲ್ಪಭಾಗ ಮರ ಇರುವಾಗೆ ಚಿತ್ರವನ್ನು ಚಿತ್ರಿಸಿಲಾಗಿದೆ. ಉತ್ತಮಸಂಯೋಜನೆಯನ್ನು ಹೊಂದಿರುವ ಚಿತ್ರವು ಸೌಗಂಧಿಕಾ ರಾಜನ ಕಥೆಯನ್ನು ಕಪ್ಪುರೇಖೆಯಲ್ಲಿ ಎಲ್ಲಾ ಚಿತ್ರಗಳನ್ನು ಚಿತ್ರಿಸಿದ್ದಾರೆ.

---

೧೨. (ಸಂ) ಎಚ್.ಎಸ್.ಶ್ರೀಮತಿ,; ಸೌಗಂಧಿಕಪರಿಣಯ, ಸಾಹಿತ್ಯಅಕಾಡೆಮಿ, ದೆಹಲಿ, ೨೦೦೪

೪.೨.೨, ಸೌಗಂಧಿಕಾ ರಾಜನು ಸಲ್ಲಾಪದಲ್ಲಿ ತೊಡಗಿರುವ ಚಿತ್ರ

ಈ ಚಿತ್ರವು ರೇಖಾಚಿತ್ರದಿಂದ ಕೂಡಿದು ರೇಖೆಯೇ ಪ್ರಧಾನವಾಗಿ ಕಂಡುಬರುತ್ತದೆ. ಚಿತ್ರವು ಸಹ ಕಾಗದದಹಸ್ತಪ್ರತಿಯಲ್ಲಿ ಚಿತ್ರಿಸಿರುವಂತೆ ಚಿತ್ರವನ್ನು ಕಲ್ಲಚ್ಚುಮುದ್ರಿತದಿಂದ ಮುದ್ರಣವಾಗಿರುವ ಈ ಗ್ರಂಥದಲ್ಲಿ ಈ ಚಿತ್ರವು ಸಾಧರಣ ಅಳತೆಯಲ್ಲಿ ಇರುತ್ತದೆ. ಸುಗಂಧರಾಜನು ಅರಮನೆಯ ಅಂತಪುರದಲ್ಲಿ ಮಂಚದ ಮೇಲೆ ತನ್ನ ರಾಣಿಯನ್ನು ಬಿಗಿದ್ದಪ್ಪಿರುತ್ತಾನೆ. ಜೊತೆಗೆ ಏನೋ ಪಿಸುಮಾತನ್ನು ತನ್ನ ರಾಣಿಯ ಕಿವಿಯಲ್ಲಿ ಹೇಳುವ ಚಿತ್ರವನ್ನು ರೇಖೆಯಲ್ಲಿ ಕಲಾವಿದನು ಚಿತ್ರಿಸಿರುತ್ತಾನೆ. ಮಂಚದ ಮೇಲೆ ಇಬ್ಬರು ಕುಳಿತಿದ್ದು ಒಬ್ಬರನೊಬ್ಬರು ಅಪ್ಪಿಕೊಂಡು ಸರಸ ಸಲ್ಲಾಪದಲ್ಲಿ ತೊಡಗಿದ್ದಾರೆ. ಅವರ ಮಂಚವು ಅಲಂಕಾರ ಮಾಡಲಾಗಿರುವ ಸುಂದರವಾದ ಮಂಚವಾಗಿದ್ದು ಅದರಲ್ಲಿ ಮೇಲ್ಹಾವಣಿಯು ಸಹ ಇರುತ್ತದೆ. ಅಲ್ಲಿ ಕೆಲವು ವಸ್ತ್ರವನ್ನು ಹಿಳಿಬಿಟ್ಟಿರುವಾಗೆ ಚಿತ್ರಿಸಲಾಗಿದೆ. ರಾಜನು ಪಂಚೆಯನ್ನು, ಆಭರಣವನ್ನು ತೊಟ್ಟಿರುತ್ತಾನೆ. ಆಕೆಯು ಸಹ ದೊಡ್ಡದಾದ ಸೀರೆಯನ್ನು ಮತ್ತು ಆಭರಣಗಳಿಂದ ಶೃಂಗರಿಸಿಕೊಂಡುತ್ತಾಳೆ. ಮಂಚದ ಅಕ್ಕಪಕ್ಕ ಎರಡು ದೀಪದ ಕಂಭವಿದ್ದು ಅದರಲ್ಲಿ ದೀಪ ಉರಿಯುತ್ತಿದ್ದಂತೆ ಚಿತ್ರಿಸಿದ್ದಾರೆ. ಆ ನಂತರ ಕಲಾವಿದನು ಸುತ್ತ ಅಲಂಕಾರಿಕವಾಗಿ ಚಿತ್ರಿಸಿದ್ದಾನೆ. ಕಲಾವಿದನ ಕೌಶಲ್ಯವನ್ನು ಮೆಚ್ಚಲೆಬೇಕು ಏಕೆಂದರೆ ರೇಖೆಯಿಂದಲೇ ಪೂರ್ಣವಾಗಿ ಕಥೆಯ ಸಂದರ್ಭಕ್ಕೆ ತಕ್ಕಂತೆ ಸುಂದರವಾಗಿ ಚಿತ್ರಿಸಿದ್ದಾನೆ.

೪.೩, ಪ್ರಾಚ್ಯವಿದ್ಯಾ ಸಂಶೋಧನಾಲಯ ಅಥವಾ ಓರಿಯೆಂಟಲ್ ಲೈಬ್ರರಿ

ಈ ಗ್ರಂಥ ಸಂಗ್ರಹಾಲಯವನ್ನು ಓರಿಯೆಂಟಲ್ ರೀಸರ್ಚ್ ಇನ್ಸ್‌ಟಿಟ್ಯೂಟ್ ಎಂದು ಸಹ ಕರೆಯುತ್ತಾರೆ. ಜೊತೆಗೆ ಓ.ಆರ್.ಪಿ. ಕೌಟಿಲ್ಯಭವನಂ ಎಂದು ಹೆಸರಿಸಲಾಗಿದೆ. ಈ ಸಂಸ್ಥೆಯನ್ನು ಮಹಾರಾಜರಾದ ಚಾಮರಾಜ ಒಡೆಯರು ೧೮೯೧ರಲ್ಲಿ ಸ್ಥಾಪಿಸಿದರು, ಮುಖ್ಯವಾಗಿ ಇದರ ಉದ್ದೇಶ, ಕಾರ್ಯವೇ ಸಾಹಿತ್ಯ, ಕಲೆ, ಸಂಸ್ಕೃತಿಗಳಿಗೆ ಸಂಬಂಧಿಸಿದ್ದಂತಹ ಪ್ರಾಚೀನ ಕೃತಿಗಳನ್ನು ಪತ್ತೆ ಹಚ್ಚಿ ಹಾಗೂ ಸಂಪಾದಿಸಿ ಪ್ರಕಟಣೆ ಮಾಡುವುದು ಅವುಗಳನ್ನು ಸಂರಕ್ಷಣೆ ಮಾಡುವುದು ಜೊತೆಗೆ ಶಿಕ್ಷಣ ನೀಡುವುದು ಸಹ ಆಗಿದೆ. ಮುಂದೆ ಸರಕಾರಕ್ಕೆ ವಹಿಸಿದ ಮೇಲೆ ಅದರ ಅಧೀನಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುತ್ತಿತ್ತು. ಆದರೆ ಇಂದು ಮೈಸೂರಿನ, ಮೈಸೂರು ವಿಶ್ವವಿದ್ಯಾಲಯದ ಅಂಗ ಸಂಸ್ಥೆಯಾಗಿದೆ. ಈ ಭಂಡಾರದಲ್ಲಿ ೮೦ಸಾವಿರ ಹಸ್ತಪ್ರತಿಗಳು ೨೧ಸಾವಿರ ಮುದ್ರಿತ ಗ್ರಂಥಗಳು ಅದರಲ್ಲಿ ಜ್ಯೋತಿಷ್ಯ, ಜ್ಯೋತಿಷ್ಯಶಾಸ್ತ್ರ, ಅನೇಕ ಪುರಾಣ, ಸ್ಥಳೀಯ ಪುರಾಣಗಳು, ಮಂತ್ರ, ತಂತ್ರಕ್ಕೆ ಸಂಬಂಧಪಟ್ಟಂತಹ ಗ್ರಂಥಗಳು ನೃತ್ಯ, ಶಿಲ್ಪ, ಚಿತ್ರಕಲೆ, ಸಂಗೀತ, ವಾಸ್ತುಶಿಲ್ಪ, ಗಣಿತ ಮತು ಖಗೋಳ ಮುಂತಾದವುಗಳು ಹಸ್ತಪ್ರತಿಗಳಲ್ಲಿ ಇಲ್ಲಿ ಇರುತ್ತದೆ.

ವಿಶೇಷವಾಗಿ ಮುಮ್ಮಡಿಯವರು ಬರೆದಿರುವ ಹಾಗೂ ನೂರಾರು ವರ್ಣಚಿತ್ರಗಳು ಬರೆಸಿರುವ ೯ನಿಧಿಗಳಾದ ಶಕ್ತಿ, ಬ್ರಹ್ಮ, ವಿಷ್ಣು, ಶಿವ, ಮುಂತಾದ ಅಮೂಲ್ಯ ನಿಧಿಗಳು ಜೊತೆಗೆ ವೇದ, ಪುರಾಣ, ಆಗಮ ಮುಂತಾದವುಗಳಲ್ಲಿ ಪ್ರತಿ ದೇವತೆಗೆ ಸಂಬಂಧಿಸಿದಂತೆ ಚಿತ್ರಗಳನ್ನು ಬರೆಸಿದ್ದಾರೆ. ಎಲ್ಲಾ ಚಿತ್ರಗಳು ಜಲವರ್ಣದಿಂದ ಚಿತ್ರರಚಿಸಿದ್ದಾರೆ. ನೈಸರ್ಗಿಕ ಸಂಪನ್ಮೂಲದಿಂದ ಬಣ್ಣವನ್ನು ಪಡೆದಿದ್ದಾರೆ. ವರ್ಣವನ್ನು ಚಪ್ಪಟೆಯಾಗಿಯೂ, ರೇಖೆಯನ್ನು, ಲಾಲಿತ್ಯಪೂರ್ಣವಾಗಿ, ಕೌಶಲ್ಯ ನುರಿತ ಕಲಾವಿದರಿಂದ ಬರೆಸಿದ್ದಾರೆ. ಇಲ್ಲಿನ ಅನೇಕ ಹಸ್ತಪ್ರತಿಗಳು ಪ್ರಕಟಣೆಗೊಂಡಿರುತ್ತದೆ. ಅವುಗಳಲ್ಲಿ ಚಿತ್ರಕಲೆಗೆ ಸಂಬಂಧ ಪಟ್ಟಂತಹ ಅನೇಕ ಗ್ರಂಥಗಳು ಹೊರಬಂದಿರುತ್ತವೆ. ವಿಷ್ಣು ನಿಧಿ, ಶಕ್ತಿನಿಧಿ, ಶ್ರೀತತ್ವನಿಧಿ, ಶಿವನಿಧಿ, ಸಹ ಆಗಿರುತ್ತದೆ.

೪.೪, ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ, ಹಸ್ತಪ್ರತಿ ಭಂಡಾರ ಮೈಸೂರು.

ಮೊದಲು ಈ ಹೆಸರಿನಿಂದ ಕಂಡುಬಂದರೂ ನಂತರದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ.ಮೈಸೂರು. ಎಂಬ ಹೆಸರಿಂದ ಈಗ ಕರೆಯುತ್ತಾರೆ. ಇಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಲ್ಲಾ ಚಟುವಟಿಕೆಗಳು ಒಂದೇ ಸೂರಿನಡಿಯಲ್ಲಿ ನಡೆಯಬೇಕೆಂಬ ಉದ್ದೇಶದಿಂದ ದೇ.ಜವರೇಗೌಡರು ಕಲ್ಪನೆಯ ಕೂಸಾದ ಕನ್ನಡ ಅಧ್ಯಯನ ಸಂಸ್ಥೆ ರೂಪುಗೊಂಡಿದ್ದು ೧೯೬೬ರಿಂದ ಮೈಸೂರಿನ ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಹೃದಯಭಾಗದಲ್ಲಿದೆ. ಇಲ್ಲಿ ಭೊಧನೆ, ಸಂಶೋಧನೆ, ಗ್ರಂಥಸಂಪಾದನೆ. ಭಾಷಾಂತರ ಮತ್ತು ಪಠ್ಯಪುಸ್ತಕ ಪ್ರಕಟಣೆ, ಜಾನಪದ ಅಧ್ಯಯನ, ವಿಶ್ವಕೋಶ ಎಫಿಗ್ರಾಫಿಯ ಕರ್ನಾಟಕ ಪರಿಷ್ಕರಣೆ ಮೊದಲಾದ ಚಟುವಟಿಕೆಗಳು ಇಲ್ಲಿ ನಡೆಯುತ್ತದೆ. ಇಲ್ಲಿನ ಸಂಗ್ರಹದಲ್ಲಿ ರೇಖಾಚಿತ್ರಗಳ ತಾಳೆಗರಿಗಳು, ಕಾಗದ ಹಸ್ತಪ್ರತಿಗಳಲ್ಲಿ ವರ್ಣಚಿತ್ರಗಳು ಇರುವಂತ ಹಸ್ತಪ್ರತಿಗಳು ಇಲ್ಲಿ ಇರುತ್ತದೆ. ಹಾಗೆ ಕಡತಗಳು ಕಂಡುಬರುತ್ತದೆ.

೪.೪, ಬಸವಪುರಾಣ ಹಲಗೆಯ ಮೇಲಿನ ಚಿತ್ರ:

೧೩ನೇ ಶತಮಾನದದಲ್ಲಿ ರಚನೆಗೊಂಡಂತಹ ಕಾಗದ ಹಸ್ತಪ್ರತಿಯೂ ಒಂಭತ್ತು ಮತ್ತು ಹನ್ನೆರಡು ಇಂಚು ಅಳತೆಯಿಂದ ಕೂಡಿದೆ. ಭೀಮಕವಿಯೂ ರಚಿಸಿದ್ದಾನೆ. ಈ ಗ್ರಂಥದ ಸಂಖ್ಯೆಯು ಕೆ.ಎ.-೩೧೨ ಇದರ ಪ್ರತಿಹಾಳೆಯು ಅಲಂಕಾರಿಕಗೊಂಡಿದೆ. ಹೂ ಬಳ್ಳಿಗಳು ಬಗೆ ಬಗೆ ರೀತಿಯಲ್ಲಿ ವಿನ್ಯಾಸಮಾಡಿ ಜಲವರ್ಣದಿಂದ ಚಿತ್ರರಚಿಸಿದ್ದಾರೆ. ಹೊರಭಾಗದಲ್ಲಿ ಇದರ ರಕ್ಷಣೆಗೆ ಹಿಂದೆ ಮುಂದೆ ಎರಡು ಮರದ ಹಲಗೆಗಳು ಇರುತ್ತವೆ.

೪.೪.೧, ಬಸವಪುರಾಣ ಹಲಗೆಯ ಮುಂಭಾಗದ ಮೇಲಿನ ಚಿತ್ರ

ಈ ಚಿತ್ರದಲ್ಲಿ ಶಿವನು ಎತ್ತರದ ದೊಡ್ಡ ಕಲ್ಲಿನ ಪೀಠದ ಮೇಲೆ ವೀರಾಸನದಲ್ಲಿ ಕುಳಿತಿರುವ ಚಿತ್ರವಿದೆ. ಸಂಸಾರ ಸಮೇತವಾಗಿ ಕಲಾವಿದನ್ನು ಚಿತ್ರಿಸಿದ್ದಾನೆ. ಶಿವನ ಎಡಕ್ಕೆ ಪಾರ್ವತಿ, ಬಲಕ್ಕೆ ಗಣೇಶನು ಕುಳಿತಿದ್ದಾನೆ. ಶಿವನ ಪಾದಬಳಿ ನಂದಿ ಕುಳಿತಿದ್ದಾನೆ. ಆನಂತರದಲ್ಲಿ ಋಷಿಮುನಿಗಳು ನಿಂತು ವೀಣೆಯನ್ನು ನುಡಿಸುತ್ತದ್ದಾನೆ. ಶಿವನು ಜಡೆಹೊಂದಿರುತ್ತಾನೆ. ವಿಶೇಷವಾಗಿ ಗಂಗೆ, ಚಂದ್ರನ ಚಿತ್ರವನ್ನು ಇಲ್ಲಿ ಚಿತ್ರಿಸಲಾಗಿರುವುದಿಲ್ಲ. ರುದ್ರಾಕ್ಷಿಮಾಲೆ ಧರಿಸಿದ್ದು ಕೈ,ಕಾಲು, ಕೊರಳು ತೋಳನಲ್ಲಿ ರುದ್ರಾಕ್ಷಿಯು ಇರುತ್ತದೆ. ಶಿವನು ನಾಲ್ಕುಕೈಗಳನ್ನು ಹೊಂದಿರುತ್ತಾರೆ. ಎರಡರಲ್ಲಿ ತ್ರಿಶೂಲ, ಢಮರು ಇದ್ದು ಕೆಳಗಿನ ಎಡಕೈವು ಎದೆಯ ಹತ್ತಿರವಿದ್ದು, ಬಲಭಾಗದ ಕೈಯಲ್ಲಿ ತನ್ನ ಮಗನಾದ ಗಣೇಶನಿಗೆ ತಿಂಡಿಯನ್ನು ತಿನ್ನುಸುತ್ತಿದ್ದಾನೆ. ಹುಲಿಯ ಚರ್ಮದ ತೊಟ್ಟಿದ್ದು, ಜೊತೆಗೆ ಕೆಂಪು ಪಂಚೆಯನ್ನು ಉಟ್ಟಿರುತ್ತಾನೆ. ಪಾರ್ವತಿಯು ಶಿವನ ಪಕ್ಕದಲ್ಲೆ ಕುಳಿತಿದ್ದಾಳೆ, ಅವಳ ಮುಖದಲ್ಲಿ ವಿಭೂತಿಯ ಪಟೆಯು ಇರುತ್ತದೆ. ಮೂಗಿಗೆ ಮೂಗಿತಿ ಹಾಕಿರುತ್ತಾಳೆ. ಕಪ್ಪುವರ್ಣದ ಅಲಂಕಾರಿಕ ಸೀರೆ ಉಟ್ಟಿರುವಳು ಅದರಲ್ಲಿ ಬಿಳಿವರ್ಣದ ಅಲಂಕಾರಿಕ ಚುಕ್ಕೆಗಳು ಇರುತ್ತದೆ. ದೇವಿಯ ಜೊತೆ ಗಣೇಶನನ್ನು ಮಗುವಾಗಿ ಕಲಾವಿದ ಚಿತ್ರಸಿದ್ದಾನೆ. ನಾಲ್ಕು ಕೈ ಇದ್ದು ಒಂದರಲ್ಲಿ ಹೂ ಬಳ್ಳಿಯನ್ನು ಹಿಡಿದಿರುತ್ತಾನೆ ಗಣೇಶ, ಮೈಬಣ್ಣವು ಕೇಸರಿಯಾಗಿದ್ದು, ಹಳದಿ ಪಂಚೆ ಜೊತೆಗೆ ಆಭರಣದ ನಡುಪಟ್ಟಿಯನ್ನು ಸಹ ತೊಟ್ಟಿರುತ್ತಾನೆ. ಕೆಳಗಿನ ಪಾದದ ಬಳಿನಂದಿಯು ಸಹ ರುದ್ರಾಕ್ಷಿಮಾಲೆ ಕೊರಳಿಲ್ಲಿ ಇರುತ್ತದೆ. ಬೆನ್ನಮೇಲೆಯು ಸಹ ಕಲಾವಿದನು ರಚಿಸಿದ್ದಾನೆ. ನಂದಿಯು ಒಂದುಕಾಲನ್ನು ಸ್ವಲ್ಪ ಎತ್ತಿರುವಂತೆ ಕಂಡುಬರುತ್ತದೆ. ಶಿವನ ಬಲಭಾಗದ ಪೀಠದ ಪಕ್ಕವೇ ಋಷಿಮುನಿಯು ಸಂಗೀತ ಪರಿಕರದಿಂದ ಸ್ವರವನ್ನು ನುಡಿಸುತ್ತಿದ್ದಾನೆ. ಅವನ ನೆತ್ತಿಯ ಮೇಲೆ ಜಡೆಯನ್ನು ಸುತ್ತಿ ಕಟ್ಟಿರುತ್ತಾನೆ. ಸಾಧರಣವಾದ ಉಡುಗೆ ಉಟ್ಟಿರುತ್ತಾರೆ. ಸಂತೋಷದಿಂದ

ಇರುವಾಗೆ ಚಿತ್ರಿಸಿದ್ದಾನೆ. ಚಿಕ್ಕ ಮರದ ಹಲಗೆಯ ಮೇಲೆ ಸಂಯೋಜಿಸಿ ಬಿಳಿಕಪ್ಪು ಕಂದು ವರ್ಣದ ರೇಖೆಯಿಂದ ಆಕೃತಿಗಳನ್ನು ಚಿತ್ರಿಸಿದ್ದಾರೆ. ಹಿನ್ನೆಲೆಯು ಕೆಂಪು ವರ್ಣವನ್ನು ಚಪ್ಪಟ್ಟೆಯಾಗಿ ಲೇಪನ ಮಾಡಿರುತ್ತಾರೆ. ಚಿತ್ರದ ಸುತ್ತಲು ಅಲಂಕಾರಿಕ ಹೂವಿನ ಚಿತ್ರವನ್ನು ಚಿತ್ರಿಸಿದ್ದಾರೆ.

೪.೩.೨, ಬಸವಪುರಾಣದ ಹಲಗೆಯ ಹಿಂಭಾಗದ ಮೇಲಿನ ಚಿತ್ರ

ಈ ಹಸ್ತಪ್ರತಿಯ ಹಿಂದಿನ ಹಲಗೆಯ ಮೇಲೆ ಸಹ ಚಿತ್ರಿಸಿರುವುದು ಕಂಡುಬರುತ್ತದೆ. ಶಿವನು ನೃತ್ಯ ಮಾಡುತ್ತಿದ್ದಾನೆ. ವಿಷ್ಣುವು ಡೋಲನು ಬಾರಿಸುತ್ತಿದ್ದು ಬ್ರಹ್ಮನು ಸಹ ತಾಳ ನುಡಿಸುತ್ತಿದ್ದಾನೆ. ಜೊತೆಗೆ ಭಕ್ತನಾದ ರಾಜನ್ನು ಸಹ ತಾಳ ನುಡಿಸುತ್ತ ಮಗ್ನನಾಗಿದ್ದು ಎರಡು ಕಡೆ ಕೆಂಪುವರ್ಣವೇ ಪ್ರಧಾನ ಹಾಗೂ ರೇಖೆಗಳು ಆಕೃತಿಯ ಸೌಂದರ್ಯ ಹೆಚ್ಚಿಸಿದೆ. ಸುತ್ತಲೂ ಅಲಂಕಾರಿಕ ಪಟ್ಟಿಯನ್ನು ಎರಡು ಕಡೆಯು ಇದ್ದು ಅದರಲ್ಲಿ ಹೂ ಬಳ್ಳಿಯ ಚಿತ್ರದ ಸಾಲು ರಚಿಸಿದ್ದಾರೆ. ಶಿವನು ನೃತ್ಯವನ್ನು ಮಾಡುತ್ತಿದ್ದು ನಾಲ್ಕುಕೈಗಳು ಇದೆ ಮೇಲಿನ ಎರಡು ಕೈಯಲ್ಲಿ ತ್ರಿಶೂಲ, ಢಮರು ಹಿಡಿದಿರುತ್ತಾರೆ. ಮತ್ತೆ ಎರಡು ಕೈಯಲ್ಲಿ ನೃತ್ಯದಲ್ಲಿ ತೊಡಗಿದ್ದು ಕಾಲುಗಳು ಸಹ ಚಲನೆಯಲ್ಲಿ ತೊಡಗಿದ್ದಂತೆ ಕಾಣುತ್ತದೆ. ಜಡೆಯನ್ನು ವಿವಿಧ ರೀತಿಯಿಂದ ಕಟ್ಟಿರುತ್ತಾನೆ. ಶಿವನು ಕೇಸರಿ ಪಂಚೆ ಉಟ್ಟಿರುತ್ತಾನೆ. ಕಾಲುಕೈಗಳಲ್ಲಿ ಕಡಗ ಹಾಕಿರುತ್ತಾನೆ. ನೀಲಿವರ್ಣದ ಶಾಲನ್ನು ತೊಟ್ಟಿರುತ್ತಾನೆ. ಶಿವನ ಮೈವರ್ಣವು ತೆಳುಹಳದಿ ವರ್ಣದಿಂದ ಚಿತ್ರಿಸಿದ್ದಾನೆ. ವಿಷ್ಣುವಿನ ತಾಳಕೆ ತಕ್ಕಂತೆ ಶಿವನು ನರ್ತಿಸುತ್ತಿದ್ದಾನೆ. ವಿಷ್ಣುವು ಸಹ ನೃತ್ಯಭಂಗಿಯಲ್ಲಿಯೇ ಇದ್ದು ಡೋಲನ್ನು ಬಾರಿಸುತ್ತ ತನ್ನ ಎರಡುಕೈಗಳಿಂದ ಇನ್ನೆರಡುಕೈಗಳಲ್ಲಿ ಶಂಖಚಕ್ರ ಹಿಡಿದಿರುತ್ತಾನೆ. ವಿಷ್ಣುವಿನ ಮೈವರ್ಣವು ಗಾಢವರ್ಣದಿಂದ ತೋರಿಸಿದ್ದಾನೆ. ಈ ದೇವರು ಸಹ ಶಿವನಂತೆ ಜಡೆಯನ್ನು ಅಲಂಕಾರಿಕವಾಗಿ ಮೇಲೆ ಕಟ್ಟಿರುತ್ತಾನೆ. ಕೊರಳಿಗೆ ಕಾಲಿಗೆ ಕೈಗಳಲ್ಲಿ ಆಭರಣವನ್ನು ಹಾಕಿರುತ್ತಾನೆ. ಪಕ್ಕದಲ್ಲೆ ಬ್ರಹ್ಮನು ಸಹ ಇವರ ಜೊತೆ ತಾಳಕ್ಕೆ ತಕ್ಕಂತೆ ಹಾಡುತ್ತಿರುವುದರ ಜೊತೆಗೆ ಸಂಗೀತ ನಾದನವನ್ನು ಹೊರಹೊಮ್ಮಿಸುತ್ತಿದ್ದಾನೆ. ನಾಲ್ಕು ತಲೆಗಳನ್ನು ಹೊಂದಿರುತ್ತಾನೆ ಬ್ರಹ್ಮನು. ನಾಲ್ಕುತಲೆಗಳಿಗೆಯೂ ಕಿರೀಟವನ್ನು ಧರಿಸಿದ್ದಾನೆ. ನಾಲ್ಕುಕೈಗಳನ್ನು ಸಹ ಇರುತ್ತದೆ ಅದರಲ್ಲಿ ಎಡಕೈಯಲ್ಲಿ ಗ್ರಂಥವನ್ನು ತೋರಿಸಿ, ಬಲಕೈಯಲ್ಲಿ ಚಿಕ್ಕದಾದ ವೀಣೆಯನ್ನು ಹಿಡಿದಿದ್ದಾನೆ. ಮುಂದಿನ ಎರಡುಕೈಗಳಲ್ಲಿ ಸಂಗೀತ ನಾದವನ್ನು ಹೊರಹೊಮ್ಮಿಸುತ್ತಿದ್ದಾನೆ. ಹಿನ್ನೆಲೆಯಲ್ಲಿ ಸಾಧರಣವಾದ ಕೆಂಪುವರ್ಣವನ್ನು ಲೇಪಿಸಿರುತ್ತಾರೆ.

ಇವರ ಭಕ್ತನು ಸಹ ಚಿಕ್ಕದಾಗಿ ಎಡಭಾಗದಲ್ಲಿ ಚಿತ್ರಿಸಿದ್ದಾರೆ. ಅವನ ಮೈವರ್ಣ ಮತ್ತು ಗೋಧಿಬಣ್ಣದಂತೆ ಇರುತ್ತದೆ. ತಲೆಗೆ ಕಿರೀಟವನು ಧರಿಸಿದ್ದು ಹಳದಿಶಾಲು, ಬಿಳಿಪಂಚೆ ಮಾತ್ರ ಉಟ್ಟಿರುತ್ತಾನೆ. ಶಿವನ ನೃತ್ಯಕ್ಕೆ ತಾಲ ಸೇರಿಸಿ ಸಂತೋಷಪಡುತ್ತಿದ್ದಂತೆ ಚಿತ್ರಿಸಲಾಗಿದೆ.

ಈ ನಾಲ್ಕುಮಂದಿಯು ವೇದಿಕೆಯ ಮೇಲೆ ಪದವಾಡುತ್ತ ಸಂಗೀತ ಬಾರಿಸುತ್ತಾ ನೃತ್ಯ ಮಾಡುತ್ತಿದ್ದಂತೆ ಕಲಾವಿದನು ಸುಂದರವಾಗಿ ಚಿತ್ರಿಸಿದ್ದಾನೆ.

೪.೫, ಅಲಂಕಾರಿಕ ಮತ್ತು ಬರವಣಿಗೆಯ ನವೀನ ಪಟ್ಟಿಕೆಯ ಹಸ್ತಪ್ರತಿ

ಈ ತಾಳೆಗರಿಯು ಎಂಟು ಮತ್ತು ಹನ್ನೆರಡು ಸೆಂ.ಮೀ. ಅಳತೆಯೊಂದಿದೆ. ಸಂಖ್ಯೆ ೯೫೫ಯಾಗಿದ್ದು ೧೨ ತಾಳೆಗರಿಗಳಿದ್ದು ಪ್ರತಿಹಾಳೆಯಲ್ಲಿ ಹಿಂದುಮುಂದು ಮೂರು ಮೂರು ಅಲಂಕಾರಿಕ ನಕ್ಷಾಚಿತ್ರಗಳು ಇದೆ. ಅಂದರೆ ೮ ಗರಿಗಳಲ್ಲಿ ಹದಿನಾರು ಚಿತ್ರಗಳು ಕಂಡುಬರುತ್ತದೆ. ಇನ್ನೂ ನಾಲ್ಕು ಗರಿಗಳಲ್ಲಿ ಹಿಂದೆಮುಂದು ಸೇರಿ ಎಂಟು ಆಗುತ್ತದೆ. ಅದರಲ್ಲಿ ಅಕ್ಷರಗಳ ಅಲಂಕರಣಗಳ

ಅಕ್ಷರಮಾಲೆಗಳು ಕಂಡುಬರುತ್ತದೆ. ನಕ್ಷೆಗಳನ್ನು ಕೈವಾರ ಸಹಾಯದಿಂದ ರಚನೆಮಾಡಿ ಕಪ್ಪುಮಸಿ ಸಾವರಿ ಚೆನ್ನಾಗಿ ಕಾಣುವಾಗೆ ಚಿತ್ರಿಸಿದ್ದಾರೆ. ಇದು ಒಂದು ಅಲಂಕಾರಿಕ ಓಲೆಗರಿಯ ಗ್ರಂಥವಾಗಿ ಕಂಡುಬರುತ್ತದೆ.

೪.೫.೧. ಅಲಂಕಾರಿಕ ಪಟ್ಟ

ಈ ತಾಳೆಗರಿಯಲ್ಲಿ ಅಲಂಕಾರಿಕಚಿತ್ರಗಳ ಉತ್ತವಾಗಿ ಸೃಜನಶೀಲತೆಯಿಂದ ಕೂಡಿದೆ. ಎರಡು ತಾಳೆಗರಿಯಲ್ಲಿ ಸುಮಾರು ೯ತರದ ನಕ್ಷಚಿತ್ರಗಳನ್ನು ರೇಖಿಸಿದ್ದಾರೆ. ಎಲ್ಲಾ ಚಿತ್ರಗಳು ವೃತ್ತಾಕಾರದೊಳಗೆ ಇರುತ್ತದೆ. ಒಂದೊಂದು ವೃತ್ತಾಕಾರವು ಬೇರೆ ಬೇರೆ ನವೀನತರಹದಲ್ಲಿ ಚಿತ್ರಗಳನ್ನು ಚಿತ್ರಿಸಿದ್ದಾರೆ. ಮೊದಲು ವೃತ್ತಾಕಾರದ ಒಳಗೆ ಆರು ಹೂವುಗಳು ಇರುತ್ತದೆ. ಸಣ್ಣ ಸಣ್ಣ ಎಲೆಗಳಂತೆ ಕಾಣಲು ವೃತ್ತದ ಎರಡನೆ ಹಂತದಲ್ಲಿ ಚಿತ್ರಿಸಿದ್ದಾರೆ. ಆ ನಂತರದ ಎರಡುಸಣ್ಣ ವೃತ್ತಕಾರವಿದೆ. ಮತ್ತೊಂದು ವೃತ್ತಾದಲ್ಲಿ ೧೨ಧಳಗಳು ಇರುವಂತೆ ಅದರೊಳಗು ಎರಡುಸಣ್ಣ ವೃತ್ತ ಇರುತ್ತದೆ. ಮತ್ತೊಂದು ದೊಡ್ಡವೃತ್ತದಲ್ಲಿ ನಾಲ್ಕುತಾವರೆ ಹೂವಿನ ಚಿತ್ರವಿರುತ್ತದೆ. ೨೧ಸಣ್ಣ ಎಲೆಗಳನ್ನು ತೋರಿಸಿದ್ದಾರೆ. ಮತ್ತೇ ಎರಡು ಸಣ್ಣವೃತ್ತದಲ್ಲಿ ಹನ್ನೆರಡು ಹೂವಿನ ಧಳಗಳನ್ನು ಚಿತ್ರಿಸಿದ್ದರೆ. ಮತ್ತೊಂದು ವೃತ್ತಾದಲ್ಲಿಯೂ ಸಹ ಇಷ್ಟೇ ಧಳವಿದೆ. ಮತ್ತೊಂದು ವೃತ್ತಾದಲ್ಲಿ ೭ಹೂವಿನ ಚಿತ್ರವಿದೆ. ಅದರ ಸುತ್ತಲೂ ಸಣ್ಣ ಎಲೆಯು ಚಿತ್ರವಿದೆ. ಮತ್ತೊಂದು ತಾಳೆಗರಿಯಲ್ಲಿಯೂ ವೃತ್ತಾಕಾರದ ಮೂರು ದೊಡ್ಡಚಿತ್ರಗಳು ಇರುತ್ತದೆ. ಅವು ಸಹ ಅಲಂಕಾರಿಕ ಹೂವಿನ ಚಿತ್ರವಾಗಿರುತ್ತದೆ. ಆರು ಏಂಟು ಹೂವುಗಳ ಇರುತ್ತದೆ.

೪.೫.೨. ಅಕ್ಷರದ ತಾಳೆಗರಿ

ಎರಡು ತಾಳೆಗರಿಯಲ್ಲಿ ವಿಭಿನ್ನವಾಗಿ ಅಕ್ಷರಗಳನ್ನು ಸಂಯೋಜಿಸಿದ ಅಲಂಕಾರಕ ಗರಿಯ ಪಟ್ಟಇದ್ದಾಗಿರುತ್ತದೆ. ಮೊದಲಪಟ್ಟಿಯಲ್ಲಿ ಎರಡು ಚೌಕ ಮತ್ತು ಆಯತಾಕಾರದೊಳಗೆ ಅಕ್ಷರಗಳನ್ನು ಸಾಲಾಗಿ ಸಂಯೋಜಿಸಿದ್ದಾರೆ. ಪಟ್ಟಿಯ ಸುತ್ತಲು ಸಣ್ಣದಾಗಿ ಜಾಗಬಿಟ್ಟಿರುತ್ತಾರೆ. ಮತ್ತೊಂದರಲ್ಲಿಯೂ ಸಹ ಗುಣಿತಾಕ್ಷರದ ಚಿಹ್ನೆಯಂತೆ ಖಾಲಿಜಾಗ ಬಿಟ್ಟು ಉಳಿದ ಜಾಗದಲ್ಲಿ ಅಕ್ಷರಗಳನ್ನು ರಚಿಸಿದ್ದಾರೆ. ಒಟ್ಟಾರೆಯಾಗಿ ನೋಡಿದಾಗ ಗುಣಿತಾಕ್ಷಾರದ ಚಿಹ್ನೆ ಒಂದುಸಾಲು ಖಾಲಿಯಾಗಿ ಕಂಡರೆ ಮತ್ತೊಂದರಲ್ಲಿ ಅಕ್ಷರ ತುಂಬಿರುವುದು ನೋಡಬಹುದು. ಈ ತಾಳೆಗರಿಯೂ ಒಂದು ರೀತಿ ಒಗಟು ರೀತಿಯಲ್ಲಿ ಕಂಡುಬರುತ್ತದೆ. ರಹಸ್ಯ ರೀತಿಯ ತಾಳೆಗರಿಯಂತೆ ಇರುತ್ತದೆ.

೪.೬. ಅಶ್ವಪರೀಕ್ಷೆ ಮತ್ತು ಅಶ್ವವೈದ್ಯ ಸುಚಿತ್ರ, ಎಂಬ ಎರಡು ಕಾಗದದ ಜಲವರ್ಣ, ಹಸ್ತಪ್ರತಿಗಳಾಗಿರುತ್ತದೆ. ಇದರಲ್ಲಿ ಅಶ್ವವೈದ್ಯ ಸುಚಿತ್ರ ಗ್ರಂಥವು ಕೆ.ಎ. ೫೭೧ ಸಂಖ್ಯೆಯದಾಗಿದೆ. ಇದರಲ್ಲಿ ೮೪ ಬಣ್ಣಬಣ್ಣದ ಚಿತ್ರಗಳಿವೆ. ೧೯ನೇ ಶತಮಾನಕ್ಕೆ ಸೇರಿದ ಈ ಕೃತಿಯಲ್ಲಿ ಅಶ್ವವನ್ನು ಪರೀಕ್ಷೆ ಮಾಡುವ ನೋಡುವ ಲಕ್ಷಣಗಳು ಕುರಿತು ಚಿತ್ರ ಸಮೇತ ವಿವರಿಸಲಾಗಿದೆ.

ಅಶ್ವಪರೀಕ್ಷೆ: ೧೮ನೇ ಶತಮಾನದಲ್ಲಿ ರಚನೆಗೊಂಡ ಈ ಗ್ರಂಥದ ಸಂಖ್ಯೆ ೫೭೨ ಆಗಿದೆ. ೫೦ ರೀತಿಯಲ್ಲಿ ವರ್ಣಚಿತ್ರಗಳು ಇಲ್ಲಿ ಚಿತ್ರಿಸಲಾಗಿದೆ. ನಮ್ಮವರಿಗೆ ವೇದಕಾಲದಲ್ಲೂ ಕುದುರೆಗಳ ಪರಿಚಯವಿದೆ. ಕುದುರೆಗಳ ಸತ್ವ, ಗತಿ, ಛಾಯೆ, ಸುಳಿ, ವರ್ಣ, ಪುಂಡಗಂಧ, ಮುಷ್ಕಿ, ತುರಗೋತ್ಪತ್ತಿ, ಸರ್ವಾಂಗ ಪರೀಕ್ಷೆ ಮತ್ತು ರೋಗಬೇಧಗಳು ಈ ಗ್ರಂಥದಲ್ಲಿ ಚಿತ್ರಸಮೇತ ವಿವರಿಸಿದ್ದಾರೆ. ನೀಲಿ, ಕೆಂಪು, ಹಳದಿ, ಕಪ್ಪು, ಬಿಳಿ, ಮಣ್ಣಿನ ವರ್ಣಗಳಿಂದ ಕುದುರೆಯ ಚಿತ್ರಗಳನ್ನು ಚಿತ್ರಿಸಿ ರೇಖೆಯನ್ನು ಸರಳಮಿತಿಯಾಗಿ ಬಳಸಿ ಸುಂದರವಾಗಿ ಚಿತ್ರಿಸಿದ್ದಾರೆ. ಒಂದು ಹಾಳೆಯಲ್ಲಿ ಎರಡು ಕುದುರೆಗಳ ಚಿತ್ರವನ್ನು ರಚಿಸಿ ಜೊತೆಗೆ ವಿವರಣೆ ನೀಡಿದ್ದಾರೆ.

ಅಭಿನವ ಚಂದ್ರ ವಿರಚಿತ **ಅಶ್ವಶಾಸ್ತ್ರ** ಈ ಗ್ರಂಥದ (ಸಂ) ಜಿ.ಜಿ. ಮಂಜುನಾಥನ್ ಅವರು ಆಗಿದ್ದು, ೧೯೮೭ರಲ್ಲಿ ಪ್ರಕಟಣೆಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು. ಈ ಗ್ರಂಥದಲ್ಲಿ ಅಶ್ವ ವಿಧಗಳು, ಅವುಗಳ ಆಹಾರ, ರೋಗಗಳು, ಬೆಳಸುವ ರೀತಿ ಮತ್ತು ವರ್ಣಬೇದಗಳು ಕುರಿತು ವಿವರವಾಗಿ ವಿವರಿಸಿದ್ದಾರೆ. [೧೩]

೪.೬.೧. ಅಶ್ವಪರೀಕ್ಷೆಯ ಕುದುರೆ ಚಿತ್ರಗಳು

ಎರಡು ರೀತಿಯ ಕುದುರೆಯ ಚಿತ್ರಗಳು ಇಲ್ಲಿರುತ್ತದೆ. ಅದರಲ್ಲಿ ನೀಲಿ ಮತ್ತು ಕಂದುವರ್ಣದ ಕುದುರೆಗಳ ಚಿತ್ರಗಳನ್ನು ಚಿತ್ರಿಸಿಅದರ ಗುಣಲಕ್ಷಣಗಳನ್ನು ಸೂಚಿಸುತ್ತಾ ವಿವರಣೆ ನೀಡುವ ಚಿತ್ರಗಳಾಗಿದೆ. ಕುದುರೆಚಿತ್ರವುಎತ್ತರ ಮೂರುಇಂಚು ಅಗಲ ನಾಲ್ಕು ಇಂಚುಅಳತೆಯಲ್ಲಿ ಚಿತ್ರಿಸಿದ್ದಾರೆ. ಕುದುರೆಯು ಚಟುವಟಿಕೆಯಿಂದ ಕೂಡಿರುವಂತೆ ಕಲಾವಿದನು ರಚಿಸಿದ್ದಾರೆ. ಕುದುರೆಯು ಹೇಗಿರುತ್ತದೆ. ಅವುಗಳ ಸ್ವಭಾವ, ರೀತಿನೀತಿಗಳ ಜೊತೆಗೆ ರೋಗ ಅದರ ಲಕ್ಷಣಗಳು, ಅದರ ಪರಿಹಾರದ ಮದ್ದುನ್ನು ಸೂಚಿಸಿರುತ್ತಾರೆ. ಕೀ ಕುದುರೆಗಳು ದಷ್ಟಪುಷ್ಟವಾದ ಆರೋಗ್ಯದಿಂದ ಇರುವಾಗೆ ಚಿತ್ರಿಸಿದ್ದಾರೆ. ಕುದುರೆಗಳು ನೆಗೆಯುತ್ತಿರುವಂತೆ ಸಂತೋಷದಿಂದ ಆಟವಾಡುತ್ತಿರುವಂತೆ ಈ ಚಿತ್ರಗಳು ಕಂಡುಬರುತ್ತದೆ. ನೆಲದ ಮೇಲೆ ಸಂತೋಷವಾಗಿ ಸುಂದರವಾಗಿ ಚಿತ್ರಿಸಿ ಮುಖದಲ್ಲಿ ಭಾವನೆಯನ್ನು ವ್ಯಕ್ತಪಡಿಸುತ್ತಿಯೇನೋ ಎಂಬಂತೆ ಕಂಡುಬರುತ್ತದೆ. ಕಪ್ಪುರೇಖೆಯಿಂದ ಮತ್ತು ನೀಲಿ ಆಕಾಶವನ್ನು ಹಿನ್ನಲೆಯಲ್ಲಿ ತೋರಿಸಲಾಗಿದೆ. ನೆಲವನ್ನು ಹಳದಿ ಕಂದು ಹಸಿರುವರ್ಣದಿಂದ ಚಿತ್ರಿಸಿ ಎರಡು ಕುದುರೆ ಒಂದೆ ರೀತಿಯ ಆಕೃತಿ ಇರುವಂತೆ ಕಾಣಬರುತ್ತವೆ.

೪.೭, ಉದ್ದರಣೆಪಟಲ: ಎರಡು ವೀರಶೈವ ಉದ್ದರಣೆಯ ಪಟಲದ ಚಿತ್ರ ಗ್ರಂಥವು, ಕಾಗದ ವರ್ಣಚಿತ್ರ ಹಸ್ತಪ್ರತಿಗಳಾಗಿದೆ. ಮೊದಲನೆಯದು ಕೆ.ಎ.೩೧೩ರ ಸಂಖ್ಯೆಯಾಗಿದ್ದು ಇದರಲ್ಲಿ ೨೪ ಕಾಗದದ ಹಸ್ತಪ್ರತಿ ಕಂಡುಬರುತ್ತದೆ.

ಮತ್ತೊಂದು ಕೆ.ಎ.೩೧೪ ಇದರಲ್ಲಿ ೨೦ ಉದ್ದರಣೆ ಚಿತ್ರಗಳು ಚಿತ್ರಿಸಿದ್ದಾರೆ. ಉದ್ದರಣೇ ಎಂದರೆ ಲಿಂಗಾಯಿತ ತತ್ವಗಳ ರಹಸ್ಯವನ್ನು ತಿಳಿಸುವ ಒಂದು ಸಾಧನ, ಶಾಸ್ತ್ರಗ್ರಂಥ, ಸಾಹಿತ್ಯ ಮತ್ತು ಚಿತ್ರಪರಂಪರೆಗೆ ಇವು ವಿಶೇಷಕೊಡುಗೆಯಾಗದೆ. ಉದ್ದರಣೆ ಅರ್ಥವೇ ಮುಕ್ತಗೊಳಿಸು, ಪರಿಪೂರ್ಣ ಹಂತಕ್ಕೆ ಮುಟ್ಟಿಸು, ಮೇಲಕ್ಕೆತ್ತು, ಬಂಧನದಿಂದ ಮುಕ್ತಗೊಳಿಸು ಎಂದು ಆಗುತ್ತದೆ.

ಈ ಗ್ರಂಥಗಳಲ್ಲಿ ಆಕೃತಿಗಳು ತಾಲಮಾನ ಅನುಸರಿಸಿ ಚಿತ್ರಿಸಿದ್ದಾರೆ, ಹಾಗೂ ಷಡಂಗಗಳ ನೀತಿ ಅನುಸರಿಸಿದ್ದಾರೆ. ರೇಖೆಯನ್ನು ತುಂಬ ಜೀವಂತಿಕೆಯಾಗಿ ಮೂಡಿಸಿರುತ್ತಾರೆ. ರೇಖೆಯನ್ನು ಚಲನಾ ಭರಿತವಾಗಿ ಕಣ್ಣಿನ ನೋಟಕ್ಕೆ ಪುಷ್ಠಿಯನ್ನು ಒದಗಿಸುತ್ತದೆ. ವರ್ಣಗಳು ನೋಡುಗರ ದೃಷ್ಟಿಯನ್ನು ತನ್ನೊಳಗೆ ಸೆಳೆದು, ಶಾಂತತೆಯನ್ನು ಒದಗಿಸಿ ಶ್ರೇಷ್ಠಭಕ್ತಿಯು ಮನಸ್ಸಿನಲ್ಲಿ ಮೂಡುವಂತೆ ಮಾಡುತ್ತದೆ. ವರ್ಣಗಳನು ಸಹ ಸ್ಥಳಿಯವಾಗಿಯೇ ಪಡೆಯುತ್ತಿದ್ದರಂತೆ ಅದರಲ್ಲಿ ಆರು ವರ್ಣಗಳನ್ನು ಮುಖ್ಯವಾಗಿ ತಯಾರಿಸಿಕೊಂಡು ಬಳಸಿದ್ದಾರೆ. ನೀಲಿ, ಕಾವಿ, ಗುಲಾಬಿ, ಹಳದಿ, ಬಿಳಿ, ಕೆಂಪು, ಹಸಿರು, ಕಪ್ಪು ವರ್ಣವಿದು ಇದರಲ್ಲಿ ಗುಲಾಬಿ, ಹಳದಿ, ಕೆಂಪು, ನೀಲಿ ಮತ್ತು ಕಾವಿ ಬಣ್ಣಗಳನ್ನು ಹೆಚ್ಚಾಗಿ ಚಿತ್ರಗಳಲ್ಲಿ ಬಳಸಿದ್ದಾರೆ. ಚಿತ್ರಗಳಲ್ಲಿ ಮಾನವ ಆಕಾರದ ದೇವತೆಗಳು, ಹಸು, ಗೂಳಿ, ಆನೆ, ಪಕ್ಷಿಗಳು ಅಲಂಕಾರಿಕ ನಕ್ಷೆಗಳಲ್ಲಿ ಹೂ ಬಳ್ಳಿ ಹಾಗೂ ಅಕ್ಷರಗಳನ್ನು ಉಪಯೋಗಿಸಿಕೊಂಡು ಚಿತ್ರಿಸಿದ್ದಾರೆ.

೧೩, ಜಿ.ಜಿ. ಮಂಜುನಾಥನ್; **ಅಶ್ವಶಾಸ್ತ್ರ**, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು. ಪ್ರ೧೯೮೭

ಈ ವಿಷಯಗಳನ್ನು ಒಳಗೊಂಡ ಚಿತ್ರಗಳ ಹಸ್ತಪ್ರತಿಗಳು ಇದಾಗಿದೆ. ಅದರಲ್ಲಿ ಅನಾದಿಭಕ್ತನ ಉದ್ದರಣೆ, ಜಂಗಮ ಮೂರ್ತಿ ಉದ್ದರಣೆ ಹಾಗೆ ಮಹಾಲಿಂಗ, ವೃಷಭ, ಮಕಟೊ, ಚಿದಂಬರ, ಶಾಂಭವಿ, ಹದಿನೆಂಟು, ಅರವತ್ತು, ಮೂವತ್ತಾರು, ನವಲತ್ತೆಂಟು, ನೂರೆಂಟು, ಇನ್ನೂರಹದಿನಾರು ಹೀಗೆ ೩೫–೪೦ ಉದ್ದರಣೆ ಚಿತ್ರಗಳು ಈ ಸಂಗ್ರಹಾಲಯದಲ್ಲಿ ಕಂಡುಬರುತ್ತದೆ.

ಉದ್ದರಣೆಸಾಹಿತ್ಯ ಈ ಗ್ರಂಥವನ್ನು ಡಾ.ಕೆ.ರವಿಂದ್ರನಾಥ ಅವರು ೨೦೧೦ರಲ್ಲಿ ಸಂಪಾದಿಸಿದ್ದಾರೆ. ಪ್ರಸಾರಾಂಗ ಕ.ವಿ.ವಿ.ಹಂಪಿ ಇವರು ಹೊರತಂದಿರುತ್ತಾರೆ.[೧೪]

೪.೭,೧, ಅಘೋರಮೂರ್ತಿಚಿತ್ರ

ಕಾಗದ ಹಸ್ತಪ್ರತಿಯಲ್ಲಿ ಉದ್ದರಣೆಪಟಲಗಳ ಚಿತ್ರವಿರುತ್ತದೆ. ಇದರ ಅಳತೆ ಎಳ ಸೈಜಿನಲ್ಲಿ ಚಿತ್ರಿಸಿರುತ್ತಾರೆ. ಅಘೋರ ಮೂರ್ತಿಯ ಚಿತ್ರವನ್ನು ಮಧ್ಯದಲ್ಲಿಚಿತ್ರಿಸಿ ಅದರ ಸುತ್ತ ವೃತ್ತಾಕಾರವನ್ನು ಹಾಕಿರುತ್ತಾರೆ. ಅದರಲ್ಲಿ ಹಲವು ಅಕ್ಷರಗಳನ್ನು ಬರೆದಿರುತ್ತಾರೆ. ಅವು ನೋಡಲು ಗ್ರಂಥಗಳಲ್ಲಿ ಬರೆದಿರುವಂತೆ ಇಲ್ಲಿಯೂ ಕಂಡು ಬರುತ್ತದೆ. ವೃತ್ತಾಕಾರದ ಕೆಳಗೆ ಶ್ಲೋಕಗಳನ್ನು ಬರೆದು ಎರಡುಹೂವಿನ ಚಿತ್ರಗಳನ್ನು ಚಿತ್ರಿಸಿದ್ದಾರೆ. ಹಾಳೆಯ ಮೇಲೆ ಕೆಳಗೆ ಶ್ಲೋಕಗಳನ್ನು ಬರೆದು ಚಿತ್ರ ಪೂರ್ಣಗೊಳಿಸಿದ್ದಾರೆ. ಅಘೋರಮೂರ್ತಿಯನ್ನು ವೃತ್ತಾಕಾರದೊಳಗೆ ನಿಂತಿರುವಂತೆ ರಚಿಸಿ, ಆತನ ಮೈವರ್ಣನೀಲಿ ಬಣ್ಣದಿಂದ ಕೂಡಿದು ನಡುವಿಗೆ ಹುಲಿಚರ್ಮ ಹಾಗೂ ಹಳದಿ ಬಣ್ಣದ ಪಂಚೆಯನ್ನು ಉಟ್ಟಿರುತ್ತಾನೆ. ಏಂಟುಕೈಗಳನ್ನು ಹೊಂದಿರುತ್ತಾನೆ. ಅದರಲ್ಲಿ ಆಯುಧಗಳನ್ನು ವಸ್ತುಗಳನ್ನು ಪ್ರಾಣಿಗಳನ್ನುಸಹ ಇರುವಾಗೆ ಚಿತ್ರಿಸಿಲಾಗಿದೆ. ಬಲಭಾಗದ ಕೈಯಲ್ಲಿ ಮೇಲಿನಿಂದ ತ್ರಿಶೂಲದ ಮೇಲೆ ಗಿಳಿ, ಮುಳ್ಳಿನ ಆಯುಧ, ಭಾಣ, ರಂಡ ಮತ್ತು ಬಿಕ್ಷಾಪಾತ್ರೆ ಇದೆ. ಎಡಭಾಗದ ಕೈಯಲ್ಲಿ ಮೇಲಿನಿಂದ ಹಾವು, ಘಂಟೆ, ಅಗ್ನಿ, ಜಪಮಾಲೆ ಹಿಡಿದ್ದಾನೆ.

ಕಾಲಿನ ಹತ್ತಿರವು ಸಹ ಹಾವುಗಳು ಇರುತ್ತದೆ. ತಲೆಕೂದಲು ಹರಡಿರುವಂತೆ ಕಂಡುಬರುತ್ತದೆ. ಚಂದ್ರ ಮತ್ತು ಗಂಗೆ ತಲೆಯ ಮೇಲೆ ಕಲಾವಿದನು ಚಿತ್ರಿಸಿರುತ್ತಾನೆ. ದೇವರ ಚಿತ್ರದ ಹಿಂದೆ ಕೆಂಪುವರ್ಣ ಲೇಪಿಸಿರುತ್ತಾರೆ.

೪.೭,೨, ಊರ್ಧಮುಖ ಕುಂಡಲಿ ಚಿತ್ರ

ಕಾಗದದ ಹಸ್ತಪ್ರತಿಯಲ್ಲಿರುವ ಚಿತ್ರಗಳನ್ನು ಕೈಯಲ್ಲಿ ಕಲಾವಿದನ್ನು ಬರೆದಿರುತ್ತಾರೆ. ಇದರ ಅಳತೆಯು ಎಳಸೈಜಿನಲ್ಲಿ ಸಂಯೋಜನೆ ಮಾಡಿರುತ್ತಾರೆ. ಸುತ್ತಲು ಹಳದಿವರ್ಣದ ಪಟ್ಟಿಇದ್ದು ಒಳಗೆ ಸಾಧಾರಣವಾಗಿ ಬಿಳಿಹಾಳೆಯನ್ನೆ ಬಿಟ್ಟಿರುತ್ತಾರೆ. ಅದರಲ್ಲಿ ಆನೆ, ಕುದುರೆ, ತ್ರಿಶೂಲ, ಸಣ್ಣದೊಡ್ಡ ವೃತ್ತಾಕಾರದೊಳಗೆ ಉದ್ದರಣೆ ಮಹತ್ವವನ್ನು ತಿಳಿಸುವ ಚಿತ್ರಗಳನ್ನು ಬರೆದಿದ್ದಾರೆ. ಬಲಭಾಗದಲ್ಲಿ ಕುದುರೆಗಳ ಚಿತ್ರವಿದೆ. ಮೇಲಿನಿಂದ ಕೆಳಗಿನತನಕ ೧೦ಕುದುರೆಗಳಿದ್ದು ಪ್ರತಿಕುದುರೆಯು ಬೇರೆಬೇರೆ ಚಲನೆಯಿಂದ ಕೂಡಿದೆ. ಅದರ ವರ್ಣವು ಕೇಸರಿವರ್ಣದಿಂದ ಕೂಡಿದ್ದು ಸವಾರಿನಡೆಸಲು ಸಿದ್ದವಿರುವಂತೆ ಚಿತ್ರಿಸಿದ್ದಾರೆ. ಅದರಪಕ್ಕ ವೃತ್ತಾಕಾರದ ವಿವಿಧ ಚಿತ್ರಗಳನ್ನು ಮೇಲೆಕೆಳಗೆ ಇರುತ್ತದೆ. ಅದರ ಪಕ್ಕದಲ್ಲಿ ಒಂದೆಒಂದು ತ್ರಿಶೂಲವಿದು ಇಡಿ ಚಿತ್ರದ ಮಧ್ಯಭಾಗದಲ್ಲಿ ಅದು ಕೆಳಭಾಗದಲ್ಲಿ ಸಣ್ಣಪೀಠವಿದ್ದು ಅದರ ಆಧಾರದ ಮೇಲೆ ಇರುವಾಗೆ ಚಿತ್ರಿಸಿದ್ದಾರೆ. ಎಡಭಾಗದಲ್ಲಿ ಆನೆಗಳನ್ನು ಚಿತ್ರಿಸಿದ್ದಾರೆ.

೧೪. ಡಾ.ಕೆ.ರವಿಂದ್ರನಾಥ;: **ಉದ್ದರಣೆಸಾಹಿತ್ಯ**,ಪ್ರಸಾರಾಂಗ ಕ.ವಿ.ವಿ.ಹಂಪಿ. ೨೦೧೦

ಮೆರವಣಿಗೆ ಹೋಗಲು ಸಿದ್ದವಾಗಿರುವಂತೆ ಆನೆಗಳ ವಿವಿಧ ರೀತಿಯಲ್ಲಿ ರಚನೆಯ ಮಾಡಿದ್ದಾರೆ. ಅವು ಮೇಲಿನಿಂದ ಕೆಳಭಾಗದವರೆಗೆ ಇರುತ್ತದೆ. ಅದರ ಬೆನ್ನಮೇಲೆ ಕೆಂಪುವಸ್ತ್ರವನ್ನು ಕಲಾವಿದನ್ನು ಚಿತ್ರಿಸಿದ್ದಾನೆ.

೪.೭.೩. ಬಸವ ಚಿತ್ರ

ಆಯತಾಕಾರದಲ್ಲಿದ್ದು ಎರಡುವರೆ ಇಂಚು ಎತ್ತರ ಮೂರುವರೆ ಇಂಚು ಅಗಲವಾಗಿ ಕಾಗದದಮೇಲೆ ಚಿತ್ರಿಸಿದ್ದಾರೆ. ಚಿತ್ರವನ್ನು ಉದ್ದಹರಣೆ ಪಟಲದ ವಿಶೇಷ ಚಿತ್ರದಲ್ಲಿ ಇದು ಒಂದು. ಈ ಚಿತ್ರದ ಎಡಬಲದಲ್ಲಿ ಕೆಂಪುಹೂವಿನ ೧೦ಚಿತ್ರವಿದೆ. ಆ ನಂತರದಲ್ಲಿ ಅಲಂಕಾರಿಕ ಚಿತ್ರದ ಪಟ್ಟಿಯು ಮತ್ತೊಂದು ಇರುತ್ತದೆ. ಬಸವನ ಚಿತ್ರವನ್ನು ಹಾಳೆಯ ಮಧ್ಯದಲ್ಲಿ ಚಿತ್ರಿಸಿರುತ್ತಾರೆ. ಪೀಠದ ಮೇಲೆ ರಾಕ್ಷಸನ ರಂಡವಿದೆ ಅದರ ಮೇಲೆ ಬಸವನ ಬಲಪಾದವಿದೆ. ಇನ್ನೂ ಮೂರು ಕಾಲುಗಳು ಪೀಠದ ಕೆಳಭಾಗದ ಮೇಲೆ ಇಟ್ಟಿರುತ್ತದೆ. ರುಂಡವು ಹಳದಿವರ್ಣದಿಂದ ತೋರಿಸಲಾಗಿದೆ. ಈ ಹಸ್ತಪ್ರತಿಚಿತ್ರವು ಶೈವಕ್ಕೆ ಸಂಬಂಧಿಸಿರುವುದಾಗಿದೆ. ಬಸವನ ಆಕೃತಿಯು ಕಂದು ಬಣ್ಣದಿಂದ ಕಲಾವಿದನು ಚಿತ್ರಿಸಿರುತ್ತಾರೆ. ದಪ್ಪವಾಗಿ ದಷ್ಟಪುಷ್ಟವಾಗಿ ಸುಂದರವಾಗಿ ಕಂಡುಬರುತ್ತದೆ. ಕಾಲು, ಕೊರಳು, ಬಾಲ ಕುತ್ತಿಗೆ ಜಾಗದಲ್ಲಿ ಗಜ್ಜೆಯನ್ನು ಅಲಂಕಾರಿಕವಾಗಿ ಸಂಯೋಜಿಸಿ ಚಿತ್ರಿಸಿದ್ದಾರೆ. ಯಾವುದೇ ನೆರಳುಬೆಳಕಿನ ವರ್ಣಸಂಯೋಜನೆಯು ಇಲ್ಲಿ ಕಂಡುಬರುವುದಿಲ್ಲ ಅದರ ಆಕಾರ ದುಂಡುತನ ಮಾತ್ರ ಪ್ರಕಟಿಸಿದ್ದಾರೆ. ತಲೆಯ ಮೇಲಿರುವ ಕೊಡಿಗೆ ಸಹ ಆಭರಣವಿರುತ್ತದೆ. ಬೆನ್ನ ಮೇಲೆ ನೀಲಿ ವಸ್ತ್ರವು ಕಂಡುಬರುತ್ತದೆ. ಉತ್ಕೃಷ್ಟವಾದ ಕಪ್ಪು ರೇಖೆಯಿಂದ ಚಿತ್ರದ ಕೊನೆಯ ಹಂತದಲ್ಲಿ ಬಳಸಿದ್ದಾರೆ. ಅದು ಚಿತ್ರವನ್ನು ಸ್ಪಷ್ಟಗೊಳಿಸಿ ಸೌಂದರ್ಯ ಹೆಚ್ಚಿಸಿದೆ.

೪.೮, ಶಿವನಿಧಿ

ಶ್ರೀಮನ್ಮಹಾರಾಜ ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರು ಸ್ವಯಂ ಕವಿ. ಕಲಾವಿದ. ಚಿತ್ರಕಲಾ ನಿಪುಣರೂ ಆಗಿದ್ದರೂ. ಇವರ ಅನಂತಿಯಂತೆ ರಚನೆಯಾದ ಈ ಗ್ರಂಥವನ್ನು ಮೈ.ವಿ.ವಿ.ಯಿಂದ೨೦೦೪ರಲ್ಲಿ ಪ್ರಕಟಣೆಯಾಗಿದೆ. ಇದರಲ್ಲಿ ವರ್ಣಮಯ ಚಿತ್ರಗಳಿಂದ ಕೂಡಿದ ಶ್ರೀತತ್ವನಿಧಿಯು ಅವರ ಕೃತಿಗಳಲ್ಲೆಲ್ಲಾ ಮೇರುಕೃತಿಯಾಗಿರುತ್ತದೆ. ಶಿವನಿಧಿಯು ಮೂರನೆಯ ಉತ್ತಮ ಕೃತಿಯಾಗಿದೆ. ಕನ್ನಡ-ಸಂಸ್ಕೃತಿ ಭಾಷೆಯಲ್ಲಿ ಈ ಪುಸ್ತಕವು ಇರುತ್ತದೆ. ಇದರಲ್ಲಿ ೫೭೩ಶ್ಲೋಕ, ೧೬೪ ದೇವತಾ ಮೂರ್ತಿಗಳ ಚಿತ್ರಗಳ ಧ್ಯಾನಾಧಿ ವರ್ಣನೆಗಳನ್ನು ಕೊಟ್ಟಿದ್ದಾರೆ. ಪರಶಿವನ ಪಂಚವಿಂಶತಿ ಲೀಲಾಮೂರ್ತಿಗಳನ್ನು ಚಿತ್ರಿಸಿದ್ದಾರೆ ಎಂದು ವರ್ಣಿಸಲಾಗಿದೆ. ವೀರಭದ್ರ, ಭೈರವ, ಸುಬ್ರಹ್ಮಣ್ಯ, ಗಣಪತಿ, ಏಕದಶರುದ್ರರು ವಿವಿಧ ಭಾವ-ಭಂಗಿಗಳೇ ಚಿತ್ರಿಸಲಾಗಿರುತ್ತೆ. ಶಿವನಿಧಿಯಲ್ಲಿ ದೇವತೆಗಳು ಹಿಡಿದಿರುವ ಆಯುಧಗಳು ಬಗೆ ಬಗೆಯದಾಗಿದೆ. ಅಲ್ಲದೆ ವಾದ್ಯಗಳನ್ನು ವಿಶೇಷ ಮನೋಹರವಾಗಿ ಚಿತ್ರಿಸಿದ್ದಾರೆ ಅವು ಎಲ್ಲ ಅದ್ಭುತವಾಗಿಯೇ ರಚನೆ ಮಾಡಿರುತ್ತಾರೆ. ವರ್ಣಸಂಯೋಜನೆಯು ಆತ್ಯಾಕರ್ಷಕವಾಗಿ ವರ್ಣಿತವಾಗಿದೆ. ಚಿತ್ರಗಳನ್ನು ಸುಂದರವಾಗಿ ರಚಿಸಿದ್ದಾರೆ.[೧೫]

---

೧೫. ಡಾ.ಕೆ.ವಿ.ರಮೇಶ್.; ಶಿವನಿದಿ.ಪ್ರ.ಪ್ರಾ.ವಿ.ಸಂ೨೦೦೪

೪.೮.೧. ಚಂದ್ರಶೇಖರ ಮೂರ್ತಿ

ಶಿವನಿಧಿಯಲ್ಲಿರುವ ಈ ದೇವತೆಯ ಚಿತ್ರವು ಸಾಧರಣ ಚಿಕ್ಕ ಅಳತೆಯಲ್ಲಿ ಚಿತ್ರಿಸಿದ್ದಾರೆ. ಶಿವನ ಅವತಾರಗಳಲ್ಲಿ ಇದು ಒಂದು ಅವತಾರವಾಗಿದೆ. ಇದರಲ್ಲಿ ಶಿವನು ಚಂದ್ರಶೇಖರ ಅವತಾರಿಯಾಗಿದ್ದಾನೆ. ಚಂದ್ರಶೇಖರ ಮತ್ತು ಮುನಿಗಳು ಒಂದೇ ಮೈವರ್ಣದವರಾಗಿರುವಂತೆ ಕಲಾವಿದನು ಚಿತ್ರಿಸಿದ್ದಾನೆ. ಎಲ್ಲರು ಹುಲಿಯ ಚರ್ಮವನ್ನು ಉಟ್ಟಿರುತ್ತಾರೆ. ಹತ್ತು ಋಷಿಮುನಿಗಳು ತಲೆಯ ಕೂದಲನ್ನು ವಿವಿಧ ರೀತಿಯಲ್ಲಿ ಚೆನ್ನಾಗಿ ಮೇಲಕ್ಕೆ ಕಟ್ಟಿರುತ್ತಾರೆ. ಕೈಕಾಲುಗಳಿಗೆ ಕಡಗತೊಟ್ಟಿರುತ್ತಾರೆ. ಜಡೆಯನ್ನು ಕಂದು ವರ್ಣದಿಂದ ತೋರಿಸಿ, ಗಡ್ಡವನ್ನು ಮಾತ್ರ ಕಪ್ಪುವರ್ಣದಿಂದ ರಚಿಸಿದ್ದಾರೆ. ೮ಮುನಿಗಳು ಚಂದ್ರಶೇಖರನಿಗೆ ಕೈಮುಗಿದು ಭಕ್ತಿಯಿಂದ ನಿಂತಿರುತ್ತಾರೆ. ಬಲಭಾಗದಲ್ಲಿ ಒಬ್ಬರು ವೀಣೆಯನ್ನು ನುಡಿಸುತ್ತಿದ್ದಾರೆ. ಎಡಭಾಗದಲ್ಲಿ ಒಬ್ಬರು ಕೆಂಪುಶಾಲನ್ನು ನಡುವಿಗೆ ಸುತ್ತಿಕಟ್ಟಿರುತ್ತಾರೆ. ಚಂದ್ರಶೇಖರನ್ನು ಬಂಡೆಗಳ ಮೇಲೆ ಕುಳಿತಿದ್ದಾನೆ. ಬಂಡಗಳಲ್ಲಿಯೂ ಶಿವಲಿಂಗಗಳನ್ನು ಕಲಾವಿದನು ಚಿತ್ರಿಸಿದ್ದಾನೆ. ಹೂವಿನ ಪೊದೆಯನ್ನು ಚಿತ್ರಿಸಿದ್ದಾನೆ. ಬಂಡೆಗಳ ಮೇಲೆ ಸಣ್ಣ ಪೀಠ ಇದ್ದು ಆ ಪೀಠದ ಮೇಲೆ ಕಾಲನ್ನು ಮಡಚಿ ಸ್ವಲ್ಪಮೇಲಕ್ಕೆ ಎತ್ತಿರುತ್ತಾನೆ. ಹುಲಿಯ ಚರ್ಮವನ್ನು ಸುತ್ತಿಕೊಂಡಿದ್ದು ನಾಲ್ಕುಕೈಗಳ ಇರುತ್ತದೆ. ಮೇಲಿನ ಎರಡು ಕೈಯಲ್ಲಿ ಜಪಮಾಲೆ, ವೀಣೆ ಇದ್ದು ಕೆಳಗಿನ ಕೈಯಲ್ಲಿ ಹಾವು ಹಿಡಿದು ಬಲಗೈಯಲ್ಲಿ ಆಭಯಹಸ್ತವನ್ನು ರಚಿಸಿದ್ದಾನೆ. ಮೂರುಕಣ್ಣುಗಳು ಮತ್ತು ತಿಲಕವನ್ನು ಸಹ ಹಣೆಗೆ ಇಟ್ಟಿರುತ್ತಾರೆ. ವಿಶೇಷವಾಗಿ ಜಡೆಯು ಬೆನ್ನಹಿಂದೆ ಹರಡಿಕೊಂಡಿದೆ. ತಲೆಯ ಮೇಲೆ ಚಂದ್ರ ಮತ್ತು ಗಂಗೆಯನ್ನು ಇರುವಂತೆ ರಚಿಸಿ, ಚಂದ್ರಶೇಖರನ ಆಕೃತಿಯ ಹಿಂದೆ ದೊಡ್ಡದಾದ ಒಂದ ಮರದ ಚಿತ್ರವಿದೆ. ಅದರಲ್ಲಿ ಹೂ ಹಣ್ಣುಗಳು ತುಂಬಿರುವಂತೆ ಚಿತ್ರಿಸಿ ಅದರಲ್ಲಿ ಐದು ಎಡಯ ಹಾವನ್ನು ಚಿತ್ರಿಸಲಾಗಿದೆ. ಕಪ್ಪುರೇಖೆಯು ಚಿತ್ರದಲ್ಲಿ ಸಣ್ಣಗೆ ಕಂಡುಬರುತ್ತದೆ. ಆಕೃತಿಗಳಲ್ಲಿ ಸ್ವಲ್ಪಪ್ರಮಾಣದ ಗಾಢವರ್ಣದಿಂದ ದುಂಡುತನ ತೋರಿಸಲಾಗಿದೆ.

೪.೮.೨. ಕಾಲಭೈರವನ ಚಿತ್ರ

ಶ್ರೀತತ್ವನಿಧಿಯ ತೃತೀಯ ಸಂಪುಟದ ಶಿವನಿಧಿ ಇರುವಂತ ಚಿತ್ರ. ಮೈಸೂರುಶೈಲಿಯಲ್ಲಿ ಇರುತ್ತದೆ. ಈ ಕಾಲಭೈರವನ ಚಿತ್ರವು ಎರಡುವರೆ ಇಂಚು ಅಗಲ, ಮೂರು ಇಂಚು ಎತ್ತರದ ಅಳತೆಯಲ್ಲಿ ಕಾಗದ ಮೇಲೆ ಮುದ್ರಿತವಾದಂತ ಚಿತ್ರವಾಗಿದೆ. ಮೂಲಪ್ರತಿಯು ಕಾಗದದ ಮೇಲೆ ಚಿತ್ರಿಸಲಾಗಿದೆ. ಶಾಸ್ತ್ರ ಗ್ರಂಥದಲ್ಲಿ ಶ್ಲೋಕಗಳಲ್ಲಿ ತಿಳಿಸಿರುವಂತೆ ಚಿತ್ರಗಳನ್ನು ಕಲಾವಿದನು ಚಿತ್ರಿಸಿದ್ದಾನೆ. ಭೈರವನು ನಾಯಿಯ ಮೇಲೆ ಕುಳಿತಿರುವನ್ನು ಪೂರ್ಣವಾಗಿ ಬೆತ್ತಲಾಗಿದ್ದಾನೆ. ಶಾಸ್ತ್ರದಂತೆ ಚಿತ್ರಗಳ ಸಂಯೋಜನೆ ಕಾರ್ಯ ನಡೆದಿರುತ್ತದೆ. ದೊಡ್ಡದಾದ ನಾಯಿಯು ಗರ್ಜಿಸುವಂತೆ ಚಿತ್ರ ಇದ್ದು ಬಿಳಿವರ್ಣದಲ್ಲಿ ರಚಿಸಿದ್ದಾರೆ.

ಅದರ ಮುಂದೆ ಹಿಂದೆ ನಾಲ್ವರು ಶಿವಗಣಗಳು ದಷ್ಟಪುಷ್ಟವಾಗಿ ಚಿತ್ರಿಸಿದ್ದಾರೆ. ಅದರಲ್ಲಿ ಇಬ್ಬರು ಸೇವಕರು ದೊಡ್ಡದಾದ ಕತ್ತಿಯನ್ನು ಹಿಡಿದರು ಎಲ್ಲರಂತೆ ಕೈಮುಗಿದು ನಿಂತಿರುತ್ತಾನೆ. ಕಾಲಭೈರವನು ನಾಯಿಬೆನ್ನ ಮೇಲೆ ಕುಳಿತು ನಾಲ್ಕುಕೈಗಳನ್ನು ಹೊಂದಿದ್ದು ಅದರಲ್ಲಿ ಆಯುಧಗಳನ್ನು ಹಿಡಿದಿರುತ್ತಾನೆ. ಬಲಭಾಗದ ಕೈಯಲ್ಲಿ ತ್ರಿಶೂಲ, ದಂಢವಿದೆ. ಎಡಭಾಗದಕೈಯಲ್ಲಿ ಅರ್ಧಭಾಗದ ಚಂದ್ರನ್ನು ಡಮರಿನ ಜೊತೆ ಹಾವು ಇದೆ. ಸಾಧಾರಣವಾಗಿ ಕೊರಳಿನಲ್ಲಿ ಕೈತೊಳುಗಳಿಗೆ ಸೊಂಟದಲ್ಲಿ ಆಭರಣವನ್ನು ಕಲಾವಿದ ರಚಿಸಿದ್ದಾನೆ. ಬೂದು ವರ್ಣದ ಮೈ ಆಗಿರುತ್ತದೆ. ಹರಡಿದ ಕೂದಲು ಕೆಂಜೆಡೆ, ಮೂರು ಕಣ್ಣುಗಳನ್ನು ಮತ್ತು ಕಿವಿಗೆ ಗೆಜ್ಜೆ ಮತ್ತು ಕುಂಡಲಿಗಳನ್ನು ಹಾಕಿರುವಂತೆ ರಚಿಸಲಾಗಿದೆ. ನಾಯಿಯನ್ನು ಕೆಂಪು ವರ್ಣದ ರೇಖೆಯಲ್ಲಿ ತೋರಿಸಿದರೆ, ಭೈರವನ್ನು ಮತ್ತು ಶಿವಗಣಗಳನ್ನು ಕಪ್ಪುರೇಖೆಯಿಂದ ಚಿತ್ರಿಸಿದ್ದಾನೆ. ಶಿವಗಣಗಳು ನಡುವಿಗೆ ಕಚ್ಚೆಯನ್ನು ಮಾತ್ರ ಉಟ್ಟಿರುತ್ತಾರೆ.

೪.೯, ವಿಷ್ಣುನಿಧಿ

ಶ್ರೀತತ್ವನಿಧಿ ದ್ವಿತೀಯ ಸಂಪುಟವಾದ ವಿಷ್ಣುನಿಧಿಯ ಪ್ರಧಾನಸಂಪಾದಕರಾದ ಡಾ.ಕೆ.ವಿ.ರಮೇಶ್ ಅವರು ಹಾಗಿದು ಈ ಗ್ರಂಥವನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾಸಂಶೋಧನಾಲಯ ಮೈಸೂರು. ಇವರು ೨೦೧೨ರಲ್ಲಿ ಹೊರತಂದಿರುತ್ತಾರೆ. ಇದು ಮೈಸೂರಿನ ಅರಸರಾಗಿದ್ದ ಶ್ರೀಮುಮ್ಮಡಿಕೃಷ್ಣರಾಜ ಒಡೆಯರ ಅಪೂರ್ವವಾದ ಮೇರುಕೃತಿ ಇದಾಗಿದೆ. ಇದರಲ್ಲಿ ಒಟ್ಟು ೫೨೪ ಶ್ಲೋಕಗಳು ಐವತ್ತೇಳುದೇವತೆಗಳ ಧ್ಯಾನಗಳಿವೆ. ೨೪ಮೂರ್ತಿಗಳ ಸ್ವರೂಪದ ವರ್ಣನೆಯಿದೆ. ವಿಷ್ಣು, ಲಕ್ಷ್ಮೀ, ಭೂದೇವಿ, ನಾರಾಯಣ, ರಾಮ, ಸೀತಾ, ವರಾಹ, ಗೋಪಾಲ, ನರಸಿಂಹ, ತ್ರಿವಿಕ್ರಮ, ವಾಸುದೇವ , ವಿಷ್ಣುವಿನ ಅವತಾರದ ಬಗ್ಗೆ ತಿಳಿಸಿರುತ್ತಾರೆ. ಮೂರ್ತಿಗಳ ಹೆಂಡತಿಯರ ಹೆಸರುಗಳನ್ನು ಸಹ ತಿಳಿಸಲಾಗಿದೆ.[೧೬]

೪.೯.೧, ವೇಣುಗೋಪಾಲನ ಚಿತ್ರ

ಈ ಚಿತ್ರವು ವಿಷ್ಣುವಿನ ಅವತಾರದಲ್ಲಿ ಒಂದಾಗಿದೆ. ಮಹಾಭಾರತದಲ್ಲಿ ಬರುವ ಕೃಷ್ಣನು ಬಾಲಕನಾಗಿದ್ದಾಗ ಗೋವುಗಳನ್ನು ಮೇಯಿಸಲು ಕಾಡಿಗೆ ಹೋಗುವಾಗ ತನ್ನ ಸಂಗಡಿಗರೊಂದಿಗೆ ಕೊಳಲು ನುಡಿಸುತ್ತಾ ಮರದ ಕೆಳಗೆ ತ್ರಿಭಂಗಿಯಲ್ಲಿ ನಿಂತಿರುವ ಈ ಚಿತ್ರವನ್ನು ವಿಷ್ಣುನಿಧಿಯಲ್ಲಿ ವೇಣುಗೋಪಾಲ ಹೆಸರಿನಿಂದ ಇರುತ್ತದೆ. ಇದರ ಶೋಕ್ಲವಿವರಣೆವು ವಿಷ್ಣುನಿಧಿ ಪುಸ್ತಕದಲ್ಲಿದೆ. ಕೊಳಲನ್ನು ನುಡಿಸುತ್ತಿರುವ ಗೋಪಾಲನ್ನು ಎರಡು ಕೈಗಳನ್ನು ಹೊಂದಿರುತ್ತಾನೆ. ಎಡಗಿವಿಯಲ್ಲಿ ಹಾಕಿರುವ ಕರ್ಣಕುಂಡಲವು ಅವನ ಎಡಭುಜವನ್ನು ಸವರುತ್ತಿದೆ. ಬಳ್ಳಿಯಂತೆ ಬಳಕುವ ಅವನ ಹುಬ್ಬುಗಳು ಎತ್ತರ ತಗ್ಗುಗಳಿಂದ ಕೂಡಿದೆ. ಅವನ ಮೃದುವಾದ ಕೆಳದುಟಿಯು ಮಧ್ಯಭಾಗದಲ್ಲಿ ಸ್ವಲ್ಪ ವಕ್ರವಾಗಿದೆ. ಸಂತಸದಿಂದ ಚಿಗುರಿದಂತೆ ಅವನ ಕೆಂಪಾದ ಕೈಬೆರಳುಗಳು ಕೊಳಲ ರಂಧ್ರಗಳ ಮೇಲೆ ಆಡಿಸುತ್ತಿದ್ದಾನೆ. ಕಲ್ಪವೃಕ್ಷದ ಕೆಳಗೆ ತ್ರಿಭಂಗಿಯಶೈಲಿಯಲ್ಲಿ ನಿಂತು ಕೊಳಲನ್ನು ಮೋಹಕವಾಗಿ ನುಡಿಸುತ್ತಿದಾನೆ. ಬಿಳಿಮೋಡದ ಮೈವರ್ಣದಿಂದ ಕೂಡಿದ್ದಾನೆ. ಹಳದಿ ಪಂಚೆ ಜೊತೆ ಕೆಂಪುಶಾಲನ್ನು ಉಟ್ಟಿರುತ್ತಾನೆ. ಗೋಪಾಲ ಮತ್ತು ಗೋವುಗಳ ಮೈವರ್ಣ ಒಂದೇಯಾಗಿರುತ್ತದೆ. ತಲೆಗೆ ಎರಡು ನವಿಲುಗರಿಯನ್ನು ಸಿಗಿಸಿಕೊಂಡಿರುತ್ತಾನೆ. ಸಣ್ಣಪೀಠದ ಮೇಲೆ ನಿಂತಿರುತ್ತಾನೆ. ಅವನ ಸಂಗಡಿಗರು ಅವನಿಗಾಗಿ ಅನೇಕ ತಂಡಿಗಳನ್ನು ನೀಡಲು ಹೊತ್ತುಕೊಂಡು ಇರುತ್ತಾನೆ. ಕಪ್ಪುರೇಖೆಗಳಿಂದ ಚಿತ್ರವನ್ನು ಪೂರ್ಣವಾಗಿ ರೇಖಿಸಿ ಸ್ಪಷ್ಟವಾಗಿ ಕಾಣುವಾಗೇ ಮಾಡಿರುತ್ತಾರೆ. ತುಸು ಬಲಗಾಲನ್ನು ಸ್ವಲ್ಪ ಎತ್ತಿರುತ್ತಾನೆ.

೪.೯.೨, ವೀರರಾಮನ ಚಿತ್ರ

ಈ ಚಿತ್ರವು ರಾಮಾಯಣದ ರಾವಣನ್ನು ಕೊಂದ ನಂತರದ ಸನ್ನಿವೇಶದ ಚಿತ್ರವೆಂದು ತಿಳಿದುಬರುತ್ತದೆ. ಶ್ರೀತತ್ವನಿಧಿಯ ದ್ವಿತೀಯ ಸಂಪುಟದ ವಿಷ್ಣುನಿಧಿಯಲ್ಲಿ ತಿಳಿಲಾಗಿದೆ. ಈ ಗ್ರಂಥದಲ್ಲಿ ಶ್ರೀರಾಮನ್ನು ವೀರರಾಮನಾಗಿಯೂ ಸಹ ತಿಳಿಸಿ ವಿವರಣೆ ನೀಡಿದ್ದಾರೆ. ವೀರರಾಮನ ಚಿತ್ರವು ಸಾಧಾರಣ ಚಿಕ್ಕ ಅಳತೆಯಲ್ಲಿ ಮುದ್ರಿಸಲಾಗಿದೆ. ಕಿರೀಟಧರಿಸಿ ಬಿಲ್ಲು ಬಾಣಹಿಡಿದಿರುವ ರಾಮನ್ನು ಮೂರು ಲೋಕಗಳಿಗೆ ಅಪಾಕಾರಿಯಾಗಿದ್ದ ಹತ್ತು ಮುಖದ ರಾವಣನ್ನು ಯುದ್ಧದಲ್ಲಿ ಕೊಂದಿರುವ ಶ್ರೀರಾಮನು ಎಡಕೈಯಲ್ಲಿ ಬಿಲ್ಲನ್ನು ಹಿಡಿದು ಅಚಲನಾಗಿ ನಿಂತಿದ್ದಾನೆ.

---

೧೬. ಡಾ.ಕೆ.ವಿ.ರಮೇಶ್; ವಿಷ್ಣುನಿಧಿ ಪ್ರಮೈ, ವಿ.ವಿ. ಪ್ರಾ.ವಿ.ಸಂ. ಮೈ, ೨೦೧೨

ಬಲಗೈಯಲ್ಲಿ ಹಿಡಿದಿರುವ ಬಾಣವನ್ನು ತಿರುಗಿಸುತ್ತಿದ್ದಾನೆ ಎಂಬಂತೆ ಇದ್ದು ಅವನ ಕಣ್ಣುಗಳು ಸಂಪೂರ್ಣ ಕೆಂಪಾಗಿದೆ. ಶತ್ರುಗಳ ಬಾಣಗಳಿಂದ ಅವನ ಶರೀರ ಗಾಯಗೊಂಡಿದೆ. ವೀರತೇಜಸ್ಸಿನಿಂದ ಅವನ ದೇಹವು ಮನೋಹರವಾಗಿರುವಂತೆ ಕಲಾವಿದನು ಚಿತ್ರಿಸಿದ್ದಾನೆ. ಕೆಂಪು ಶಾಲು ಹಳದಿಪಂಚೆ, ತಲೆಗೆ ಸಾಧಾರಣವಾದ ಕಿರೀಟ ಧರಿಸಿದ್ದಾನೆ. ಕೊರಳಿಗೆ ಸಹ ಪದಕದ ಸರ ಹಾಕಿರುತ್ತಾನೆ. ತಮ್ಮನಾದ ಲಕ್ಷಣನ್ನು ಅಣ್ಣನಿಗೆ ಕೈಮುಗಿದು ನಿಂತಿರುತ್ತಾನೆ. ಅವನ್ನು ಸಹ ಬಲಭಾಗದಲ್ಲಿ ಚಿಕ್ಕದಾಗಿ ಚಿತ್ರಿಸಿರುತ್ತಾನೆ. ಅವನಿಗೆ ಸಹ ಯುದ್ಧದಲ್ಲಿ ಗಾಯವಾಗಿದೆ. ಎನ್ನುವಂತೆ ಕಲಾವಿದನು ಚಿತ್ರಿಸಿದ್ದಾನೆ. ಇವನು ಕೆಂಪುಶಾಲು ಗಾಢಹಳದಿ ವರ್ಣದ ಪಂಚೆಯನ್ನು ಉಟ್ಟಿರುತ್ತಾನೆ. ಚಿಕ್ಕ ಜಾಗದಲ್ಲಿ ಎರಡು ಆಕೃತಿಗಳನ್ನು ಸಂಯೋಜಿಸಿದ್ದಾರೆ. ಹಿಂದೆ ಹಾಗೇ ಖಾಲಿಜಾಗವನ್ನು ಬಿಟ್ಟಿರುತ್ತಾರೆ. ಕಪ್ಪು ರೇಖೆಯನ್ನು ಆಕೃತಿಯಲ್ಲಿ ಬಳಸಿ ಆಕೃತಿಗಳನು ಬಿಡಿಸಿದ್ದಾರೆ. ಈ ಚಿತ್ರದ ಮೂಲಪ್ರತಿಯೂ ಕಾಗದದ ಹಸ್ತಪ್ರತಿಯಲ್ಲಿ ಕಂಡುಬರುತ್ತದೆ.

೪.೧೦, ಶಕ್ತಿನಿಧಿ

ಶ್ರೀತತ್ವನಿಧಿಯ ಪ್ರಥಮ ಸಂಪುಟವಾದ ಶಕ್ತಿನಿಧಿಯು ೧೯೭೦ರಲ್ಲಿ ಮುದ್ರಣವಾಗಿರುತ್ತದೆ. ಈ ಗ್ರಂಥವನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾಸಂಶೋಧನಾಲಯ ಮೈಸೂರು. ಇವರು ಹೊರತಂದಿರುತ್ತಾರೆ. ಪ್ರಧಾನ ಸಂಪಾದಕರಾದ ಎಂ. ಮಾದಯ್ಯ ನವರು ಹಾಗಿರುತ್ತಾರೆ. ಇದರಲ್ಲಿರುವ ಚಿತ್ರಗಳು ಕಲ್ಲಚ್ಚಿನಲ್ಲಿ ಮುದ್ರಣವಾಗಿರುವ ಚಿತ್ರಗಳು ಇದರ ಮೂಲಪ್ರತಿಯು ೧೫ಅಂಗುಲ ಉದ್ದ ಮತ್ತು ೧೧.೫ಅಂಗುಲ ಅಗಲವಿದೆ. ಮುಮ್ಮಡಿಯವರು ಚಿತ್ರಕಲಾವಿದರಿಗೆ ಪ್ರತಿದೇವತೆಯ ವರ್ಣನೆಯನ್ನು ಮಾಡಿ ನಂತರ, ಆಯಾದೇವತೆಗಳನ್ನು ಪೂರ್ಣವಾಗಿ ಕಲ್ಪಿಸಿಕೊಂಡು ಚಿತ್ರಕಲಾವಿದರು ರೇಖಾಚಿತ್ರಗಳನ್ನು ಸಿದ್ದಮಾಡಿಕೊಂಡು ಅವುಗಳಿಗೆ ಬಣ್ಣವನ್ನು ತುಂಬಿಸುತ್ತಿದ್ದರು. ಎಂದು ತಿಳಿಸುತ್ತದೆ. ಈ ಗ್ರಂಥ.[೧೭]

೪.೧೦.೧, ಕಾತ್ಯಾಯನಿ ದುರ್ಗಾದೇವಿಯ ಚಿತ್ರ

ಚಂದ್ರಹಾಸಖಡ್ಗಯಿಂದ ಕಾಂತಿಪೂರ್ಣವಾಗಿ ಕಂಗೋಳಿಸುವ ದೇವಿಯು ಸಿಂಹದ ಮೇಲೆ ಕುಳಿತ್ತಿದ್ದಾಳೆ. ಕಿರೀಟಧಾರಿಣಿಯಾದ ದೇವಿಯು ದೊಡ್ಡದಾದ ಖಡ್ಗವನ್ನು ಕೈಯಲ್ಲಿ ಹಿಡಿದಿದ್ದಾಳೆ. ಉದ್ದನೆಯ ಜಡೆಯನ್ನು ಹೊಂದಿದ್ದು ಕೆಂಪುಸೀರೆ ಉಟ್ಟಿರುತ್ತಾಳೆ. ಹಸಿರು ರವಿಕೆಯನ್ನು ತೊಟ್ಟಿರುತ್ತಾಳೆ. ಎಡಕೈಯು ಎಡಭಾಗದ ತೊಡೆಯ ಮೇಲೆ ಇರಿಸಿದ್ದಾರೆ. ಬಲಶಾಲಿಯಾದ ಹುಲಿಯ ಬೆನ್ನಮೇಲೆ ಸಾವಾರಿಮಾಡುತ್ತಾ ಕುಳಿತಿದ್ದಾಳೆ. ಹಳದಿ ಹುಲಿಯ ಮೈಮೇಲೆ ಕಪ್ಪುಪಟೆಗಳನ್ನು ತೋರಿಸಿದ್ದಾರೆ. ಹುಲಿಯು ಘರ್ಜಿಸುತ್ತ ತನ್ನ ಬಲಗಾಲನ್ನು ಮೇಲೆಎತ್ತಿಕೊಂಡು ಸಾಗುತ್ತಿದೆ. ಈ ಚಿತ್ರದ ಅಳತೆಯು ಸಾಧರಣವಾಗಿದ್ದು ಮೂರು ಇಂಚು ಎತ್ತರ ಮತ್ತು ಎರಡುವರೆ ಇಂಚು ಅಗಲವಿದೆ. ಹಿನ್ನೆಲೆಯ ವರ್ಣವು ತೋರಿಸಿಲ್ಲ ದೇವಿಯು ಮೈವರ್ಣವು ಬಿಳಿವರ್ಣದಿಂದ ತೋರಿಸಲಾಗಿದೆ. ಕಪ್ಪುರೇಖೆಯು ಆಕೃತಿಗಳನ್ನು ನಿರ್ಧರಿಸಲು ಮತ್ತು ಸೌಂದರ್ಯವನ್ನು ಹೆಚ್ಚಿಸಲು ಕಪ್ಪುವರ್ಣದ ರೇಖೆಯನ್ನು ಬಳಸುತ್ತಿದ್ದರು.

೧೭, ಎಂ. ಮಾದಯ್ಯ; ಶಕ್ತಿನಿಧಿ. ಮೈ.ವಿ.ವಿ. ಪ್ರಾ.ವಿ.ಸಂ,ಮೈ ೧೯೯೭

೪.೧೦.೨. ಗೌರಿದುರ್ಗಾದೇವಿಯ ಚಿತ್ರ

ಈ ಚಿತ್ರವು ಸಹ ಸಾಧರಣವಾದ ಅಳತೆಯಲ್ಲಿ ಇದ್ದು ಮೂರುಇಂಚು ಎತ್ತರ ಮತ್ತು ಎರಡುವರೆ ಇಂಚು ಅಗಲವಿದೆ. ಬಿಳಿಆನೆಯ ಮೇಲೆ ಕುಳಿತಿರುತ್ತಾಳೆ. ಆನೆಯು ಮುನ್ನಡೆಯುತ್ತಿದೆ. ದೊಡ್ಡದಾದ ದೇಹವನ್ನು ಹೊಂದಿದೆ. ಬೆನ್ನ ಮೇಲೆ ಹಸಿರು ವರ್ಣದ ಹೊದಿಕೆಯನ್ನು ಕಲಾವಿದರು ಚಿತ್ರಿಸಿದ್ದಾರೆ. ಆನೆಯ ಹೊಟ್ಟೆಯ ಭಾಗದಲ್ಲಿ ದೊಡ್ಡದಾದ ಘಂಟೆಯನ್ನು ಹಾಕಿರುತ್ತಾರೆ. ಕಾಲುಗಳಿಗೆ ಕಾಲುಕಡಗವನ್ನು ಹಾಕಿರುತ್ತಾರೆ. ಕೆಂಪುವರ್ಣದಿಂದ ಕಿವಿ ಮತ್ತು ತಲೆಯ ಮೇಲುಭಾಗವನ್ನು ತೋರಿಸಲಾಗಿದೆ. ದೇವಿಯ ಕಿರೀಟವನ್ನು ಧರಿಸಿದ್ದು ದೇಹದ ತೊಳು, ಕೈಕಾಲು, ಕೊರಳು, ನಡುವಿನ ಭಾಗದಲ್ಲಿ ಹಲವು ಆಭರಣವನ್ನು ಹಾಕಿರುವಂತೆ ಕಲಾವಿದನ್ನು ಚಿತ್ರಿಸಿದ್ದಾನೆ. ಸಣ್ಣ ಸಣ್ಣರೇಖೆಯು ಚಲನಶೀಲವಾಗಿ ಚಿತ್ರದ ಸೌಂದರ್ಯವನ್ನು ಹೆಚ್ಚಿಸಿದೆ. ಹಿನ್ನಲೆಯು ಸಾಧರಣವಾಗಿ ಹಾಗೆ ಖಾಲಿ ಬಿಟ್ಟಿರುತ್ತಾರೆ.

೪.೧೧. ಸ್ವರ ಚೂಡಾಮಣಿ

೧೮ನೇ ಶತಮಾನದಲ್ಲಿ ರಚನೆಗೊಂಡಂತಹ ಈ ವರ್ಣಚಿತ್ರ ಹಸ್ತಪ್ರತಿಯು ಶ್ರೇಷ್ಠ ರಾಗಮಾಲ ಚಿತ್ರಗಳನ್ನು ಇದು ಒಳಗೊಂಡಿದೆ. ಮುಮ್ಮಡಿಕೃಷ್ಣರಾಜ ಒಡೆಯರು ಹೆಸರು ಬಹುಕಾಲ ಉಳಿಸಬಹುದಾದ ಸಚಿತ್ರ ಕೃತಿಯಾಗಿದೆ. ಆಳವಾದ ದೃಶ್ಯಸಂಯೋಜನೆ, ನಿಖರವಾದ ರೇಖಾ ವಿನ್ಯಾಸ, ಹಾವಭಾವ, ಚಲನಶೀಲತೆ, ಹಿತಮಿತ ಸಂಯೋಜನೆಯು ಅದರ ಮೌಲ್ಯ ಹೆಚ್ಚಿಸಿದೆ. ಚಿತ್ರಕಾರನ ಸಹಜತೆಯಿಂದ ಕೂಡಿದ ಮಹೋನ್ನತ ಕೃತಿ ಎಂದೇ ಹೇಳಬಹುದಾಗಿದೆ. ಇದರಲ್ಲಿ ಸಂಗೀತಕ್ಕೆ ಸೇರಿದ ರಾಗಮಾಲಚಿತ್ರಗಳು ಕಲಾವಿದನ ಅಮೋಘ ರಚನೆ ಎಂದು ವಿದ್ವಾಂಸರುಗಳು ಹೇಳುತ್ತಾರೆ.

೪.೧೨.ಸುತ್ತೂರಿನ ಮಠದ ಸಂಗ್ರಹಾಲಯ

ಈ ಸಂಗ್ರಹಾಲಯದಲ್ಲಿಯೂ ಹಸ್ತಪ್ರತಿ ಹಾಗೂ ಕಡತಗಳನ್ನು ಸಂಗ್ರಹಿಸಿ ಪ್ರದರ್ಶನಕ್ಕೆ ಇಟ್ಟಿರುತ್ತಾರೆ. ಇಲ್ಲಿ ಹಲವಾರು ಪ್ರಾಚೀನ ಗ್ರಂಥದಲ್ಲಿ ಶಿವನಿಗೆ ಸಂಬಂಧಪಟ್ಟ ಶ್ಲೋಕಗಳ ಹಸ್ತಪ್ರತಿಗಳು ಇಲ್ಲಿ ಸಂರಕ್ಷಿಸಿ ಇಡಲಾಗಿದೆ. ಸುತ್ತೂರು ಮೈಸೂರು ಜಿಲ್ಲೆ, ನಂಜನಗೂಡು ತಾಲೂಕಿನಲ್ಲಿ ಇರುತ್ತದೆ. ಇದು ಒಂದು ಧಾರ್ಮಿಕ ಕ್ಷೇತ್ರವಾಗಿದೆ. ಮೈಸೂರು ಅರಸರರೊಂದಿಗೆ ನಿಕಟಸಂಬಂಧ ಹೊಂದಿರುತ್ತಾರೆ.

ಈ ಎಲ್ಲಾ ತರಹದ ಹಸ್ತಪ್ರತಿ ವರ್ಣಚಿತ್ರಕಲೆಯು ಬೆಳವಣಿಗೆಗೆ ರಾಜರು ಮುಖ್ಯ, ಹಾಗೆ ಕಲಾವಿದರುಗಳು ಶ್ರದ್ದೆಯಿಂದ ಚಿತ್ರರಚಿಸಿ ಶಾಶ್ವತವಾಗಿಸಿದವರುಗಳು ಮುಖ್ಯವಾಗಿ ಜಾವಗಲ್ಲು ನರಸಿಂಹಯ್ಯ, ನಗೂನಹಳ್ಳಿ ನಾರಣಪ್ಪ, ಯಲ್ಲಯ್ಯ, ವೀರಣ್ಣ, ಆಳಸಿಂಗಯ್ಯ, ಸುಂದರಯ್ಯ ಮೊದಲಾದವರು ಹಸ್ತಪ್ರತಿ ಚಿತ್ರಕಲೆಯ ಸಿದ್ದಹಸ್ತರು ಇವರು ಭಿತ್ತಿಚಿತ್ರಕಲೆ ಕೆಲವು ಜೊತೆಗೆ ಕೆಲವು ಗಾಜಿನ ಚಿತ್ರಕಲೆಯಲ್ಲಿಯೂ ಇವರ ಹೆಸರು ಶಾಶ್ವತವಾಗಿಸಿದೆ. ಇತಿಹಾಸದಲ್ಲಿ ಇವರ ಹೆಸರು ಆಮರವಾಗಿದೆ. ಹಸ್ತಪ್ರತಿ ಲಿಪಿಕಾರರು ಸಿದ್ದಪ್ಪ, ಕಾಂತಯ್ಯ ಶ್ರೀಗುರುದೇವರು, ತಮ್ಮಪ್ಪ, ಚೆನ್ನಬಸವಯ್ಯ ಮಾದಯ್ಯ, ನಂಬಣ್ಣದೇವರು, ಆದಪ್ಪಯ್ಯ, ಕಾಂತಯ್ಯ, ಆದಿಚಂದ್ರಯ್ಯ, ನಂಜಪ್ಪ, ಪಡುಮಣಯ್ಯ, ವಡೇರು ಭೊಗಯ್ಯ ಆದಿಚಂದ್ರಯ್ಯ, ದೊಡ್ಡಯ್ಯ, ನಾಗರಾಜಯ್ಯ, ಬೋಳಬಸವರಾಜದೇವರು ಇವರುಗಳು ಅರಮನೆಯ ಹಸ್ತಪ್ರತಿ ಲಿಪಿಕಾರರಾಗಿದಿದ್ದಾರೆ.

ಹಸ್ತಪ್ರತಿ ಸಿದ್ದತೆ, ರಚನೆ, ವರ್ಣಗಾರಿಕೆ, ವಸ್ತುವಿಷಯ, ಕಲಾವಿದರು ಹೀಗೆ ನೋಡಿದ ಮೇಲೆ ಬಹಳ ಮುಖ್ಯವಾದುದ್ದಾಗಿದೆ. ಸಂಶೋಧನೆಯಲ್ಲಿ ಕಂಡು ಬಂದಂತಹ ಹಸ್ತಪ್ರತಿ ಸಂರಕ್ಷಣೆ ಹಾಗೂ ಜಾಗೃತಿಯ ಹಿನ್ನಲೆಯಲ್ಲಿ ಪ್ರೇರೇಪಿಸುವುದು ಸಹ ಒಂದಾಂಶವಾಗಿದೆ. ಇಂದು ಅತಿ ಅಮೂಲ್ಯವುಳ್ಳಂತಹ

ಆಸ್ತಿಯಾಗಿರುವುದು. ಹಸ್ತಪ್ರತಿಗಳನ್ನು ಹಾಗೂ ಅದರಲ್ಲಿರುವ ರೇಖಾಚಿತ್ರ, ವರ್ಣಚಿತ್ರಗಳು ಮತ್ತು ಲಿಪಿಗಳೆಲ್ಲ ಒಟ್ಟಾರೆಯಾಗಿ ವಿನಾಶದ ಹಾದಿಗೆ ಹೋಗುತ್ತಿದೆ. ಈಗಾಗಲೆ ಎಷ್ಟೋ ಹೋಗಿದೆ ಎಂಬುವುದನ್ನು ಮೈಸೂರಿನ ಇತಿಹಾಸ ನೋಡಿದರೆ ತಿಳಿಯುತ್ತದೆ. ಹಿಂದೆಯೂ ಸಹ ಐತಿಹಾಸಿಕ ಕಾಲದಲ್ಲಿ ದ್ವೇಷದ ಕೆಲವು ಘಟನೆಗಳಲ್ಲಿ ತಾಳೆಗರಿಯ ಆಕಾರ ಗ್ರಂಥಗಳು ದುರಂತಕ್ಕೆ ಈಡಾಗಿದೆ, ಅದರಲ್ಲಿ ಇಂದು ನಮಗೆ ಕೆಲವು ಪ್ರತಿಗಳು ಮಾತ್ರ ಇರುವುದು ಕಂಡುಬರುತ್ತದೆ.

ಆ ಹಸ್ತಪ್ರತಿಗಳಿಗೆ ಬಂದು ಒದಗುವಂತಹ ಆಕಸ್ಮಿಕ ಅಗ್ನಿ, ಜಲ ಅಲ್ಲದೆ ತೈಲಗಳ ಮತ್ತು ಕೀಟಗಳು, ವಿದ್ಯುತ್ ಮತ್ತು ದ್ವೇಷ ಸ್ವಾರ್ಥಗಳಿಗೂ ಸಿಕ್ಕಿಯು ನಾಶವಾಗುತ್ತದೆ. ಅದನ್ನು ತಪ್ಪಿಸುವ ಕ್ರಮಕೈಗೊಳ್ಳಲೇಬೇಕು. ಅದರ ಅರಿವಿನ ಜ್ಞಾನ ಮೂಡಿಸಬೇಕು. ಪೂಜಾಧಿಕಾರ್ಯ ಕ್ರಮಗಳ ಸಂದರ್ಭದಲ್ಲಿಯೂ ಆಕಸ್ಮಿಕವಾಗಿ ಚೆಲ್ಲುವ ತೈಲ, ಜಲಸಿಂಚನ ಮುಂತಾದ ಸಂದರ್ಭಗಳಿಂದ ಕೊಳೆಯುವ ಸಂದರ್ಭವೇ ಜಾಸ್ತಿ. ಆಗಾಗಿ ಜಾಗೃತರಾಗಿರಲು ತಿಳಿಹೇಳಬೇಕಾಗುತ್ತದೆ. ಪೂಜೆಯ ವಿಧಿವಿಧಾನದಲ್ಲಿ ಅರಿಶಿಣ ಕುಂಕುಮ ಶ್ರೀಗಂಧತಿಲಕ ಮುಂತಾದ ದ್ರವ್ಯ ಲೇಪಿಸುವ ಸಂಪ್ರದಾಯವಾದಿಗಳಿಗೆ ತಿಳುವಳಿಕೆಯ ಮಾತನ್ನು ಹೇಳುವುದರ ಜೊತೆಗೆ ಮನವರಿಕೆ ಮಾಡಲೇ ಬೇಕಾಗಿದೆ.

ಹಸ್ತಪ್ರತಿಗಳನ್ನು ಹೊಂದಿರುವರು ಹಾಗೂ ಸಂಗ್ರಹಕಾರರಲ್ಲಿ ಇಟ್ಟಲ್ಲಿಯೇ ಇಟ್ಟು ಇಲಿ, ಜೀರಲೆ, ಬೆಳ್ಳಿಮೀನು, ಗೆದ್ದಲು ಇತ್ಯಾದಿ ಜೀವಿಗಳು ಭಕ್ಷಿಸದಂತೆ ಎಚ್ಚಾರವಹಿಸಬೇಕೆಂದು ತಿಳಿಹೇಳಬೇಕು. ದುರಂತದ ಸಂಗತಿಯೆಂದರೆ ಪಂಡಿತರು, ವಿದ್ವಾಂಸರು ತಮ್ಮ ನಂತರ ಈ ವಿದ್ಯೆಯು ಬೇರೆಯವರಿಗೆ ಸಿಕ್ಕಿದರೆ ಅಪವಿತ್ರಗೊಳಿಸುವರೆಂದು ಅವುಗಳನ್ನು ಬಾವಿ, ನದಿ, ಸಮುದ್ರದ ನೀರಿನಲ್ಲಿಯೂ ಹಾಕುವುದು, ತೇಲುಬಿಡುವುದು ಮಾಡುತ್ತಾರೆ. ಇದನ್ನು ತಡೆಗಟ್ಟಿ ಸಂಗ್ರಹಾಲಯಕ್ಕೆ ಕೊಡಲು ಮತ್ತು ಆಸಕ್ತ ವಿದ್ಯಾರ್ಥಿಗಳಿಗೆ ಕಲಿಸಲು ಅದರ ಅರ್ಥ, ನಿರ್ವಹಣೆ ತಿಳಿಸಲು ಮನವಿಮಾಡಬೇಕಾಗುತ್ತದೆ, ಕೆಲವರು ಹಸ್ತಪ್ರತಿ ತೋರಿಸುವುದಿರಲ್ಲಿ ವಿವರಣೆಯನ್ನು ಹೇಳಲಿಕ್ಕೆ ಮನಸ್ಸು ಸಹ ಇಲ್ಲವೆಂಬಂತೆ ನಡೆದುಕೊಳ್ಳುತ್ತಾರೆ.

ಇನ್ನೂ ಇತರ ಕಾರಣಗಳಿಂದ ಹಾಳಾಗುತ್ತಿರುವ ಅನೇಕ ಹಸ್ತಪ್ರತಿ ಸಂಪತ್ತನು ರಕ್ಷಿಸಿಸದಿದ್ದರೆ, ಅದು ದೇಶದ ಆಸ್ತಿಯಾಗಿದೆ. ನಮ್ಮ ಪೂರ್ವಜರು ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿದ್ದನ್ನು. ಅದು ನಮಗೆ ಮತ್ತು ಮುಂದಿನ ಪೀಳಿಗೆಗೆ ಅದು ಮರೀಚಿಕೆಯಾಗುತ್ತದೆ. ಅಷ್ಟೇಅಲ್ಲದೆ ಜ್ಞಾನದಿಂದ ನಾವುಗಳೆಲ್ಲ ವಂಚಿತರಾಗುತ್ತೇವೆ. ಮೈಸೂರಿನಲ್ಲಿ ಈ ಕಲೆಯ ಪರಂಪರಾಗತವಾಗಿ ಬೆಳೆದು ಇತಿಹಾಸಕಾಲದಲ್ಲಿ ಚಿತ್ರಕಲೆಯ ಅನೇಕ ಪ್ರಕಾರಗಳ ಕಲೆಗಳಲ್ಲಿ ಹಸ್ತಪ್ರತಿಕಲೆಯು ತುಂಬ ಶ್ರೇಷ್ಠ ಹಾಗೂ ಧಾರ್ಮಿಕ ಹಿನ್ನೆಲೆಯನ್ನು ಪ್ರತಿನಿಧಿಸುವ ಕಲೆಯಾಗಿ ಮೌಲ್ಯವುಳ್ಳ ಚಿತ್ರಕಲೆಯನ್ನು ಒಳಗೊಂಡಂತದ್ದು ಆದರೆ ಇಂದು ಆಧುನಿಕ ತಂತ್ರಜ್ಞಾನ ಸಲಕರಣೆ ಮತ್ತು ಮಾಧ್ಯಮದಿಂದ ಈ ಕಲೆಯು ಮೂಲೆಗುಂಪಾಗಿದೆ. ಆದರೆ ರಚನೆಗೊಂಡ ಗ್ರಂಥಗಳು ನಮ್ಮೆಗೆಲ್ಲರಿಗೂ ಕಾಣಲೂ ಅಲ್ಪಸ್ವಲ್ಪ ಸಿಗುತ್ತಿದೆ. ಎಂದರೆ ತಪ್ಪಲ್ಲ ಈ ಅಧ್ಯಯನದಲ್ಲಿ ತೊಡಗಿದಾಗ ಅರಮನೆ, ಲೈಬ್ರರಿ, ಖಾಸಗಿ ಸಂಗ್ರಹಕಾರರಲ್ಲಿ, ಮ್ಯೂಸಿಯಂಗಳಲ್ಲಿಯೂ ಇರುವುದು ಕಂಡುಬರುತ್ತದೆ. ಕೆಲವು ಸಾಮಾನ್ಯ ಮನೆತನಗಳಲ್ಲಿ, ಶಾಸ್ತ್ರ, ಜ್ಯೋತಿಷ್ಯ, ತಂತ್ರ ಮಾಡುವವರ ಬಳಿಯು ಹಲವಾರು ಗ್ರಂಥಗಳ ಸಂಗ್ರಹವಾಗಿರುತ್ತದೆ.

ಈ ಜಿಲ್ಲೆಯಲ್ಲಿ ಈಗಿನ ಆಧುನಿಕ ಕಾಲದಲ್ಲಿಯೂ ಹಿಂದಿನ ಹಸ್ತಪ್ರತಿಕಲೆ ಕಂಡುಬರುವಾಗ ಅತಿಸ್ವಲ್ಪ ಪ್ರಮಾಣದಲ್ಲಿ ಆಧುನಿಕದಲ್ಲಿ ನಿರ್ಮಾಣಗೊಂಡ ಹಸ್ತಪ್ರತಿಗಳನ್ನು ಕೆಲವು ಮರಾಟಮಳಿಗೆಗಳಲ್ಲಿ ಕಂಡುಬರುತ್ತದೆ. ಅವುಗಳು ಸಹ ಹಿಂದಿನ ವಸ್ತುವಿಷಯವೆ ಒಳಗೊಂಡಂತವುಗಳ ಚಿತ್ರಿತಗೊಂಡಿದೆ.

ಆದರೆ ಕರ್ನಾಟಕದ ಕಲಾವಿದರು ಮರೆತಿದ್ದಾರೆ ಎಂದು ಅನ್ನಿಸುತ್ತದೆ. ರಾಜಸ್ಥಾನ, ಮಹಾರಾಷ್ಟ್ರ, ಮೂಲದ ಕೆಲವು ಹಸ್ತಪ್ರತಿ ಕಲಾವಿದರು ಇಲ್ಲಿ ಮರಾಟ ಹಾಗೂ ಪ್ರದರ್ಶನ ಕಲಿಕೆಯನ್ನು, ಕೇಂದ್ರ ಸರ್ಕಾರದ ಸಹಾಯ ಪ್ರೋತ್ಸಾಹದ ಅಡಿಯಲ್ಲಿ ಇಂದಿರಾಗಾಂಧಿ ವಸ್ತುಸಂಗ್ರಹಾಲಯ ವೆಲ್ಲಿಂಗ್‌ಟನ್ ಇರ್ವಿನ್ ರಸ್ತೆ ಮೈಸೂರು. ಈ ಸಂಸ್ಥೆಯು ಹಾಗಾಗ ಹಸ್ತಪ್ರತಿ ಕಲಾವಿದರನ್ನು ಕರೆತಂದು ಪ್ರಯೋಗ, ಪ್ರೋತ್ಸಾಹ, ಪ್ರತ್ಯಕ್ಷತೆ, ವಿಚಾರ ಸಂಕೀರ್ಣ ನಡೆಸುತ್ತಾರೆ. ಹಾಗೂ ಸಂಗ್ರಹಾಲಯ ಮತ್ತು ಮರಾಟ ಮಳಿಗೆಯನ್ನು ಹೊಂದಿರುವ ಕೆಲವು ಅಂಗಡಿಗಳಲ್ಲಿ ಸಹ ಆಧುನಿಕ ಹಸ್ತಪ್ರತಿಗಳು ದೊರೆಯುತ್ತವೆ.

ಖನಿಜ ಮತ್ತು ಸಸ್ಯಮೂಲದ ವರ್ಣವನ್ನು ಬಳಸಿದ್ದಾರೆ. ಹಾಗೂ ವರ್ಣಸಂಯೋಜನೆಯು ಹಲವು ನವೀನ ಮಾದರಿಯಲ್ಲಿದ್ದೂ ಉತ್ತಮ ಚಿತ್ರರಚನೆ ಮಾಡಿದ್ದಾರೆ. ಕೆಂಪು, ನೀಲಿ, ಹಸಿರು, ಕಪ್ಪು, ಹಳದಿ ವರ್ಣವೇ ಪ್ರಧಾನವಾಗಿದ್ದು ಚಿಕ್ಕ ಚಿಕ್ಕ ಮಾದರಿಯಲ್ಲಿ ಹಾಗೂ ದೊಡ್ಡ ಮಾದರಿಯಲ್ಲಿ ಚಿತ್ರಿಸಿದ್ದಾರೆ. ಅದು ರೇಖಾಚಿತ್ರಗಳು ಮತ್ತು ವರ್ಣಚಿತ್ರಗಳು ಇದರಲ್ಲಿ ಸಹ ಕಂಡುಬರುತ್ತದೆ. ಉದಾ: ರಾಮ, ಕೃಷ್ಣ, ಗಣೇಶ, ಅಲಂಕಾರಿಕ ಸುಂದರಿಯರ ವಿವಿಧ ಚಿತ್ರಗಳು, ಪುರಾಣದ ಕಥೆಗಳಗೊಳ್ಳಗೊಂಡ ಚಿತ್ರಗಳನ್ನು ಚಿತ್ರಿಸಿದ್ದಾರೆ. ಇಲ್ಲಿಯೂ ರೇಖೆಯೇ ಪ್ರಧಾನವಾಗಿದೆ. ರೇಖೆಯಿಂದಲೇ ಚಿತ್ರಿಸಿ ಸಮತಟ್ಟಾಗಿ ವರ್ಣಲೇಪಿಸಿ ಕೆಲವು ಹಸ್ತಪ್ರತಿಗೆ ವಾರ್ನಿಸ್ ಲೇಪಿಸಿರುತ್ತಾರೆ. ರೇಖಾಚಿತ್ರವನ್ನು ಹೊಂದಿರುವ ಹಸ್ತಪ್ರತಿಗಳು ಕೆಲವು ಬಟ್ಟೆಯನ್ನು ಬಳಸಿ ನಂತರ ತಾಳೆಗರಿಯನ್ನು ಅಂಟಿಸಿ ಆ ನಂತರ ಕಂಠದಿಂದ ಚಿತ್ರಿಸಿ, ಮಸಿಯನ್ನು ತುಂಬಿ ಚಿತ್ರಿಸಿದ್ದಾರೆ. ಕೆಲವು ದೊಡ್ಡದಾಗಿದ್ದು ಹಲವು ನಮೂನೆಗಳಲ್ಲಿ ಇರುವುದು ಕಂಡುಬರುತ್ತದೆ. ಉದ್ದವಾಗಿ ಅಡ್ಡವಾಗಿ ಜೊತೆಗೆ ಅದಕ್ಕೆ ಚೌಕ್ಕಟ್ಟನ್ನು ಸಹ ಹಾಕಿರುವ ಹಸ್ತಪ್ರತಿ ಕಾಣಬರುತ್ತವೆ.

ಈ ಜಿಲ್ಲೆಯ ಹಸ್ತಪ್ರತಿಯನ್ನು ತೌಲನಿಕವಾಗಿ ನೋಡಿದಾಗ ಇಲ್ಲಿಯೇ ಹಲವು ವೈವಿಧ್ಯತೆಯಿಂದ ಕೂಡಿದ, ವಿವಿಧ ಬಗ್ಗೆಯ ಹಸ್ತಪ್ರತಿಗಳು ಕಾಣಬರುತ್ತದೆ. ಒಟ್ಟು ಹಸ್ತಪ್ರತಿಗಳನ್ನು ನೋಡಿದಾಗ ತಾಳೆಗರಿಯ ಮೇಲೆ ರೇಖಾಚಿತ್ರದ ಹಸ್ತಪ್ರತಿ, ಕಾಗದ ಮೇಲಿನ ವರ್ಣಚಿತ್ರಗಳ ಹಸ್ತಪ್ರತಿಯೂ ಮತ್ತು ಆಧುನಿಕ ಕಾಲದಲ್ಲಿ ತಾಳೆಗರಿಯ ಮೇಲೆ ವರ್ಣಚಿತ್ರಗಳು ಇಲ್ಲಿ ಅನೇಕ ಮಳಿಗೆಯಲ್ಲಿ ಕಂಡುಬರುತ್ತದೆ ಎರಡನೆಯದಾಗಿ ಕಾಗದ ಮೇಲೆ ವರ್ಣಚಿತ್ರಗಳು ಹಾಗೂ ಫಲಕಗಳ ಮೇಲೆ ರಚಿಸಿರುವ ವರ್ಣಚಿತ್ರಗಳು ಐತಿಹಾಸಿಕ ಕಾಲದಲ್ಲಿ ಇಲ್ಲಿರುವುದು ಕಂಡುಬರುತ್ತದೆ.

ಹಲವು ಒಂದೇ ಕಾಲಮಾನದಲ್ಲಿ ರಚನೆಯಾಗಿದ್ದು. ಅದು ೧೭-೧೮ನೇ ಶತಮಾನದಿಂದ ಇತ್ತೀಚೆಗೆ ಬೇರೆ ಬೇರೆ ರೀತಿಯಲ್ಲಿ ನಿರ್ಮಾಣವಾಗಿದೆ. ಇಲ್ಲಿಯೇ ಉತ್ತಮ ತೌಲನಿಕತೆಗೆ ಒಂದು ಉತ್ತಮ ಉದಾಹರಣೆಯಾಗಿ ಇವು ನಿಲ್ಲುತ್ತದೆ ಆದರೆ ಪ್ರಾರಂಭದಲ್ಲಿ ತಾಳೆಗರಿಯಲ್ಲಿ ಮಾತ್ರ ಲಿಪಿ ಹಾಗೂ ರೇಖಾಚಿತ್ರಗಳಿಂದ ರಚನೆಯಾಗಿದ್ದು ನಂತರದ ಸಂದರ್ಭದಲ್ಲಿ ಕಾಗದ, ಚರ್ಮ, ಹಾಳೆಯಲ್ಲಿ ಚಿತ್ರಿಸಿದ್ದಾರೆ. ಒಟ್ಟಾರೆಯಾಗಿ ಒಂದೇ ದೃಷ್ಟಿಯಿಂದ ನೋಡಿದಾಗ ರೇಖಾಚಿತ್ರ, ವರ್ಣಚಿತ್ರಗಳು, ರಚನೆಯಾಗಿದೆ.

ವರ್ಣಚಿತ್ರಗಳನ್ನು ನೋಡಿದಾಗ ಕಾಗದದಲ್ಲಿ ಅಲಂಕರಿಸುವ ವಿಧಾನ ಚಿತ್ರಿಸಿರುವ ಚಿತ್ರಗಳು ಒಂದಕ್ಕೊಂದು ಸಾಮ್ಯತೆ ಇದ್ದು ಅದರಲ್ಲಿ ರೇಖೆ, ಆಕೃತಿಗಳ ಶೈಲಿಗಳಲ್ಲಿ ಒಂದು ಚೂರು ವ್ಯತ್ಯಾಸ, ವೈವಿಧ್ಯತೆ ಕಂಡುಬರುತ್ತದೆ. ಏಕೆಂದರೆ ಬೇರೆ ಬೇರೆ ಕಲಾವಿದರುಗಳು ಚಿತ್ರ ಹಾಗೂ ಲಿಪಿಗಳಿಂದಲೇ ಹಸ್ತಪ್ರತಿ ರಚಿಸಿರುತ್ತಾರೆ. ಮತ್ತು ಒಂದು ಮುಖ್ಯ ವಿಷಯವೆಂದರೆ ಎಲ್ಲಾ ಧಾರ್ಮಿಕ ಹಿನ್ನೆಲೆಯ ಚಿತ್ರಗಳೂ ಮತ್ತು ಜನಪದ ರೇಖಾಚಿತ್ರವು ಸಹ ಮುಖ್ಯವಾಗಿ ಜೊತೆಗೆ ಸೇರಿದೆ ಮತ್ತು ಸಂಪ್ರದಾಯ ಒಳಗೊಂಡಂತಹ ಚಿತ್ರಗಳಾಗಿದೆ. ಆಧುನಿಕ ಕಾಲದಲ್ಲಿಯೂ ಈ ಭಾಗದಲ್ಲಿ ಕಂಡುಬರುವ ಹಸ್ತಪ್ರತಿಗಳಲ್ಲಿ

ಹೆಚ್ಚಾಗಿ ಧಾರ್ಮಿಕ ಹಿನ್ನೆಲೆಯ ರೇಖಾ ಮತ್ತು ವರ್ಣಚಿತ್ರಗಳು ಕಂಡುಬರುತ್ತದೆ ಇದರಲ್ಲಿ ತೌಲನಿಕವಾಗಿ ರೇಖೆ, ವರ್ಣಚಿತ್ರಗಳು, ಲಿಪಿ ಮತ್ತು ನಕ್ಷಾಚಿತ್ರಗಳನ್ನು ಮುಖ್ಯವಾಗಿ ತುಲನೆಗೆ ತೆಗೆದುಕೊಳ್ಳಬಹುದು.

ಒಂದೇ ಕಾಲಮಾನದಲ್ಲಿ ಇಷ್ಟೊಂದು ವರ್ಣಚಿತ್ರಗಳ ಹಸ್ತಪ್ರತಿಗಳು ರಚನೆಯಾಗಲು ಇಲ್ಲಿನ ರಾಜರ ಆಸಕ್ತಿಯೇ ಮುಖ್ಯವಾಗಿದೆ. ಕಲಾವಿದರಿಗೆ ಆಶ್ರಯ, ಪ್ರೋತ್ಸಾಹವೇ ಬಹುಮುಖ್ಯ ಕಾರಣವಾಗಿದೆ. ಇಲ್ಲಿನ ಅರಸರು ಹಸ್ತಪ್ರತಿ ಚಿತ್ರಕಲೆಯಂತೆ ವಿಭಿನ್ನತೆಯಿಂದ ಕೂಡಿದ ಗಂಜೀಫಾ ಚಿತ್ರಕಲೆಗೂ ಪ್ರೋತ್ಸಾಹ ನೀಡಿದ್ದಾರೆ. ಅದೂ ಸಹ ಪ್ರಸಿದ್ಧ ಚಿತ್ರಕಲೆಯಲ್ಲಿ ಒಂದಾಗಿದ್ದೂ ಸೂಕ್ಷ್ಮತೆಯೊಳಗೊಂಡಂತಹ ಚಿತ್ರಕಲೆಯಾಗಿದೆ. ಇದರಲ್ಲಿ ಕಾಗದ, ಬಟ್ಟೆ, ರಟ್ಟು, ಚರ್ಮಗಳನ್ನು ಮಾಧ್ಯಮವಾನ್ನಾಗಿಸಿಕೊಂಡು ಈ ಚಿತ್ರಕಲೆಯನ್ನು ರಚಿಸುತ್ತಿದ್ದರು. ಹಸ್ತಪ್ರತಿ ಕಾಲಮಾನದಲ್ಲಿ ಬೆಳೆದ ಚಿತ್ರಕಲೆಯಾಗಿದೆ. ಈ ಕಲೆಯಾ ಅರಸರು ಅಚ್ಚುಮೆಚ್ಚಿನ ಕಲೆಗಳಲ್ಲಿ ಒಂದು ಎನ್ನಬಹುದಾಗಿದೆ.

~~~~~~~~~~oo~~~~~~~~~~~
~~~~~~~~~~



ತಾಳೆ ವೃಕ್ಷಗಳು



ಹಸ್ತ ಪ್ರತಿಗಳ ರಚನೆ ಮತ್ತು ಸಂರಕ್ಷಣಾ ಸಲಕರಣೆಗಳು



೧



೨

ವೃಷಭೇಂದ್ರ ವಿಲಾಸ

ಸೌಗಂಧಿಕ ಪರಿಣಯದ ಚಿತ್ರ



೧



೨

ಹಸ್ತಪ್ರತಿ ರಕ್ಷಣಹಲಗೆಮೇಲಿನ ಚಿತ್ರಗಳು



೧



೨

ಅಲಂಕಾರಿಕ ಮತ್ತು ಬರವಣಿಗೆಚಿತ್ರಗಳು





ಅಶ್ವಪರೀಕ್ಷೆಯ ಚಿತ್ರಗಳು



೧



೨



೩

ಉದ್ಧರಣೆಪಟಲ ಚಿತ್ರಗಳು

ಶಿವನಿಧಿಯ ಚಿತ್ರಗಳು



೧



೨

ವಿಷ್ಣುನಿಧಿಯ ಚಿತ್ರಗಳು




೧



೨

ಶಕ್ತಿನಿಧಿಯ ಚಿತ್ರಗಳು



೧



೨

ಅಧ್ಯಾಯ : ಐದು

ಮೈಸೂರು ಜಿಲ್ಲೆಯ ಗಂಜೀಫಾ ಚಿತ್ರಕಲೆ.

ಅಧ್ಯಾಯ: ಐದು

ಮೈಸೂರು ಜಿಲ್ಲೆಯ ಗಂಜೀಫಾ ಚಿತ್ರಕಲೆ

ಕಲೆಯು ಮಾನವನ ಭಾವನೆಯಲ್ಲಿ ಬೆರೆತು ಅಭಿವ್ಯಕ್ತಿಯಾಗಿ ಒಂದು ಮಾಧ್ಯಮದ ರೂಪದಲ್ಲಿ ಪ್ರಕಟಗೊಂಡು ತೀರದ ದಾಹವೇ ಸೃಜನಶೀಲತೆಗೆ ದಾರಿಮಾಡಿಕೊಡುತ್ತದೆ. ಅದು ಒಂದು ಚೌಕ್ಕಟ್ಟಿಗೆ ಬದ್ಧವಾದಾಗ ಶಿಷ್ಟಪದದಲ್ಲಿ ಗುರುತಿಸಿಕೊಳ್ಳುತ್ತದೆ. ಶಿಷ್ಟಪದದಲ್ಲಿ ಹಲವಾರು ಪ್ರಕಾರಗಳಲ್ಲಿ ಇರುತ್ತದೆ. ಈ ಜಿಲ್ಲೆಯಲ್ಲಿ ರಾಜಾಶ್ರಯದಲ್ಲಿ ಶಿಷ್ಟಪದ ಚಿತ್ರಕಲೆಯು ಅಮೋಘವಾಗಿ ಬೆಳೆದಿದೆ. ಇಲ್ಲಿನ ರಾಜಮಹಾರಾಜರು ಆಸಕ್ತಿವಹಿಸಿ, ಪ್ರೋತ್ಸಾಹಿಸಿ ಕಲಾವಿದರಿಗೆ ಆಶ್ರಯ ನೀಡಿ ಚಿತ್ರಕಲೆಯನ್ನು ಬೆಳೆಸಿದ್ದಾರೆ. ಮೈಸೂರು ಭಾಗದಲ್ಲಿ ಕಲೆಯನ್ನು ಉಳಿಸಲು ತೆಗೆದುಕೊಂಡ ಕ್ರಮವು ಜಾಗೃತಿಯ ಅರಿವಿನಿಂದ ನಮ್ಮ ಕಲಾಸಂಪತ್ತು ನೋಡುವ ಭಾಗ್ಯ ಸಿಕ್ಕಿದೆ. ಇತಿಹಾಸ ಕಾಲದಲ್ಲಿ ಎಲ್ಲಾ ರಾಜವಂಶಸ್ಥರು ಸಂಪ್ರದಾಯ ಕಲೆಯನ್ನು ಬೆಳೆಸಿದ್ದಾರೆ. ಆದರೆ ಅದನ್ನು ಉಳಿಸುವ ಪ್ರಯತ್ನ ಸರಿಯಾಗಿ ಕೈಗೊಂಡಿಲ್ಲ, ಅದರಲ್ಲಿ ಮೈಸೂರಿನ ಒಡೆಯರು ಇದನ್ನು ಸರಿಯಾಗಿ ಪಾಲಿಸಿದ್ದಾರೆ ಎನ್ನಬಹುದು.

ಮೈಸೂರು ಸಾಂಪ್ರದಾಯಿಕ ಚಿತ್ರಕಲೆಯ ವ್ಯಾಪ್ತಿಯಲ್ಲಿ ಬರುವ ಮತ್ತೊಂದು ಕಲೆಯೇ ಗಂಜೀಫಾ ಚಿತ್ರಕಲೆ. ಈ ಚಿತ್ರಕಲೆಯು ಸ್ಥಳಿಯ ವಿಶೇಷತೆ ಒಳಗೊಂಡ ಸಾಂಸ್ಕೃತಿಕ ಧಾರ್ಮಿಕ ಹಿನ್ನೆಲೆಯಲ್ಲಿ ಮೈಸೂರು ಶೈಲಿಯ ರಚನೆಯ ಅತ್ಯಾಕರ್ಷಕ ಚಿತ್ರಕಲೆ ಅಂದಿನಿಂದ ಪರಂಪರೆಯಾಗಿ ಬೆಳೆದಿದೆ.

೧೫ನೇ ಶತಮಾನದಲ್ಲಿ ರಾಜಒಡೆಯರು ಕಲೆಗೆ ಪ್ರೋತ್ಸಾಹ ನೀಡುವಾಗ ಈ ಚಿತ್ರಕಲಾ ಮನೆತನದವರಿಗೆ ಆಶ್ರಯ ನೀಡಿದ್ದರು. ೧೭ನೇ ಶತಮಾನದಲ್ಲಿ ಪ್ರಬುದ್ದಮಾನಕ್ಕೆ ಬಂದಿತ್ತು. ೨೦-೨೧ನೇ ಶತಮಾನದಲ್ಲಿ ಇಸ್ಪೀಟು ಆಟವಾಗಿ ರೂಪುಗೊಂಡಿದೆ ಎನ್ನಬಹುದು. ಮೂಲತಃ ಇದು ಹಿಂದೂ ಆಟದ ಚದುರಂಗದಂತೆ ಬುದ್ದಿಯನ್ನು ಚುರುಕಾಗಿ ಮಾಡಲು ಒಳಾಂಗಣ ಆಟದಲ್ಲಿ ಒಂದಾಗಿತ್ತು. ಇದಕ್ಕೆ ಜಾಣರಆಟ, ಒಳಾಂಗಣಆಟ, ದೇವರಆಟ, ಎಲೆಗಳ ಆಟ, ಇದಕ್ಕೆ ಸಂಸ್ಕೃತದಲ್ಲಿ ಕ್ರೀಡಾಪತ್ರ ಎಂದು ಈ ಮೈಸೂರು ಭಾಗದಲ್ಲಿ ಕನ್ನಡದಲ್ಲಿ ದೇವರ ಆಟ, ಈ ಎಲೆಗಳ ಆಟಕ್ಕೆ ಗಂಜೀಫಾ ಎಂಬ ಪರ್ಶಿಯನ್ ಶಬ್ದದ ನಾಮಕರಣವಾದದ್ದು ಮೊಘಲರ ಕಾಲದಲ್ಲಿ ಮುಂದೆ ಸಮುದ್ರಯಾನದ ಮೂಲಕ ಅರಬ್ಬಿ ದೇಶದ ಮೂಲಕ ಫ್ರಾನ್ಸ್‌ಗೆ ಹೋಗಿ ಸುಮಾರು ಮೂನ್ನೂರು ವರ್ಷಗಳ ಹಿಂದೆ ಇಸ್ಪೀಟು ಆಟವಾಗಿ ರೂಪಾಂತರಗೊಂಡು ಮರಳಿ ಭಾರತಕ್ಕೆ ಬಂದಿತು. ಹಾಗಾಗಿ ಸ್ವಾತಂತ್ರ್ಯ ನಂತರ ಗಂಜೀಫಾ ಆಟವೇ

ಅಳಿದು ಹೋಯಿತ್ತು. ಈಗ ಸಂಗ್ರಹಾಲಯ, ಚಿತ್ರಶಾಲೆ, ಅರಮನೆ, ಸಂಗ್ರಹಕಾರರಲ್ಲಿ ಮಾತ್ರ ಲಭ್ಯವಿದೆ. ಮೊದಲು ಕಲೆ ಮತ್ತು ಆಟವಾಗಿದ್ದು ಇತ್ತೀಚೆಗೆ ಕಲೆಯಾಗಿ ಮಾತ್ರ ಉಳಿದುಕೊಂಡಿದೆ.[೧]

ಗಂಜೀಫಾ ಚಿತ್ರಕಲೆಯ ಪ್ರಾಚೀನ ಯೂರೋಪಿನಲ್ಲಿ ೬೦೦೦ ವರ್ಷಗಳು, ಚೀನಾ ಕ್ರಿ.ಶ. ೯೦೦, ಇಟಲಿಯಲ್ಲಿ ಬ್ಯಾರೋ ಎಂದು, ೧೪ನೇ ಶತಮಾನದಲ್ಲಿ ೧೪ನೇ ಲೂಯಿಸ್ ಭೂಗೋಳ ಮತ್ತು ಇತಿಹಾಸವನ್ನು ಗಂಜೀಫಾ ಎಲೆಗಳ ಮೂಲಕ ಕಲಿತುಕೊಂಡನಂತೆ ೧೬ನೇ ಶತಮಾನದಲ್ಲಿ ಪಾದ್ರಿಗಳು ಈ ಎಲೆಗಳನ್ನು ಲೇಖನದ ಮಾಧ್ಯಮವಾಗಿ ೧೬ನೇ ಶತಮಾನದಲ್ಲಿ ಕೆನಡಾ ದೇಶದಲ್ಲಿ ಕಾಗದ ಎಲೆಗಳನ್ನು ನಾಣ್ಯದಂತೆ ಉಪಯೋಗಿಸಿದೆ. ೧೭ನೇ ಶತಮಾನದಲ್ಲಿ ಪೆನ್ನಿಲೀನಿಯಾ ವಿಶ್ವವಿದ್ಯಾಲಯದ ಪ್ರವೇಶಪತ್ರದ ರೂಪದಲ್ಲಿ ಬಳಸಿದೆ. ಅಮೇರಿಕಾದಲ್ಲಿ ಪ್ರೇಂಚ್ ಕ್ರಾಂತಿಯ ವೇಳೆಗೆ ರೇಶನ್ ಕಾರ್ಡ ರೂಪದಲ್ಲಿ ಇದು ಮುದ್ರಣಯಂತ್ರ ಬಂದ ನಂತರ ಹೊಸಬಗೆಯಲ್ಲಿ ಕಾಣಿಸಿಕೊಂಡಿತ್ತು. ೧೯೩೪ರಿಂದ ಪ್ಲಾಸ್ಟಿಕ್ ಆರಂಭವಾಗಿ ಗಂಜೀಫಾ ಇಸ್ಪಿಟ್ ಹಾಗಿ ರೂಪಾಂತರವಾಯಿತು.[೨]

ಭಾರತೀಯ ಕಲೆಗಳಲ್ಲಿ ಅತ್ಯಂತ ವಿಶಿಷ್ಟವಾದುದು ಚಿಕಣಿಚಿತ್ರಕಲೆ, ಅದಕ್ಕಿಂತ ಸೂಕ್ಷ್ಮವಾದುದು ಗಂಜೀಫಾ ಚಿತ್ರಕಲೆ, ಇಡಿ ಭಾರತೀಯ ಸಂಸ್ಕೃತಿಯೇ ಈ ಕಲೆಯಲ್ಲಿ ಅರಳಿದೆ. ವೈದಿಕ ಕಾಲದ ಶ್ರುತಿಸ್ಮೃತಿ ಮತ್ತು ಸಮಗ್ರ ಸಾಹಿತ್ಯವೂ ಇದರಲ್ಲಿ ಸಂಗಮಿಸಿದೆ. ಗಂಜೀಫಾ ಎಂಬ ಶಬ್ದವು ಪರ್ಷಿಯನ್‌ನಿಂದ ಬಂದಿದ್ದಾಗಿದೆ. ಗಂಜ್ ಎಂದರೆ ಖಜಾನೆ, ನಿಕ್ಷೇಪ, ನಿಧಿ, ದ್ರವ್ಯ ಮೊದಲಾದ ಅರ್ಥಗಳು ಬರುತ್ತವೆ. ಹಣವನ್ನು ಪಣವನ್ನಾಗಿ ಇಟ್ಟು ಆಡುವುದೇ ಗಂಜೀಫಾ. ಮೊಘಲರ ಕಾಲದಲ್ಲಿ ಈ ಆಟವು ಹೆಚ್ಚಿನ ಆಯಾಮ ಬಂತು ಹಿಂದೂ, ಮುಸ್ಲಿಂ ಕಲೆಯ ಪ್ರಭಾವವು ಸೇರಿ ಪ್ರಸಿದ್ದಿ ಪಡೆಯಿತು. ಬಾದಷಹರು, ವಝಿರರು, ಶ್ರೀಮಂತರು, ಅರಸರು, ಜಮೀನ್ದಾರರು ಮತ್ತು ಸಾಮಾನ್ಯರು ಸಹ ಈ ಆಟವನ್ನು ವಿನೋದವಾಗಿ ವೇಳೆ ಕಳೆಯಲು ಆಟ ಆಡುತ್ತಿದ್ದರು.[೩]

ಭಾರತೀಯ ಮನಸ್ಸು, ವಸ್ತು ಹಾಗೂ ಪರ್ಷಿಯನ್ ಕಲಾತಂತ್ರ ಚಿಕಣಿ ಚಿತ್ರಕಲೆಯ ನೈಪುಣ್ಯತೆಗೆ ಮಾದರಿಯಾಗಿ ಗಂಜೀಫಾ ಎಲೆಗಳಲ್ಲಿ ಬೆಸೆಯಿತು. ದೇವರು, ಪುರಾಣ, ಶಿವನ ಡಮರು, ವಿಷ್ಣುವಿನ ಶಂಖ, ಚಕ್ರ, ಅಷ್ಟದಿಕ್ಪಾಲಕರು, ಇಂದ್ರ, ಯಮ. ವರುಣ, ಕುಬೇರ, ಅಗ್ನಿ, ನಿರುತಿ, ವಾಯು, ಸೋಮ, ಸಂಖ್ಯಾಶಾಸ್ತ್ರ, ದಶಾವಾತಾರ ಕಂಡುಬರುತ್ತದೆ. ನಂತರ ಮೊಘಲರ ಕಾಲದಲ್ಲಿ ಸೈನ್ಯ, ವಾಹನ, ಪಶುಪಕ್ಷಿಗಳು, ನಗ್ನಸುಂದರಿಯರ ಚಿತ್ರಗಳು ಅಲಂಕೃತವಾಗುತಿತ್ತು. ಮೊದಲು ಕೇವಲ ದುಂಡು ಆಕಾರದಲ್ಲಿದ್ದ ಗಂಜೀಫಾ ಎಲೆಗಳು ಚೌಕ, ಆಯಾತ, ಅಂಡಾಕಾರಗಳಲ್ಲಿಯೂ ಬಂದವು. ಎಲೆಗಳ ಕಟ್ಟನ್ನು ತಯಾರಿಸಿ ಆ ಪಟ್ಟಿಕೆಗಳ ಮೇಲೂ ಚಿತ್ರಕಲೆ ರಚನೆ ಮಾಡಿದ್ದಾರೆ. ಗಂಜೀಫಾ ಎಲೆಗಳನ್ನು ಕಾಣಿಕೆಯಾಗಿ, ಉಡುಗೊರೆಯಾಗಿ ಕೊಡುವ ಪದ್ದತಿಯೂ ಸಹ ಚಲಾವಣೆಯಲ್ಲಿ ಇತ್ತು ಅಂದು.

ಗಂಜೀಫಾ ಚಿತ್ರಕಲೆಯನ್ನು ಹಸ್ತಿದಂತ, ಎಲುಬು, ಮುತ್ತಿನಚಿಪ್ಪು, ಆಮೆಯಚಿಪ್ಪು, ಗಂಧ ಮರಗಳಿಂದ, ಗಂಜೀಫ ಚಿತ್ರಕಲೆಯನ್ನು ತಯಾರಿಸುತ್ತಿದ್ದರು.[೪] ನಂತರದಲ್ಲಿ ೧೪ನೇ ಶತಮಾನದಲ್ಲಿಪರ್ಶಿಯಾದಿಂದ ಕೈಯಲ್ಲಿ ಮಾಡಿದ ಕಾಗದವನ್ನು ಅಮದು ಮಾಡಿಸಿ, ಅದರ ಮೇಲೆ ಗಂಜೀಫಾ ಚಿತ್ರಕಲೆ ಚಿತ್ರಿಸಿದ್ದರು. ಕಾಗದದಲ್ಲಿ ಬಂದಾಗ ಜನಸಾಮಾನ್ಯರು ಮೆಚ್ಚುಗೆಗೆ ಪಾತ್ರವಾಗಿ ಈ ಕಲೆಯು ಬೆಳೆಯಲು ಭಾರಿ ಸಹಕಾರಿಯಾಯಿತು.

೧, ಡಾ.ಎಸ್.ಸಿ. ಪಾಟೀಲ, ಕರ್ನಾಟಕ ಜನಪದಕಲೆ ಪು.ಸಂ_೧೫೬
೨, ಎಂ.ಎಲ್.ಶಿವಶಂಕರ ಗಂಜೀಫಾ, ಪು.ಸಂ_೯
೩, ೪, ಕರೀಗೌಡ ಬೀಚನಹಳ್ಳಿ, ಕರಕುಶಲಕಲೆಗಳು, ಪು.ಸಂ-೧೩೪,-೧೩೫

ಮೊಘಲರ ಸ್ನೇಹಸಂಪರ್ಕದಿಂದ ಕಾಗದ, ರಟ್ಟು ಈ ನಾಡಿಗೆ ಬಂದು ಇಲ್ಲಿಯೂ ಈ ಕಲೆಯು ಬೆಳೆಯಲೂ ಉತ್ತಮ ತಳಪಾಯ ನಿರ್ಮಾಣ ಮಾಡಿದರು ಇಲ್ಲಿನ ಅರಸರಾಗಿದ್ದಾರೆ.
ಗಂಜೀಫಾ ಚಿತ್ರಗಳಲ್ಲಿ ಎರಡು ರೀತಿಯಲ್ಲಿ ಗುರುತಿಸುತ್ತಾರೆ. ಮೊದಲನೆಯದಾಗಿ ಧಾರ್ಮಿಕ ಗಂಜೀಫಾ ಚಿತ್ರಕಲೆ, ಎರಡನೆದಾಗಿ ಧಾರ್ಮಿಕೇತರ ಗಂಜೀಫಾ ಚಿತ್ರಕಲೆ.[೫] ಧಾರ್ಮಿಕ ಗಂಜೀಫಾ ಚಿತ್ರಕಲೆಯೂ ಹೆಚ್ಚಾಗಿ ದೇವರಸಾನ್ನಿಧ್ಯದಲ್ಲಿ ಆಟ ನಡೆಯುತ್ತಿತ್ತು. ಆಧ್ಯಾತ್ಮಿಕದ ಮೆಲಕುನ್ನು ಹಾಕುತ್ತಿದ್ದಂತೆ ಮತ್ತು ಭಕ್ತಿಭಾವ, ದೈವಭಾವ, ಭಕ್ತಿ ಹುಟ್ಟುವಂತೆ ಮಾಡುತ್ತಿತ್ತು. ರಾಮಾಯಾಣ ಮಹಾಭಾರತ, ಹೆಚ್ಚಾಗಿ ದೈವಮೂಲದ ಚಿತ್ರಗಳು ಇಲ್ಲಿ ಇರುತ್ತಿದ್ದವು. ಧಾರ್ಮಿಕೇತರ ಗಂಜೀಫಾಚಿತ್ರ ಇದರಲ್ಲಿ ದೈವಧರ್ಮದ ಜೊತೆಗೆ ಗಿಡ, ಮರ, ಹೂ, ಬಳ್ಳಿ ಹಾಗು ಪಕ್ಷಿ, ಕತ್ತಿ, ಕೊಡಲಿ, ಬಿಲ್ಲು, ಬಾಣ, ಧ್ವಜ, ಮತ್ತು ಮೀನು, ಸಿಂಹ, ಹುಲಿ, ಪಶುಗಳು, ಇತ್ಯಾದಿ ಚಿತ್ರಗಳು ಕಂಡುಬರುತ್ತವೆ.[೫] ಈ ಭಾಗದ ಆಟದ ಎಲೆಗಳನ್ನು **ಛದ್** ಎಂಬ ಹೆಸರಿನಿಂಲೂ ಕರೆಯುತ್ತಾರೆ. ಚಡ ಅಥವಾ ಛದ್ ಎಂದರೆ ಎಲೆ ಎಂದು ಆಗುತ್ತದೆ.[೬]

ಗಂಜೀಫಾ ಅಥವಾ ಗಂಜೀಪು ಎಂಬ ಹೆಸರು ಇರುವುದು ತಿಳಿದುಬರುತ್ತದೆ. ಮೈಸೂರುನಲ್ಲಿ ೧೭ನೇ ಶತಮಾನದಲ್ಲಿ ಮೈಸೂರು ಶೈಲಿಯ ಗಂಜೀಫಾ ಕಲೆ ಮತ್ತು ಆಟಗಳನ್ನು ಉಳಿಸಿ ಬೆಳೆಸಿದವರು ಮೂರನೇಕೃಷ್ಣರಾಜೇಂದ್ರ ಒಡೆಯರು, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು. ಕನ್ನಡದ ಭೋಜರಾಜ ಎಂದೇ ಹೆಸರಾದ ಮುವ್ಮಡಿಯರು ಈ ಕಲೆಗೆ ಮಿಕ್ಕ ಕಲೆಗಳಂತೆ ಸಮಾನತೆ ತಂದು ಕೊಟ್ಟರು. ಸಾಹಿತ್ಯ, ಸಂಗೀತ ಚಿತ್ರಕಲೆ, ನೃತ್ಯ, ಶಿಲ್ಪ, ಕ್ರೀಡೆ ಎಲ್ಲವು ಮೈಸೂರಿನ ಶೈಲಿಯಲ್ಲಿ ವಿಜೃಂಭಿಸುವಂತೆ ಗಂಜೀಫಾ ಚಿತ್ರಕಲೆಯನ್ನು ಎತ್ತರಕ್ಕೆ ಬೆಳೆಸಿದ್ದರು. ಈ ಕಲೆಗೆ ತಳಪಾಯವಾದಂತಹ ಅಜಂತ ಭಿತ್ತಿಚಿತ್ರಕಲೆ ಹಾಗೂ ಚಿತ್ರಕಲೆಯ ಶಾಸ್ತ್ರಗ್ರಂಥಗಳಾದ ಚಿತ್ರಸೂತ್ರ, ಕುತ್ತನಿಮಿತ, ವಿಷ್ಣುಧರ್ಮೋತರ, ಅಭಿಲಾಷಿತಾರ್ಥ ಚಿಂತಾಮಣಿ, ಶಿಲ್ಪರತ್ನ, ತಿಲಕಮಂಜರಿ ಮೊದಲಾದ ಗ್ರಂಥಗಳಲ್ಲಿ ಚಿತ್ರಕಲೆಯ ಮಹತ್ವವನ್ನು ಸಾರುವುದರ ಜೊತೆಗೆ ಅದರಲ್ಲಿ ೬೪ ಕಲೆಗಳನ್ನು ವಿಂಗಡಿಸಿ ವಿವರಿಸಿದ್ದಾರೆ. ಅದರೊಳಗೆ ಗಂಜೀಫಾ ಕಲೆಯು ಅಡಗಿದೆ. ಗಂಜೀಫಾವು ಸೂಕ್ಷ್ಮಕುಸರಿ ಕೆಲಸ ಮತ್ತು ಸಂಖ್ಯಾಶಾಸ್ತ್ರವನ್ನು ಆಧರಿಸಿದೆ.

ಆಗಿನ ಕಾಲದಲ್ಲಿ ಮೈಸೂರಿನ ಸುತ್ತಮುತ್ತ ಕಂಡುಬರುವ ಶ್ರೀರಂಗಪಟ್ಟಣ, ನಾಗಮಂಗಲ, ನಂಜನಗೂಡು, ಚನ್ನಪಟ್ಟಣ ಮೊದಲಾದ ಕಡೆ ಈ ಕಲೆಯು ಬೆಳೆದಿತ್ತು.

ಮೈಸೂರಿನ ಭಾಗದಲ್ಲಿ ಗಂಜೀಫಾ ಆಟದ ಹೆಸರುಗಳು ಮತ್ತು ಮುಮ್ಮಡಿ ಅವರು ರಚಿಸಿದ ಕೆಲವು ಆಟಗಳು

೧, ದಶಾವತಾರ ಗಂಜೀಫಾ ೨,ರಾಮಾಯಣ ಗಂಜೀಫಾ ೩, ಮೂಲಾಕ್ಷರ ಗಂಜೀಫಾ ೪, ರಾಶಿಕೂಟಗಳ ಗಂಜೀಫಾ, ೫, ಭಾಗವತಾ ಗಂಜೀಫಾ ಇತ್ಯಾಧಿ. ಮುಮ್ಮಡಿಯವರು ಚಾಮುಂಡೇಶ್ವರಿ, ಪಂಚಪಾಂಡವ ಜಗನ್ಮೋಹನ, ನವಗ್ರಹ, ನಮರತ್ನ, ನವೀನರಾಮ, ಸರ್ವಮಂಗಳಾ, ಸಾಮ್ರಾಜ್ಯ ಸದ್ಯೋಜಾತ, ಅಷ್ಟದಿಕ್ಪಾಲ, ದೇವಿ ದಶಾವತಾರ, ಅಷ್ಟೇಶ್ವರ, ಮೋಹಿನಿ, ಬಾಲಕೃಷ್ಣ ಕಾಮದೇವ, ಮನ್ಮಥ, ಮನೋಹರ ಈ ತರಹದ ಗಂಜೀಫಾ ಆಟವನ್ನು ರಚಿಸಿ ಚಿತ್ರಗಳನ್ನು ಸಹ ಕಲಾವಿದರಿಂದ ರಚನೆ ಮಾಡಿಸಿದ್ದರು. ೧೯ನೇ ಶತಮಾನದಲ್ಲಿ ಅರಗಿನ ಮತ್ತು ಮೆರಗು ಕೊಟ್ಟಂತಹ ಎಲೆಗಳು ಕಂಡುಬರುತ್ತದೆ.[೭]

೫, ಡಾ.ಎಸ್.ಸಿ. ಪಾಟೀಲ, ಕರ್ನಾಟಕ ಜನಪದಕಲೆ ಪು.ಸಂ_೧೬೦

೬ ಸಂತೋಷಕುಮಾರ ಗುಲ್ವಾಡಿ, ಗಂಜೀಫಾಕಲೆ,ಪು.ಸಂ_೨೩

೭ ಎಂ.ಎಲ್.ಶಿವಶಂಕರ, ಗಂಜೀಫಾ, ಪು.ಸಂ_೪

ಮೈಸೂರು ಮೂಲತಃ ಕಲಾಕೇಂದ್ರವಾಗಿದ್ದು ಈ ಭಾಗದಲ್ಲಿ 'ಚಡ' ಎಂದು ಕರೆಯುತ್ತಾರೆ. ಮುಮ್ಮಡಿಯ ಅವರ ಕಾಲದಲ್ಲಿ ಇವರ ಕಲಾಪ್ರೇಮ, ಭಕ್ತಿ, ಹಿಂದೂ ಸಂಸ್ಕೃತಿ ಶ್ರದ್ದೆಗಳೇ ಗಂಜೀಫಾ ಕಲೆ ಬೆಳೆಯಲು ಮುಖ್ಯಪ್ರೇರಣೆಯಾಗಿದೆ. ಅರಸರ ಆಸಕ್ತಿಯೇ ಕಲೆ ಬೆಳೆಯಲು ಪ್ರಮುಖಕಾರಣವಾಗಿದೆ. ಮುಮ್ಮಡಿ ಅವರು ಅನೇಕ ಆಟಗಳನ್ನು ಸೃಷ್ಟಿಸಿ ಆಡುತ್ತಿದ್ದರು. ಮತ್ತು ಆಟಗಳ ಹೆಸರು ಎಲೆಗಳ ಒಟ್ಟುಸಂಖ್ಯೆ ಇಲ್ಲಿದೆ.

೧. ಸಾಮ್ರಾಜ್ಯ ೬೦೦ಎಲೆಗಳು ಇದೆ ಅತ್ಯಧಿಕ ಎಲೆಗಳಿಂದ ಕೂಡಿದೆ. ೨. ಜಗನ್ಮೋಹನ ೩೬೦ಎಲೆಗಳು ಇದೆ. ಎರಡನೆಯ ಅತಿ ಎಲೆಗಳು ಹೊಂದಿರುತ್ತದೆ. ೩. ಚಾಮುಂಡೇಶ್ವರಿ ೩೨೦ ಎಲೆಗಳನ್ನು ಹೊಂದಿದೆ. ೪. ಅಷ್ಟೈಶ್ವರ್ಯ ೩೨೦ ಎಲೆಗಳು ೫. ನವೀನ ದಶಾವತಾರ ೨೪೦ ಎಲೆಗಳು. ೬. ದೇವಿದಶಾವತಾರಿ ೧೮೦ ಎಲೆಗಳು. ೭. ಪಂಚಪಾಂಡವ ೨೧೦ ಎಲೆಗಳು. ೮. ಅಷ್ಟದಿಕ್ಪಾಲ ೧೬೦ ಎಲೆಗಳು. ೯. ಮನೋಹರ ೧೬೦ ಎಲೆಗಳು. ೧೦. ನವರತ್ನ ೧೬೦ ಎಲೆಗಳು. ೧೧. ನವೀನ ದಶಾವತಾರ ೨೧೦ ಎಲೆಗಳಿಂದ ೧೬೦ ಎಲೆಗಳು. ೧೨. ದಶಾವತಾರ ೧೨೦ ಎಲೆಗಳು. ೧೩. ರಾಮಯಾಣ ೯೬ ಎಲೆಗಳು, ೧೪. ಕೃಷ್ಣರಾಜ ೭೨ ಎಲೆಗಳು. ೧೫. ಸದ್ಯೋಜ್ಯಾತ ೭೨ ಎಲೆಗಳು. ೧೬. ನವೀನ ರಾಮ ಅತಿ ಸ್ವಲ್ಪ ಎಲೆಗಳನ್ನು ಹೊಂದಿರುತ್ತದೆ.೮

ಮುಮ್ಮಡಿಯವರು ಗಂಜೀಫಾ ಕಲಾವಿದರನ್ನೂ ಅವರು ಹೆಚ್ಚಾಗಿ ಗೌರವಿಸುತ್ತಿದ್ದಂತೆ ಮಹತ್ವವನ್ನು ನೀಡುತ್ತಿದ್ದರು.ಒಟ್ಟಿಗೆ ಸಮಲೋಚಿಸುತ್ತಿದ್ದಂತೆ ನೂತನ ಪ್ರಯೋಗಗಳನ್ನು ಮಾಡಲು ಪ್ರಚೋದನೆ, ಸ್ಫೂರ್ತಿ ನೀಡುತ್ತಿದ್ದರು.

ಈ ಗಂಜೀಫಾ ಚಿತ್ರಕಲೆಯನ್ನು ಸಂಪ್ರದಾಯಿಕವಾಗಿ ಈ ಭಾಗದಲ್ಲಿ ಗುರುತಿಸಿದವರೆ ಹೆಚ್ಚು ಆದರೆ ಜನಪದ ಚಿತ್ರಕಲೆಯ ಮನೋರಂಜನೆಯ ಮೂಲದ ಒಳಾಂಗಣ ದೊಡ್ಡವರ ಆಟದಲ್ಲಿ ಗುರುತಿಸಿದ್ದಾರೆ. ಡಾ.ಎಸ್.ಸಿ. ಪಾಟೀಲರು. ಗಂಜೀಫಾ ಚಿತ್ರಕಲೆಯನ್ನು ಜನಪದ ಮೂಲದ ಚಿತ್ರಕಲೆ ಎಂದು ಮುಂದೆ ಶಿಷ್ಟಪದ ಕಲಾವಿದರಿಂದ ಈ ಎಲೆಯ ಚಿತ್ರನಿರ್ಮಾಣವಾಗುವಂತಾಗಿತ್ತು. ಶಿಷ್ಟಪದ ರಚನೆಯಲ್ಲಿ ಜನಪದೀಯ ಅಂಶಗಳೇ ಬಳಕೆಗೊಂಡಿರುವುದನ್ನು ಮತ್ತು ಜನಪದ ಚಿತ್ರಕಾರರು ಶಿಷ್ಟಪದ ಚಿತ್ರಕಾರರಿಗೆ ಪ್ರೇರಣೆ ಒದಗಿಸಿದ್ದಾರೆ ಎಂದು ತಿಳಿಸುತ್ತಾರೆ.

ಗಂಜೀಫಾ ಚಿತ್ರದ ಎಲೆ, ಕಾರ್ಡು, ಅಥವಾ ಬಿಲ್ಲೆ, ತಯಾರಿಸುವ ವಿಧಾನ

ಮೊದಲು ಚರ್ಮ, ಬಟ್ಟೆಯಲ್ಲಿ ತಯಾರಿಸಿಕೊಳ್ಳುತ್ತಿದ್ದರು. ಆ ನಂತರ ರಟ್ಟು, ಕಾಗದ ಬಂದನಂತರ ಕಾರ್ಡು ತಯಾರಿಸುವ ಕಲಾವಿದರಿಗೆ ಉಪಜೀವನದ ಮಾರ್ಗವು ಕಲ್ಪಿಸಿ ಕೊಟ್ಟಿತು. ಆಯಾ ಪ್ರದೇಶದಲ್ಲಿ ಸಿಗುವ ವಸ್ತುಗಳ ಮೂಲಕ ತಯಾರಿಸಲಾಗುತ್ತಿತ್ತು. ಕೈಯಿಂದ ತಯಾರಿಸಿದ ಕಾಗದ, ದಪ್ಪನೆಯ ಕಾರ್ಡುಗಳು ಗಂಜಿಯಿಂದ ಅಥವಾ ಅಂಟಿನಿಂದ ಒಂದರ ಮೇಲೊಂದು ಅಂಟಿಸಿ, ಸ್ವಲ್ಪ ದಪ್ಪವಾದ ನಂತರ ಅದರ ಮೇಲೆ ಶುಭ್ರವಾದ ಹಾಳೆಯನ್ನು ಲೇಪಿಸಿ ಇನ್ನುಳಿದ ಭಾಗಗಳನ್ನು ದುಂಡಗೆ, ಆಯಾತ, ಚೌಕಕಾರದಲ್ಲಿ ತಮಗೆ ಬೇಕಾದ ರೀತಿಯಲ್ಲಿ ಕತ್ತರಿಸಿಕೊಂಡು ಇದೆ ರೀತಿಯಲ್ಲಿ ಮಾಡುತ್ತಿದ್ದರು ಒಟ್ಟು ೧೬ರಿಂದ ೯೦೦ ಎಲೆಗಳು ಕಂಡುಬರುತ್ತದೆ. ಆ ಎಲೆಗಳ ಮೇಲುಗಡೆ ಭಾಗದ ಮೇಲೆ ಚಿತ್ರಿರಚಿಸಲು ವಿಷಯ ಆಯ್ಕೆ ಮಾಡುತ್ತಿದ್ದರು. ರೇಖಾಚಿತ್ರಗಳನ್ನು ಬಿಡಿಸಿ ಆ ನಂತರ ವರ್ಣಗಾರಿಕೆ ಮಾಡುತ್ತಿದ್ದರು.

೮. ಕರೀಗೌಡ ಬೀಚನಹಳ್ಳಿ, ಕರಕುಶಲಕಲೆಗಳು, ಪು.ಸಂ-೧೩೬

ವರ್ಣಗಾರಿಕೆ

ಗಿಡ–ಸಸ್ಯ ಮತ್ತು ಖನಿಜಮೂಲಗಳಿಂದ ತಯಾರಿಸಿಕೊಳ್ಳುತ್ತಿದ್ದರು ಕಪ್ಪು, ಬಿಳಿ, ಕಂದು, ಹಳದಿ, ಮೊದಲಾದ ವರ್ಣಗಳನ್ನು ಕಲಾವಿದರೇ ತಯಾರಿಸಿಕೊಳ್ಳುತ್ತಿದ್ದರಂತೆ. ಶ್ರೀತತ್ವನಿಧಿಯಲ್ಲಿ ಉಲ್ಲೇಖಿಸಿದ ಬಣ್ಣದ ಹೆಸರುಗಳು ಚಿಂನದಬಂಣ, ಚಂದ್ರಬಂಣ, ಗುಲಡಾಬಂಣ, ಕಪ್ಪುಪಟ್ಟೆಬಂಣ, ನೀಲಬಂಣ, ವರ್ತೀಬಂಣ, ಈ ಬಣ್ಣಗಳು ನಿಸರ್ಗಕ್ಕೆ ಹತ್ತಿರವಾದವುಗಳು ಗಂಜೀಫಾ ಜಲವರ್ಣ ಮತ್ತು ರೇಖಾವಿನ್ಯಾಸಕ್ಕೂ ನೈಸರ್ಗಿಕ ರೀತಿಯಲ್ಲಿ ಮಿಶ್ರಣ ಮಾಡುತ್ತಿದ್ದರು. ಅಳಲೆಕಾಯಿ, ದಾಳಿಂಬೆಹಣ್ಣಿನ ಸಿಪ್ಪೆ, ಹುಣಸೇಬೀಜ, ಅರಿಸಿನ, ಶ್ರೀಗಂಧ, ಹೂವುಗಳು, ಎಲೆಗಳು, ತೊಗಟೆಗಳು, ಬೇರುಗಳಿಂದಲೂ ಸಹ ಬಣ್ಣ ತಯಾರಿಸಿಕೊಳ್ಳುತ್ತಿದ್ದರು.[೯]

ಕುಂಚಗಳು : ಅಳಿಲು, ಉಡ, ಒಂಟೆ, ಹಸುಗಳ ಕೂದಲುಗಳಿಂದ ಕಲಾವಿದರು ತಾವೇ ಕುಂಚ ತಯಾರಿಸಿಕೊಳ್ಳುತ್ತಿದ್ದರು.

ಗಂಜೀಫಾ ಚಿತ್ರಗಳ ಆಟದ ವಿಧಾನ

ದಶಮಿ, ಏಕಾದಶಿ, ಹಬ್ಬ ಹರಿದಿನಗಳಲ್ಲಿ ಉಪಾಹಾರವಾದ ನಂತರ ನಾಲ್ಕು ಮತ್ತು ಅದಕ್ಕಿಂತ ಹೆಚ್ಚಿನ ಜನರುಸೇರಿ ಆಟವಾಡುತ್ತಿದ್ದರು. ಪ್ರಾರಂಭದಲ್ಲಿ ಗಂಜೀಫಾ ಎಲೆಗಳ ಕಟ್ಟನ್ನು ಶ್ರೀಗಂಧದಮರದ ಪೆಟ್ಟಿಗೆಯಿಂದ ಹೊರತೆಗೆಯುತ್ತಾ ನಾಯಕನು ವೇದಸೂತ್ರ ಪಠಿಸುತ್ತಾ ಗಂಜೀಫಾ ಚಿತ್ರಗಳ ಎಲೆಗಳನ್ನು ಬೆಳ್ಳಿ ತಟ್ಟೆಗೆ ತುಂಬಿಕೊಂಡು ಆ ನಂತರ ಆಟಗಾರರು ಹಣವಿಟ್ಟು ಎದ್ದು ಹೊರಗೆ ಹೋಗುತ್ತಿದ್ದರು. ಚಿಕ್ಕ ಹುಡುಗಿ ಮಾತ್ರ ಅಲ್ಲಿ ಕುಳಿತಿರುತ್ತಿದ್ದಳು, ಬಳಿಕ ನಾಯಕ ಬೆಳ್ಳಿತಟ್ಟೆಯನ್ನು ಕೇರುತ್ತಿದ್ದರು. ಬಿದ್ದ ಎಲೆಗಳನ್ನು ಹುಡುಗಿ ಒಂದೊಂದಾಗಿ ಆರಿಸಿ ಒಬ್ಬೊಬ್ಬರಿಗೆ ೧೫–೨೦ ಎಲೆಗಳನ್ನು ಹಂಚುತ್ತಿದ್ದಳು. ಆಗೂ ಆಟ ಕಠಿಣವಾದಾಗ ಹುಡುಗಿ ಕಣ್ಣುಮುಚ್ಚಿ ಎಲೆಗಳನ್ನು ತೆಗೆಯುತ್ತಿದ್ದಳು, ನಾಯಕ ಸಹ ಕಣ್ಣುಮುಚ್ಚಿ ಎಲೆಗಳನ್ನು ಜೋಡಿಸುವುದು ರೂಢಿಯಾಯಿತು. ಬಳಿಕ ಒಳಗೆ ಬಂದ ಆಟಗಾರರು ಸ್ಥಾನಪಲ್ಲಟ ಮಾಡಿ ಕುಳಿತುಕೊಳ್ಳುತ್ತಿದ್ದರು.[೧೦]

ಗಂಜೀಫಾ ಚಿತ್ರಗಳ ಸಂಗ್ರಹಗಳು

ಪ್ರಾಚೀನ ಗಂಜೀಫಾ ಚಿತ್ರಗಳು ದೇಶವಿದೇಶ ವಸ್ತುಸಂಗ್ರಹಾಲಯಗಳಲ್ಲಿ, ಚಿತ್ರರಚಿಸುವ ಕಲಾವಿದರ ಮನೆಗಳಲ್ಲಿ, ರಾಜವಂಶಸ್ಥರ ಕುಟುಂಬಗಳಲ್ಲಿ, ರಾಜಪರಿವಾರದವರ ಮನೆಗಳಲ್ಲಿ, ಶ್ರೀಮಂತವರ್ಗದ ಕುಟುಂಬಗಳಲ್ಲಿ ಕಂಡುಬರುತ್ತದೆ. ಈ ಜಿಲ್ಲೆಯಲ್ಲಿ ಜಗನ್ಮೋಹನ ಸಂಗ್ರಹಾಲಯ, ಸುತ್ತೂರುಮಠದ ಸಂಗ್ರಹಾಲಯ, ರಾಮ್‌ಸನ್ಸ್ ಸಂಗ್ರಹಕರಲ್ಲಿ ಗಂಜೀಫಾ ಚಿತ್ರಕಲೆಯ ಎಲೆಗಳು ಸಂಗ್ರಹದಲ್ಲಿವೆ.

೯. ಎಂ.ಎಲ್.ಶಿವಶಂಕರ, ಗಂಜೀಫಾ, ಪು.ಸಂ_೫

೧೦. ಡಾ.ಎಸ್.ಸಿ. ಪಾಟೀಲ, ಕರ್ನಾಟಕ ಜನಪದಕಲೆ ಪು.ಸಂ_೧೬೦

ಮೈಸೂರು ಜಿಲ್ಲೆಯ ಗಂಜೀಫಾ ಚಿತ್ರಕಲೆಯ ನೆಲೆಗಳು ಮತ್ತು ಚಿತ್ರಗಳು ಈ ರೀತಿ ಇದೆ.

೫,೧, ಜಗನ್ಮೋಹನ ಅರಮನೆ
೫,೨, ಸುತ್ತೂರಿನ ವಸ್ತುಸಂಗ್ರಹಾಲಯದಲ್ಲಿ ಗಂಜೀಫಾ ಚಿತ್ರಕಲೆ
೫,೩, ರಾಜಾಸ್ಥಾನಿ ಮೊಘಲ್ ಗಂಜೀಫಾ ಎಲೆಗಳು
೫,೪, ಸಾವಂತವಾಡಿ ಗಂಜೀಫಾ ಎಲೆಗಳು
೫,೫. ಮೈಸೂರು ಶೈಲಿ ಗಂಜೀಫಾ
೫,೫.೧, ಮೂರು ಆನೆಯ ಮತ್ತು ಮಾಹುತರ ಚಿತ್ರ
೫,೫.೨, ಮೆರವಣಿಗೆ ಹೊರಟ ಆನೆಯ ಚಿತ್ರ
೫,೫.೩, ಸೈನಿಕನ ಚಿತ್ರ
೫,೫.೪, ಸಿಂಹ ಚಿತ್ರಗಳು
೫.೫.೫, ಶಂಖು ಚಕ್ರದ ಚಿತ್ರ
೫.೬, ಗ್ರಾಮೀಣ ಗಂಜೀಫಾ ಎಲೆಗಳು
೫.೭, ಓರಿಸ್ಸಾ ದಶಾವತಾರಿ ಗಂಜೀಫಾ ಚಿತ್ರದ ಎಲೆಗಳು
೫.೮, ತಾಳೆಗರಿ ಗಂಜೀಫಾ ಎಲೆಗಳು
೫.೯, ಪ್ರಮುಖ ಗಂಜೀಫಾ ಕಲಾವಿದರು

೫,೧, ಜಗನ್ಮೋಹನ ಅರಮನೆ

ಮೈಸೂರಿನ ಜಗನ್ಮೋಹನ ಅರಮನೆಯ ಮೂರನೆಯ ಅಂತಸ್ತಿನ ಭಿತ್ತಿಚಿತ್ರ ಇರುವ ಕೋಣೆಯ ಗೋಡೆಯ ಎರಡು ಕಾರ್ಪಟ್ಟಿನಲ್ಲಿ ಅಥವಾ ಮರದ ಷೋಕೇಸ್‌ನಲ್ಲಿ ಪ್ರಾಚೀನ ಗಂಜೀಫಾದ ಎಲೆಗಳು ವೃತ್ತಾಕಾರದ ೧೪೦ ಮತ್ತೊಂದರಲ್ಲಿ ೧೧೦ ಎಲೆಗಳು ಇರುತ್ತವೆ. ಹಾಗೂ ಚೌಕಾಕಾರದ ಎಲೆಗಳು ೩೩ ಇರುವುದು ಕಂಡುಬರುತ್ತದೆ. ಎಲ್ಲಾ ಎಲೆಗಳಲ್ಲಿ ದೇವ-ದೇವತೆ ಚಿತ್ರಗಳು ಉತ್ಕೃಷ್ಟ ರೇಖೆಯಿಂದ, ತಂಪಾದ ವರ್ಣಾಆಕೃತಿಯು ಶಾಸ್ತ್ರಬದ್ಧ ಸಂಯೋಜನೆ, ಆಕೃತಿಯಲ್ಲಿ ಭಾವನೆಯ ಚೆಲ್ಲಾಟ, ಸುತ್ತಲೂ ಅಲಂಕಾರಗೊಂಡ ಈ ಚಿತ್ರನೋಡಿದ್ದರೆ ಭಕ್ತಿಭಾವದ ಶ್ರದ್ದೆ ಹುಟ್ಟುವಂತೆ ಧಾರ್ಮಿಕ ಪ್ರತೀಕವಾದ ಗಂಜೀಫಾ.

ಈ ಅರಮನೆಯ ಸಂಗ್ರಹಾಲಯದಲ್ಲಿ ಎರಡು ಬೀರುವಿನಲ್ಲಿ ಜೋಪಾನವಾಗಿ ಶೇಖರಿಸಿ ಇಟ್ಟಿದ್ದಾರೆ. ಪಟ್ಟಿಗೆಯ ಒಳಗೆ ಕೆಂಪು ರಟ್ಟಿನ ಮೇಲೆ ಕೆಂಪುವಸ್ತ್ರ ಅಂಟಿಸಿ ಅದರ ಮೇಲೆ ಗಂಜೀಫಾ ಎಲೆಗಳನ್ನು ಸಾಲಾಗಿ ಒಂದು ಕ್ರಮಬದ್ದವಾಗಿ ಅಂಟಿಸಿದ್ದಾರೆ. ಇವು ೩೦೦-೪೦೦ ವರ್ಷಗಳು ಕಳೆದಿದ್ದರು ಮಾಸದ ವರ್ಣಕಾಂತಿಯು ಹಿಂದಿನ ಕೌಶಲ್ಯವನ್ನು ಅದು ತೋರಿಸುತ್ತದೆ. ಆಟದ ಕಲ್ಪನೆ, ಕಲೆಯನ್ನು ಸಾರುವ ಈ ಗಂಜೀಫಾ ಚಿತ್ರಕಲೆ ಹೆಮ್ಮೆಯ ಆಸ್ತಿಯಾಗಿದೆ.

ಒಟ್ಟಾರೆ ಇಲ್ಲಿ ಗಂಜೀಫಾವನ್ನು ಎರಡು ರೀತಿ ಕಂಡುಬರುತ್ತದೆ. ಮೊದಲಿಗೆ ವೃತ್ತಾಕಾರ ಹಾಗೂ ಚೌಕಕಾರದಲ್ಲಿ ಇದೆ.

ವೃತ್ತಾಕಾರ : ವೃತ್ತಾಕಾರದಲ್ಲಿ ಹೆಚ್ಚಾಗಿ ಸಂಪ್ರದಾಯ ಬದ್ಧ ಗಂಜೀಫಾ ಚಿತ್ರಕಲೆ ಬೆಳೆದಿರುತ್ತದೆ. ಕಾರಣ ಮೈಸೂರುಶೈಲಿ ಗಂಜೀಫಾ ಅರಸರ ಪ್ರೋತ್ಸಾಹದಡಿಯಲ್ಲಿ ಬೆಳೆದಿರುವುದೇ ಆಗಿದೆ. ಧಾರ್ಮಿಕ

ಗಂಜೀಫಾ ಚಿತ್ರಕಲೆಯ ಎಲೆಗಳು ಅದರಲ್ಲಿ ಕೃಷ್ಣ, ರಾಮ, ಚಾಮುಂಡೇಶ್ವರಿ, ದಶಾವಾತಾರ, ರಾಮಯಾಣ, ಭಾಗವತ, ಜಗನ್ಮೋಹಿನಿ, ನವಗ್ರಹ, ಮಹಾಭಾರತ ಇವುಗಳಿಗೆ ಸಂಬಂಧಿಸಿದ ವೃತ್ತಾಕಾರದ ಗಂಜೀಫಾ ಮೈಸೂರುಶೈಲಿಯ ಚಿತ್ರಗಳು ಹೆಚ್ಚಾಗಿ ಕಂಡುಬರುತ್ತದೆ. ಇವುಗಳನ್ನು ರಟ್ಟಿನಿಂದ ಮಾಡಿದ ಕಲಾಕೃತಿಗಳಾಗಿದೆ. ಎಲ್ಲಾ ಕಲಾಕೃತಿಯ ಅಂಚಿನ ಸುತ್ತ ಅಲಂಕರಿಸಿದ್ದಾರೆ. ವೃತ್ತದೊಳಗೆ ಚಿತ್ರಗಳನ್ನು ಸಂಯೋಜಿಸಿದ್ದಾರೆ. ಅತಿ ಸೂಕ್ಷ್ಮತೆಯಿಂದ ರೇಖೆಯಲ್ಲಿ ಭಾವನೆಯನ್ನು ತೋರಿಸಿ, ಜೊತೆಗೆ ಎಲ್ಲಾ ಆಕೃತಿಯಲ್ಲಿ ಆಭರಣಗಳಿಂದ ಅಲಂಕರಿಸಿದ್ದಾರೆ. ವಿಶೇಷವಾಗಿ ಕೆಂಪು, ಕಂದು, ಹಳದಿ, ಹಸಿರು, ನೀಲಿ, ಬಿಳಿವರ್ಣಗಳಿಂದ ರಚಿಸಿದ್ದಾರೆ. ಕೆಂಪುವರ್ಣವೇ ಪ್ರಧಾನವಾಗಿ ಕಂಡರೂ ಶಾಂತವರ್ಣ ಪ್ರತಿಫಲನತೆ ಹೊಂದಿದೆ. ಕಲಾವಿದನು ಜಾಣ್ಮೆ, ಕೌಶಲ್ಯ ಆಕೃತಿ ಸಂಯೋಜನೆಯಲ್ಲಷ್ಟೇ ಅಲ್ಲದೆ ವರ್ಣ ಸಂಯೋಜನೆಯಲ್ಲಿಯೂ ಶ್ರೇಷ್ಠತೆ ತೋರಿದ್ದಾರೆ. ಹಿನ್ನೆಲೆವರ್ಣದೊಡನೆ ಮುಂದೆ ಆಕೃತಿಯಲ್ಲಿನ ವರ್ಣ ತಿಳಿಯಾಗಿರುತ್ತದೆ. ಶಿವ, ವಿಷ್ಣು ತೋರಿಸುವಾಗ ನೀಲಿವರ್ಣವಾದರೆ ಪಾರ್ವತಿ, ಲಕ್ಷ್ಮೀ, ತೋರಿಸಬೇಕಾದರೆ ತಿಳಿನೀಲಿ ಬಣ್ಣದಿಂದ ತೋರಿಸಿದ್ದಾರೆ. ಅತಿಚಿಕ್ಕ ಗಾತ್ರದ ಚಿತ್ರಗಳನ್ನು ಚೆನ್ನಾಗಿ ರಚಿಸಿದ್ದಾರೆ. ಮತ್ತು ಕೆಲವೊಂದು ಆಕೃತಿಯಲ್ಲಿ ಸಹಿ ಸಹ ಕಂಡುಬರುತ್ತದೆ. ಅದು ಅಸ್ಪಷ್ಟವಾಗಿ ಕಾಣುತ್ತದೆ.

ರಾಮಯಾಣ ಚಿತ್ರಗಳು ಬಂದಾಗ ರಾಮ, ಹನುಮಂತ, ಸೀತೆ ಹಲವು ಚಿತ್ರಗಳು ಇರುತ್ತದೆ. ಹಾಗೆ ದಶಾವಾತಾರ ಎಲೆಗಳು ನೋಡಿದಾಗ ವಿಷ್ಣುವಿನ ಅವತಾರಗಳಾದ ಹತ್ತು ರೂಪಗಳನ್ನು ಕೃಷ್ಣ, ರಾಮ, ಕೂರ್ಮ, ಮತ್ಸ, ನರಸಿಂಹ, ಇತ್ಯಾಧಿ ಚಿತ್ರಗಳನ್ನು ಕಂಡುಬರುತ್ತದೆ. ಎಲ್ಲಾ ಸೇರಿಸಿ ಪ್ರವಾಸಿಗರಿಗೆ ಕಾಣುವಾಗೆ ಸುರಕ್ಷಿತವಾಗಿ ಇಟ್ಟಿದ್ದಾರೆ. ಅರಸರ ಭಾವಚಿತ್ರಗಳು ಮತ್ತು ವೃಷಭ, ಮಿಥುನ, ಕನ್ಯಾ, ವೃಶ್ಚಿಕ, ಧನಸ್ಸು ಹೀಗೆ ಅನೇಕ ರಾಶಿಚಿತ್ರಗಳು ಇಲ್ಲಿ ಸಂಗ್ರಹಿಸಲಾಗಿದೆ.

ಚೌಕಾಕಾರದ ಗಂಜೀಫಾ ಚಿತ್ರಕಲೆ

ಧಾರ್ಮಿಕತೇರ ಚೌಕಾಕಾರದ ಗಂಜೀಫಾ ಚಿತ್ರಕಲೆಯನ್ನು ಗುರುತಿಸಬಹುದಾಗಿದೆ. ಈ ಸಂಗ್ರಹಾಲಯದಲ್ಲಿ, ಧರ್ಮಗಳ ಚಿತ್ರಗಳಲ್ಲದೆ ಧ್ವಜ, ಬಿಲ್ಲುಬಾಣ, ಮೀನು, ಸಿಂಹ, ಆನೆ, ಕುದುರೆ, ಗಿಡ, ಮರ, ಬಳ್ಳಿ, ಪಶು, ಪಕ್ಷಿ ಸಣ್ಣಗಾತ್ರದ ಗಂಜೀಫಾಚಿತ್ರಗಳು ಮೂವತ್ತುಮೂರು ಚಿತ್ರಗಳು ಈ ಸಂಗ್ರಹಾಲಯದಲ್ಲಿ ಶೇಖರಿಸಿ ಇಟ್ಟಿದ್ದಾರೆ. ಅದು ವೃತ್ತಾಕಾರದ ಗಂಜೀಫಾ ಚಿತ್ರಕಲೆಯ ಜೊತೆ ಪಟ್ಟಿಯಲ್ಲಿಯೇ ಇದನ್ನು ಜೋಡಿಸಿದ್ದಾರೆ. ಇದು ಈಗಿನ ಮುದ್ರಣದ ಇಸ್ಪಿಟ್ ಎಲೆಯ ಹಾಗೆ ಕಂಡುಬರುತ್ತದೆ. ಆದರೆ ಜಲವರ್ಣದಿಂದ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ವಸ್ತು, ಪ್ರಾಣಿ, ಪಕ್ಷಿಚಿತ್ರಗಳನ್ನು ಶಾಸ್ತ್ರಬದ್ಧವಾಗಿ, ವನಸ್ಪತಿ ಖನಿಜವರ್ಣವೇ ಬಳಸಿದ್ದಾರೆ. ಇನ್ನೂ ಮಾಸದ ವರ್ಣದಿಂದಲೇ ಗೊತ್ತಾಗುತ್ತದೆ. ಅಂದಿನ ಚಿತ್ರಕಲೆಯ ಕಲಾವಿದರ ಪರಿಣಿತಿ ತಂತ್ರ ಅದರಲ್ಲಿ ಅಡಗಿದೆ.

ಇಲ್ಲಿಯೂ ಸಹ ಕೆಂಪು, ನೀಲಿ, ಹಸಿರು, ಬಿಳಿ, ಹಳದಿ, ಕಪ್ಪು ವರ್ಣವೇ ಪ್ರಧಾನವಾದರು ಸೌಮ್ಯ ಸ್ವಭಾವ ತೋರುತ್ತದೆ. ಜೀವಂತಿಕೆಯ ರೇಖಾ ಲಾಲಿತ್ಯ ಜೊತೆ ಚಲನಶೀಲತೆ ತೋರುವ ರೇಖಾಗುಣವು ಗಂಜೀಫಾ ಕಲೆಯ ಶ್ರೇಷ್ಟತೆ, ಚಿಕ್ಕ ಆಕೃತಿಯು ಸ್ಪಷ್ಟಚಿತ್ರಣವೇ ಗಂಜೀಫಾ ಕಲೆಯ ಜೀವಾಳವೇ ಆಗಿದೆ. ಒಂದೊಂದು ಆಟದ ವಿಧಾನ ಮತ್ತು ಆಟದ ಬಗೆಗಳಿಗೆ ಆ ತರಹದ ಎಲೆಗಳನ್ನು ಉಪಯೋಗಿಸಬೇಕು ಎಂದು ನಿಯಮವನ್ನು ಮಾಡಿಕೊಂಡಿದ್ದರು. ಹದ ಮಾಡಿಕೊಂಡು ಹಾಳೆಯ ಮೇಲೆ ಅರಗನ್ನು ಬಳಸಿ ಲೇಪಿಸುತ್ತಿದ್ದರು.

ಎಲೆಗಳ ಆಟಗಳನ್ನು ಆಡುವಾಗ ಆಟಗಾರರು ಎಲೆಗಳನ್ನು ಒರಟಾಗಿ ಬಳಸುತ್ತಿರುತ್ತಾರೆ ಆದ್ದರಿಂದ ಬಣ್ಣಗಳು ಹಾರಿಹೋಗಬಾರದು ಎಂಬ ಕಾರಣಕ್ಕೆ ಅರಗನ್ನು ವರ್ಣದ ಜೊತೆ ಬೆರೆಸಿ ಲೇಪಿಸುತ್ತಿದ್ದರು ಹಾಗೂ ಬಣ್ಣಗಳನ್ನು ತುಂಬ ದಪ್ಪನಾಗಿಯೂ ಹಾಕುತ್ತಿದ್ದರು. ಗಂಜೀಫಾದಲ್ಲಿ ಬಣ್ಣಗಳಿಗೆ ಹೆಚ್ಚು ನಿಯಮಗಳಿರುತ್ತಿತ್ತು. ಸನ್ನಿವೇಶ ಹಾಗೂ ಈ ಚಿತ್ರಗಳಿಗೆ ಈ ಬಣ್ಣಗಳು ಹೀಗೆ ಇರಬೇಕು ಎಂಬ ನಿಯಮ ಸಹ ಇತ್ತು. ಶಿವತತ್ವ ನಿಧಿಯಲ್ಲಿ ಇದರ ಉಲ್ಲೇಖ ಇರುತ್ತದೆ. ವೃತ್ತಾಕಾರ ಮತ್ತು ಚೌಕ್ಕಕಾರದ ಗಂಜೀಫಾ ಎಲೆಗಳಿಗೆ ಹಿಂಭಾಗ ಕಡು ಕಾಫಿ ಬಣ್ಣ, ಹಸಿರು, ಕಪ್ಪುಮಿಶ್ರಿತ ಬಿಳಿ ಹೀಗೆ ಗಾಢ ವರ್ಣಗಳನ್ನು ಮಾತ್ರ ಬಳಸಿದ್ದಾರೆ. ತಿಳಿಬಣ್ಣವನ್ನು ಬಳಸುತ್ತಿರಲಿಲ್ಲ. ಈಗಿನ ಗಂಜೀಫಾ ಚಿತ್ರಕಲೆಗೆ ಪೋಸ್ಟರ್ ಮತ್ತು ಆಕ್ರಲಿಕ್‌ವರ್ಣವನ್ನು ಬಳಸುತ್ತಾರೆ. ಈಗ ಮನೆಯ ಅಲಂಕಾರಕ್ಕಾಗಿ ಮಾತ್ರ ಉಪಯೋಗಿಸುತ್ತಾರೆ. ಇದು ಈಗ ಕಲೆಯಾಗಿ ಮಾತ್ರ ಉಳಿದಿದೆ.

೫.೨, ಸುತ್ತೂರಿನ ವಸ್ತುಸಂಗ್ರಹಾಲಯದಲ್ಲಿ ಗಂಜೀಫಾ ಚಿತ್ರಕಲೆ

ಮೈಸೂರಿನ ಜಿಲ್ಲೆಗೆ ಸೇರಿದ ಸುತ್ತೂರು ಒಂದು ಧಾರ್ಮಿಕ ಶೈವಮಠವಾಗಿದೆ. ಪ್ರಾಚೀನ ಪರಂಪರೆಯು ತನ್ನದೆ ಸಂಸ್ಕೃತಿಯ ಹಿನ್ನೆಲೆಯನ್ನು ಹೊಂದಿದ ಸುತ್ತೂರು ಅಲ್ಲಿನ ಸ್ವಾಮಿಜಿಯವರ ಆಸಕ್ತಿಯಿಂದ ಒಂದು ಸಂಗ್ರಹಾಲಯ ತಲೆಎತ್ತಿದೆ ಅಲ್ಲಿ ಮುಖ್ಯವಾಗಿ ಚಿತ್ರಕಲೆಯ ಕಲಾಕೃತಿಗಳು ಇದ್ದು, ಜೊತೆಗೆ ಗಂಜೀಫಾ ಚಿತ್ರಕಲೆಗೆ ಸಂಬಂಧಪಟ್ಟ, ರಾಜಾಸ್ಥಾನಿ, ಸಾವಂತವಾಡಿ ಗ್ರಾಮೀಣಶೈಲಿಯ ಚಿತ್ರಗಳು, ಒರಿಸ್ಸಾ ದಶಾವತಾರ, ತಾಳೆಗರಿ ಗಂಜೀಫಾ ಚಿತ್ರಗಳು ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ.

೫.೨.೧, ಶ್ರೀರಂಗಪಟ್ಟಣ ಗಂಜೀಫಾ ಚಿತ್ರಕಲೆ

ಈ ಸಂಗ್ರಹಾಲದಲ್ಲಿ ನಾಲ್ಕು ಎಲೆಗಳು ಶ್ರೀರಂಗಪಟ್ಟಣ ಕ್ಷೇತ್ರಕ್ಕೆ ಸೇರಿದ ಗಂಜೀಫಾ ಚಿತ್ರಕಲೆಯ ಕಲಾಕೃತಿಯಾಗಿದೆ. ನಾಲ್ಕು ಬೇರೆ ಬೇರೆ ಆಟದ ಗುಂಪಿಗೆ ಸೇರಿದ ಚಿತ್ರಗಳಾಗಿವೆ. ಎಡದಿಂದ ಮೊದಲನೆಯದು ಮತ್ಸಗಳ ಇರುವ ಚಿತ್ರವಿದೆ. ಪಕ್ಕದ ಎಲೆಯಲ್ಲಿ ವಿಷ್ಣುವಿಗೆ ಸಂಧಿಸಿದ ಮೂರು ಎಲೆಗಳು ಇದೆ. ಮತ್ತೆ ನಾಲ್ಕು ಎಲೆಯಲ್ಲಿ ಕೆಂಪು, ಹಸಿರುವರ್ಣ ಕಂಡುಬರುತ್ತದೆ. ವೃತ್ತಾಕಾರದೊಳಗಿನ ವರ್ಣವು ಹಸಿರು ಮತ್ತು ತೇಳು ರೇಖೆಯು ಹಳದಿವರ್ಣ ಮಧ್ಯದಲ್ಲಿ ಕೆಂಪುವರ್ಣ ಸಹವಿದ್ದು ಅದರ ಮಧ್ಯದಲ್ಲಿ ವಿಷ್ಣುವಿನ ಚಿತ್ರಗಳು ಇದೆ. ಎಲ್ಲಾ ವೃತ್ತಾಕಾರದ ರಟ್ಟಿನ ಗಂಜೀಫಾ ಚಿತ್ರಗಳು, ೧೮ನೇ ಶತಮಾನದಲ್ಲಿ ತಯಾರಿಸಿ ಬಣ್ಣಲೇಪಿಸಿ, ಅರಗಿನ ಲೇಪನ ಮತ್ತು ಚಿನ್ನದ ರಂಗನ್ನು ಉಪಯೋಗಿಸಿದ್ದಾರೆ.

೫.೩, ರಾಜಾಸ್ಥಾನಿ ಮೊಘಲ್ ಗಂಜೀಫಾ

ಅದೇ ಷೋಕೇಷ್‌ನಲ್ಲಿ ಆರು ಚುಕ್ಕಿಗಳ ಸಂಬಂಧಪಟ್ಟಂತಹ ಚಿತ್ರವಿರುವ ಬಲರಾಮ ಎಲೆಗೆ ಹೋಲುವ ಗಂಜೀಫಾ ಎಲೆಗಳು ಇದಾಗಿದೆ. ಒಂದೊಂದು ಒಂದು ಸಂಖ್ಯೆ ಹೇಳುತ್ತದೆ. ಐದು, ಆರು, ಹತ್ತು, ನಾಲ್ಕು, ಎರಡು, ಏಳು, ಹೀಗೆ ಎಲೆಯ ಒಳಗೆ ಚುಕ್ಕಿಗಳನ್ನು ಹೊಂದಿರುವ ಬಲರಾಮ ಆಟದ ಎಲೆಗಳಾಗಿವೆ. ವೃತ್ತಾಕಾರದ ಎಲೆಗಳು ಒಂದೊಂದು ಎಲೆಯು ಬೇರೆ ಬೇರೆ ವರ್ಣ ಹೊಂದಿದೆ. ಕೆಂಪು, ಹಳದಿ, ಹಸಿರು, ಕೇಸರಿವರ್ಣವೇ ಪ್ರಧಾನವಾಗಿದೆ.

೫.೪, ಸಾವಂತವಾಡಿ ಗಂಜೀಫಾ ಎಲೆಗಳು

೧೯ನೇ ಶತಮಾನದ ಉತ್ತರಾರ್ಧದಲ್ಲಿ ಹತ್ತಿವಸ್ತ್ರದಲ್ಲಿ ಚಿತ್ರಿಸಿರುವ ಕಟ್ಟಿನ ಎಲೆಗಳಾಗಿದೆ. ಈ ಕ್ಷೇತ್ರದ ಆಟದ ಎಲೆಯು ಸಹ ಆರು ಎಲೆಗಳು ಮಾತ್ರ ವೃತ್ತಾಕಾರದಲ್ಲಿ ಎಲೆಗಳು ಇಲ್ಲಿ ಒಂದೊಂದು ಚಿತ್ರಗಳನ್ನು

ಒಳಗೊಂಡಿದೆ. ಆರು ಪರಶುಗಳ ಹೊಂದಿರುವ ಚಿತ್ರ, ಹಾಗೆ ಹಿನ್ನೆಲೆಯಲ್ಲಿ ಬಿಳಿವರ್ಣದ ವೃತ್ತಾಕಾರದ ಅಲಂಕರಿಸಿ ಮತ್ತು ಪರಶುಚಿತ್ರ ಹಾಗೂ ರಿಂಗ್‌ಚಿತ್ರವೂ ಈ ವರ್ಣದಲ್ಲಿದೆ. ಮತ್ತೊಂದು ಹೂವಿನ ಮೊಗ್ಗುಹೊಂದಿರುವ ಎಲೆಯ ತುಂಬ ಆವರಿಸಿರುವ ಕಲಾಕೃತಿಯಲ್ಲಿ ಹಿನ್ನೆಲೆವರ್ಣ ಗಾಢ ಹಳದಿ, ಹಸಿರು ಮತ್ತು ಕೇಸರಿವರ್ಣ ಇದ್ದೂ, ಬಿಳಿವರ್ಣದಿಂದ ಅಲಂಕರಿಸಿದ ಕೃತಿಯಾಗಿದೆ. ಮತ್ತೊಂದು ಅಲಂಕಾರಿಕ ಚಿತ್ರವಿರುವ ೧೦ಎಲೆಗಳು ಆಭರಣ ಹೋಲುವ ಎಲೆಯು ಕೇಸರಿವರ್ಣವನ್ನು ಹಿಂಬದಿಯಲ್ಲಿ ಲೇಪಿಸಿ, ಆಕೃತಿಗಳನ್ನು ಬಿಳಿ ಮತ್ತು ಹಳದಿ ವರ್ಣದಿಂದ ಚಿತ್ರಿಸಿದ್ದಾರೆ.

ಮತ್ತೊಂದು ಎಲೆಯಲ್ಲಿ ಹಳದಿ ವೃತ್ತಾಕಾರ, ಹಸಿರು ದುಂಡಾಕಾರದ ರೇಖೆಯ ಹಸಿರು ಚುಕ್ಕಿ, ಕೆಂಪು ಹಿನ್ನೆಲೆಯ ಮೇಲೆ ಹತ್ತು ಕತ್ತಿ ಚಿತ್ರವಿರುತ್ತದೆ. ಅದು ಕೆಂಪು ಬಿಳಿವರ್ಣದಿಂದ ಚಿತ್ರಪೂರ್ಣ ಗೊಳಿಸಿದ್ದಾರೆ. ಇನ್ನೂವುಳಿದ ಎಲೆಗಳು ಹಸಿರು ವರ್ಣ ಗಾಢಹಳದಿ ವೃತ್ತಇರುವ ಎಲೆಯ ಮಧ್ಯೆ ಒಂದು ಹೂವಿನ ಚಿತ್ರವಿದ್ದು. ಮತ್ತೊಂದು ಆರು ಅಲಂಕಾರಿಕ ಚಿತ್ರವಿದೆ. ಅದರ ಕೇಸರಿ, ಗುಲಾಬಿ ವರ್ಣ ಇರುವ ಚಿತ್ರವಿದೆ. ಸಾವಂತವಾಡಿ ಮೊಘಲ್ ಎಲೆಯಲ್ಲಿ ಯಾವುದೇ ಪ್ರಾಣಿ, ಪಕ್ಷಿ, ಮನುಷ್ಯ ಆಕೃತಿಗಳು ಕಂಡು ಬಂದಿರುವುದಿಲ್ಲ ಯಾವುದೇ ಒಂದೇ ಆಟಕ್ಕೆ ಸೇರಿದ ಎಲೆಗಳನ್ನು ಇಲ್ಲಿ ಹೊಂದಿರುವುದಿಲ್ಲ

೫.೫, ಮೈಸೂರು ಶೈಲಿ ಗಂಜೀಫಾ

ಮತ್ತೊಂದು ಷೋಕೆಸ್‌ನಲ್ಲಿ ಚೌಕಕಾರದಲ್ಲಿ ಅವು ಮೈಸೂರು ಗ್ರಾಮೀಣ ಶೈಲಿಯ ಗಂಜೀಫಾ ಚಿತ್ರಗಳು ಹಾಗಿರುತ್ತದೆ. ಮೈಸೂರು ಶೈಲಿ ಗಂಜೀಫಾ ಎಲೆಗಳು ವೃತ್ತಾಕಾರವು ದೊಡ್ಡ ಮತ್ತು ಚಿಕ್ಕಗಾತ್ರದ ಎಲೆಗಳಾಗಿರುತ್ತೆ. ಅದರಲ್ಲಿ ಪಲ್ಲಕ್ಕಿಯಲ್ಲಿ ಮೆರವಣಿಗೆ ಹೊರಡುತ್ತಿರುವ ಚಿತ್ರ, ಸಿಂಹಾಸನದ ಮೇಲೆ ರಾಜ ಕುಳಿತಚಿತ್ರ ಸಿಪಾಯಿಯು ಧ್ವಜ ಹಾರಿಸುತ್ತಿರುವ ಚಿತ್ರ, ಅಂಬಾರಿ ಆನೆಯ ಮೇಲೆ ಮಾವುತ, ಅರಸ ಮತ್ತು ಸೇವಕ ಸೇರಿ ಅಲಂಕೃತ ಬಿಳಿ ಆನೆಯ ಮೇಲೆ ಸಾಗುತ್ತಾ ಆನೆಯು ಘೀಳಿಡುತ್ತಿರುವ ಚಿತ್ರದಲ್ಲಿ ಅಲಂಕಾರವಾಗಿ ಸಿದ್ದಗೊಂಡು ಮೆರವಣಿಗೆ ಹೊರಟ ಮೂರು ಆನೆ ಹಾಗೂ ಮಾವುತರು ಕೈಯಲ್ಲಿ ಹೂವನ್ನು ಹಿಡಿದಿರುವ ಚಿತ್ರ ದೊಡ್ಡ ವೃತ್ತಾಕಾರದಾಗಿರುತ್ತದೆ. ಅದಕ್ಕಿಂತ ಚಿಕ್ಕ ವೃತ್ತಾಕಾರದ ಎಲೆಗಳಲ್ಲಿ ಆನೆ, ಸಿಂಹಗಳು ಕುದುರೆಗಳು, ಮೀನುಗಳು ಇರುವ ಎಲೆಗಳನ್ನು ಇಲ್ಲಿ ಸಂಗ್ರಹಿಸಿ ಇಟ್ಟಿದ್ದಾರೆ. ಎಲ್ಲಾ ಮೈಸೂರಿನ ಸಂಪ್ರದಾಯಿಕ ಶೈಲಿ ಹೊಂದಿರುವ ಗಂಜೀಫಾ ಚಿತ್ರಕೃತಿಗಳಾಗಿದೆ. ಒಟ್ಟು ಹದಿನಾಲ್ಕು ಎಲೆಗಳು ಇರುತ್ತದೆ. ಅವು ಖನಿಜ ಮತ್ತು ವನಸ್ಪತಿ ವರ್ಣಗಳನ್ನು ಬಳಸಿದ್ದು, ಕೆಲವು ಚಿತ್ರಗಳಲ್ಲಿ ವರ್ಣವು ಮಾಸಲಾಗಿ ಕಂಡುಬರುತ್ತದೆ. ಅದು ರಟ್ಟಿನ ಕಲಾಕೃತಿಗಳಾಗಿದ್ದು ವಿವಿಧ ವೃತ್ತಾಕಾರದ ಗಂಜೀಫಾ ಆಟದ ಎಲೆಗಳು ಇದೆ.

೫.೫.೧, ಮೂರು ಆನೆಯ ಮತ್ತು ಮಾಹುತರ ಚಿತ್ರ

ಮೈಸೂರು ಜಿಲ್ಲೆಯಲ್ಲಿ ಇಲ್ಲಿನ ಶೈಲಿಯ ಗಂಜೀಫಾ ಚಿತ್ರಗಳು ಚಿಕ್ಕ ವೃತ್ತಾಕಾರದಲ್ಲಿ ಇರುವುದನ್ನು ಇಲ್ಲಿ ಶೇಖರಿಸಿದ್ದಾರೆ. ಅದರಲ್ಲಿ ಮೂರು ಆನೆಗಳು ಇರುವಂತ ಚಿತ್ರವಾಗಿದೆ. ಎರಡುವರೆ ಇಂಚು ಅಳತೆಯನ್ನು ಹೊಂದಿರುವ ವೃತ್ತಾಕಾರದಲ್ಲಿ ಚಿತ್ರವನ್ನು ಸಂಯೋಜಿಸಿದ್ದಾರೆ. ಇದು ಯಾವ ಆಟದ ಚಿತ್ರವೆಂದು ತಿಳಿದು ಬರುವುದಿಲ್ಲ ಏಕಂದರೆ ಈಗ ಬರಿ ಕಲೆಯಾಗಿ ಕಂಡುಬರುತ್ತಿದ್ದೆ. ಗಾಡಕಂದು ವರ್ಣದಲ್ಲಿ ಎಲೆ ಇದ್ದು ಅದರಲ್ಲಿ ಆನೆಗಳನ್ನು ಬೂದುಬಣ್ಣದಿಂಧ ಚಿತ್ರಿಸಲಾಗಿದೆ. ಆನೆಯು ಮೆರವಣಿಗೆಗೆ ಹೊರಟಿರುವಂತೆ ಇದೆ. ಮಾವುತರು ಸಮವಸ್ತ್ರ ಹಾಗೂ ಟೋಪಿ ಧರಿಸಿದ್ದು ಆನೆಯನ್ನು ನಿಯಂತ್ರಿಸುತ್ತಿದ್ದಾರೆ. ನೀಲಿವರ್ಣ ಮತ್ತು ಕೆಂಪುಬಣ್ಣಗಳ ಉಡುಪು ತೋಟ್ಟಿರುತ್ತಾರೆ. ಆನೆಗಳು ಒಂದರ ಪಕ್ಕದಲ್ಲಿ ಒಂದರಂತೆ ಸಾಲಾಗಿ ನಿಂತಿರುವಾಗೆ ಚಿತ್ರಿಸಲಾಗಿದೆ.

೫.೫.೨, ಮೆರವಣಿಗೆ ಹೊರಟ ಆನೆಯ ಚಿತ್ರ

ಈ ಚಿತ್ರದಲ್ಲಿಯೂ ಆನೆಯು ಬೂದು ವರ್ಣದಾಗಿದೆ. ಆದರೆ ತುಂಬ ದಷ್ಟಪುಷ್ಟದಿಂದ ಕೂಡಿದ್ದು, ಆನೆಯು ಘರ್ಜನೆ ಮಾಡುತ್ತಿರುವಂತೆ ಕಲಾವಿದರು ಚಿತ್ರಿಸಿದ್ದಾರೆ. ಈ ಬಿಲ್ಲೆಯು ಸಹ ಎರಡುವರೆ ಇಂಚು ವೃತ್ತಾಕಾರದಲ್ಲಿ ಸಂಯೋಜಿಸಿದ್ದಾರೆ. ಅರಸನು ಆನೆಯ ಬೆನ್ನಿನ ಮೇಲೆ ಅಲಂಕಾರ ಪೀಠದ ಒಳಗೆ ಅರಸನು ಕುಳಿತು ಕೆಂಪುವಸ್ತ್ರವನ್ನು ಧರಿಸಿದ್ದಾನೆ. ಮಾವುತನು ಸಹ ನೀಲಿ ಸಮವಸ್ತ್ರವನ್ನು ಉಟ್ಟಿರುತ್ತಾರೆ. ಆನೆಯನ್ನು ಮುನ್ನಡೆಸುತ್ತಿದ್ದಾನೆ. ಆನೆಯ ಬೆನ್ನಮೇಲೆ ಹಸಿರುವರ್ಣದ ದೊಡ್ಡದಾದ ವಸ್ತ್ರವನ್ನು ಕಲಾವಿದನು ಚಿತ್ರಿಸಿದ್ದಾನೆ. ಬಿಲ್ಲೆಯು ಗಾಢಕಂದು ವರ್ಣದಾಗಿರುತ್ತದೆ. ವೃತ್ತಾಕಾರದ ಬಿಲ್ಲೆಯ ಮೇಲೆ ದುಂಡಗಿನ ಅಲಂಕಾರಿಕ ಚಿತ್ರವನ್ನು ಚಿತ್ರಿಸಲಾಗಿದೆ. ಮೈಸೂರು ಶೈಲಿಯ ಗಂಜೀಫಾಚಿತ್ರಗಳಲ್ಲಿ ಇದು ಒಂದಾಗಿದೆ.

೫.೫.೩,ಸೈನಿಕನ ಚಿತ್ರ

ಮತ್ತೊಂದು ಇದೆ ಸಾಲಿನಲ್ಲಿ ಇರುವಂತಹ ಸೈನಿಕ ಚಿತ್ರವಿರುವ ವಿಶೇಷವಾದ ಗಂಜೀಫಾ ಚಿತ್ರ. ಈ ಚಿತ್ರವು ಸಹ ಗಾಢವಾದ ಕಂದು ಬಣ್ಣದಿಂದ ಕೂಡಿದ್ದು ಸೈನಿಕ ಗಾಢಹಸಿರು ವರ್ಣದ ಸಮವಸ್ತ್ರಧರಿಸಿ ಗುಡ್ಡದ ಮೇಲೆ ನಿಂತು ಕೆಂಪು ಬಾವುಟಕ್ಕೆ ಮಿಲಿಟರಿ ಗೌರವ ಸೂಚಿಸುತ್ತಿದ್ದಾನೆ. ಹಸಿರು ಗುಡ್ಡದ ಮೇಲೆ ಅಂದರೆ ಎತ್ತರ ಭಾಗದ ಪ್ರದೇಶದ ಮೇಲೆ ಯುದ್ಧ ಜಯಿಸಿದ ಗುರುತ್ತಾಗಿ ನಿಂತಿರುವಂತೆ ಬಾಸವಾಗುತ್ತದೆ. ವೃತ್ತಾಕಾರದ ಬಿಲ್ಲೆಯಸುತ್ತ ಕೇಸರಿವರ್ಣದಿಂದ ಅಲಂಕರಿಸಿರುವ ಚಿತ್ರವಾಗಿದೆ.

೫.೫.೪, ಸಿಂಹಚಿತ್ರಗಳು

ಮೇಲಿನ ಚಿತ್ರಗಳ ಸಾಲಿನ ಕೆಳಭಾಗದ ಸಾಲಿನಲ್ಲಿ ಅದಕ್ಕಿಂತ ಚಿಕ್ಕದಾಗಿ ಎರಡು ಇಂಚು ಅಳತೆಯಲ್ಲಿ ಮೂರು ಸಿಂಹದ ಚಿತ್ರಗಳನ್ನು ಸಂಯೋಜಿಸಿದ್ದಾರೆ. ಆ ಚಿತ್ರಗಳನ್ನು ಮೈಸೂರು ಸಂಪ್ರದಾಯ ಶೈಲಿಯಲ್ಲಿ ಚಿತ್ರಿಸಿದ್ದಾರೆ. ಗಾಢಕೆಂಪು ವರ್ಣದ ಮೇಲೆ ಬಿಳಿಬಣ್ಣದ ಸಿಂಹದ ಚಿತ್ರಗಳನ್ನು ರಚಿಸಿ ಅವುಗಳು ವೃತ್ತಾಕಾರದ ಕೆಳಗೆ ಎರಡು ಸಿಂಹಚಿತ್ರ ರಚಿಸಿದ್ದಾರೆ. ಮೇಲುಗಡೆ ಒಂದು ಸಿಂಹದ ಚಿತ್ರವನ್ನು ಚಿತ್ರಿಸಿದ್ದಾರೆ. ಸಿಂಹಚಿತ್ರಗಳು ಒಂದೇರೀತಿಯಲ್ಲಿ ಚಿತ್ರಿಸಿದ್ದಾರೆ. ಬಾಲವನ್ನು ಎತ್ತಿಗರ್ಜಿಸುತ್ತಿದೆ ಎನ್ನುವಾಗೆ ಸಿಂಹದ ಚಿತ್ರಗಳನ್ನು ಚಿತ್ರಿಸಲಾಗಿದೆ.

೫.೫.೫, ಶಂಖಚಕ್ರದ ಚಿತ್ರ

ಮೈಸೂರು ಶೈಲಿಯಲ್ಲಿವೃತ್ತಾಕಾರದ ಗಂಜೀಫಾಎಲೆಗಳ ಸಂಗ್ರಹದ ಕರ್ಫಾಟಿನಲ್ಲಿ ಎಡಭಾಗದಲ್ಲಿ ವಿಶೇಷವಾಗಿ ಎರಡು ಚೌಕ್ಕಕಾರದ ಕಾಗದದ ಗಂಜೀಫಾ ಎಲೆಗಳು ಇದ್ದು, ವಿಷ್ಣುವಿನ ಆಯುಧವಾದ ಶಂಖ ಮತ್ತು ಚಕ್ರದ ಚಿತ್ರ ಆಗಿರುತ್ತದೆ. ಈ ಚಿಹ್ನೆ ವಿಷ್ಣುವಿನದಾಗಿರುತ್ತದೆ. ಇದು ಯದುವಂಶದ ಅರಸರ ಕುಲದೇವರ ಚಿಹ್ನೆಯಾಗಿದೆ. ಇದರ ಅಳತೆ ಎರಡು ಇಂಚು ಅಗಲ, ಮೂರು ಇಂಚು ಎತ್ತರವಿದೆ. ಅದು ಕಾಗದ ಎಲೆಯಾಗಿದ್ದು ಅತಿಸೂಕ್ಷ್ಮ ಹಾಗೂ ಅಲಂಕಾರಿಕವಾಗಿ ಚಿತ್ರಿಸಿದ್ದಾರೆ. ಹಸಿರು ವರ್ಣವು ಹಿನ್ನೆಲೆಯಾದರೆ ಕೆಂಪು, ಹಳದಿವರ್ಣದಿಂದ ಆಕೃತಿಚಿತ್ರಿಸಿ, ಚೌಕ್ಕಟ್ಟಿನಲ್ಲಿ ಅಲಂಕಾರವಾಗಿ ಬಿಳಿವರ್ಣ ಇರುವುದು ಕಂಡುಬರುತ್ತದೆ. ಸೂಕ್ಷ್ಮರೇಖೆ ಹಾಗೂ ಹೊರರೇಖೆಯು ಚಿತ್ರದ ಜೀವಾಳ, ಎರಡು ಚಿತ್ರವು ಒಂದೇತರ ವರ್ಣಸಂಯೋಜನೆ ಮಾಡಿದ್ದಾರೆ. ಆಕೃತಿಗಳಷ್ಟೇ ಬೇರೆ ಬೇರೆಯಾಗಿದೆ. ಶಂಖಚಕ್ರವನ್ನು ಬಿಳಿವರ್ಣದಿಂದ ರಚಿಸಿದ್ದಾರೆ. ಅದರ ಕೆಳಗೆ ಒಂದು ವಸ್ತ್ರ ಇರುವಂತೆ ಚಿತ್ರಿಸಲಾಗಿದೆ. ಶಂಖಚಕ್ರದ ಮೇಲೆಯೂ ಸಹ ಒಂದು ವಸ್ತ್ರವನ್ನು ಹೊಂದಿಲಾಗಿದೆ. ಅವುಗಳ ನಾಲ್ಕು ಭಾಗದಲ್ಲಿ ಅಗ್ನಿ

ಉರಿಯುತ್ತಿರುವಂತೆ ತೋರಿಸಲಾಗಿದೆ. ಹಿನ್ನೆಲೆಯ ವರ್ಣವನ್ನು ಹಸಿರು ಬಣ್ಣದಿಂದ ತುಂಬಿರುತ್ತಾರೆ. ನಾಲ್ಕು ಮೂಲೆಯ ಚೌಕದ ಹಾಳೆಯಲ್ಲಿ ಎಂಟು ಮೂಲೆಯು ಇರುವಂತೆ ಅಲಂಕಾರಿಕ ಕೆಂಪು ಹಳದಿ ಪಟ್ಟಿಯನ್ನು ಚಿತ್ರಿಸಿದ್ದಾರೆ. ಈ ಎಲೆಗಳು ತುಂಬ ಹಳೆಯದಾಗಿರುವುದರಿಂದ ಅಲಲ್ಲಿ ಹರಿದಿದೆ. ಮತ್ತು ವರ್ಣವು ಕಳೆಗುಂದಿದೆ. ಧಾರ್ಮಿಕಭಕ್ತಿ ಭಾವನೆ ಮೂಡಿಸುವುದು ಸಹ ಅದರ ಗುರಿಯಾಗಿದ್ದು. ಈಗಿನ ಇಸ್ಪೀಟ್ ಎಲೆಗಳ ಹಾಗೆ ಕಂಡರು ಅದು ಕಲಾವಿದ ನಿರ್ಮಿಸಿದ ಕೈಚಳಕಕ್ಕೆ ಇಂದಿನ ಇಸ್ಪಿಟ್ ಮುದ್ರಿತಎಲೆ ಎಂದು ಸರಿ ಸಾಟಿಯಾಗಿ ನಿಲ್ಲಲಾರದೆಂದು ಈ ಎಲೆಕಂಡಾಗ ಅನ್ನಿಸುತ್ತದೆ. ಭಕ್ತಿಸಂಕೇತದ ಆಟದ ಎಲೆಗಳು ಕಲೆಯನ್ನು ತುಂಬಿಕೊಂಡುತ್ತೆ. ಅಂದಿನ ವೈವಿಧ್ಯತೆ ಕಲಾಕೌಶಲ್ಯದ ಮೇರುಕೃತಿಗಳು ಎಂದು ಅನ್ನಿಸುತ್ತದೆ.

೫.೬, ಗ್ರಾಮೀಣ ಗಂಜೀಫಾ

ಈ ಸಂಗ್ರಹಾಲದಲ್ಲಿ ಮತ್ತೊಂದು ವಿಶೇಷವೆಂದರೆ ರಟ್ಟಿನ ಸಣ್ಣಸಣ್ಣ ಗ್ರಾಮೀಣ ಗಂಜೀಫಾ ಶೈಲಿ ಯಲ್ಲಿರುವುದನ್ನು ಶೇಖರಿಸಿರುವುದು ವಿಶೇಷವಾಗಿದ್ದು. ಇದು ಜನಪದಕಲೆಯ ಹಿನ್ನೆಲೆ ವಿಷಯವಾಗಿದ್ದರೂ ಸಹ ರಾಕ್ಷಸ, ಜೋಡಿಗಿಣಿಗಳು ಇರುವುದು ಕಂಡುಬರುತ್ತದೆ. ತಾವರೆ ಹೂವಿನ ಮೂರುಹೂವಿನ ಚಿತ್ರವು ಹಿನ್ನೆಲೆ ಗಾಢವಾದ ವರ್ಣ ಬೂದು ತಿಳಿವರ್ಣಗಳಿಂದ ಹೂವನ್ನು ಚಿತ್ರಿಸಿದ್ದಾರೆ.

ರಾಕ್ಷಸನ ಚಿತ್ರದ ಎಲೆಯು ಗಂಜೀಫಾ ಕಲೆಯಲ್ಲಿಯೂ ಕಂಡುಬರುತ್ತದೆ. ರಾಕ್ಷಸನ್ನು ನೀಲಿವರ್ಣದಿಂದ ಚಿತ್ರಿಸಿದ್ದಾರೆ. ಹಿನ್ನೆಲೆಯನ್ನು ಗಾಢ ವರ್ಣ ಲೇಪಿಸಿ ಹಳದಿವೃತ್ತದ ರೇಖೆಯ ಒಳಗೆ ಚಿತ್ರಿಸಿದ್ದಾರೆ. ಡೊಳ್ಳುಹೊಟ್ಟೆ ಹಾಗೂಪಂಚೆಹುಟ್ಟಿರುತ್ತಾನೆ. ಕಿವಿಗೆ ಓಲೆ ತೊಟ್ಟು ಬಲವನ್ನು ಪ್ರದರ್ಶಿಸುತ್ತಿದ್ದಾನೆ ಎನ್ನುವಂತೆ ರಚನೆ ಮಾಡಿದ್ದಾರೆ.

ಮತ್ತೊಂದು ಎರಡು ಕಡೆ ಗಿಣಿ ಇರುವ ಚಿತ್ರವು ಸಹ ಇದೆ. ವರ್ಣ ಸಂಯೋಜನೆಯಲ್ಲಿ ಜೋಡಿಗಿಣಿ ಸಂಭಾಷಿಸುತ್ತಿರುವಾಗೆ ಇರುವ ಗಿಳಿಗಳನ್ನು ಚಿತ್ರಿಸಿದ್ದಾರೆ. ಮತ್ತೊಂದು ಚೇಳಿನ ಚಿತ್ರವಿರುವ ಎಲೆಯು ಕಂಡುಬರುತ್ತದೆ. ಇದು ರಾಶಿಯ ಆಟದ ಎಲೆಯಾಗಿದೆ. ಇದು ಸಹ ಅದೇ ಹೆಚ್ಚು ಕಮ್ಮಿ ವರ್ಣ ಸಂಯೋಜನೆಯಾಗಿದೆ. ಈ ಐದು ಎಲೆಗಳು ಗ್ರಾಮೀಣ ಸೊಗಡು ಹಾಗೂ ಪ್ರಕೃತಿ ಪ್ರತಿನಿಧಿಯಂತಿದೆ.

೫.೬, ಒರಿಸ್ಸಾ ದಶಾವತಾರಿ ಗಂಜೀಫಾ ಚಿತ್ರದ ಎಲೆಗಳು

ಒರಿಸ್ಸಾಶೈಲಿಯ ಗಂಜೀಫಾ ಎಲೆಗಳು ಹದಿನೇಳು ಎಲೆಗಳು ಇದ್ದು ಅದರಲ್ಲಿ ಅನೇಕ ವಿಶೇಷ ಆಕೃತಿಗಳನ್ನು ಚಿತ್ರಿಸಿದ್ದಾರೆ. ಒರಿಸ್ಸಾದ ಚಿತ್ರಕಾರರ ಅಡ್ಡ ಹೆಸರು ಮಹಾಪಾತೋ ಅಥವಾ ಮಹಾರಾಣ ಎಂದು. ಅಲ್ಲಿ ರಘುರಾಜಪುರ, ದಂಡೋಷಾಯಿ, ಪುರಿಪಟ್ಟಣದ ಪರ್ಲಕಿಮೇಡಿ, ಸೇನೆಪುರ, ಕೋರಾಪುಟ ಚಿತ್ರಕಾರರಿದ್ದಾರೆ. ದಶಾವತಾರ ಗಂಜೀಫಾ ಎಲೆಗಳ ೧೨-೧೬ ಮತ್ತು೨೦ ಸೆಟ್‌ಗಳಿವೆ ಹಾಗೂ ದೇವತೆ ಮತ್ತು ವೀರರನ್ನು ಪ್ರತಿನಿಧಿಸುತ್ತದೆ. ಹಿಂದೂತ್ವವನ್ನು ಹಾಗೂ ರಾಮಾಯಣ ಗುಲಾಮ್‌ಗುಲಾಬ್ ಎಂದು, ಗಂಜೀಫಾ ಅಥವಾ ಗಂಜೀಪ್ಪಾ ಎಂದು ಇವರಲ್ಲಿ ಕರೆಯುತ್ತಿದ್ದರು.

ಒರಸ್ಸಾ ದಶಾವತಾರಿಯಲ್ಲಿ ಕಡುಕೆಂಪುವರ್ಣ ಎಲೆಗಳಾಗಿರುತ್ತದೆ. ಅದರಲ್ಲಿ ಮೀನು, ಜಿಂಕೆ, ಮಹಿಳೆ, ನರಸಿಂಹ, ದಂಪತಿಗಳು, ಕೂರ್ಮ, ಮತ್ಸ್ಯ ಕಲ್ಕಿನ್, ಕಾರ್ತಿಕೇಯ, ಜಗನಾಥ ಇತ್ಯಾಧಿ ದೇವತೆಗಳು ಕಂಡುಬರುತ್ತಾರೆ. ಐದು ದೊಡ್ಡೆಲೆಗಳ ಜೊತೆಗೆ ಚಿಕ್ಕಎಲೆಗಳಲ್ಲಿಯೂ ಚಿತ್ರಿಸಿದ್ದಾರೆ. ವೃತ್ತಾಕಾರದಲ್ಲಿ ಆಕೃತಿಗಳನ್ನು ಸಂಯೋಜಿಸಿ, ಕೌಶಲ್ಯದಿಂದ ಕಲಾವಿದರು ಚಿತ್ರಿಸಿದ್ದಾರೆ. ರೇಖೆಯ

ಆಕೃತಿಯ ಹೊರಭಾಗವನ್ನು ನಿರ್ಧರಿಸುತ್ತದೆ. ಸೂಕ್ಷ್ಮಚಲನಾ ರೇಖೆಯನ್ನು ಎಳೆದಿರುತ್ತಾನೆ. ಚಿತ್ರಗಳಲ್ಲಿ ಭಾವನೆಯು ಕಣ್ಣು, ಅಂಗಾಂಗಗಳಲ್ಲಿ ಸರಿಯಾಗಿ ಹೊಂದುವಂತೆ ತೋರಿಸಿದ್ದಾರೆ. ಈ ಮೈಸೂರಿನ ಜಿಲ್ಲೆಯಲ್ಲಿ ಕಾಗದ, ರಟ್ಟು, ಹಾಳೆ, ತಾಳೆಗರಿಯಲ್ಲಿ ಈ ಸುತ್ತೂರಿನಲ್ಲಿ ಕಂಡುಬಂದಿದೆ.

೫.೮, ತಾಳೆಗರಿಯಲ್ಲಿ ಗಂಜೀಫಾ ಚಿತ್ರಕಲೆ

ಸುತ್ತೂರಿನಲ್ಲಿ ಅತಿ ವಿಶೇಷವಾಗಿರುವುದೆಂದರೆ ತಾಳೆಗರಿಯಲ್ಲಿ ಗಂಜೀಫಾ ಚೌಕ್ಕಕಾರದ ಎಲೆಗಳು ಇರುವುದು ಈ ಸಂಶೋಧನೆಯಲ್ಲಿ ವಿಶೇಷವಾಗಿದೆ. ಅನ್ನಿಸುತ್ತದೆ. ಏಕೆಂದರೆ ಚರ್ಮ, ಬಟ್ಟೆ, ಕಾಗದ, ರಟ್ಟು, ಹಾಳೆ ಹಾಗೆ ತಾಳೆಗರಿಯಲ್ಲಿ ಗಂಜೀಫಾ ಚಿತ್ರಕಲೆ ಚಿತ್ರಿಸಿದ್ದಾರೆ. ಅದರಲ್ಲಿ ಚಿತ್ರಗಳು ಸಸ್ಯ, ಕೊಡಲಿ, ಜೋಡಿ ನವಿಲುಗಳು, ಕತ್ತಿ, ಹೂವುಗಳು, ಇರುವ ರೇಖಾಚಿತ್ರಗಳಲ್ಲಿ ಇವೆ ಅದನ್ನು ಹಸ್ತಪ್ರತಿಯ ಲಿಪಿಯನ್ನು ರೇಖಿಸುವ ಕಂಠದಂತಹ ಲೇಖನಿಯಿಂದ ರೇಖಿಸಿ ನಂತರ ಮಸಿ ತುಂಬಿದ್ದಾರೆ. ಐದು ಎಲೆಗಳು ಒಂದೊಂದು ರೀತಿ ಇರುತ್ತದೆ. ಈ ತಾಳೆಗರಿಯಲ್ಲಿ ರೇಖೆಗಳಿಂದ ಚಿತ್ರಿಸಿದ ಗಂಜೀಫಾ ಎಲೆಗಳು ತುಂಬ ಕೂತೂಹಲದಿಂದ ಕೂಡಿದೆ. ಚಿಕ್ಕಚಿಕ್ಕ ಅಳತೆಯಲ್ಲಿ ನಿರ್ಮಿಸಿದ್ದಾರೆ. ಐದು ಎಲೆಗಳು ಒಂದೇ ಅಳತೆಯಿಂದ ಇರುತ್ತದೆ.

ತಾಳೆಗರಿಯ ಗಂಜೀಫಾದ ಮೇಲೆ ಅಲಂಕಾರಿಕ ಚಿತ್ರಗಳು

ತಾಳೆಗರಿ ಗಂಜೀಫಾ ಚಿತ್ರದಲ್ಲಿ ಐದು ಎಲೆಗಳು ಬೇರೆಬೇರೆ ಚಿತ್ರಗಳು ಇದ್ದು ಅದರಲ್ಲಿ ಇರುತ್ತದೆ. ಒಂದೊಂದು ಪ್ರಾಣಿ ಪಕ್ಷಿ, ಆಯುಧಗಳ ಚಿತ್ರಗಳು ಇರುತ್ತದೆ. ಮೊದಲನೆಯ ಎಲೆಯಲ್ಲಿ ೯ಕತ್ತಿಗಳು ಚಿತ್ರಗಳು ಇರುತ್ತದೆ. ಒಂದೇ ತರದಾಗಿರುತ್ತದೆ. ಮೇಲೆ ಕೆಳಗೆ ಸರಳರೇಖೆಯನ್ನು ಎಳೆದಿರುತ್ತಾರೆ. ಮತ್ತೊಂದರಲ್ಲಿ ೮ಹೂವಿನ್ನು ಚಿತ್ರಿಸಿರುವ ಚಿತ್ರದ ಎಲೆ ಇರುತ್ತದೆ. ಏಂಟು ಹೂವುಗಳು ಸಹ ಒಂದನೊಂದು ತದ್ರುಪ್ಪಾದಂತೆ ಇರುತ್ತದೆ. ಆನಂತರದ ಎಲೆಯಲ್ಲಿ ಎರಡು ನವಿಲುಚಿತ್ರವಿರುವ ಎಲೆಯು ಸಹ ಕಂಡುಬರುತ್ತದೆ. ಒಂದರ ಹಿಂದೆ ಮತ್ತೊಂದು ನವಿಲು ಇರುವಂತೆ ಚಿತ್ರಿಸಲಾಗಿದೆ. ಮೇಲೆ ಕೆಳಗೆ ರೇಖೆಗಳನ್ನು ಎಳೆದಿರುತ್ತಾರೆ. ಹಾಗೇ ಮತ್ತೊಂದು ಎಲೆಯಲ್ಲಿ ಕೊಡಲಿ ಇರುವ ಚಿತ್ರದ ಎಲೆ ಇರುತ್ತದೆ. ಅದು ಪರಶುರಾಮನ ಸಂಕೇತವಾದ ವಿಷ್ಣುವಿನ ಅವತಾರದ ಸಂಕೇತದ ಚಿತ್ರವಾಗಿರುತ್ತದೆ. ಕೊನೆಎಲೆಯಲ್ಲಿ ಸರಳ ರೇಖೆಯಲ್ಲಿ ಅಲಂಕಾರಿಕ ರೇಖಾಚಿತ್ರವಿದೆ.

೫.೯, ಪ್ರಮುಖ ಗಂಜೀಫಾ ಕಲಾವಿದರುಗಳು

ಅರಸರ ಆಶ್ರಯ ತಪ್ಪಿದ ನಂತರ ಕರ್ನಾಟಕದಲ್ಲಿ ಗಂಜೀಫಾ ಕಲೆಯು ನಶಿಸುವ ಹಾದಿ ಇಡಿಯಿತು. ಅದರಲ್ಲಿ ಪ್ರಮುಖವಾಗಿ ಮೈಸೂರು ಭಾಗವು ಸೇರಿದೆ. ಅತಿ ಮುಖ್ಯವಾಗಿ ನಮ್ಮವರು ವಿದೇಶಿಯರಿಗೆ ಮಾರುತ್ತಿದ್ದರು. ಜೊತೆಗೆ ಆಟ ಆಡುವವರು ಸಹ ಇಲ್ಲಾವಾಗಿದ್ದಾರೆ. ಆದ್ದರಿಂದ ಈ ಕಲೆ ಮೂಲೆಗುಂಪಾಗಿದೆ.

ಈ ಸಮಯದಲ್ಲಿ ಸ್ವಂತ ಪ್ರತಿಭೆಯಿಂದ ರಘುಪತಿಭಟ್ ಎಂಬ ಕಲಾಸಾಧಕ ಮೈಸೂರು ಸಾಂಪ್ರದಯಿಕ ಶೈಲಿಯಲ್ಲಿ ಚಿತ್ರಗಳನ್ನು ಬರೆದು ಉಳಿಸಿ ಬೆಳೆಸಿದ ಪ್ರಮುಖ ಕಲಾವಿದ. ಈ ಕಲೆಯ ಅನೇಕ ರೇಖಾಚಿತ್ರಗಳನ್ನು ಅವರು ರಚಿಸಿರುತ್ತಾರೆ. ಇವರಿಗೆ ರಾಜ್ಯ, ಮತ್ತು ರಾಷ್ಟ್ರಪ್ರಶಸ್ತಿಯೂ ದಕ್ಕಿರುತ್ತದೆ. ಅದರಲ್ಲಿ ೧೯೯೦ರಲ್ಲಿ ವಿಶ್ವಕರ್ಮಪ್ರಶಸ್ತಿ ಮತ್ತು ೧೯೯೪ರಲ್ಲಿ ರಾಷ್ಟ್ರಪ್ರಶಸ್ತಿಯು ಸಿಕ್ಕಿರುತ್ತದೆ. ಇವರು ಪ್ರದರ್ಶನ, ಪ್ರತ್ಯಕ್ಷಿಕೆ, ಕಲಾಮೇಳಗಳಲ್ಲಿ ಭಾಗವಹಿಸಿ, ಅನೇಕ ಏಕವ್ಯಕ್ತಿ ಪ್ರದರ್ಶನವನ್ನು ದೇಶವಿದೇಶಗಳಲ್ಲಿ ಇವರು ಅಯೋಜಿಸಿದ್ದಾರೆ. ಸಂಪ್ರದಾಯ ಶೈಲಿಯಲ್ಲಿ ಚಿತ್ರಿಸಿದರು. ಸ್ವತಃ ತಮ್ಮದೇ ಶೈಲಿಯಲ್ಲಿ

ಸಂಪ್ರದಾಯ ಚಿತ್ರವನ್ನು ಚಿತ್ರಿಸುತ್ತಾರೆ. ಅವುಗಳು ಗಣಪತಿ ಸಚ್ಚಿದಾನಂದ ಆಶ್ರಮದ ಮ್ಯೂಸಿಯಂನಲ್ಲಿ ಹಾಗೂ ರಾಜ್ಯ ಮತ್ತು ವಿದೇಶದಲ್ಲಿಯೂ ಇವರ ಚಿತ್ರಗಳು ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿದೆ.

ಗಂಜೀಫಾ ಕಲೆಯನ್ನು ಸಹ ಅರಮನೆಯ ಕಲಾವಿದರು ಸಂಪ್ರದಾಯ ಕಲೆಯ ಜೊತೆಗೆ ಮಾಡುತ್ತಾ ಗಂಜೀಫಾ ಚಿತ್ರಕಲೆಯನ್ನು ಸಹ ಚಿತ್ರಿಸುತ್ತಿದ್ದರು. ಅವರಲ್ಲಿ ಮುಖ್ಯವಾಗಿ ಸೋಮವಂಶದ ಕ್ಷತ್ರಿಯರಾದ ರಾಜಮನೆತನದವರು ಅನಚಿತರದಲ್ಲಿ ವೀರಣ್ಣ, ಮುದ್ದಯ್ಯ, ಸುಬ್ರಹ್ಮಣ್ಯರಾಜು, ವಿಶ್ವೇಶ್ವರರಾಜು, ತಿಪ್ಪಾಜಿ, ಮಧುಗಿರಿನಂಜಪ್ಪ, ವೈಸೂದಯ್ಯ, ಇವರುಗಳು ಅರಮನೆಯ ಗಂಜೀಫಾ ಚಿತ್ರ ಕಲಾವಿದರುಗಳಾಗಿರುತ್ತಾರೆ. ಗಂಜೀಫಾ ಕಲಾಕೃತಿಯಲ್ಲಿ ಕೆಲವೊಮ್ಮೆ ತಮ್ಮ ಹೆಸರುಗಳನ್ನು ಸಾಸುವೆ ಕಾಳಿನ ಸಣ್ಣಅಕ್ಷರಗಳಿಂದ ಬರೆದಿದ್ದಾರೆ.

ಮುಂದಿನ ಪರಂಪರೆಗೆ ಸೇರಿದ ಆಧುನಿಕ ಕಾಲದ ಕಲಾವಿದರು ರಘುಪತಿಭಟ್ಟ, ಆರ್.ಶಿವಕುಮಾರ್ ನಂತರದಲ್ಲಿ ಬಿ.ಪಿ.ರಾಮಕೃಷ್ಣಪ್ಪ, ಎಂ.ಎಂ. ರಾಘವೇಂದ್ರ, ಎಂ.ಗಿರಿಜಾ, ಪ್ರಭಾಮಲ್ಲೇಶ್, ಸರಸ್ವತಿ ಬಸವರಾಜ್ ಕವಿತಾಮೂರ್ತಿಯವರು, ಸುಷ್ಮಾ ಮುಕ್ತ ವೆಂಕಟೇಶ್, ಶ್ರೀರೂಪಾ, ಎಸ್. ಮಾಧವ್, ರಾಜಲಕ್ಷ್ಮೀ, ಜಯಾಹೇರ್ಳ, ಇನ್ನೂ ಮುಂತಾದ ಗಂಜೀಫಾ ಕಲೆಯ ಕಲಾವಿದರುಗಳು ಈ ಕಲೆಯನ್ನು ಉಳಿಸಿ ಬೆಳೆಸುತ್ತಿದ್ದಾರೆ. ಈ ಭಾಗದಲ್ಲಿ ಮೈಸೂರಿನಲ್ಲಿ ನೆಲೆಸಿರುವ ಅನುಭವಿ ಕಲಾವಿದೆ. ಶ್ರೀಮತಿ ಎಂ. ಗಿರಿಜಾ ಅವರು ಬಿ.ಎನ್. ಗಣೇಶರಾವ್ ಹಾಗೂ ದಿ.ವೈಸುಬ್ರಹ್ಮಣ್ಯರಾಜು ಅವರುಗಳಿಂದ ಈ ಕಲೆಯ ಸೂಕ್ಷ್ಮತೆಗಳನ್ನು ಅರಿತಿದ್ದಾರೆ. ಇವರು ವಿಜ್ಞಾನ ವಿದ್ಯಾರ್ಥಿಯಾಗಿದ್ದು ನಂತರ ಕಲಾವಿದ್ಯಾರ್ಥಿಯಾಗಿ ಮೈ.ವಿ.ವಿ.ಮೈಸೂರು. ಅಲ್ಲಿ ಡಿಸೈನ್ ಸೆಂಟರ್‌ನಲ್ಲೂ ಹಾಗೂ ಕಲಾಶಾಲೆ ಶಿಕ್ಷಣ ನೀಡಿದ್ದಾರೆ. ಇವರಿಗೆ ಕರ್ನಾಟಕದ ಕರಕುಶಲ ರಾಜ್ಯಪ್ರಶಸ್ತಿಯನ್ನು ನೀಡಿಗೌರವಿಸಿದೆ. ಇವರ ಕಲಾಕೃತಿಗಳು ಮೈಸೂರು ಹಾಗೂ ಮದರಾಸು, ಇಸ್ಕಾನ್ ಇನ್ನೂ ಮುಂತಾದ ಸ್ಥಳಗಳಲ್ಲಿ ಇವರ ಚಿತ್ರಗಳು ಸಂಗ್ರಹವಿದೆ.

ಭಾರತೀಯ ಗಂಜೀಫಾ ನಕಾಶೆಷೆಯಲ್ಲಿ ಕರ್ನಾಟದ ಹೆಸರನ್ನು ಹಸಿರು ಆಗಿರುವ ಹಾಗೆ ಇವರು ನೋಡಿಕೊಂಡಿದ್ದಾರೆ. ಈ ಕಲೆಯು ಮೊಗಲ್‌ಕಲೆ, ಭಾರತಿಯ ಸಂಪ್ರದಾಯಕಲೆ, ವಿಜಯನಗರ ಭಿತ್ತಿಚಿತ್ರಕಲೆ, ಮೈಸೂರು ಸಂಪ್ರದಾಯಕಲೆ ಮತ್ತು ಹಸ್ತಪ್ರತಿ ಚಿತ್ರಕಲೆಯು ಇದಕ್ಕೆ ಹೆಚ್ಚು ಪ್ರೇರಣೆ ನೀಡಿದ ಕಲೆಯಾಗಿ ಕಂಡುಬರುತ್ತದೆ. ಈ ಗಂಜೀಫಾ ಕಲೆಯಲ್ಲಿ ತೌಲನಿಕವಾಗಿ ನೋಡಿದಾಗ ಕಾಗದ, ಬಟ್ಟೆ, ರಟ್ಟು, ಚರ್ಮ,ತಾಳೆಗರಿಗಳ ಮೇಲೆ ಮತ್ತು ಅನೇಕ ಶೈಲಿಯಲ್ಲಿ ನಿರ್ಮಾಣವಾಗಿರುವ ಗಂಜೀಫಾ ಚಿತ್ರಕಲೆಯು ಆಯತಾಕಾರಕ್ಕಿಂತ ವೃತ್ತಾಕಾರದ ಅಳತೆಯಲ್ಲಿ ಹೆಚ್ಚು ಚಿತ್ರಗಳು ಇರುವುದು ಕಂಡುಬರುತ್ತದೆ.

ಸುತ್ತೂರು ಸಂಗ್ರಹಾಲಯದಲ್ಲಿ ಮೈಸೂರು ಶೈಲಿಯ ಈ ಗಂಜೀಫಾ ಎಲೆಗಳನ್ನು ತೌಲನಿಕವಾಗಿ ತೆಗೆದುಕೊಳ್ಳಬಹುದು. ವರ್ಣಗಾರಿಕೆ ಒಂದೇ ರೀತಿ ಇದ್ದು, ವರ್ಣಗಳು ಸಹ ಖನಿಜ ಮತ್ತು ಸಸ್ಯ ಮೂಲಗಳಿಂದಲೇ ಎಲ್ಲರು ಪಡೆದಿದ್ದಾರೆ. ಆಕೃತಿಯ ಶೈಲಿಯಲ್ಲ ಅಷ್ಟೇ ಬದಲಾವಣೆ ಕಂಡುಬರುತ್ತದೆ. ಎಲ್ಲಾ ಚಿತ್ರಗಳು ಧಾರ್ಮಿಕ ಹಿನ್ನೆಲೆಯ ಅಂಶವನ್ನೆ ಪ್ರಧಾನವಾಗಿ ಪ್ರತಿಬಿಂಬಿಸುತ್ತದೆ. ಗಂಜೀಫಾ ಚಿತ್ರ ರಚನೆಯಾದ ಮೇಲೆ ಮೆರಗೆಣ್ಣೆ ಅಥವಾ ಹಚ್ಚೆಎಣ್ಣೆ (ವಾರ್ನಿಷ್) ಮೆರಗಿಗೆ ಬಳಿಯುವುದು ಸಹ ವಿಶೇಷವಾಗಿ ಕಂಡುಬರುತ್ತದೆ.

ಆಧುನಿಕ ಕಾಲದಲ್ಲಿ ಕಂಡುಬರುವ ಇಸ್ಪಿಟ್ ಆಟದ ಎಲೆಯು ಗಂಜೀಫಾ ಆಟದ ಎಲೆಗಳ ಪ್ರೇರಣೆಯಿಂದ ಇಂದು ಇಸ್ಪೀಟ್ ಎಲೆಗಳಾಗಿ ನಮ್ಮೆಲ್ಲರ ಮುಂದೆ ಈಗ ಇರುತ್ತದೆ. ಅದು ಒಂದು ಆಟವೇ ಆಗಿದೆ. ಅದರಲ್ಲಿ ರಾಜ, ರಾಣಿ, ಜೋಕರ್, ಎಕ, ಜಾಕಿ, ಇದ್ದು ೫೨-೫೪ಳ ಎಲೆಗಳು ಇರುತ್ತದೆ.

ವರ್ಣವು ಸಹ ವಿವಿಧ ವರ್ಣಗಳಿಂದ ಸಹ ಗುರುತಿಸಿ ಆಡುತ್ತಾರೆ. ಆಧುನಿಕ ಇಸ್ಪೀಟ್ ಆಟವನ್ನು ಎಲ್ಲಾವರ್ಗದ ಜನರು ಹೆಣ್ಣುಗಂಡು, ಮಕ್ಕಳು ಮತ್ತು ವಯೋಮಾನದವರು ಹಾಗೂ ಅನೇಕ ಗುಂಪಿನ ಜನರೆಲ್ಲಾ ಸೇರಿ ಆಟ ಆಡುತ್ತಾರೆ. ಆಟವಾಡಲು ಒಬ್ಬರಿಂದ ೮-೧೨ ಜನರವರೆಗೆ ಸೇರಿ ವೃತ್ತಾಕಾರದಲ್ಲಿ ಕುಳಿತು ಆಟವಾಡುತ್ತಾರೆ. ಮನೆ, ತೋಟದ ಅಂಗಳ, ಕ್ಲಬ್ ಹಾಗೂ ಹಬ್ಬಹರಿ ದಿನಗಳಲ್ಲಿ ಜನರು ಸೇರಿ ಆಟ ಆಡುತ್ತಾರೆ. ಕಾಗದ, ಪ್ಲಾಸ್ಟಿಕ್ ಹಾಳೆಗಳಲ್ಲಿ ಮುದ್ರಿತ ಇಸ್ಪಿಟ್ ಎಲೆಗಳನ್ನು ಆಟಕ್ಕೆ ಬಳಸುತ್ತಾರೆ. ಕೆಲವು ಬೀದಿಸಾಲುಗಳಲ್ಲಿ, ಊರಿನ ಹಬ್ಬ, ಹಳ್ಳಿಜಾತ್ರೆಯಲ್ಲಿ ವಿಶೇಷವಾಗಿ ಆಡುತ್ತಾರೆ. ಅದರಲ್ಲಿ ದೇವರಚಿತ್ರ, ಹಾಗೂ ಸಿನಿಮಾನಟರ ಚಿತ್ರಗಳಿರುವ ಎಲೆಗಳಿಂದ ಆಟಆಡುತ್ತಾರೆ. ಹಾಗೆ ಲಾಟರಿ ಆಟವು ಇದರ ಪ್ರೇರಣೆಯಿಂದ ಬಂದ ಆಟದ ಬಗ್ಗೆಯೇ ಆಗಿದೆ.

ಈ ಆಧುನಿಕ ಕಾಲದಲ್ಲಿ ಗಂಜೀಫಾ ಕಲೆಯನ್ನು ಬರಿ ಕಲೆಯಾಗಿ ಕಲಿಸುತ್ತಾರೆ. ಮತ್ತು ಕಲೆಯಾಗಿ ನೋಡುತ್ತಿದ್ದಾರೆ. ಮನೆಗಳಲ್ಲಿ ಸೌಂದರ್ಯ ಹೆಚ್ಚಿಸಲು ಸಹ ಈಗ ಇಟ್ಟುಕೊಂಡಿದ್ದಾರೆ. ಮೊದಲಿನಂತೆ ಕಲೆ ಮತ್ತು ಆಟವಾಗಿ ಈಗ ಕಂಡುಬರುವುದಿಲ್ಲ. ಆದರೆ ಗಂಜೀಫಾ ಕಲೆಯು ಬರಿಕಲೆಯಾಗಿ, ಇಂದು ಕಂಡುಬರುತ್ತಿದೆ. ಕಲೆಯ ಮೂಲ ಉದ್ದೇಶ ಪರಿಪೂರ್ಣವಾದ ಈ ಬದುಕಿನಿಂದ ಪೂರ್ಣತ್ವ ಪಡೆಯುವುದೇ ಆಗಿದೆ ಎಂದು ಸಾರುತ್ತದೆ. ಈ ಕಲೆಯ ಹಿಂದೆ ವಿವಿಧ ರೀತಿಯಲ್ಲಿ ಹೀಗೆ ಬೆಳೆದಿದೆ. ಇಂದು ಕಾಣುವ ಇತಿಹಾಸ ಆಟದ ಎಲೆಗಳು ನಮ್ಮೆಲ್ಲರ ಆಸ್ತಿಯಾಗಿ ಅಲ್ಲಲ್ಲಿ ಸಂಗ್ರಹವಾಗಿರುವುದನ್ನು ಕಂಡು ನೋಡುವುದರಲ್ಲೆ ಖುಷಿಪಡಬೇಕಾಗಿದೆ.

ಮತ್ತು ರಕ್ಷಣೆಗೆ ಮಹತ್ವಕೊಡಬೇಕಾಗಿದೆ, ಇರುವವರಲ್ಲಿ ಆದನ್ನು ಹಾಳುಮಾಡದಂತೆ ಅವರಿಗೆ ಪ್ರೇರೇಪಿಸುವ ಕಾರ್ಯವಾಗಬೇಕಾಗಿದೆ. ಏಕೆಂದರೆ ನಮ್ಮ ನಾಡಿನ ಹೆಮ್ಮೆಯ ಗಂಜೀಫಾ ಕಲೆಯಾಗಿದೆ. ಇದರಲ್ಲಿಯೂ ಅನೇಕ ಮಾನವಕೃತಿಗಳು, ಪಕ್ಷಿ-ಪ್ರಾಣಿ, ಹೂವು, ಗಿಡಗಳು ಅನೇಕ ಕಾಲ್ಪನಿಕ ವಸ್ತುವಿನ ಚಿತ್ರಗಳು ವಿಶೇಷವಾಗಿ ಕಂಡು ಬರುತ್ತದೆ.


~~~~~~~~~~~~~~~oo~~~~~~~~~~~~~~~~
~~~~~~~~~~~~~~~

ಜಗನ್ಮೋಹನ ಅರಮನೆಯ ಗಂಜೀಫಾ ಚಿತ್ರಗಳು





ಸುತ್ತೂರು ಮಠದ ವಸ್ತುಸಂಗ್ರಹಾಲಯದ ತಾಳೆಗರಿ ಗಂಜೀಫಾ ಚಿತ್ರಗಳು





ಸುತ್ತೂರು ಮಠದ ವಸ್ತುಸಂಗ್ರಹಾಲಯದ ಗಂಜೀಫಾ ಚಿತ್ರಗಳು





ಮೈಸೂರು ಶೈಲಿಯ ಗಂಜೀಫಾ ಚಿತ್ರಗಳು



ರಘುಪತಿಭಟ್ ಅವರ ಗಂಜೀಫಾ ಚಿತ್ರಗಳು





ಎಂ.ಗಿರಿಜಾ ಅವರ ಗಂಜೀಫಾ ಚಿತ್ರಗಳು



ಅಧ್ಯಾಯ : ಆರು

ಮೈಸೂರು ಜಿಲ್ಲೆಯ ಗಾಜಿನ ಮೇಲಿನ ಚಿತ್ರಕಲೆ.

ಅಧ್ಯಾಯ: ಆರು

ಮೈಸೂರು ಜಿಲ್ಲೆಯ ಗಾಜಿನ ಮೇಲಿನ ಚಿತ್ರಕಲೆ

ಮಾನವನು ಅಭಿವ್ಯಕ್ತಿ ಸಾಧನವಾಗಿ ಕಲೆಯನ್ನು ಹಲವು ಮಾಧ್ಯಮಗಳಲ್ಲಿ ತನ್ನ ಇಚ್ಛೆಯಂತೆ ಹಲವು ಕಲೆಯನ್ನು ರೂಪಿಸಿದ್ದಾನೆ. ಮಾಧ್ಯಮಗಳಲ್ಲಿ ದುಡಿಸಿ, ಪೂರಕಗಳಾಗಿಸಿ, ಅತ್ಯುನ್ನತ ಕಲೆಯಾಗಿಸುತ್ತಾನೆ. ಚಿತ್ರಕಲೆಯು ಅತ್ಯಂತ ಪ್ರಾಚೀನ ಕಲಾಪ್ರಕಾರವಾಗಿದು ಆದಿಮಾನವನ ಕಾಲದಲ್ಲಿ ಪ್ರಮುಖವಾಗಿ ಶಿಲಾಮಾಧ್ಯಮದ ಮೇಲೆ ಚಿತ್ರಕಲೆ ರಚನೆಯಾಗಿದೆ. ನಾಗರೀಕತೆ ಪದ್ಧತಿಗೆ ಬಂದ್ದಂತೆ ಮರ, ಲೋಹ, ತಾಳೆಗರಿ, ಬಟ್ಟೆ, ಕಾಗದ, ರಟ್ಟು, ವಿವಿಧ ಮಾಧ್ಯಮದಲ್ಲಿ ಚಿತ್ರ ರಚನೆಗೊಂಡಂತೆ, ಗಾಜಿನ ಮೇಲೂ ರಚನೆಗೊಂಡಿದೆ. ಒಂದು ಉನ್ನತ ಪಾರದರ್ಶಕ ನುಣುಪಿನ ಮಾಧ್ಯಮವಾಗಿದೆ ಅದು. ಕ್ಲಾಸ್ಟಿಕ್‌ಸೋಡಾ, ಲೈಮ್ ಮತ್ತು ಉಸುಕುಗಳಿಂದ ಕೂಡಿದ ಒಂದು ವಿಶಿಷ್ಟವಸ್ತು ಆಗಿದೆ.

೧೮-೧೯ನೇ ಶತಮಾನದಲ್ಲಿ ಮೈಸೂರು ಭಾಗದಲ್ಲಿ ಗಾಜಿನ ಮೇಲಿನ ಚಿತ್ರಕಲೆಯು ಜನಪ್ರಿಯವಾದ ಕಲಾಮಾಧ್ಯಮವಾಗಿ ಬೆಳೆದಿದೆ. ಹಾಗಾಗಿ ಇದನ್ನು ಜನಪ್ರಿಯಕಲೆ ಎಂದು ಸಹ ಕರೆಯುತ್ತಾರೆ. ಈ ಪ್ರಕಾರದ ಚಿತ್ರಕಲೆಯನ್ನು ಮೈಸೂರು ಭಾಗದಲ್ಲಿ ಮದ್ರಾಸ್‌ಪಟ ಎಂದು ಕರೆಯುವುದುಂಟು. ಹಿಂದೆ ಪಾಶ್ಚಿಮಾತ್ಯ ಕಲೆಯಾದ ಈ ಕಲೆಯು ಭಾರತಕ್ಕೆ ಪಾಶ್ಚಿಮಾತ್ಯರ ವ್ಯಾಪಾರ ಸಂಪರ್ಕದಿಂದ, ರಾಜಕೀಯ ಆಡಳಿತ, ಅವರ ಧರ್ಮಪ್ರಸಾರದಿಂದ ಇಲ್ಲಿಗೆ ಬಂದಿದೆ. ಗಾಜಿನಚಿತ್ರ ತೂಗುಹಾಕುವ ಪದ್ಧತಿವು ಮುಸ್ಲಿಂರಿಂದ ಬಂದಿದ್ದು ಏಷ್ಯಖಂಡಕ್ಕೆ ಚೀನಿಯರಿಂದಲೂ ಬಂತು ಎಂದು ವಿದ್ವಾಂಸರು ತಿಳಿಸುತ್ತಾರೆ.[೧]

ಗಾಜಿನ ಚಿತ್ರಕಲೆಯನ್ನು ಎರಡು ರೀತಿಯಲ್ಲಿ ರಚಿಸುತ್ತಾರೆ. ಒಂದನೆಯದು ಗಾಜನ್ನು ಬೇಕಾದ ರೀತಿಯಲ್ಲಿ ಕತ್ತರಿಸಿ ಅಂಟಿಸಿರುವುದು, ಮತ್ತೊಂದು ಗಾಜಿನ ಮೇಲೆ ವರ್ಣಗಳಿಂದ ಚಿತ್ರ ರಚಿಸುತ್ತಾರೆ. ಅದರಲ್ಲಿ ತೈಲವರ್ಣ, ಜಲವರ್ಣ, ಟೆಂಪರ, ಆಕ್ರಲಿಕ್ ಬಣ್ಣ, ಬಂಗಾರದ ಬರಗ ಇತ್ಯಾದಿಗಳನ್ನು ಬಳಸುತ್ತಾರೆ.[೨]

೧. ಕೆ.ಎಸ್.ರಂಗಪ್ಪ, ಮೈಸೂರುದರ್ಶನ,ಪು.ಸಂ-೫೭
೨. ಡಾ.ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ (ಸಂ) ನಿಜದ ನೆಲೆ, ಪು.ಸಂ-೨೦೫

ಮೈಸೂರು ಜಿಲ್ಲೆಯಲ್ಲಿ ಗಾಜಿನ ಚಿತ್ರಕಲೆಯು ಪ್ರಾಚೀನ ಕಾಲದಿಂದಲೂ ಬೆಳೆದಿದೆ. ಇಲ್ಲಿ ಐತಿಹಾಸಿಕ ಮತ್ತು ಸಂಪ್ರದಾಯಕಾಲದಲ್ಲಿ ಮಹಾರಾಜರ ಭಾವಚಿತ್ರಗಳು, ಅಲಂಕಾರಿಕ ಚಿತ್ರಗಳು, ದೇವ-ದೇವತೆಯ ಚಿತ್ರಗಳು ಪೌರಾಣಿಕ ಕಥೆಯ ಅಂಶವುಳ್ಳಂತಹ ಚಿತ್ರಗಳನ್ನು ರಚಿಸಿದ್ದಾರೆ. ಇಲ್ಲಿನ ಅರಸರು ಗಾಜಿನಚಿತ್ರಗಳು ಕಲಾಪೋಷಕರಾಗಿ, ಕಲಾವಿದರಿಗೆ ಆಶ್ರಯದಾತನಾಗಿ ಈ ಕಲೆಯ ಪರಂಪರೆಯನ್ನು ಅದ್ಭುತವಾಗಿ ಬೆಳೆಸಿದ್ದಾರೆ. ದೇವಾಲಯ, ಅರಮನೆ, ಚರ್ಚ್, ಮಂದಿರಗಳಲ್ಲಿ ಅಂದು ಬೆಳೆಸಿದ ಕಲೆ, ಇಂದು ಕಲಾಸಂಪತ್ತು ಆಗಿ ದೇಶದಮೌಲ್ಯ ಹೆಚ್ಚಿಸಿದೆ.

ಆಧುನಿಕ ಕಾಲದಲ್ಲಿಯೂ ಅತಿಅವಶ್ಯಕ ಮತ್ತು ಉಪಯೋಗದ ಜೊತೆ ಬರಿ ವಸ್ತುವಾಗಿಲ್ಲದೆ. ಕಲೆಯನ್ನು ಪ್ರತಿನಿಧಿಸುವ ಕಲಾವಿದನಿಗೆ ಒಂದು ಉತ್ತಮ ಮಾಧ್ಯಮವಾಗಿದೆ. ಜನಸಾಮಾನ್ಯರ ನೆಚ್ಚಿನ ವಸ್ತುವಾಗಿದೆ. ಅದು ಹಲವು ವೈವಿಧ್ಯತೆಯಿಂದ ಕೂಡಿದ ಹಾಗೂ ಆಕಾರ, ಗಾತ್ರ, ಅಳತೆಯಲ್ಲಿ ದೊರೆಯುತ್ತದೆ. ಭಾರತದಲ್ಲಿ ಗಾಜಿನ ಪ್ರಾಚೀನತೆಯ ಬಗ್ಗೆ ಅನೇಕ ಆಧಾರಗಳು ಕಂಡುಬರುವುದು ಮೊದಲು ಸಾಹಿತ್ಯ ಆಧಾರಗಳಲ್ಲಿ ರಾಮಾಯಣ, ಮಹಾಭಾರತ ದಂತಹ ಮಹಾಕಾವ್ಯಗಳಲ್ಲಿ ಗಾಜಿನ ಕನ್ನಡಿ, ಕಲಾತ್ಮಕ ವಸ್ತುಗಳು ಇದರ ಬಗ್ಗೆ ಉಲ್ಲೇಖ ದೊರೆಯುತ್ತೆ. ನಂತರದಲ್ಲಿ ಐತಿಹಾಸಿಕವಾಗಿ ಮೌರ್ಯ, ಶಾತವಾನರು, ಗುಪ್ತರು, ಕುಶಾನರು ಮುಂತಾದ ಅರಸರ ಕಾಲದಲ್ಲಿ ಗಾಜಿನ ಚಿತ್ರಕಲೆಯ ಬಗ್ಗೆ ಉಲ್ಲೇಖಗಳು ಸಾಹಿತ್ಯದಲ್ಲಿ ಕಂಡುಬರುತ್ತದೆ.

ಕರ್ನಾಟಕದಲ್ಲಿ ಕದಂಬರು, ಚಾಲುಕ್ಯ, ರಾಷ್ಟ್ರಕೂಟರು, ಹೊಯ್ಸಳರು ವಿಜಯನಗರ ಮುಂತಾದ ಅರಸರ ಕಾಲದಲ್ಲಿ ಭೇಟಿ ನೀಡಿದಂತಹ ವಿದೇಶಿಪ್ರವಾಸಿಗರ ಪತ್ರ, ಪುಸ್ತಕಗಳಲ್ಲಿ ಗಾಜಿನ ಬಳಕೆ ಬಗ್ಗೆ ಬರೆದಿದ್ದಾರೆ. ಇನ್ನೂ ಉತ್ತಮ ಉದಾಹರಣೆ ಎಂದರೆ ನಮ್ಮ ನಾಡಿನ ಶೃಂಗಾರ ಶಿಲ್ಪಗಳಲ್ಲಿ ಗಾಜಿನ ಕನ್ನಡಿಯ ಬಳಕೆ ಇತ್ತು ಎಂಬ ಶಂಕೆ ಮೂಡಿಸುತ್ತದೆ.

ಗಾಜಿನ ಹುಟ್ಟು ಬೆಳವಣಿಗೆ : ಗಾಜಿನ ಹುಟ್ಟು ಮೊದಲು ಒಂದು ಆಕಸ್ಮಿಕ ಘಟನೆಯಿಂದ ಅದು ಸೃಷ್ಠಿಗೊಂಡಿದೆ. ಎಂದು ತಿಳಿದುಬರುತ್ತದೆ. ಈಜಿಪ್ಟನಿಂದ ವಾಷಿಂಗ್ ಸೋಡವನ್ನು ಪಿನಿಸಿಯನ್ನರು ಪಡೆಯುತ್ತಿದ್ದರು. ಅದನು ಹಡಗಿನಿಂದ ಸಾಗಿಸುತ್ತಿದ್ದರು. ಒಂದುಬಾರಿ ನಾವಿಕರು ಅಡಿಗೆ ಮಾಡಲು ಈ ವಾಷಿಂಗ್‌ದ ಹಿಂಟೆಯನ್ನು ಕಲ್ಲುಗಳಂತೆ ಬಳಸಿದ್ದರು. ಅದು ಬೆಂಕಿ ಕಾವಿಗೆ ಪಾರದರ್ಶಕ ದ್ರವದಂತೆ ಹರಿಯುವುದು ಅವರಿಗೆ ಗೋಚರಿಸಿತ್ತು.

ಮತ್ತೊಂದು ಘಟನೆಯು ಇಸ್ರೇಲಿನ ಕೆಲವು ಹುಡುಗರು ಆಕಸ್ಮಿಕವಾಗಿ ಅಲ್ಲಿನ ಕಾಡಿಗೆ ಬೆಂಕಿ ಹಚ್ಚಿದ್ದರು ಆ ಕಾಡಿನಲ್ಲಿ ಮರಳು ಮತ್ತು ಪೆಟ್ಲುಪ್ಪು ಕರಗಿ ದ್ರವರೂಪದ ಪ್ರವಾಹ ಹರಿಯಿತು. ಇದಿವೇ ಪ್ರಥಮ ಶೋಧನೆ ಎನ್ನುತ್ತಾರೆ.[೩] ಕ್ರಿ.ಶ.ಹೊತ್ತಿಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಉತ್ತಮ ಹಾಗೂ ಯಥೇಚ್ಛವಾಗಿ ಬಳಕೆಕಂಡಿತ್ತು. ನಂತರ ಆಧುನಿಕ ಕಲೆಯ ಪುನರ್‌ಜೀವನಕಲೆ, ಗಾಥಿಕ್, ಬಾರೋಕ್, ರೋಕೋಕೋ ಕಲೆಯಲ್ಲಿ ಗಾಜಿನ ಕಲಾತ್ಮಕ ಬಳಕೆಯು ಜೊತೆಗೆ ಗಾಜಿನಚಿತ್ರಕಲೆಯನ್ನು ವೈವಿಧ್ಯಮವಾಗಿ

ಮೈಸೂರು ಭಾಗದಲ್ಲಿ ೧೩ನೇ ಶತಮಾನದಲ್ಲಿ ಪ್ಯಾರಿಸ್‌ದೇಶದಿಂದ ಬಂದ ಅನೇಕ ಕ್ರೈಸ್ತಪಾದ್ರಿಗಳಿಂದ ಶ್ರೀರಂಗಪಟ್ಟಣದಲ್ಲಿ ನೆಲಸಿ ಧರ್ಮಪ್ರಚಾರದಲ್ಲಿ ತೊಡಗಿದರು. ನಂತರ ಮೈಸೂರು ಪ್ರಾಂತ್ಯದಲ್ಲಿ ಚರ್ಚ್‌ವೊಂದನ್ನು ಕಟ್ಟಿಸಿದ್ದರು ಆಗಿನಿಂದ ಇಲ್ಲಿ ಗಾಜಿನ ಚಿತ್ರಕಲೆಯು ಪ್ರಮುಖವಾಗಿ ಬೆಳೆಯಿತು.

೩. ನಿಂಗಪ್ಪ ಎಂ.ಅಂಗಡಿ, ಕರ್ನಾಟಕ ಗಾಜಿನ ಚಿತ್ರಕಲೆ, ಒಂದು ಅಧ್ಯಯನ ಪು.ಸಂ-೫೧

ಗಾಜಿನತಯಾರಿಕೆ : ಗಾಜಿನ ತಯಾರಿಕೆಗೆ ಮುಖ್ಯವಾಗಿ ಬೇಕಾದ ಕಚ್ಚಾ ವಸ್ತುಗಳು ಯಾವುವೆಂದರೆ ಗ್ಲಾಸ್ ಸ್ಯಾಂಡ್ ಕಬ್ಬಿಣದ ಸಂಯುಕ್ತರಹಿತ ಮರಳು (ಸಿಲಿಕ)೭೫% ರಷ್ಟು ಭಾಗ ನಂತರ ಸೋಡಖಾರ ಅಥವಾ ಸೋಡಿಯಂಕಾರ್ಬೋನೇಟ್ ೧೫% ಮತ್ತು ಸುಣ್ಣದಕಲ್ಲು(ಲೈಮ್‌ಸ್ಟೋನ್) ೧೦% ಜೊತೆಗೆ ಮ್ಯಾಗ್ನೇಷಿಯಂ ಬಳಸುತ್ತಾರೆ. ಇದನ್ನು ಕುಲುಮೆಯಲ್ಲಿ ಸೇರಿಸಿ ೧೪೮೦ ಡಿಗ್ರಿ ಸೆಲ್ಸಿಯಸ್ ಉಷ್ಣತೆಯಲ್ಲಿ ಗಾಜು ತಯಾರಾಗುತ್ತದೆ. ನಂತರ ಅನೇಕ ಪರೀಕ್ಷೆಯಿಂದ ಉತ್ತಮ ಗಾಜನ್ನು ಪಡೆದುಕೊಳ್ಳುತ್ತಾರೆ.

ಬಣ್ಣದ ಗಾಜುಗಳ ತಯಾರಿಕೆ : ಬಣ್ಣದ ಗಾಜುಗಳನ್ನು ಪಡೆಯಲು ಗಾಜಿನ ತಯಾರಿಕೆಯ ವೇಳೆಯಲ್ಲಿಯೇ ಕೆಲವು ಲೋಹದ ಆಕ್ಸೈಡ್ ಸಣ್ಣಪ್ರಮಾಣದಲ್ಲಿ ಬೆರೆಕೆ ಮಾಡುವುದರಿಂದ ಬೇಕಾದ ಬಣ್ಣದ ಗಾಜು ಪಡೆಯುತ್ತಾರೆ. ಉದಾಹರಣೆಗೆ ಬಿಳಿಗಾಜುನ್ನು ಪಡೆಯಲು ಕ್ಯಾಲಿಸಿಯಂ ಪ್ಲೋರೈಡ್, ಆರ್ಸಿನಿಯಸ್‌ಆಕ್ಸೈಡ್, ಅಲ್ಯೂಮಿನಿಯಂಆಕ್ಸೈಡ್, ಜಿಂಕ್ ಮತ್ತು ಕ್ಯಾಲ್ಸಿಯಂ ಪಾಸ್ಪೇಟುಗಳನ್ನು ಒಂದೊಂದಾಗಿ ಬೆರೆಸುವುದರಿಂದ ಬಿಳಿವರ್ಣ ಹಾಗೂ ಪಾರದರ್ಶಕ ಗುಣವನ್ನು ಪಡೆಯುತ್ತದೆ.

ಗಾಜುಗಳ ವೈವಿಧ್ಯತೆಗಳು: ಗಾಜನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬಳಸುವ ಸಲುವಾಗಿ ಅನೇಕ ಘಟಕಾಂಶಗಳನ್ನು ಬೆರೆಸಿ ವಿವಿಧ ರೀತಿಯ ಗಾಜನ್ನು ಪಡೆಯುತ್ತಾರೆ. ಹೊಳಪಿನ ಗಾಜು. ಅಲಂಕೃತಾಗಾಜು, ಸಂರಕ್ಷಕಗಾಜು ಗಾಜಿನ ದಾರ ಹಾಗೂ ರಂಗಿನ ಗಾಜು ಮತ್ತು ರೋಲ್ಡೋಗ್ಲಾಸ್, ಷೀಟ್‌ಗ್ಲಾಸ್, ಪ್ಲೇಟ್‌ಗ್ಲಾಸ್, ಗಾಜಿನಸುರುಳಿ, ಹಾಳೆಗಾಜು, ತಟ್ಟೆಗಾಜು, ಹೀಗೆ ಇರುತ್ತದೆ. ಉದಾಹರಣೆಗೆ ಸೆಲ್ಯೂಲೋಸ್ ಆಸಿಟೇಟ್ ಎಂಬ ವಸ್ತುವಿನಿಂದ ತಯಾರಿಸಿದ ಗಾಜನ್ನು ಮೋಟಾರು ವಾಹನಗಳಲ್ಲಿ ಬಳಸಲಾಗುತ್ತದೆ. ಸೂಕ್ಷ್ಮದರ್ಶಕ, ದೂರದರ್ಶಕ ಮೊದಲಾದವುಗಳಲ್ಲಿ ವಿಶಿಷ್ಟ ಜಾತಿಯ ಗಾಜನ್ನು ಬಳಸಲಾಗುತ್ತದೆ.[೪]

ಯಾವುದೇ ಚಿತ್ರಕಲೆ ರೂಪುಗೊಳ್ಳಬೇಕಾದರೆ ಅದಕ್ಕೆ ಸೂಕ್ತವಾದ ಫಲಕ ಹಾಗೂ ಚಿತ್ರರಚನೆಗೆ ಬೇಕಾಗುವ ಪರಿಕರಗಳು ಬೇಕಾಗುತ್ತದೆ. ಪ್ರಾಚೀನರಿಂದಲೂ ಇದು ಇಂದಿನವರೆಗೂ ಕಂಡುಬರುತ್ತದೆ. ಆದರೆ ಗಾಜನ್ನು ಬಳಸುವ ಕಲಾವಿದನು ತಾಳ್ಮೆ ಹಾಗೂ ಜಾಗೃತಿಯನ್ನು ಹೊಂದಿರಬೇಕಾಗುತ್ತದೆ. ಜೊತೆಗೆ ಅವನು ಬಳಸುವ ಗಾಜು ಪಾರದರ್ಶಕವಾಗಿಯೂ ಮತ್ತು ಅದರ ಮೇಲ್ಮೈ ನುಣುಪಾಗಿ ಇರಬೇಕಾಗಿರುವುದು ಹೊಳಪಾಗಿರುವುದರಿಂದ ರೇಖೆ, ಬಣ್ಣಗಳು ಜಾರುವ ಸಂಭವವೇ ಜಾಸ್ತಿ. ಹೀಗಿದ್ದರೂ ಗಾಜನ್ನು ಉತ್ತಮವಾಗಿ ಬಳಸಿಕೊಂಡಿದ್ದಾರೆ. ಎರಡು ಮೈಪಾತಳಿಯಲ್ಲಿಯೂ ಬೇಕಾದರೆ ಚಿತ್ರರಚನೆಗೆ ಬಳಸುತ್ತಾರೆ.

ವರ್ಣಪದ್ಧತಿ: ಗಾಜಿನ ಮೇಲೆ ವರ್ಣವನ್ನು ಎರಡು ಪದ್ಧತಿಯಲ್ಲಿ ಮಾಡುತ್ತಾರೆ. ಒಂದು ಪಾರದರ್ಶಕ ಇನ್ನೊಂದು ಅಪಾರದರ್ಶಕ. ಪಾರದರ್ಶಕ ಪದ್ದತಿಯಲ್ಲಿ ಒಂದು ಮೈಪಾತಳಿಯ ಮೇಲೆ ಚಿತ್ರಿಸಿ ವರ್ಣಲೇಪನ ಮಾಡಿ ಅದರ ಹಿಂಬದಿಯ ಮೂಲಕ ಬೆಳಕನ್ನು ಹಾಯಿಸಿ ಚಿತ್ರವೀಕ್ಷಣೆ ಮಾಡುತ್ತಾರೆ. ಉದಾ: ಕ್ರೈಸ್ತ ದೇವಾಲಯಗಳಲ್ಲಿ ಅಪಾರದರ್ಶಕ ಪದ್ದತಿಯಲ್ಲಿ ಗಾಜಿನ ಒಂದು ಮೈಪಾತಳಿಯಲ್ಲಿ ಚಿತ್ತಿಸಿ ವರ್ಣಲೇಪನ ಮಾಡಿ ಒಂದು ನಿರ್ದಿಷ್ಟ ಚೌಕ್ಕಟ್ಟಿಗೆ ಅಲಂಕರಿಸುವುದು. ಇದರ ಜೊತೆಗೆ ಸುಂದರವಾಗಿ ಕಾಣಲು ವರ್ಣಮಯ ಮೆರಗು ಕಾಗದಗಳನ್ನು ಲೋಹದ ಹಾಳೆಗಳನ್ನು ಬಳಸುತ್ತಾರೆ. ಉದಾ: ಬೆಳ್ಳಿ ಹಾಗೂ ಬಂಗಾರದ ಕಾಗದಗಳು, ಮೆರಗುಕಾಗದ, ಕಾರ್ಬನ್ ಪೇಪರ್, ಬಗೆಬಗೆಯ ಲೋಹದ ತಗಡುಗಳು, ವಿವಿಧ ಚೌಕ್ಕಟ್ಟುಗಳು ಹಿಂದಿನ ರಕ್ಷಣಾ ಹಲಗೆಗಳು ಬೇಕಾಗುತ್ತದೆ.[೫]

೪, ೫, ನಿಂಗಪ್ಪ ಎಂ.ಅಂಗಡಿ, ಕರ್ನಾಟಕ ಗಾಜಿನ ಚಿತ್ರಕಲೆ, ಒಂದು ಅಧ್ಯಯನ ಪು.ಸಂ_೫೬-೫೭

ಆಧುನಿಕ ಕಾಲದಲ್ಲಿ ಕ್ಯಾಲೆಂಡರ್ ಚಿತ್ರಗಳು ಉದಯಗೊಂಡ ನಂತರ ಒಂದು ಹೊಸರಚನಾ ವಿಧಾನಗಳು ಬೆಳಕಿಗೆ ಬಂತು ಅದರಲ್ಲಿ ದೇವತಾಚಿತ್ರಗಳು, ಭಾವಚಿತ್ರಗಳು ಹಾಗೂ ಕನ್ನಡಿಯ ಹಿಂಭಾಗದಲ್ಲಿ ಅಂಟಿಸಿಬೇಕಾದ ಭಾಗದಷ್ಟೇ ಕಾಣುವಂತೆ ಮಾಡಿ ಚಿತ್ರಗಳನ್ನು ರಚನೆ ಮಾಡುತ್ತಿದ್ದರು. ಈ ರೀತಿಯ ಪದ್ಧತಿಯಲ್ಲಿ ಕಂಪನಿ ಚಿತ್ರಕಾರರು ಹೆಚ್ಚಾಗಿ ಮಾಡಿದ್ದಾರೆ. ಇತ್ತೀಚಿಗೆ ಗಾಜಿನಂತೆಯೇ ಇರುವ ಅಕ್ರಲಿಕ್ ಪಾರದರ್ಶಕ ಹಾಳೆಗಳು ಕಂಡುಬರುತ್ತದೆ. ಅದರ ಮೇಲೆಯೂ ಚಿತ್ರರಚಿಸಬಹುದಾಗಿದೆ.

ಗಾಜಿನ ಮೇಲಿನ ಚಿತ್ರಕಲೆಗೆ ಬಣ್ಣಗಳನ್ನು ಬಳಸುವ ಕ್ರಮದಲ್ಲಿ ೧೮-೧೯ನೇ ಶತಮಾನದಲ್ಲಿ ಪಾಶ್ಚತ್ಯ ರಾಷ್ಟ್ರದಲ್ಲಿ ಹಾಗೂ ಭಾರತೀಯರ ಆಧುನಿಕ ಕಾಲದ ಗಾಜಿನ ಚಿತ್ರಗಳಿಗೆ ನೈಸರ್ಗಿಕ ಹಾಗೂ ರಾಸಾಯನಿಕ ಬಣ್ಣಗಳನ್ನು ಬಳಸಿದ್ದಾರೆ. ಅದರಲ್ಲಿ ಜಲ ಮತ್ತು ತೈಲವರ್ಣಗಳನ್ನು ಮಿಶ್ರಣಮಾಡಿ ಗಾಜಿನ ಚಿತ್ರಗಳನ್ನು ಬರೆಯುತ್ತಿದ್ದರು. ಅವು ಅಯಾಕಾಲದಲ್ಲಿ ಪ್ರಚಲಿತದಲ್ಲಿ ಇದ್ದ ವರ್ಣಗಳನ್ನು ಬಳಸಿದ್ದಾರೆ. ೧೯ನೇ ಶತಮಾನದ ಕೊನೆಯಲ್ಲಿ ರಾಸಾಯನಿಕ ವರ್ಣಗಳನ್ನು ಬಳಕೆಯಾಗಿದೆ. ಒಟ್ಟಿನಲ್ಲಿ ಟೆಂಪರಾವರ್ಣ, ತೈಲವರ್ಣ, ಜಲವರ್ಣ, ಮಿಶ್ರವರ್ಣಗಳು ಕಾಣಬಹುದು.

ಮೊದಲಿಗೆ **ಟೆಂಪರಾವರ್ಣ** ಮೊಟ್ಟೆಯ ಬಿಳಿಯ ಭಾಗದೊಂದಿಗೆ ಯಾವುದೇ ಮೂಲಕ ಬಣ್ಣಗಳನ್ನು ಬೆರೆಸಿ ಬೇಕಾದ ರೀತಿಯಲ್ಲಿ ತಯಾರಿಸಿಕೊಂಡು ಚಿತ್ರಕ್ಕೆ ಬಣ್ಣ ತುಂಬುವ ವಿಧಾನವನ್ನು ಟೆಂಪರಾ ಎಂದು ಕರೆಯುವರು. ತೆಳುವಾಗಿ, ಮಂದವಾಗಿ ಮತ್ತು ಗಟ್ಟಿಯಾಗಿಯೂ ಬಳಸುತ್ತಾರೆ. ಇದಕ್ಕೆ ಅಗಸೆ, ಕುಸುಬಿ, ಶೇಂಗಾದಂತಹ ಎಣ್ಣೆಯನ್ನು ಬೇರೆಸಿದ್ದರೆ ತೈಲದಂತಹ 'ಟೆಂಪರಾ' ಸಿದ್ದವಾಗುತ್ತದೆ. ವಾರ್ನಿಷ್ ಲೇಪಿಸಿದ್ದರೆ. ತೈಲವರ್ಣದಂತೆ ಕಾಣುತ್ತದೆ. ಮೈಸೂರಿನ ಗಾಜಿನ ಚಿತ್ರದ ಕೆಲವೊಂದರಲ್ಲಿ ಈ ರೀತಿಯ ವರ್ಣಗಾರಿಕೆ ಕಂಡುಬರುತ್ತದೆ.

ತೈಲವರ್ಣ : ತೈಲವರ್ಣರಚನೆ ಪ್ರಾರಂಭವಾದುದ್ದು ಹದಿನೈದನೆಯ ಶತಮಾನದಿಂದ ಚಾಲ್ತಿಗೆ ಬಂತು. ಜಾನವಾರ್ ಬೆಲ್ಜಿಯಂ ಜಾನ್‌ವಾನ್‌ಪಿಕ್ ಸಹೋದರರು ಈ ಪದ್ಧತಿಯ ಪ್ರವರ್ತಕರೆಂದು ಹೇಳುತ್ತಾರೆ. ವರ್ಣದ್ರವ್ಯ ಪುಡಿಯನ್ನು ಅಮೃತಶಿಲೆಯ ಹಾಸುಗಲ್ಲಿನ ಮೇಲೆ ಅರೆಯುತ್ತ, ಅದಕ್ಕೆ ಸ್ವಲ್ಪವಾಗಿ ತೈಲವನ್ನು ಸೇರಿಸಿ ತೈಲವರ್ಣವನ್ನು ಕಲಾವಿದರು ತಯಾರಿಸಿ ಕೊಳ್ಳುತ್ತಿದ್ದರು. ರೋಮನ್ ಮತ್ತು ಗಾಥಿಕ್ ಕಲೆಯ ಗಾಜಿನ ಚಿತ್ರಗಳಲ್ಲಿ ಮೊದಲ ಬಳಕೆ. ತೈಲವರ್ಣವನ್ನು ಪಾರದರ್ಶಕವಾಗಿಯೂ ಮತ್ತು ಅಪಾರದರ್ಶಕವಾಗಿಯೂ ಬಳಸಬಹುದು. ಕಟ್ಟಿಗೆ, ಕಲ್ಲು, ಲೋಹ, ಬಟ್ಟೆ, ಗಾಜುಗಳ ಮೇಲೆ ಹೊಂದಿಕೊಳ್ಳುವಂತಹ ಗುಣಹೊಂದಿದೆ.[೬]

ಒಣಗುವ ತೈಲವರ್ಣ : ಬೇಗ ಒಣಗುವ ಎಣ್ಣೆಗಳಿಂದ ಗೋಡೆಗಳ ಅಲಂಕರಣ ಮತ್ತು ಹಡಗುಗಳ ಹೊರಭಾಗ ತೇವನಿರೋಧಕವಾಗುವಂತೆ ಮಾಡುವ ಬಣ್ಣವೇ ಒಣಗುವ ತೈಲವರ್ಣ ಇದಕ್ಕೆ ಮೇಣ ಅಥವಾ ಎಣ್ಣೆಯನ್ನು ಬಣ್ಣಗಳೊಂದಿಗೆ ಮಿಶ್ರಣಮಾಡಿ ಸಸ್ಯ ಅಂಟುಗಳಿಂದ ಸ್ಥಿರಗೊಳಿಸಿ ಬಳಸುತ್ತಿದ್ದರು. ಇದು ಚಿತ್ರರಚನೆಗೆ ಅತ್ಯಂತ ಸಹಕಾರಿಯಾಗಿದೆ. ಮೊದಲು ಅಂಟಾದರೂ ಕ್ರಮೇಣ ಶುಷ್ಕವಾದ ಸುಭದ್ರ ಪೊರೆರಚನೆ ಉಂಟಾಗುತ್ತದೆ. ಈ ರೀತಿಯಾಗಿ ದೊರೆಯುತ್ತಿದ್ದರು. ಈ ವರ್ಣವನ್ನು ಪ್ರಖರವಾಗಿ ಹಾಗೂ ಪಾರದರ್ಶಕವಾಗಿಯೂ ಅತ್ಯಂತ ಆಕರ್ಷಕವಾಗಿ ಬಳಸಿದ್ದಾರೆ. ಇತ್ತೀಚಿಗೆ ರಾಸಾಯನಿಕ ವರ್ಣಗಳು ಬಹಳಷ್ಟು ಅಭಿವೃದ್ಧಿ ಕಂಡಿದ್ದುದರಿಂದ ಮತ್ತು ಮಾರುಕಟ್ಟೆಯಲ್ಲಿ ಸಿಗುವುದರಿಂದ ಗಾಜಿನ ಕಲೆಯು ಹೊಸ ಅಧ್ಯಾಯ ದತ್ತ ಸಾಗಿದೆ.[೭]

೬. ೭. ನಿಂಗಪ್ಪ ಎಂ.ಅಂಗಡಿ, ಕರ್ನಾಟಕ ಗಾಜಿನ ಚಿತ್ರಕಲೆ, ಒಂದು ಅಧ್ಯಯನ ಪು.ಸಂ_೬೦-೭೦

ಗಾಜಿನ ಚಿತ್ರರಚನೆಯಲ್ಲಿ ಪ್ರಧಾನವಾದ ಕೆಂಪು, ಕಪ್ಪು, ಬಿಳಿ, ಹಳದಿ, ನೀಲಿ,ವರ್ಣಗಳನ್ನು ಬಳಸಿಕೊಂಡು ಇವುಗಳ ಮಿಶ್ರಣದಿಂದ ಉಂಟಾದ ದ್ವಿತೀಯ, ತೃತೀಯ, ಚತುರ್ಥ ವರ್ಣಗಳನ್ನು ಬಳಸಿದ್ದನ್ನು ನಾವು ಕಾಣಬಹುದು. ವಸ್ತುಗಳಾಗಳಲ್ಲಿ ಪ್ರಾಣಿ–ಪಕ್ಷಿ, ಆಭರಣ ಇತ್ಯಾದಿಗಳಿಗೆ ಹೊಂದಾಣಿಕೆಯಾಗುವಂತೆ ವರ್ಣಗಳನ್ನು ಬಳಸಿದ್ದಾರೆ. ಬಣ್ಣಗಳಾಗಳಲ್ಲಿ ಕುಂಚಗಳಾಗಲ್ಲಿ ಎರಡನ್ನು ನಮ್ಮ ಪೂರ್ವಜರು ಅನೇಕ ಅಮೂಲ್ಯಗ್ರಂಥಗಳಲ್ಲಿ ಅದನ್ನು ಹೇಗೆ ತಯಾರಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ. ಉದಾಹರಣೆಗೆ ವಿಷ್ಣುಧರ್ಮೋತ್ತರ ಪುರಾಣ, ಕಾಶ್ಯಾಪ ಶಿಲ್ಪಶಾಸ್ತ್ರ ಇತ್ಯಾದಿಗಳಲ್ಲಿ ವಿವರಣೆಯಿದೆ. ಇದನ್ನು ಹಿಂದಿನ ಅಧ್ಯಾಯಗಳಲ್ಲಿ ತಿಳಿಸಿದ್ದೇನೆ.

ಲೇಖನಿಗಳು : ಲೇಖನಿ ಎಂದರೆ ಬರೆಯುವ ಸಾಧನ. ಇಲ್ಲಿ ಎರಡು ರೀತಿಯ ಸಾಧನ ಕಂಡುಬರುತ್ತದೆ. ಗಾಜಿನ ಚಿತ್ರಕಲೆಯಲ್ಲಿ ದ್ರವರೂಪ ಹಾಗೂ ಘನರೂಪದಲ್ಲಿದೆ ದ್ರವರೂಪದ ಲೇಖನಿ ಬಣ್ಣಗಳನ್ನು ಬೇರೆ ಬೇರೆ ಸಾಧನಗಳ ಆಧಾರದ ಮೇಲೆ ಅದ್ದಿ ಬರೆಯುವ ಲೇಖನಿಗಳು. ಘನರೂಪದ ಲೇಖನಿ ಮೊದಲು ಸುಣ್ಣದ ಕಲ್ಲು, ಬಳಪದಕಲ್ಲು ನಂತರ ಮೇಣದಿಂದ ಕೂಡಿದ ಹಾಗೂ ಗ್ರಾಫೈಟ್ ಮತ್ತು ಜೇಡಿಮಣ್ಣಿನಿಂದ ತಯಾರಿಸಿದ ಪೆನ್ಸಿಲ್‌ಗಳು ಅದು ನಾನಾ ಅಳತೆಯಲ್ಲಿ ಸಿಗುತ್ತದೆ. ಗಾಜಿನ ಚಿತ್ರವು ಮೊದಲು ರೇಖೆಯನ್ನು ರಚಿಸಿ ನಂತರ ವರ್ಣಲೇಪನ ನಡೆಯುತ್ತದೆ. ಕರಡುಪ್ರತಿ ಕೃತಿಯಿಂದ ಚಿತ್ರರಚನಾ ಕಾರ್ಯ ಹೆಚ್ಚಾಗಿ ನಡೆಯುತ್ತದೆ.[೮]

ಅಂಟುದ್ರಾವಕ(ಬಂಧಕಗಳು), ಮೆರಗುಕಾಗದಗಳು: ಗಾಜಿನ ಚಿತ್ರಗಳ ರಚನೆಯಲ್ಲಿ ಚಿತ್ರಕಲಾವಿದರು ಬೇರೆ ಬೇರೆ ಅಂಟು ದ್ರಾವಕವನ್ನು ಮರದ, ಮೂಲಗಳಿಂದ ತಯಾರಿಸಿಕೊಳ್ಳುತ್ತಾರೆ. ಮೆರಗು ಕಾಗದವನ್ನು ಅಂಟಿಸಲು ಸಹ ಬಳಸುತ್ತಾರೆ. ಮೆರಗು ಕಾಗದಗಳು ಕೆಂಪು, ಹಳದಿ, ಗುಲಾಬಿ, ಅಲ್ಲದೆ ಚಿನ್ನದ ಹಾಳೆ, ಬೆಳ್ಳಿಯಹಾಳೆ ಮತ್ತು ಪಾರದರ್ಶಕ ಕಾಗದವು ಸಹ ಇರುತ್ತದೆ.

ಚೌಕ್ಕಟ್ಟುಗಳು ಮತ್ತು ರಕ್ಷಣಾ ಹಲಗೆ: ತೂಗುಹಾಕುವ ಗಾಜಿನ ಚಿತ್ರಗಳಿಗೆ ಹಾಗೂ ಮಂಟಪ ದಂತಹವುಗಳಿಗೆ ಮರದ ಚೌಕ್ಕಟ್ಟನ್ನು ಹಾಕಿ ಅಲಂಕರಿಸುತ್ತಾರೆ. ಚೌಕಟ್ಟನ್ನು ಕುಸುರಿ ಕೆಲಸದ ಹಾಗೂ ಸಾಧಾರಣ ಚೌಕ್ಕಟ್ಟನ್ನು ನಾವು ಕಾಣಬಹುದು. ಈ ಭಾಗದಲ್ಲಿ ಚಿತ್ರರಚನೆಗೆ ಎಷ್ಟು ಮುಖ್ಯವೋ ಅಷ್ಟೇ ಅದರ ರಕ್ಷಣೆಗೆ ಬೇಕಾಗುವ ರಕ್ಷಣಾ ಹಲಗೆಗಳು ಮುಖ್ಯ ರಕ್ಷಣ ಹಲಗೆಗಳು ಸರಿಯಾಗಿ ಜೋಡಣೆಯಾಗದಿದ್ದರೆ ಕಲಾಕೃತಿ ಹಾಳಾಗುತ್ತದೆ ಚರ್ಚ್, ಅರಮನೆಯ ಅಂಬಾವಿಲಾಸದ ಮೇಲ್ಛಾವಣಿಯಲ್ಲಿ ಮತ್ತು ಕಲ್ಯಾಣಮಂಟಪ, ಸಂತ ಫಿಲೋಮೀನ ಚರ್ಚ್ ಕುಪ್ಪಣ್ಣ ಪಾರ್ಕಗಳಲ್ಲಿ ಅಲ್ಲದೆ ಇತರೆ ಕಡೆಗಳಲ್ಲಿಯು ಗಾಜಿನಚಿತ್ರಗಳು ಇರುತ್ತದೆ.[೯]

ರಚನಾ ವಿಧಾನ ಯಾವುದೇ ರೀತಿಯ ಚಿತ್ರಕಲೆಯ ರಚನಾ ವಿಧಾನವು ಆಯಾ ಪರಿಕರಗಳು ಹಾಗೂ ಕಲಾವಿದರ ಮೇಲೆ ಅವಲಂಬಿತವಾಗಿರುತ್ತದೆ. ಫಲಕಗಳ ಮೇಲೆ ಚಿತ್ರಬರೆಯುವ ವಿಧಾನ ಒಂದೇ ಯಾಗಿದ್ದರೂ ಬಳಸುವ ರೀತಿನೀತಿಗಳು ಹಾಗೂ ಕಲಾವಿದರ ಕಲ್ಪನೆಯಲ್ಲಿ ವೈವಿಧ್ಯತೆಗಳು ಕಂಡುಬರುತ್ತದೆ. ಹಾಗೇ ಗಾಜಿನ ಚಿತ್ರಕಲೆಯಲ್ಲಿ ಪರಿಕರ ಹಾಗೂ ರಚನಾಕ್ರಮಗಳು ಬೇರೆ ಬೇರೆಯಾಗಿದೆ. ಇಲ್ಲಿ ಮುಖ್ಯವಾಗಿ ಎರಡು ರೀತಿಯಲ್ಲಿ ಪ್ರಯತ್ನಿಸಲಾಗಿದೆ.

೮, ೯, ನಿಂಗಪ್ಪ ಎಂ.ಅಂಗಡಿ, ಕರ್ನಾಟಕ ಗಾಜಿನ ಚಿತ್ರಕಲೆ, ಒಂದು ಅಧ್ಯಯನ ಪು.ಸಂ_೭೫-೭೭

ಸ್ಟೇನ್ಡ್ ಗ್ಲಾಸ್ ಚಿತ್ರಗಳ ರಚನಾ ವಿಧಾನ

ಇದರಲ್ಲಿ ತೂಗುಹಾಕುವ ಚಿತ್ರಗಳ ವಿಧಾನವು ಒಂದು. ಈ ಗ್ಲಾಸ್‌ಗಳ ಮೇಲೆ ಫ್ರೆಂಚ್ ಕಲಾವಿದರು ಗಾತಿಕ್ ಶೈಲಿಯಲ್ಲಿ ಹೆಚ್ಚಾಗಿ ಬಳಸಿದ್ದಾರೆ. ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ, ಜನಪದ ಗ್ಯಾಲರಿ, ಕೆಲವು ಆಧುನಿಕ ಮಳಿಗೆಯಲ್ಲಿ ಇತರದ ಗಾಜಿನ ಚಿತ್ರಗಳು ಇರುವುದು ಕಂಡುಬರುತ್ತದೆ. ಗಾಜಿನ ಮೇಲೆ ತದ್ವಿರುದ್ಧ ರಚನಾ ತಂತ್ರದಿಂದ ಪ್ರಾರಂಭವಾಗಿ ಮೊದಲ ಹಂತಗಳನ್ನು ತರಬೇಕಾಗುತ್ತದೆ. ಹಿಮ್ಮುಖವಾಗಿ ಚಿತ್ರರಚಿಸಿ ಮುಮ್ಮುಖವಾಗಿ ನೋಡಬೇಕು. ಈ ರೀತಿಯ ಕ್ಯಾಲೆಂಡರ್ ಚಿತ್ರಗಳು ರಚನೆಗೊಂಡಿದೆ. ಅದರಲ್ಲಿ ಧಾರ್ಮಿಕ, ಅಲಂಕಾರದ ಚಿತ್ರಗಳು, ಐತಿಹಾಸಿಕ ಭಾವಚಿತ್ರಗಳು, ರಚನೆಯಾಗಿದೆ.

ಇಲ್ಲಿನ ಗಾಜಿನಚಿತ್ರಗಳಲ್ಲಿ ಮುಖ್ಯವಾಗಿ ಎರಡು ರೀತಿಯಲ್ಲಿ ಕಂಡುಬರುತ್ತವೆ ಒಂದು ಧಾರ್ಮಿಕ ಹಿನ್ನೆಲೆಯ ಚಿತ್ರಗಳು, ಮತ್ತೊಂದು ಧಾರ್ಮಿಕೇತ್ತರ ಗಾಜಿನ ಚಿತ್ರಗಳು. ಧಾರ್ಮಿಕ ಹಿನ್ನೆಲೆಯ ಚಿತ್ರಗಳಲ್ಲಿ ಶಿವ ಪಾರ್ವತಿ, ಗಣಪತಿ, ಈಶ್ವರ, ಕ್ರಿಸ್ತನ ಚಿತ್ರಗಳು ಮೊದಲಾದವುಗಳು ಆಗಿರುತ್ತದೆ. ಧಾರ್ಮಿಕೇತ್ತರದಲ್ಲಿ ರಾಜರ ಭಾವಚಿತ್ರಗಳು, ಅಲಂಕಾರಿಕ ಚಿತ್ರಗಳು, ಇತ್ಯಾದಿಗಳು ಅರಮನೆ, ದೇವಾಲಯ, ಚರ್ಚ, ಗ್ಯಾಲರಿಗಳಲ್ಲಿ, ಮಂಟಪಗಳಲ್ಲಿ, ಮುಂತಾದ ಸ್ಥಳಗಳಲ್ಲಿ ರಚನೆಯಾಗಿದನ್ನು ಕಾಣಬಹುದು.

ಅರಮನೆಯ ಗಾಜಿನ ಚಿತ್ರಗಳು : ಮೈಸೂರು ಎಂದರೆ ಕರ್ನಾಟಕ ಸಾಂಸ್ಕೃತಿಕ ರಾಜಧಾನಿ, ಅರಮನೆಗಳ ನಗರ ಎಂದು ಕರೆಯುತ್ತಾರೆ. ಇಲ್ಲಿ ೧೯ನೇ ಶತಮಾನದಲ್ಲಿ ನಿರ್ಮಾಣವಾದಂತಹ ಅಂಬಾವಿಲಾಸ ಅರಮನೆಯ ಒಳಗೆ ಪ್ರವೇಶದ ನಂತರದಲ್ಲಿ ಸಿಗುವ ಮಂಟಪವೇ ಕಲ್ಯಾಣಮಂಟಪ, ಆ ನಂತರ ದರ್ಬಾಲ್ ಹಾಲ್, ಮತ್ತು ಕಿಟಕಿಗಳಲ್ಲಿ ಗಾಜಿನ ಚಿತ್ರಗಳು ಇರುತ್ತದೆ.

ಮೈಸೂರು ಜಿಲ್ಲೆಯ ಗಾಜಿನಚಿತ್ರಗಳ ನೆಲೆಗಳು ಮತ್ತು ಚಿತ್ರಗಳು ಈ ರೀತಿ ಇದೆ.

೬.೧ ಕಲ್ಯಾಣಮಂಟಪ
೬.೨, ದರ್ಬಾರ್‌ಹಾಲ್‌ನ ಭಿತ್ತಿಚಿತ್ರ
೬.೩.೧, ಗಣೇಶ, ಗಂಡುಭೇರುಂಡ ಸುಂದರವಾದ ಗಾಜಿನಚಿತ್ರಗಳು
೬.೩.೨, ಗಂಡುಭೇರುಂಡ
೬.೪, ಜಯಲಕ್ಷ್ಮೀ ವಿಲಾಸ ಅರಮನೆ
೬.೪.೧, ಬಾಲಕೃಷ್ಣ
೬.೪.೨, ಹಾವಿನ ಪೀಠದ ಮೇಲೆ ಕುಳಿತ ಬಾಲಕೃಷ್ಣ
೬.೪.೩, ತಾಯಿಯ ತೋಡೆಯ ಮೇಲೆ ಕುಳಿತು ಹಾಲುಕುಡಿಯುತ್ತಿರುವ ಕೃಷ್ಣ
೬.೪.೪, ಮುಮ್ಮಡಿ ಕೃಷ್ಣರಾಜ ಒಡೆಯರ ಭಾವಚಿತ್ರ
೬.೫, ಜಗನ್ಮೋಹನ ಅರಮನೆಯ ಗಾಜಿನ ಚಿತ್ರಗಳು
೬.೫.೧, ಅಲಂಕಾರಿಕ ಪ್ರಿಯ ಸ್ತ್ರೀ
೬.೫.೨, ಅರಸನ ಭಾವಚಿತ್ರ
೬.೬, ಲಲಿತಮಹಲ್ ಅರಮನೆಯ ಗಾಜಿನ ಚಿತ್ರಗಳು
೬.೬.೧, ಕೊಳಲು ಊದುತ್ತಿರುವ ಕೃಷ್ಣನ ಚಿತ್ರ
೬.೬.೨, ಗ್ರಾಯಿತ್ರಿ ದೇವಿಯ ಚಿತ್ರ
೬.೬.೩, ಐತಿಹಾಸಿಕ ಮೈಸೂರು ಅರಸರ ಚಿತ್ರಗಳು

೬.೬.೪. ಲಲಿತಮಹಲ್ ಮೇಲ್ಛಾವಣಿಯ ಗಾಜಿನ ಚಿತ್ರಗಳು
೬.೭. ಕುಪ್ಪಣ ಪಾರ್ಕ್‌ನ ಮಂಟಪದಲ್ಲಿರುವ ಚಿತ್ರಗಳು
೬.೭.೧. ರಾಮನ ಚಿತ್ರ
೬.೮. ವೆಂಕಟೇಶ್ವರ ದೇವಾಲಯದ ಗಾಜಿನ ಚಿತ್ರಗಳು
೬.೮.೧. ವಾರಹಸ್ವಾಮಿ ಚಿತ್ರ
೬.೯. ಸಂತ ವಾರ್ತಲೋಮಿಯ ದೇವಾಲಯ
೬.೧೦. ಸಂತ ಗ್ರೀಕ್‌ಗ್ರೇಸ್ ಚರ್ಚ್
೬.೧೧. ವೆಸ್ಲಿಮಹಾದೇವಾಲಯ
೬.೧೨. ಸಂತ ಫಿಲೋಮಿನಾ ಕೆಥಿಡ್ರಲ್‌ಚರ್ಚ್
೬.೧೩.ಪುಷ್ಪಾಶ್ರಾಮ ಚರ್ಚ್
೬.೧೩.೧. ಪರಮತತ್ವ
೬.೧೩.೨. ಕ್ರೈಚಿಹ್ನೆಗಳ ಚಿತ್ರಗಳು
೬.೧೩.೩. ಕ್ರೈಸ್ತೇತರ ಧರ್ಮಗಳ ಚಿಹ್ನೆಗಳ ಗಾಜಿನ ಚಿತ್ರಗಳು

೬.೧ ಕಲ್ಯಾಣಮಂಟಪ ಅರಮನೆಯಲ್ಲಿರುವ ಅನೇಕ ಕೋಣೆಗಳಲ್ಲಿ ಬಹಳ ಮುಖ್ಯ ಆಕರ್ಷಕವಾದ, ವಿಶಾಲವಾದ ಕೋಣೆ ಎಂದರೆ ಈ ಕಲ್ಯಾಣಮಂಟಪ. ಕಟ್ಟಡದ ಮಧ್ಯದಲ್ಲಿ ಗ್ಲಾಸ್‌ಹೌಸ್ ಇದ್ದು. ಆ ಕೊನೆಯ ಮೇಲ್ಛಾವಣಿಯು ೫೦ ಅಡಿ ಎತ್ತರವಾಗಿ ಗೋಳಾಕಾರವನ್ನು ಹೊಂದಿದೆ. ಇಲ್ಲಿಗೆ ಸ್ಟೇನ್‌ಗ್ಲಾಸ್‌ಗಳನ್ನು ಬೆಲ್ಜಿಯಂನಿಂದ ತರಿಸಿದ ಈ ವಿದೇಶದ ಗಾಜುಗಳಿಂದ ಇಲ್ಲಿ ಅಲಂಕರಿಕರಿಸಲಾಗಿದೆ. ವೃತ್ತಾಕಾರದ ಮೇಲ್ಛಾವಣಿಯು ಅಷ್ಟಕೋನಗಳನ್ನು ಹೊಂದಿದ್ದು ಪೂರ್ಣವಾಗಿ ಗಾಜಿನ ವರ್ಣಚಿತ್ರಗಳಿಂದ ಅಲಂಕರಣಗೊಳಿಸಲಾಗಿದೆ.

ಈ ಮಂಟಪದ ಗಾಜಿನ ಮೇಲೆ ನವಿಲು, ಪಾರಿವಾಳ, ಹೂ ಮತ್ತು ಬಳ್ಳಿಗಳು, ಪಾತರಗಿತ್ತಿಗಳಿಂದ ಅಲಂಕೃತವಾಗಿದ್ದು ಈ ಚಿತ್ರಗಳನ್ನು ವರ್ಣಗಳಿಂದ ರಚಿಸಲಾಗಿದೆ.

ಒಂದು ಅಷ್ಟಕೋನದಲ್ಲಿ ೬ ಸಾಲುಗಳು ಇರುತ್ತದೆ. ಮೊದಲ ಸಾಲಿನಲ್ಲಿ ನವಿಲು ಹಾಗೂ ಹೂವಿನಬಳ್ಳಿಯ ಸಾಲು ನಂತರ ಎರಡನೆಯ ಸಾಲಿನಲ್ಲಿ ನವಿಲಿನ ಗರಿಚಿತ್ರ, ಹೂಗಳು, ಚಿಟ್ಟೆಯ ಹಾಗೂ ಅಲಂಕಾರಿಕ ಹೂವಿನ ಹೂಜಿಯ ಚಿತ್ರಗಳನ್ನು ರಚಿಸಿದ್ದಾರೆ. ಮೂರನೆಯ ಸಾಲಿನಲ್ಲಿ ಪಾರಿವಾಳ ಪಕ್ಷಿಯೂ ಹಾರಾಡುತ್ತ ಇರುವ ಚಿತ್ರ ಅಲಂಕಾರಿಕ ಹೂ ಎಲೆಗಳ ಚಿತ್ರಗಳು ನಾಲ್ಕನೆಯ ಸಾಲಿನಲ್ಲಿ ಹೂವಿನ ಚೌಕ್ಕಟ್ಟು ನಿರ್ಮಿಸಿ ಅದರಲ್ಲಿ ಲಧಳ ಇರುವ ಹಾಗೆ ಜೋಡಿಸಿ ನವಿಲಗರಿಯಂತೆ ಚಿತ್ರಿಸಿದ್ದಾರೆ. ಹಿನ್ನೆಲೆ ಬಿಳಿಗಾಜುನ್ನು ಹಾಗೆ ಜೋಡಿಸಿದ್ದಾರೆ. ಐದನೆಯ ಸಾಲಿನಲ್ಲಿ ನವಿಲು ಹೂಬಳ್ಳಿ ಸಾಲಿನಲ್ಲಿ ಕುಳಿತಿದೆ. ಚಿಟ್ಟೆಯೂ ಹೂವಿನ ಬಳ್ಳಿ ಹತ್ತಿರ ಬರುತ್ತಿರುವಾಗೆ ಹೂವಿನ ಬಳಿಯು ಚಿತ್ರದ ತುಂಬ ಹರಡಿಕೊಂಡಂತೆ ಇದೆ. ಬಳ್ಳಿಯಲ್ಲಿ ಹೂ, ಹಣ್ಣು, ಕಾಯಿ, ಚಿಗರು ತುಂಬಿರುವಾಗೆ ಚಿತ್ರಿಸಿರುತ್ತಾರೆ. ಪಾರದರ್ಶಕ ಹಾಗೂ ಅಪಾರದರ್ಶಕದ್ದಂತೆ ವರ್ಣಸಂಯೋಜನೆ ಮಾಡಿದ್ದಾರೆ. ಆರನೆಯ ಸಾಲು ಅಲಂಕಾರಿಕ ನಕ್ಷೆಯ ಸಾಲು ಚಿತ್ರರಚಿಸಿರುವರು ಒಟ್ಟಾಗಿ ಪರಿಸರದ ಸಂಯೋಜನೆ ಸುಂದರ ಚಿತ್ರವಿದೆ. ಇಲ್ಲಿ ಹಳದಿ, ಹಸಿರು, ನೀಲಿ, ಕೆಂಪು, ಕಪ್ಪು, ವರ್ಣಗಳ ಬಳಸಿ ಅಮೋಘವಾಗಿ ರಚನೆ ಕೈಗೊಂಡಿರುವರು.

೬.೨. ದರ್ಬಾರ್‌ಹಾಲ್‌ನ ಭಿತ್ತಿಚಿತ್ರ

ಮತ್ತೊಂದು ಪ್ರಸಿದ್ಧ ಸ್ಥಳವಾದ ದರ್ಬಾರ್‌ಹಾಲ್‌ನಲ್ಲಿ ಗಾಜಿನ ಚಿತ್ರವಿದೆ. ಈ ಜಾಗಕ್ಕೆ ಮಹಾರಾಜರ ಖಾಸಗಿ ದರ್ಬಾರ್ ಹಾಲ್, ಅಥವಾ **ದಿವಾನ್-ಇ-ಖಾಸ್** ಎಂದು ಕರೆಯುತ್ತಾರೆ. ಇದು ಸುಂದರವಾದ ತಾಣವಲ್ಲದೆ ಅತ್ಯಂತ ವೈಭವೋಪೇತ ಹಾಗೂ ಕುತೂಹಲವನ್ನುಂಟು ಮಾಡುವ ಭವನ. ಇಲ್ಲಿ ಮೇಲ್ಛಾವಣಿಯಲ್ಲಿ ಗಾಜಿನ ಹಾಳೆಯಾದ (ಸ್ಟೇನ್ಡ್‌ಗ್ಲಾಸ್) ಗಳಿಂದ ಹೊದಿಸಲಾಗಿದೆ. ಅದರಲ್ಲಿ ಹಲವು ಭಾಗಗಳಾಗಿ ಮಾಡಿಕೊಂಡು ಮೂಕ್ಕಾಲು ವೃತ್ತಹೊಂದಿದ ಚೌಕ್ಕ ಚೌಕ್ಕದೊಳಗೆ ಅನೇಕ ಹಲವಾರು ಹೂವಿನ ಚಿತ್ರಗಳನ್ನು ಅದರಲ್ಲಿ ಬರೆದ ಒಂದು ಸಾಲು, ಆ ನಂತರ ಸಾಲಿನಲ್ಲಿ ನವಿಲುಗಳು ಇರುವ ಸಾಲು ಆಗಿರುತ್ತದೆ.

ನವಿಲಿನ ವಿವಿಧ ಭಂಗಿಯಲ್ಲಿರುವ ಚಿತ್ರಗಳ ಜೊತೆಗೆ ಹೂವಿನ ಬಳ್ಳಿ ಹಾಗೂ ಅಲಂಕಾರಿಕ ನಕ್ಷೆಯನು ಸೇರಿಸಿದ ಸಂಯೋಜನೆಯು ಇರುತ್ತದೆ. ನವಿಲನ್ನು ನೀಲಿವರ್ಣದಿಂದ ತೋರಿಸಿ ನೈಜತೆಗೆ ಹತ್ತಿರವಾಗಿ ಚಿತ್ರಿಸಿರುತ್ತಾರೆ. ಹಿನ್ನೆಲೆಯ ವರ್ಣವು ಕಂದುಮಿಶ್ರಿತ ಹಳದಿವರ್ಣ ಲೇಪಿಸಿರುತ್ತಾರೆ. ಇದು ಒಂದು ಸುಂದರ ಸಂಯೋಜನೆಯ ಚಿತ್ರವಾಗಿದೆ. ಆನಂತರದ ಮೇಲೆ ಹೂವಿನ ಚಿತ್ರಸಾಲುಗಳು ಇದ್ದು ಒಂದು ಚಿತ್ರದ ಕಲಾಕೃತಿಯಲ್ಲಿ ಎಂಟುದಳದ ಹೂವಿನ ಚಿತ್ರವಿರುತ್ತದೆ. ಅದರ ಒಳಗೂ ಅಲಂಕರಿಕಾ ಹೂವಿನ ಚಿತ್ರಗಳ ಸುತ್ತಲೂ ಎಲೆಯನ್ನು ಸಹ ವರ್ಣದಲ್ಲಿ ತೋರಿಸಿ, ಆನಂತರ ಮೇಲಿನ ಎರಡು ಸಾಲುಗಳಲ್ಲಿ ಮತ್ತೆ ನವಿಲುಗಳ ಜೊತೆ ಹೂಬಳ್ಳಿಯ ಚಿತ್ರವು ಸುಂದರವಾಗಿ ಚಿತ್ರ ಮೂಡಿಸಿದ್ದಾರೆ. ಕೆಳಗಿನ ನವಿಲಿನಚಿತ್ರದ ಸಾಲಿನಂತೆ ಇದ್ದರೂ ಸ್ವಲ್ಪ ಚಿಕ್ಕದಾಗಿದೆ.

ಎಲ್ಲಾ ಆಕೃತಿಯ ಚಿತ್ರಗಳು ಅಲಂಕಾರಿಕ ದೃಷ್ಟಿಯಿಂದ ಕೂಡಿರುತ್ತದೆ. ಅದರಲ್ಲೂ ನೈಜತೆಯ ಗುಣಸೇರಿದೆ. ದರ್ಬಾರ್‌ಹಾಲ್‌ನ ಈ ಗಾಜಿನ ಚಿತ್ರಗಳು ಸಂಯೋಜನೆ ಬಿಡಿ ಬಿಡಿಯಾಗಿ ಚೌಕ ಆಯಾತಕಾರಗಳಲ್ಲಿ ಚಿತ್ರ ಬಿಡಿಸಿದ್ದಾರೆ. ದೊಡ್ಡ ಅಳತೆಯಲ್ಲಿರುವ ಆಯಾತಾಕಾರದ ಜಾಗದಲ್ಲಿ ಈ ಗಾಜಿನ ಚಿತ್ರಗಳು ಇದೆ. ತೆಳುವರ್ಣ ಉಪಯೋಗಿಸಿ ಪಾರದರ್ಶಕ ಬಣ್ಣ ಲೇಪನ ಮಾಡಿದ್ದಾರೆ. ಕೆಲವು ಜಾಗದಲ್ಲಿ ಹಲವು ಗಾಜುಗಳು ಒಡೆದು ಹೋಗಿವೆ. ಅದನು ಸರಿಪಡಿಸಲಾಗಿಲ್ಲ ಬೇರೆ ಖಾಲಿಗಾಜಿನ ಫಲಕ ಜೋಡಿಸಿದ್ದಾರೆ. ಈ ವರ್ಣಕಾರ್ಯವನ್ನು ಗ್ಲಾಸೋಕಂಪನಿಯವರು ನಿರ್ವಹಿಸಿರುವವರು. ಮತ್ತು ಸ್ಥಳೀಯ ಕಲಾವಿದರು ಹಾಗೂ ವಿದೇಶಿಯ ಕರಕುಶಲ ಕಲಾವಿದರೂ ಸೇರಿ ಈ ಕಾರ್ಯವನ್ನು ನಿರ್ವಹಿಸಿದ್ದಾರೆ. ರೇಖಾಚಿತ್ರವನ್ನು ರಚಿಸಿದ್ದಾರೆ.

೬.೩.೧. ಗಣೇಶ, ಗಂಡುಭೇರುಂಡ ಸುಂದರವಾದ ಗಾಜಿನಚಿತ್ರಗಳು

ಹಾಗೇ ಅರಮನೆಯ ಉತ್ತರ ದಕ್ಷಿಣ ಕೆಲವು ಕಿಟಕಿಗಳ ಮೇಲ್ಭಾಗದಲ್ಲಿ ದೊಡ್ಡದಾದ ಜಾಗದಲ್ಲಿ ಗಣೇಶ, ಗಂಡುಭೇರುಂಡ ಸುಂದರವಾದ ಚಿತ್ರಗಳು ರಚಿಸಿದ್ದಾರೆ. ಪಾರದರ್ಶಕ ಮತ್ತು ಅಪಾರದರ್ಶಕ ಮಾದರಿಯಲ್ಲಿ ಚಿತ್ರಿಸಿರುವರು **ಗಣೇಶ** ಚಿತ್ರವು ಗಾಢ ಕಂದುಹಳದಿ ವರ್ಣದ ಮೈ, ಹಳದಿ ವರ್ಣದ ಪಂಚೆ, ಕಿರೀಟ, ಮತ್ತು ಕಪ್ಪು ಮೂಶಿಕ ಇದ್ದು ಹಿನ್ನೆಲೆಯಲ್ಲಿ ಖಾಲಿ ಜಾಗವಿದೆ. ಗಣೇಶ ಪೀಠದ ಮೇಲೆ ಕುಳಿತು ಮಾನವ ನೈಜ ದೇಹವಾಗಿದ್ದು, ಮುಖವು ಮಾತ್ರ ಆನೆಯದಾಗಿರುತ್ತದೆ. ಆದರೂ ದೇಹದ ಅಳತೆಗೆ ತಕ್ಕಂತೆ ಹೊಂದಿಸಿ ಚಿತ್ರಿಸಲಾಗಿದೆ. ನಾಲ್ಕು ಕೈಗಳು ಇದ್ದು ವರದಹಸ್ತ, ಪಾಶ, ಅಂಕುಶ ಮತ್ತೊಂದು ಕೈಯಲ್ಲಿ ಲಾಡ್ಡುನು ಹಿಡಿದ್ದಾನೆ. ಕೆಂಪು ಹೂವಿನ ಹಾರವಿದೆ. ನಡುವಿಗೆ ಹಾವಿವುವೊಂದು ಸುತ್ತುವರಿದಿದೆ. ಹಸಿರು ವಸ್ತು ನಡುವಿನಲ್ಲಿದೆ. ಅಲಂಕರಿಸಿದ ಹೂವಿನ ಪ್ರಭಾವಳಿ ಇದ್ದು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಕಿರಣದ ರಶ್ಮಿಗಳು ಹರಡಿರುವ ಹಾಗೆ ಚಿತ್ರಿಸಿದ್ದಾರೆ.

೬.೩.೨. ಗಂಡುಭೇರುಂಡ

ಎರಡು ರೀತಿಯ ಗಂಡುಭೇರುಂಡ ಚಿತ್ರವು ಕಂಡುಬರುತ್ತದೆ. ಒಂದು ಅಪಾರದರ್ಶಕ ವಿಧಾನದಲ್ಲಿ ಚಿತ್ರಿಸಿದ್ದಾರೆ. ಹಳದಿ, ಹಸಿರು, ಬಿಳಿವರ್ಣದಿಂದ ಕೂಡಿದ್ದು ಎರಡು ತಲೆಯ ಜೊತೆ ವಿಶೇಷವಾಗಿ ದ್ರಾಕ್ಷಿಯ ಬಳ್ಳಿಯ ಜೊತೆ ಎಲೆ, ದ್ರಾಕ್ಷಿ ಹಣ್ಣುಗಳಿದ್ದು ಆ ಬಳ್ಳಿ ಹೂಗಳ ಚಿಗುರನ್ನು ಪಕ್ಷಿಯು ತನ್ನ ಕೊಕ್ಕಿನಲ್ಲಿ ಹಿಡಿದ ಹಾಗಿರುವಾಗೆ ಇದ್ದು ಪಕ್ಷಿಯು ರೇಕ್ಕೆಯನ್ನು ಹರಡಿಕೊಂಡು ಬಳ್ಳಿಯ ಬುಡದ ಮೇಲೆ ನಿಂತಿದೆ. ಆ ಬಳ್ಳಿಯ ಎಲೆ, ಕೆಂಪು, ಹಳದಿಮಿಶ್ರಿತ ದ್ರಾಕ್ಷಿ ಕೊಂಚಲು ಹಿನ್ನೆಲೆಯ ವರ್ಣ ಹಸಿರಿನಿಂದ ಆವರಿಸಿಕೊಂಡು ಇದೆ. ಈ ಚಿತ್ರದ ಚೌಕಟ್ಟು ಕಾಮಾನಿನ ಆಕೃತಿಯನ್ನು ಹೋಲುತ್ತದೆ.

ಮತ್ತೊಂದು ರೀತಿಯ **ಗಂಡುಭೇರುಂಡ** ಚಿತ್ರದ ಕಲಾಕೃತಿಯಲ್ಲಿ ಪಕ್ಷಿಯು ಗಾಢ ಹಳದಿ ವರ್ಣವಾಗಿದ್ದು ಹಿನ್ನೆಲೆಯು ತೆಳುಕಂದು ವರ್ಣ ಲೇಪಿಸಿದ್ದಾರೆ. ಸುತ್ತಲು ಅಲಂಕಾರಿಕ ಬಳ್ಳಿಯ ಚಿತ್ರವು ಆವರಿಸಿದೆ. ಪಕ್ಷಿಯು ತನ್ನ ಎರಡು ರೆಕ್ಕೆಯು ಹರಡಿಕೊಂಡು ಬಳ್ಳಿಯ ಬುಡವನ್ನು ತನ್ನ ಎರಡು ಕಾಲುಗಳಿಂದ ಆಶ್ರಯಿಸಿ ಅದರ ಮೇಲೆ ನಿಂತಿದೆ. ಕೆಂಪು ಕೊಕ್ಕು ಮತ್ತು ತಲೆಯಲ್ಲಿ ತುರಾಯಿ ಸಹ ಹೊಂದಿರುತ್ತದೆ.

೬.೪, ಜಯಲಕ್ಷ್ಮೀ ವಿಲಾಸ ಅರಮನೆ

೧೯ನೇ ಶತಮಾನದಲ್ಲಿ ನಿರ್ಮಾಣವಾದ ಈ ಅರಮನೆಯು ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ **ಜನಪದ ವಸ್ತುಸಂಗ್ರಹಾಲಯಕ್ಕೆ** ಸೇರಿದೆ. ಅಲ್ಲಿ ಗೊಂಬೆಮಂಟಪವೊಂದನ್ನು ಪಿ.ಆರ್.ತಿಪ್ಪೇಸ್ವಾಮಿ ಅವರು ಶಿವಮೊಗ್ಗದಿಂದ ಸಂಗ್ರಹಿಸಿ ತಂದಿದ್ದಾರೆ. ಅದು ಅತ್ಯಂತ ಕುಸುರಿ ಕೆಲಸದಿಂದ ಕೂಡಿದೆ. ಸೂಕ್ಷ್ಮ ರೀತಿಯ ಕೆತ್ತನೆ, ಹರಳು ಬಳಕೆ, ಕೆಲವು ಗಾಜಿನ ತುಂಡುಗಳಿಂದ ಅಲಂಕರಿಸಿದ್ದಾರೆ. ಈ ಮಂಟಪದಲ್ಲಿ ೧೫ ಗಾಜಿನಚಿತ್ರಗಳು ಇರುತ್ತವೆ ಅದರಲ್ಲಿ ಐದು ಚಿತ್ರಗಳು ಸ್ವಲ್ಪ ಹಾಳಾಗಿದೆ ಕೆಲವು ಒಡೆದುಹೋಗಿರುತ್ತದೆ. ಇನ್ನೂ ಕೆಲವು ಕಾಣೆಯಾಗಿರುತ್ತದೆ. ಹಾಗೂ ಲಕ್ಷ್ಮೀ, ನಾರಾಯಣ, ಬೆಣ್ಣೆಕೃಷ್ಣ, ಅರಳಿ ಎಲೆಯ ಬಾಲಕೃಷ್ಣ, ಹಾಲುಕುಡಿಯುತ್ತಿರುವ ಕೃಷ್ಣ, ನಾರಿಯ ಸೀರೆ ಕದ್ದು ಕೃಷ್ಣ ಮರವೇರಿ ಕುಳಿತಿರುವ ಚಿತ್ರ, ಮುಮ್ಮಡಿಕೃಷ್ಣ ರಾಜ ಒಡೆಯರ ಭಾವಚಿತ್ರ, ಅಲಂಕಾರಿಕ ಮಹಿಳೆಯರ ಚಿತ್ರಗಳು ಇಲ್ಲಿವೆ. ಅಲ್ಲದೆ ಈ ಕಟ್ಟಡದಲ್ಲಿ ವಸ್ತುಸಂಗ್ರಹಾಲಯೂ ಸಹ ಇದೆ. ಅಲ್ಲಿ ಅನೇಕ ತೂಗುಹಾಕುವ ಗಾಜಿನ ಕಲಾಕೃತಿಗಳು ಇಲ್ಲಿರುತ್ತವೆ. ಇಲ್ಲಿ ಧಾರ್ಮಿಕ, ಧಾರ್ಮಿಕೇತ್ತರ ಗಾಜಿನ ಚಿತ್ರಗಳು ಇಲ್ಲಿ ಕಂಡುಬರುತ್ತವೆ. ರಾಜನು ಕುದುರೆಸಾವರಿ ಮಾಡುತ್ತಿರುವ ಚಿತ್ರ ಲಕ್ಷ್ಮೀ, ಬುದ್ಧ, ವೆಂಕಟೇಶ್ವರ, ಸರಸ್ವತಿ, ಅರಸರ ಚಿತ್ರಗಳು ಇದು. ಆದರೆ ಅವುಗಳು ನೋಡಲು ಸರಿಯಾಗಿ ಕಾಣುವುದಿಲ್ಲ ಮಾಸಮಾಸಲು ಆಗಿ ಹಾಳಾಗಿವೆ.

೬.೪.೧, ಬಾಲಬೆಣ್ಣೆಕೃಷ್ಣ : ಈ ಕಲಾಕೃತಿ ಅಲ್ಲದೆ ಎಲ್ಲಾ ಕಲಾಕೃತಿಗಳು ಒಂದೇ ಅಳತೆಯಲ್ಲಿ ಕಂಡುಬರುತ್ತದೆ. ಒಂದು ಅಡಿ ಉದ್ದ ಮುಕ್ಕಾಲು ಅಡಿ ಅಗಲವಿದೆ. ಈ ಚಿತ್ರದಲ್ಲಿ ಕೃಷ್ಣನು ಮಡಿಕೆಯಿಂದ ಬೆಣ್ಣೆಯನ್ನು ಎತ್ತಿ ತಿನ್ನುತ್ತಿರುವನು. ಹಿಂದೆ ದೊಡ್ಡ ದಿಂಬು ಇದ್ದು ಅದರ ಮೇಲೆ ಒಂದು ಗಿಳಿಯು ಸಹ ಇವರನ್ನೆ ನೋಡುತ್ತಿರುವುದು. ಮಂಡಿಯೂರಿ ಬಾಗಿ ಇರುವವನನ್ನು ಬಾಲಕೃಷ್ಣ ಸುತ್ತಲು ಅಲಂಕಾರಿಕ ಹೂಬಳ್ಳಿಯಿಂದ ಅಲಂಕರಿಸಿದ್ದಾರೆ ಕೃಷ್ಣನನ್ನು ಬಾಲಕನಾಗಿ ಚಿತ್ರಿಸಿ, ಆಭರಣಗಳಿಂದ ಅಲಂಕರಿಸಿ ಮುದ್ದಾದ ಬಾಲಕನಾಗಿರುವಂತೆ ಕಲಾವಿದನ್ನು ಚಿತ್ರಿಸಿದ್ದಾನೆ. ಬಿಳಿವರ್ಣದಲ್ಲಿ ಕೃಷ್ಣನ ಮೈ ಬಣ್ಣವಿದೆ. ಹಿನ್ನೆಲೆಯನ್ನು ಕೆಂಪುವರ್ಣದಿಂದ ತುಂಬಿರುತ್ತಾರೆ. ಈ ಚಿತ್ರ ಕೆಲವು ಭಾಗವು ಹಾಳಾಗಿರುತ್ತದೆ.

೬.೪.೨, ಹಾವಿನಪೀಠ ಮೇಲೆಕುಳಿತ ಬಾಲಕೃಷ್ಣ : ಕೃಷ್ಣನನ್ನು ಬಿಳಿ ಮತ್ತು ಕೆಂಪು ಮಿಶ್ರಿತವರ್ಣದಿಂದ ತೋರಿಸಿದ್ದಾನೆ. ಹಸಿರು ಮತ್ತು ಕೆಂಪು ಮಿಶ್ರಿತ ಹಾವು ದೊಡ್ಡದಾಗಿರುವುದು. ಹಿಂಬದಿಯರಲ್ಲಿ ಪೂರ್ಣ ಸಾಧ್ಯವಿದ್ದು ಕೆಂಪುವರ್ಣ ಮಾತ್ರ ತುಂಬಿರುತ್ತಾರೆ. ಕೃಷ್ಣನು ಅಲಂಕರಿಸಿಕೊಂಡು ಪೀಠದ ಮೇಲೆ ಕುಳಿತು ತನ್ನ ಬಲಗಾಲನ್ನು ಎತ್ತಿ ಬೆರಳನ್ನು ನೆಕ್ಕುತ್ತಿದ್ದಾನೆ. ಕಾಲು, ಕೈ, ತೋಳು, ನಡುವಿನಲ್ಲಿ ಆಭರಣವನ್ನು ತೊಟ್ಟಿರುತ್ತಾನೆ. ಹಾವಿನ ಹೆಡೆಯಲ್ಲಿ ಎರಡು ತಲೆಮಾತ್ರ ಇರುವಾಗೆ ಚಿತ್ರಿಸಿದ್ದಾರೆ. ಚಿತ್ರದ ಸುತ್ತಲು ಅಲಂಕಾರಿಕ ಪಟ್ಟಿಯು ಇದೆ.

೬.೪.೩, ತಾಯಿಯ ತೋಡೆಯ ಮೇಲೆ ಕುಳಿತು ಹಾಲುಕುಡಿಯುತ್ತಿರುವ ಕೃಷ್ಣ : ತಾಯಿಯು ಮಂಚದ ಮೇಲೆ ಕುಳಿತ್ತಿದ್ದು ತನ್ನ ತೊಡೆಯ ಮೇಲೆ ಹಾಕಿಕೊಂಡು ಕೃಷ್ಣನಿಗೆ ಮೊಲೆಹಾಲನು ಕುಡಿಸುತ್ತಿರುವ ಚಿತ್ರದಲ್ಲಿ ತಾಯಿ ಚಿನ್ನದ ವರ್ಣದ ಸೀರೆಯಲ್ಲಿ ಹಸಿರು ಅಂಚನ್ನು ಹೊಂದಿದ ಸೀರೆಯನ್ನು ಉಟ್ಟಿರುತ್ತಾಳೆ ಹಿಂಬದಿಯಲ್ಲಿ ಕೇಸರಿಯ ದೊಡ್ಡದಿಂಬು ಕೆಂಪುವರ್ಣ ಮತ್ತು ಚಿನ್ನದ ಚುಕ್ಕಿಯಿಂದ ಕೂಡಿದ್ದು. ಹಿಂಬದಿ, ಕಾಮಾನಿನ ರೀತಿಯ ಅಲಂಕಾರಿಕ ಪ್ರಭಾವಳಿಯಿದ್ದು ಕೇಸರಿ ಮತ್ತು ಹಸಿರುವರ್ಣ ಲೇಪಿಸಿರುತ್ತಾರೆ. ಇಬ್ಬರ ಮೈವರ್ಣವು ಕಪ್ಪುಮಿಶ್ರಿತ ಕೆಂಪು ಬಣ್ಣವುಳ್ಳದಾಗಿದೆ. ಆಭರಣಗಳಿಂದ ಸಿಂಗಾರ ಭರಿತರಾಗಿದ್ದಂತೆ ಕಲಾವಿದನು ಚಿತ್ರದಲ್ಲಿ ತೋರಿಸಿದ್ದಾರೆ.

೬.೪.೪, ಮುಮ್ಮಡಿಕೃಷ್ಣ ರಾಜಒಡೆಯರ ಭಾವಚಿತ್ರಗಳು : ಈ ಚಿತ್ರದಲ್ಲಿ ಮೂರು ಕಲಾಕೃತಿಗಳು ಇರುತ್ತದೆ. ಅದರಲ್ಲಿ ಎರಡು ಚಿತ್ರಗಳು ಒಂದೇ ರೀತಿಯಲ್ಲಿ ಇರುತ್ತದೆ. ರಾಜಪೋಷಾಕು ತೊಟ್ಟಿರುವ ಅಲಂಕರಿಸಿ ಇರುವ ಚಿತ್ರವು ಹಸಿರು ಅಂಗಿ ದೊಡ್ಡ ಪೇಟ ಧರಿಸಿದ್ದಾರೆ. ವೃತ್ತಾಕಾರದ ಹೊರಗೆ ಅಲಂಕರಿಕ ನಕ್ಷಾಚಿತ್ರದಿಂದ ರೇಖಿಸಿದ. ಚಿತ್ರವು ಆಯಾತಕಾರವಿದೆ. ಮತ್ತೊಂದು ಮುಮ್ಮಡಿಯವರ ಭಾವಚಿತ್ರವು ಸಾಧಾರಣದಿಂದ ಕೂಡಿದೆ. ಕಂದು ವರ್ಣದ ಪೇಟಾ, ಅಂಗಿ ಧರಿಸಿದ್ದು ಅದರಲ್ಲಿ ಚಿನ್ನದ ಬಟ್ಟುಗಳು ಇರುತ್ತದೆ. ದಪ್ಪಮೀಸೆ ಹೊಂದಿದ್ದು. ಪೇಟದಲ್ಲಿ ಮುತ್ತಿನ ಗೊಂಚಲು ಇದೆ. ಮೈವರ್ಣವನ್ನು ಬಿಳಿ ಕೆಂಪುಮಿಶ್ರಿತ ಹಾಲಿನ ವರ್ಣದಿಂದ ತೋರಿಸಿದ್ದಾರೆ. ಹಿನ್ನೆಲೆಯಲ್ಲಿ ಆಕಾಶ ನೀಲಿ ವರ್ಣದಿಂದ ಹಾಗೂ ಕೆಂಪು ವಸ್ತ್ರವನ್ನು ಅಲಂಕಾರಿಕವಾಗಿ ಇಳಿಬಿಟ್ಟಿರು ಹಾಗೆ ಚಿತ್ರಿಸಿದ್ದಾನೆ ಕಲಾವಿದನು. ಆದರೆ ದೂರಾದೃಷ್ಟಕ್ಕೆ ಕೆಲವು ಭಾಗದ ಗಾಜು ಒಡೆದು ಹೋಗಿರುತ್ತದೆ.

೬.೫. ಜಗನ್ಮೋಹನ ಅರಮನೆಯ ಗಾಜಿನ ಚಿತ್ರಗಳು : ಮೈಸೂರು ನಗರದ ಪಾರಂಪರಿಕ ಕಟ್ಟಡಗಳಲ್ಲಿ ಮುಖ್ಯವಾದುದೆಂದರೆ ಜಗನ್ಮೋಹನ ಅರಮನೆ ೧೮೬೧ರಲ್ಲಿ ನಾಲ್ವಡಿ ಕೃಷ್ಣರಾಜಒಡೆಯರು ಅವರ ಮದುವೆ ಸಂದರ್ಭದಲ್ಲಿ ನಿರ್ಮಿಸಲಾಗಿದೆ. ಮತ್ತು ಯೂರೋಪಿಯನ್ ಅಧಿಕಾರಿಗಳಿಗೆ ಔತಣಕ್ಕೆಂದು ಅರಮನೆ ಕಟ್ಟಿದ್ದರು. ಇಲ್ಲಿ ಎರಡನೆಯ ಮಹಡಿಯ ಗೋಡೆಯ ಮೇಲೆ ತೂಗುಹಾಕುವ ಗಾಜಿನ ಚಿತ್ರಗಳು ೨೦ ಕಲಾಕೃತಿಗಳು ಧಾರ್ಮಿಕೇತ್ತರ ಗಾಜಿನ ಚಿತ್ರಗಳು ಇವೆ. ಇದರಲ್ಲಿ ಅರಸರಗಳು, ಶೃಂಗಾರವಾಗಿರುವ ಮಹಿಳೆಯರು, ವಿದೇಶಿ ಅಧಿಕಾರಿಗಳು, ಹಾಗೂ ರಾಣಿಯರ ಚಿತ್ರಗಳು, ನೃತ್ಯ ಮಾಡುತ್ತಿರುವ ಬಾಲೆ, ಅಲಂಕಾರಭರಿತವಾಗಿ ಕುಳಿತಿರುವ ಮಹಿಳೆಯರು ಹೀಗೆ ಗಾಜಿನ ಚಿತ್ರಗಳು ಒಂದೇ ಅಳತೆಯಲ್ಲಿ ಕ್ಯಾಲೆಂಡರ್ ಶೈಲಿಯ ರೀತಿಯಿಂದ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ವಿದೇಶಿಯರು ಇದನು ಚಿತ್ರಿಸಿದ್ದಾರೆ. ಈ ಚಿತ್ರಗಳು ಉತ್ತಮ ಸಂಗ್ರಹ ಕಲಾಕೃತಿಗಾಗಿವೆ. ಇದನ್ನು ಗೋಡೆಯ ಮೇಲೆ ಸಾಲಾಗಿ ತೂಗುಹಾಕಿರುತ್ತಾರೆ. ಅದಕ್ಕೆ ಗೋಲ್ಡ್ ಪ್ರೇಮ್ ಹಾಕಲಾಗಿದೆ. ಈ ಎಲ್ಲಾ ಚಿತ್ರಗಳನ್ನು ಅಂದಿನಿಂದ ಇಲ್ಲಿ ಸಂರಕ್ಷಿಸಲಾಗಿದೆ. ಈ ಚಿತ್ರಗಳು ಐತಿಹಾಸಿಕ ಕೆಲವು ನೆನಪಿನ ಗಾಜಿನ ಚಿತ್ರಗಳಾಗಿವೆ. ಕೆಲವು ಚಿತ್ರಗಳು ಮೊಘಲ್‌ಶೈಲಿಯ ಕಲಾಕೃತಿಗಳನ್ನು ಹೊಲುತ್ತವೆ.

೬.೫.೧, ಅಲಂಕಾರಪ್ರಿಯ ಸ್ತ್ರೀ : ಈ ಮಹಿಳೆಯು ಅಲಂಕರಿಸಿಕೊಂಡು ಸಂತೋಷದಿಂದ ದಿಂಬಿಗೆ ಓರಗಿ ಕುಳಿತಿರುತ್ತಾಳೆ. ಅವರ ಬಟ್ಟೆಯು ಅಲಂಕಾರಿಕವಾಗಿದೆ. ದೇಹದ ವರ್ಣವು ಬಿಳಿ ನೀಲಿಮಿಶ್ರಿತ ವರ್ಣ, ಕಂದು ಕುಪ್ಪಸ, ಕೆಂಪು ಅಲಂಕಾರಿಕ ಚಿತ್ರವಿರುವ ಲಂಗ, ಗಾಢ ನೀಲಿ ಸೆರೆಗು ಹೊಂದಿದ್ದು ಹಿನ್ನೆಲೆಯಲ್ಲಿ ಆಕಾಶನೀಲಿ ವರ್ಣದಿಂದ ಸಾಧರಣವಾಗಿ ಲೇಪಿಸಿರುತ್ತಾರೆ. ತಿಳಿ ಹಸಿರು ವರ್ಣದ ನೆಲವು ಕಾಣುವಂತೆ ಕಲಾವಿದ ಚಿತ್ರಿಸಿದ್ದಾನೆ. ಆಭರಣದಿಂದ ಶೃಂಗರಿಸಿಕೊಂಡ ಈ ಚಿತ್ರವು ಮೊಘಲ್‌ಶೈಲಿಯನು ನೆನೆಪಿಸುವಂತಹ ಚಿತ್ರವಿರುಬಹುದು. ಈ ಚಿತ್ರವು ತುಂಬ ಸೂಕ್ಷ್ಮ ಹಾಗೂ ನವಿರಾಗಿ ಕ್ಯಾಲೆಂಡರ್ ರೀತಿಯಲ್ಲಿ ಸುಂದರವಾಗಿ ಇರುವಂತ ಗಾಜಿನ ಕಲಾಕೃತಿಯಾಗಿದೆ.

೬.೫.೨, ಅರಸನ ಭಾವಚಿತ್ರ : ರಾಜನ್ನು ಸುಂದರವಾಗಿರುವ ವಸ್ತ್ರಧರಿಸಿ ರಾಜಗಾಂಭಿರ್ಯದಿಂದ ಇರುವ ಈ ಭಾವಚಿತ್ರವು ಕೇರಳರಾಜ್ಯದ ರಾಜನ ಚಿತ್ರವಾಗಿದೆ. ಇದು ಆಗಿನ ಸ್ನೇಹಸಂಬಂಧದ ಕಾಣಿಕೆಯಾಗಿದೆ. ರಾಜನು ನೀಲಿಗೆಂಪು ತುರಾಯಿ ಹೊಂದಿದ ಪೇಟಾವನ್ನು ಧರಿಸಿದ್ದಾನೆ. ದುಂಡು ಮುಖದೊಂದಿಗೆ ಮೀಸೆ ತೋರಿರುವ ರಾಜನ ಗತ್ತಿನ ಭಾವಯೊಂದಿದೆ. ಕೊರಳಿಗೆ ಆಭರಣಗಳಿಂದ ಅಲಂಕರಿಸಿಕೊಂಡು ಹಳದಿ ಮಿಶ್ರೀತ ಉಡುಪು ಧರಿಸಿದ್ದಾನೆ. ಹಿನ್ನೆಲೆಯ ಸಪಾಟಾಗಿ ಗಾಢ ಹಸಿರು ವರ್ಣವು ಲೇಪಿಸಿರುತ್ತಾರೆ.

೬.೬. ಲಲಿತಮಹಲ್ ಅರಮನೆಯ ಗಾಜಿನ ಚಿತ್ರಗಳು : ಮೈಸೂರು ನಗರದ ಪೂರ್ವಕ್ಕೆ ಎತ್ತರವಾದ ದಿಣ್ಣೆಯ ಮೇಲೆ ನಾಲ್ವಡಿಕೃಷ್ಣರಾಜ ಒಡೆಯರು ಅಪಾರ ವೈಭವದ ಅತಿಥಿಗೃಹವನ್ನು ೧೯೩೧ರಲ್ಲಿ ಕಟ್ಟಿಸಿದರು ಅದು ಎರಡು ಅಂತಸ್ತಿನ ಕಟ್ಟಡವಾಗದೆ. ಲಂಡನ್ ಸಂತಪೌಲ್ಸ ಕಥೆರ್ಡಲ್‌ನ್ನು ಮಾದರಿಯಾಗಿಟ್ಟುಕೊಂಡು ನಿರ್ಮಿಸಲಾಗಿದೆ. ವಿದೇಶದಿಂದ ಆಮದು ಮಾಡಿಕೊಂಡು ಅನೇಕ ಸಾಮಾಗ್ರಿಗಳನ್ನು ಜೋಡಿಸಲಾಗಿದೆ. ಅದರ ಮೇಲೆ ಕುಶಲಕಲೆಯಿಂದ ಕೂಡಿದ ಗಾಜಿನ ಚಿತ್ರಕಲೆಯ ಇಲ್ಲಿನ ಸ್ಥಳಿಯ ಕಲಾವಿದರು ರಚಿಸಿರುವ ಚಿತ್ರಗಳು ಇಲ್ಲಿ ಇರುತ್ತದೆ. ಐತಿಹಾಸಿಕ ಕಾಲದಲ್ಲಿ ರಚನೆಗೊಂಡಂತಹ ಧಾರ್ಮಿಕ ಹಿನ್ನೆಲೆಯ ಗಾಜಿನ ಚಿತ್ರಗಳು ಇದರ ಜೊತೆಗೆ, ಇಲ್ಲಿನ ರಾಜ್ಯ ಆಳಿದ ೨೫ ಅರಸರನ್ನು ಚಿತ್ರಿಸಿರುವ ಚಿಕ್ಕಚಿಕ್ಕ ಚಿತ್ರಗಳು ಇಲ್ಲಿ ಇರುತ್ತದೆ. ಮತ್ತು ಮೇಲ್ಚಾವಣಿಯಲ್ಲಿ ಅಲಂಕಾರಿಕ ನಕ್ಷಾವಿನ್ಯಾಸ ಚಿತ್ರಗಳು ಇಲ್ಲಿ ಕಂಡುಬರುತ್ತದೆ.

ಧಾರ್ಮಿಕ ಹಿನ್ನೆಲೆಯ ಗಾಜಿನ ಚಿತ್ರಗಳು ಅರಮನೆಯ ಪ್ರವೇಶದ ಒಳಗಿನ ಹಾಲ್‌ನ ಗೋಡೆಯ ಮೇಲೆ ವೃತ್ತಾಕಾರದ ಕಿಟಕಿಯ ಗಾಜಿನ ಮೇಲೆ ದೇವರ ಚಿತ್ರಗಳು ಚಿತ್ರಿಸಿದ್ದಾರೆ.

ಅದರಲ್ಲಿ ಗಾಯತ್ರಿದೇವಿ, ಕೃಷ್ಣ, ಲಕ್ಷ್ಮೀ, ನಾರಾಯಣ, ಶಿವ, ಧಾನ್ಯಲಕ್ಷ್ಮೀ, ಮತ್ತು ಚಾಮುಂಡೇಶ್ವರಿ, ಸರಸ್ವತಿ, ದತ್ತಾತ್ರೇಯ, ನಿಂತಿರುವ ಬುದ್ಧ, ಲಕ್ಷ್ಮೀ, ಕೊಳಲುಉದೂತ್ತಿರುವ ಕೃಷ್ಣ ಈ ರೀತಿಯ ಗಾಜಿನಚಿತ್ರಗಳು ಧಾರ್ಮಿಕ ಹಿನ್ನೆಲೆ ಚಿತ್ರಗಳನ್ನು ಚಿತ್ರಿಸಿರುತ್ತಾರೆ.

೬.೬.೧, ಕೊಳಲುಉದೂತ್ತಿರುವ ಕೃಷ್ಣನ ಚಿತ್ರ

ದ್ವಿಭಂಗಿಯಲ್ಲಿ ನಿಂತು ಕೊಳಲು ಹೂದೂತ್ತಿರುವ ಕೃಷ್ಣನನ್ನು ಗಾಢ ನೀಲಿ ಮೈವರ್ಣದಿಂದ ತೋರಿಸಿದ್ದಾನೆ ಹಳದಿವರ್ಣದ ಕಚ್ಚೆಯ ಪಂಚೆಯನ್ನು ಉಟ್ಟಿರುತ್ತಾನೆ. ಹಳದಿ, ಕೆಂಪು ಹೂವಿನ ಮಾಲೆಯನ್ನು ಧರಿಸಿ, ಹಳದಿ ವರ್ಣದಿಂದಲ್ಲೆ ಆಭರಣವನ್ನು ತೋರಿಸಿದ್ದಾರೆ. ಕೈಬಂದಿ, ಕಾಲುಕಡಗ, ತೋಳುಬಂದಿ, ಕೊರಳಹಾರದಲ್ಲಿ ಪದಕ ಹಾಗೂ ಕಿರೀಟ ಧರಿಸಿರುತ್ತಾನೆ. ಕಿರೀಟಕ್ಕೆ ನವಿಲುಗರಿಯನ್ನು ಸಿಗಿಸಿಕೊಂಡು ಅಲಂಕಾರಭರಿತನಾಗಿ ಕೊಳಲನ್ನು ಸಂತೋಷದಿಂದ ನುಡಿಸುತ್ತಿದ್ದಾನೆ.

ಹಿನ್ನೆಲೆಯು ಸಾದರಣವಾಗಿರುವ ಹಾಗೆ ಗಾಜುನ್ನು ಬಿಟ್ಟಿರುತ್ತಾನೆ. ವೃತ್ತಾಕಾರದೊಳಗೆ ಮಧ್ಯದಲ್ಲಿ ಆಕೃತಿಯನ್ನು ಮನೋಜ್ಞಾನವಾಗಿ ಚಿತ್ರಿಸಿರುತ್ತಾನೆ.

೬.೬.೨. ಗಾಯತ್ರಿದೇವಿ ಚಿತ್ರ

ಈ ಗಾಜಿನಚಿತ್ರವು ಸಹ ವೃತ್ತಾಕಾರದೊಳಗೆ ಚಿತ್ರಿಸಿರುತ್ತಾನೆ ಕಮಲದ ಹೂವಿನ ಮೇಲೆ ಕುಳಿತಿರುವ ಪಂಚಮುಖವುಳ್ಳ ದೇವಿಯು ೧೦ ಕೈಗಳನ್ನು ಹೊಂದಿರುತ್ತಾಳೆ. ಪ್ರತಿಕೈಯಲ್ಲಿ ಆಯುಧ ಹಾಗೂ ಆಶೀರ್ವದಿಸುತ್ತಿರುವ ಕಲಾವಿದ ಸಂಯೋಜಿಸಿದ್ದಾನೆ. ಕೈಗಳಲ್ಲಿ ಕಮಲ, ಶಂಖು, ಚಕ್ರ, ಗಧೆ, ಪಾಶ, ಅಂಕುಶ ಹಿಡಿದಿರುವಂತೆ ತೋರಿಸಿದ್ದಾರೆ. ಜೊತೆಗೆ ಆಭಯ, ವರದ, ಹಸ್ತಗಳಿವೆ ಕೆಂಪು ಕುಪ್ಪಸ, ಅರಿಸಿನ ಸೀರೆ, ಕೆಂಪು ಪಟ್ಟಿಯೊಂದಿದೆ. ನಸುಗೆಂಪು ವರ್ಣದಿಂದ ಕೂಡಿದ ತಾವರೆಹೂವು ಅದರ ಮೇಲೆ ಪದ್ಮಾಸನದ ಸಮಭಂಗಿಯಲ್ಲಿ ಕುಳಿತಿದ್ದಾಳೆ. ಮೈವರ್ಣವು ಕೆಂಪು, ಕೇಸರಿ, ಬಿಳಿ ಮಿಶ್ರಿತ ಮೈಬಣ್ಣವಿದು. ಚಿತ್ರವನ್ನು ಕಪ್ಪುರೇಖೆಯಿಂದ ರಚಿಸಿರುತ್ತಾರೆ. ಈ ಎರಡು ದೇವತೆಗಳು ಇಲ್ಲಿನ ಅರಸರ ಇಷ್ಟದೇವತೆಗಳಾಗಿವೆ.

೬.೬.೩, ಐತಿಹಾಸಿಕ ಮೈಸೂರು ಅರಸರ ಚಿತ್ರಗಳು

ಈ ಜಿಲ್ಲೆಯಲ್ಲಿ ಆಗಿನ ಒಡೆಯರ ಮನೆತನದ ಅರಸರ ವ್ಯಕ್ತಿಚಿತ್ರಗಳು ಚಿಕ್ಕಚಿಕ್ಕದಾಗಿ ಗಾಜಿನ ಮೇಲೆ ಚಿತ್ರಿಸಿದ್ದಾರೆ. ವರ್ಣವನ್ನು ಚಪ್ಪಟೆಯಾಗಿ ಲೇಪಿಸಿದ್ದಾರೆ. ಎಲ್ಲಾ ೨೫ ಅರಸರ ಚಿತ್ರಗಳು ಗೋಡೆಯ ಮೇಲೆ ನಾಜೂಕಾಗಿ ತೂಗುಹಾಕಿದ್ದಾರೆ. ಕಪ್ಪು ರೇಖೆಯಿಂದ ಆಕೃತಿಯನ್ನು ರಚಿಸಿ ಅದರೊಳಗೆ ಚಪ್ಪಟೆಯಾಗಿ ವರ್ಣವೈಶಿಷ್ಟವಾಗಿ ಲೇಪಿಸಿ ಪ್ರತಿ ಅರಸರನ್ನು ಸಹ ಹೀಗೆ ಚಿತ್ರಿಸಿದ್ದಾರೆ. ಅವರ ಮುಖಭಾಗ ಸ್ಪಷ್ಟವಾಗಿ ಗೋಚರಿಸುತ್ತದೆ. ಎಲ್ಲಾ ಅರಸರು ಕುಳಿತಿರುವಾಗೆ ಚಿತ್ರಿಸಿದ್ದಾರೆ. ಎರಡುಕಡೆ ತೂಗುಹಾಕಿದ್ದಾರೆ. ಎಲ್ಲಾ ಕಲಾಕೃತಿಗೂ ಚಿಕ್ಕ ಗೋಲ್ಡ್‌ಪ್ರೇಮ್ ಹಾಕಿಸಿದ್ದಾರೆ. ನೋಡಲು ಸರಳಸುಂದರವಾಗದ್ದು ಪ್ರತಿ ಹಿನ್ನೆಲೆಯ ವರ್ಣವೂ ತಿಳಿಹಳದಿ, ಹಸಿರುನಿಂದ ಕೂಡಿದೆ. ಪ್ರತಿಯೊಬ್ಬ ರಾಜನು ರಾಜಪೋಷಾಕು ಹಾಗೂ ಆಭರಣ, ಆಸನಗಳ ಮೇಲೆ ಅಲಂಕರಿಸಿ ಕುಳಿತಿದ್ದಾರೆ. ನಿಲುವಂಗಿಯನ್ನು ತೊಟ್ಟು, ಹಸಿರು, ನೀಲಿ, ಕೆಂಪು, ಕೇಸರಿ ಹಾಗೂ ದ್ವಿತೀಯ ವರ್ಣ ತೃತೀಯ ವರ್ಣಗಳಿಂದ ಲೇಪಿಸಿದ್ದಾರೆ. ಕಲಾಕೃತಿಗಳೆಲ್ಲವನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ.

೬.೬.೪, ಲಲಿತಮಹಲ್ ಮೇಲ್ಛಾವಣಿಯ ಗಾಜಿನಚಿತ್ರಗಳು

ಲಲಿತಮಹಲ್‌ನ ಮೇಲ್ಛಾವಣಿಯಲ್ಲಿ ವೃತ್ತಾಕಾರದೊಳಗೆ ಸಾದರಣ ಗಾಜಿನ ಚಿತ್ರಗಳನ್ನು ಚಿತ್ರಿಸಿದ್ದಾರೆ. ಬಣ್ಣಲೇಪನ ಪಾರದರ್ಶಕ ವರ್ಣದಿಂದ ರಚಿಸಿ ಅನೇಕ ಚಿಕ್ಕ ದೊಡ್ಡ ಗಾಜಿನ ಪಟ್ಟಿಕೆಗಳಿಂದ ನಿರ್ಮಿಸಿದ್ದಾರೆ. ಒಟ್ಟು ಸಂಯೋಜನೆಯು ಹೂವಿನ ಮೊಗ್ಗುಗಳು ದೊಡ್ಡದಾಗಿ ಚಿತ್ರಿಸಿದ್ದಾರೆ. ಅದರೊಳಗೆ ಚಿಕ್ಕದಾಗಿ ಮೈಸೂರು ಅರಸರ ರಾಜಲಾಂಛನವನ್ನು ಅಲ್ಲಲ್ಲಿ ಚಿತ್ರಿಸಿದಾರೆ. ಅದು ಗಂಡುಭೇರುಂಡ ತನ್ನ ರೆಕ್ಕೆ ಹರಡಿಕೊಂಡು ಕಾಲು ಚಾಚಿನಿಂತಿದೆ. ಅದನ್ನು ಎರಡು ಸಿಂಹದಂತ ಕಾಲ್ಪನಿಕಪ್ರಾಣಿಯೂ ಎತ್ತಿ ಹಿಡಿದಿದೆ. ಇದು ಈಗಿನ ಸರ್ಕಾರದ ಲಾಂಛನವಾಗಿದೆ. ಈ ಚಿತ್ರದಲ್ಲಿ ಸಿಂಹ ಹಳದಿಹಸಿರು ಮಿಶ್ರಿತದಿಂದ ತೋರಿಸಿದ್ದಾನೆ. ಜೊತೆಗೆ ತೋರಿಸಿದ್ದಾನೆ. ಜೊತೆಗೆ ಹೂವಿನ ಮಾಲೆ ಹಾಕಿರುವಂತೆ ತೋರುವಾಗೆ ಚಿತ್ರಿಸಿದ್ದಾರೆ. ಎಲ್ಲಾ ಅರಮನೆಗಳಲ್ಲಿ ಮುಖ್ಯವಾಗಿ ಮರಳಿನ ಗಾಜಿನ ಎಚ್ಚಿಂಗ್ ಮಾಡಿರುವ ಚಿತ್ರಗಳು ಕಿಟಕಿ, ಬಾಗಿಲುಗಳಲ್ಲಿ ಜೋಡಿಸಿದ್ದಾರೆ. ಈ ಪದ್ಧತಿಯು ಬಹಳ ವೈವಿಧ್ಯತೆಯಿಂದ ಕೂಡಿದ, ಆಧುನಿಕ ರೀತಿಯ ತಂತ್ರಗಾರಿಕೆಯನ್ನು ಬಳಸಿಕೊಂಡು ಜೊತೆಗೆ ಅದರಲ್ಲಿ ರಾಸಾಯನಿಕ ವರ್ಣಗಳನ್ನು ಸಂಯೋಜಿಸಲಾಗಿದೆ.

ಸ್ಯಾಂಢ್ ಎಚ್ಚಿಂಗ್ ವಿಧಾನವು ೧೯೩೫ದರ ನಂತರ ಬೆಳೆದುಬಂದ ಕಲೆಯಾಗದೆ. ಈ ಕಲೆಯು ಮೈಸೂರಿನ ಎಲ್ಲಾ ಅರಮನೆ, ಮಹಲ್‌ಗಳಲ್ಲಿ ಹೇರಳವಾಗಿ ಕಂಡುಬರುತ್ತದೆ. ಅದರಲ್ಲಿ ಅಲಂಕಾರಿಕ ಹೂಬಳ್ಳಿಚಿತ್ರಗಳು, ನಕ್ಷಾಚಿತ್ರಗಳು ಹೆಚ್ಚಾಗಿದ್ದು ಪರಿಸರದ ಚಿತ್ರಗಳೂ ಅಲ್ಲಲ್ಲಿ ಇರುತ್ತದೆ.

೬.೭. ಕುಪ್ಪಣ್ಣಪಾರ್ಕನಲ್ಲಿರುವ ಮಂಟಪದಲ್ಲಿರುವ ಚಿತ್ರಗಳು

ಕುಪ್ಪಣ್ಣ ಪಾರ್ಕ, ಅಥವಾ ವಿಲಾದ್‌ಬಾಗ್, ನಿಷದ್‌ಬಾಣ್ ಉದ್ಯಾನವನ ಎಂದು ಕರೆಯುತ್ತಾರೆ. ಇದನ್ನು ನಾಲ್ವಡಿಕೃಷ್ಣರಾಜೇಂದ್ರ ಒಡೆಯರ ಕಾಲದಲ್ಲಿ ನಿರ್ಮಿತವಾದ ಉದ್ಯಾನವನ ೯ ಎಕರೆವಿಸ್ತೀರ್ಣ ಹೊಂದಿದ್ದು, ಹಿಂದೆ ಖಾಸಗಿಯವರ ಸ್ವತ್ತಾಗಿತ್ತಂತೆ. ಇದನ್ನು ಕುಪ್ಪಣನ ಮೇಲ್ವಿಚಾರಕರಾಗಿದ್ದ ಜಿ.ಎಚ್.ಕ್ರಂಬಿಗಲ್‌ರವರ ಕಲಾದಲ್ಲಿ ಅಲಂಕರೋದ್ಯಾನವನ ನಿರ್ಮಾಣವಾಯಿತು. ಇಲ್ಲಿ ಪಾರಂಪರಿಕ ಮಂಟಪವೊಂದಿದೆ. ಇದನ್ನು ಬ್ಯಾಂಡ್‌ಸ್ಟಾಂಡ್ ಎಂದು ಸಹ ಕರೆಯುತ್ತಾರೆ.

ಈ ಮಂಟಪದ ಮೇಲ್ಛಾವಣಿಯು ಗೋಳಾಕಾರವಾಗಿದ್ದು, ಅಲ್ಲಿಗೆ ಅಳವಡಿಸಿರುವ ಗಾಜಿನ ಮೇಲೆ ಸುಂದರ ಮೈಸೂರು ಶೈಲಿಯ ಚಿತ್ರಗಳು ರಚಿಸಿದ್ದಾರೆ. ಗಾಜಿನಮೇಲೆ ಮೂಡಿರುವ ಚಿತ್ರಗಳು ಸಾರ್ವಜನಿಕರ ಕುಚೇಷ್ಟೆಗಳಿಂದ ಹಾಗೂ ಮಳೆ ಬಿಸಿಲಿಗೆ ಮತ್ತು ಗಾಳಿಗೆ ಕೆಲವುಗಳು ಹಾಳಾಗಿದೆ. ಇಲ್ಲಿ ಮುಖ್ಯವಾಗಿ ಧಾರ್ಮಿಕ ಹಿನ್ನೆಲೆಯ ಚಿತ್ರಗಳು ಇರುತ್ತದೆ. ರಾಮ, ಚಾಮುಂಡೇಶ್ವರಿ, ಶಿವ, ಅಲಂಕಾರಗೊಂಡ ಮಹಿಳೆಯ ಚಿತ್ರವಿದೆ. ಮತ್ತು ನಕ್ಷಾಚಿತ್ರಗಳು ಸಹ ಇಲ್ಲಿ ಚಿತ್ರಿಸಿದ್ದಾರೆ. ಹೂ–ಬಳ್ಳಿಯು ಗಾಜಿನಮೇಲೆ ಆವರಿಸಿದ್ದಂತೆ ಸುಂದರವಾಗಿ ಸಂಯೋಜಿಸಿದ್ದಾರೆ.

೬.೭.೧, ರಾಮನಚಿತ್ರ

ರಾಮನಚಿತ್ರ ಹಸಿರುವರ್ಣ ಮೈಕಾಂತಿಯಿಂದ ಕೂಡಿದ್ದು ಕಿರೀಟಧಾರಿಯಾದ ರಾಮನು ಅಲಂಕರಭೂಷಿತನಾದ ವಿಷ್ಣುವಿನ ಅಂಶ ಅವತಾರ ಪುರಷನಾಗಿರುವ ದ್ವಿಭಂಗಿಯಲ್ಲಿ ನಿಂತಿದಿದ್ದು ಎರಡು ಕೈಗಳಿದ್ದು ಅದರಲ್ಲಿ ಬಿಲ್ಲು ಬಾಣಗಳನ್ನು ಹಿಡಿದಿರುತ್ತಾನೆ. ಕೆಂಪುಶಾಲು ಕೇಸರಿಪಂಚೆ ಉಟ್ಟಿರುತ್ತಾನೆ. ತನ್ನ ಬಾಣದಭತ್ತಳಿಕೆಯಲ್ಲಿ ಅನೇಕ ಬಾಣಗಳನ್ನು ಕಲಾವಿದನು ಚಿತ್ರಿಸಿದ್ದಾನೆ. ಹಿನ್ನೆಲೆಯು ಖಾಲಿಯಿದ್ದು. ಆ ನಂತರದಲ್ಲಿ ಕಂಭ ಮತ್ತು ಪ್ರಭಾವಳಿಯನ್ನು ಹಳದಿ ವರ್ಣದಿಂದ ಅಲಂಕರಿಸಿ ಚಿತ್ರಿಸಲಾಗಿದೆ. ಕಪ್ಪು ರೇಖೆಯಿಂದ ಆಕೃತಿ ರಚಿಸಿಕೊಂಡು ಆಮೇಲೆ ಅಪಾರದರ್ಶಕ ಮಾಧರಿಯಲ್ಲಿ ವರ್ಣ ಲೇಪನ ಮಾಡಿದ್ದಾರೆ. ಮೈಸೂರುಶೈಲಿಯ ಉತ್ತಮ ಗಾಜಿನ ಚಿತ್ರಗಳಾಗಿದೆ. ಪಕ್ಕದಲ್ಲೆ ಅಲಂಕಾರಿಕ ಹೂಬಳ್ಳಿಯ ಚಿತ್ರಗಳು ಎತ್ತರಕ್ಕೆ ಬೆಳೆದು ಮೇಲ್ಲೆಲ್ಲಾ ಹರಡಿರುವಂತೆ ಗೋಳಾಕಾರದೊಳಗೆ ಸುತ್ತಲೂ ಚಿತ್ರಿಸಿರುತ್ತಾರೆ.

೬,೮, ವೆಂಕಟೇಶ್ವರ ದೇವಾಲದ ಗಾಜಿನ ಚಿತ್ರಗಳು

ಶ್ರೀ ಅವಧೂತ ದತ್ತಪೀಠ ಶ್ರೀಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು ಇಲ್ಲಿನ ವೆಂಕಟೇಶ್ವರ ದೇವಾಲಯದಲ್ಲಿ ಗೋಡೆಯ ಮೇಲೆಯಿರುವ ಕಿಂಡಿಯಲ್ಲಿ ಗಾಜನ್ನು ಅಳವಡಿಸಿ ಅಲ್ಲಿ ಚಿತ್ರಿಸಿಲಾಗಿದೆ. ೧೯೯೧ರಲ್ಲಿ ವೆಂಕಟೇಶ್ವರ ದೇವಾಲಯದಲ್ಲಿ ಗಾಜಿನಚಿತ್ರ ನಿರ್ಮಿಸಿದ್ದಾರೆ. ಇಲ್ಲಿ ವಿಶಿಷ್ಟವಾದ ಅಪರೂಪದಿಂದ ಕೂಡಿದ ರೇಖೆಗಳಿಂದಲ್ಲೇ ನಿರ್ಮಿಸಿರುವ ಗಾಜಿನ ಚಿತ್ರಕಲೆ ಆಗಿರುತ್ತದೆ. ವಿಷ್ಣುವಿನ ಹಲವು ಅವತಾರಗಳನ್ನು ಇಲ್ಲಿ ಚಿತ್ರಿಸಿದ್ದಾರೆ. ರಾಮ, ಕೃಷ್ಣ, ನರಸಿಂಹ, ಕಲ್ಕಿ, ವರಾಹ, ಕೂರ್ಮ, ಮತ್ಸ, ವಾಮನ, ಪರಶುರಾಮ, ಬಲರಾಮ, ಕೃಷ್ಣ ರಾಧೆ, ಈ ಚಿತ್ರಗಳು ಇರುತ್ತದೆ. ಆದರೆ ಕೆಲವು ಗಾಜಿನ ಚಿತ್ರಗಳು ಅಳಿಸಿಹೋಗಿವೆ. ವರ್ಣವೂ ಪಾರದರ್ಶಕ ವಿಧಾನದಲ್ಲಿ ವರ್ಣಲೇಪನ ಕಾರ್ಯ ನಡೆದಿದೆ. ಅತಿ ಮುಖ್ಯವಾಗಿ ರೇಖೆಯಲ್ಲಿ ರಚಿಸಿದರಿಂದ ರೇಖೆಯು ಮಾತ್ರ ಕಂಡುಬರುತ್ತದೆ.

೬.೮.೧ ವರಾಹಸ್ವಾಮಿಚಿತ್ರ

ಇಲ್ಲಿ ವರಾಹಸ್ವಾಮಿ ಚಿತ್ರವು ಇರುವುದರಲ್ಲಿ ಚೆನ್ನಾಗಿ ಕಾಣಿಸುತ್ತದೆ. ರೇಖೆಯೇ ಪ್ರಧಾನವುಳ್ಳ ಆಕೃತಿಯಲ್ಲಿ ರೇಖಾಪ್ರಾಮುಖ್ಯತೆ ಮೆರೆದಿದೆ. ಮೈವರ್ಣವು ಹಳದಿಯಿಂದ ಚಿತ್ರಿಸಿದ್ದಾರೆ. ವರಾಹಸ್ವಾಮಿಯನ್ನು ನಾಲ್ಕು ಕೈ ಹೊಂದಿ ಅದರಲ್ಲಿ ಶಂಖ ಚಕ್ರವನ್ನು ಕಲಾವಿದ ತೋರಿಸಿದ್ದಾನೆ ಮುಖವು ಹಂದಿರೂಪದಿಂದ ಕೂಡಿದ್ದು, ಹಿನ್ನೆಲೆಯು ಸಮುದ್ರದ ಅಲೆಗಳು ರಭಸವಾಗಿ ಏಳುತ್ತಿದೆ. ಈ ಸಂವೇದನೆಯು ವರಾಹಸ್ವಾಮಿಯು ಭೂಮಿಯನ್ನು ಸಮುದ್ರದ ಆಳದಿಂದ ಮೇಲೆಯೆತ್ತುತ್ತಿರುವ ಹಾಗೆ ಭಾಸವಾಗುತ್ತಿರುವಂತೆ ಕಲಾವಿದನು ನಿರೂಪಿಸಿದ್ದಾನೆ. ಹಾಗೂ ಪಾರದರ್ಶಕ ವರ್ಣಸಂಯೋಜನೆ ಆದರೂ ಇತಿಮಿತಿಯಿಂದ ಬಣ್ಣಗಳ ಬಳಕೆ ಮಾಡಿದ್ದಾರೆ.

ವಿಜಯನಗರ ಕಾಲದಲ್ಲಿ ಕ್ರೈಸ್ತರ ಆಗಮನ ನಂತರ ಇಲ್ಲಿ ಕ್ರೈಸ್ತರ ಧರ್ಮಪ್ರಸಾರ ಹರಡಿದೆ. ಆ ನಂತರ ಮೈಸೂರು ಒಡೆಯರ ಕಾಲದಲ್ಲಿ ಮೈಸೂರಿನ ಸುತ್ತಮುತ್ತ ೧೭-೧೮ನೇ ಶತಮಾನದ ಅವಧಿಯಲ್ಲಿ ಇಲ್ಲಿ ಈ ಮತವು ಪ್ರಸಾರವಾಯಿತ್ತು. ಆ ತರುವಾಯ ೧೯ನೇ ಶತಮಾನದಲ್ಲಿ ಮಂದಿರ ಚರ್ಚ್‌ಗಳು ಸ್ಥಾಪನೆಯಾದವು ಈ ಜಿಲ್ಲೆಯಲ್ಲಿ ೧೦ಕ್ಕಿಂತ ಹೆಚ್ಚು ಪ್ರಮುಖ ಚರ್ಚ್‌ಗಳು ಇದ್ದು. ಅದರಲ್ಲಿ ಗಾಜಿನಚಿತ್ರಗಳು ಕಂಡುಬರುವವು. ಚರ್ಚ್ ಎಂಬ ಪದವು ಧರ್ಮಸಭೆ, ದೇವಾಲಯ ಎಂಬ ಅರ್ಥಬರುತ್ತದೆ. ಕ್ರೈಸ್ತರಲ್ಲಿ ಆರಾಧನೆ ಸಲ್ಲಿಸುವ ಸ್ಥಳ ಎಂದು. ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ಕಾನ್‌ಸ್ಟಂಟೈನನ ಆಡಳಿತ ಕಾಲದಲ್ಲಿ ಚರ್ಚ್ ವಾಸ್ತುಶಿಲ್ಪವು ರೋಮನ್ ಪ್ರಪಂಚದಲ್ಲಿ ಆರಂಭವಾಗಿದೆ. ಪೋರ್ಚುಗೀಸರು ಗೋಥಿಕ್ ಮತ್ತು ಬಾರೋಕ್ ವಾಸ್ತುಶಿಲ್ಪ ಶೈಲಿ ಭಾರತಕ್ಕೆ ಪರಿಚಯಿಸಿದರು. ಬ್ರಿಟಿಷರ ಆಳ್ವಿಕೆಯಿಂದ ಮೈಸೂರು ಭಾಗದಲ್ಲಿ ಕ್ರೈಸ್ತರು ಚರ್ಚ್ ಮತ್ತು ಮಂದಿರಗಳು ಇಲ್ಲಿ ಬೆಳೆದು ಸ್ಥಾಪನೆಗೊಂಡವು. ಅದರಲ್ಲಿಯೂ ಗಾಜಿನ ಚಿತ್ರಗಳನ್ನು ಬರೆಯಿಸಿದ್ದಾರೆ.

೬.೯. ಸಂತ ವಾರ್ತಲೋಮಿಯಾ ದೇವಾಲಯ

ಈ ಚರ್ಚ್ ಪ್ರಾಚೀನವಾಗಿದ್ದು. ಈಜಿಪ್ಟ್ ಕಲಾಶೈಲಿ ಹೊಂದಿದ್ದು ೧೮೩೦ರಲ್ಲಿ ಯೂರೋಪಿನ ಕ್ರೈಸ್ತರಿಂದ ಕಟ್ಟಲ್ಪಟ್ಟು. ಶತಮಾನೋತ್ಸವವನ್ನು ಕಂಡಿದೆ. ಈ ಚರ್ಚ್‌ಗೆ ಆಂಗ್ಲಚರ್ಚ್ ಸಹ ಎಂದು ಕರೆಯುತ್ತಾರೆ. ಮೈಸೂರಿನ ಪ್ರಥಮ ಪ್ರೊಸ್ಟೆಸ್ಟಂಟ್ ದೇವಾಲಯವು ಇದಾಗಿದೆ. ಇಲ್ಲಿ ಎರಡು ಕ್ರಿಸ್ತನ ಚಿತ್ರಗಳು ಗೋಡೆಯ ಕಿಟಕಿಯ ಮೇಲೆ ಕಂಡುಬರುತ್ತವೆ. ಇದು ವಿದೇಶದಿಂದ ತರಿಸಲಾಗಿದೆ. ಎಂದು ತಿಳಿದುಬರುತ್ತದೆ. ಯೇಸುವಿನ ಭಾವಚಿತ್ರ ಮತ್ತು ಮೇರಿಜೊತೆ ಮಗುವನ್ನು ಎತ್ತಿ ಆಡಿಸುತ್ತಿರುವ ಚಿತ್ರವಾಗಿದೆ. ರಿಯಾಲಿಸ್ಟಿಕ್ ಚಿತ್ರಕೃತಿಯಾಗಿದ್ದು ಸ್ವಲ್ಪ ದೊಡ್ಡದಾಗಿ ಸುಂದರವಾಗಿ ಚಿತ್ರಿಸಿದ್ದಾರೆ. ತಾಯಿಯ ಮಮತೆ ಮಗುವಿನ ಮುಗ್ಧತೆಯು ಎದ್ದು ತೋರುತ್ತದೆ. ಆಕೃತಿಯ ವಸ್ತ್ರವಿನ್ಯಾಸ ಸ್ವಲ್ಪ ತೋರಿಸಿದ್ದಾರೆ. ಚಿತ್ರದಲ್ಲಿ ನೆರಳು ಬೆಳಕಿನ ಬಿನ್ನಾಣ ಸ್ವಲ್ಪ ತೋರಿಸಿ, ಹಿನ್ನೆಲೆಯಲ್ಲಿ ನೀಲಿವರ್ಣದ ಹಲವು ಶೆಡ್‌ನಿಂದ ತೋರಿಸಿದ್ದಾರೆ.

೬.೧೦. ಸಂತಗ್ರೀಕ್ ಗ್ರೇಸ್ ಚರ್ಚ್

ಇದು ನಜರ್‌ಬಾದ್‌ನಲ್ಲಿ ಇದೆ. ಸಂತಗ್ರೀಕ್‌ಗ್ರೇಸ್ ಚರ್ಚ್ ಒಳಗೆ ಹಾಗೂ ಹೊರಗಿನ ಚಿಕ್ಕ ಗುಡಿಯಲ್ಲಿ ಗಾಜಿನ ಚಿತ್ರಗಳು ಇರುತ್ತದೆ. ಗರ್ಭಗುಡಿಯ ಮೇಲೆ ಮೂರುಬೆಳಕಿನ ಕಿಟಕಿಯಲ್ಲಿ ಮೂರು ಚಿತ್ರಗಳಿವೆ ಅವು ಮೂರು ಭಾವಚಿತ್ರಗಳಾಗಿದ್ದು, ಯೇಸು ಮತ್ತು ಮೇರಿ ಚಿತ್ರಗಳಾಗಿದೆ. ಅದು ವೃತ್ತಾಕಾರದೊಳಗೆ ಚಿತ್ರಿಸಲಾಗಿದೆ. ಅದು ಚಿಕ್ಕದಾಗಿದ್ದರೂ ಸುಂದರವಾಗಿದೆ. ಹೊರಗೆ ಚಿಕ್ಕಗುಡಿಯಲ್ಲಿ ಮೂರು ಎತ್ತರದ ಆಯಾತಾಕಾರದ ಗಾಜಿನ ಚಿತ್ರಗಳು ತುಂಬ ಸೂಕ್ಷ್ಮ ಚಿತ್ರಿತವಾಗಿರುತ್ತದೆ. ಅದರಲ್ಲಿ

ಯೇಸುಸ್ವಾಮಿ ಹಾಗೂ ಮೇರಿಮಾತೆ, ಮತ್ತೊಂದು ಕುದುರೆ ಏರಿಬರುತ್ತಿರುವ ಹಾಗೆ ರಾಜನ ಚಿತ್ರವಿದೆ. ಈ ಚಿತ್ರಗಳನ್ನು ನಯವಾದ ಮೃದುವರ್ಣಗಾರಿಕೆಯಲ್ಲಿ ರಚಿಸಿದ್ದಾರೆ.

೬.೧೧. ವೆಸ್ಲಿಮಹಾದೇವಾಲಯ

೧೮೭೧ರಲ್ಲಿ ನಿರ್ಮಾಣಗೊಂಡಂತಹ ಚರ್ಚ್ ಆಗಿರುತ್ತದೆ. ೧೨೫ವರ್ಷಗಳಷ್ಟು ಹಳೆಯದಾದ ಪ್ರಥಮ ದೇಶಿಯ ಕನ್ನಡ ಕ್ರೈಸ್ತರ ದೇವಾಲಯವಾಗಿದೆ. ಇದು ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣದ ಪಕ್ಕವೇ ಇದ್ದು. ನೀಲಿಗಿರಿ ರಸ್ತೆಯಲ್ಲಿ ಕಂಡುಬರುತ್ತದೆ. ಇಲ್ಲಿ ಗೋಡೆಯ ಮೇಲೆ ಯೇಸುಸ್ವಾಮಿ ನಿಂತು ಎಲ್ಲರನ್ನು ಸ್ವಾಗತಿಸುತ್ತಿರುವಾಗೆ ಈ ಚಿತ್ರವು ನೋಡುಗರಿಗೆ ಕಂಡುಬರುತ್ತದೆ. ಯೇಸುದೇವರ ವ್ಯಕ್ತಿಚಿತ್ರಣವಾಗಿದೆ. ತನ್ನ ಎರಡು ಕೈಗಳನ್ನು ಆಹ್ವಾನದ ರೀತಿಯಲ್ಲಿ ಇದೆ. ವಸ್ತ್ರವು ಪಾಶ್ಚಾತ್ಯರ ಅನುಕರಣೆಯಂತೆ ತೋಡಿಸಿದ್ದಾನೆ ಕಲಾವಿದನ್ನು ಈ ಚಿತ್ರವು ವಿಶೇಷವಾಗಿ ವೃತ್ತಾಕಾರದಲ್ಲಿದೆ. ಮತ್ತೊಂದು ಒಳಗೂ ಒಂದು ಚಿಕ್ಕ ಯೇಸುಸ್ವಾಮಿಯ ಚಿತ್ರವು ಸಹ ಇರುತ್ತದೆ ಅದು ಯೇಸುದೇವರ ಭಾವಚಿತ್ರವಾಗಿರುದೆ.

೬.೧೨. ಸಂತ ಫಿಲೋಮಿನಾ ಕೆಥಿಡ್ರಲ್‌ಚರ್ಚ್

ಮೈಸೂರಿನ ನಗರದ ಕ್ರೈಸ್ತ ಚರ್ಚ್‌ಗಳಲ್ಲಿ ಅತಿ ಸುಂದರವೂ ಇತಿಹಾಸ ಪ್ರಸಿದ್ಧವೂ ಆದ ದೇವಾಲಯವಾಗಿದೆ. ಅದು ಅಶೋಕ ರಸ್ತೆಯಲ್ಲಿ ಸಂತಫಿಲೋಮಿನಾ ಎಂಬ ಸಂತಳೊಬ್ಬಳ ಸ್ಮರಾಣಾರ್ಥವಾಗಿ ೧೯೩೩ರಲ್ಲಿ ಈ ದೇವಾಲಯವನ್ನು ಕಟ್ಟಲಾಯಿತು. ನ್ಯೂಯಾರ್ಕ್ ಸಿಟಿಯಲ್ಲಿರುವ ಸೈಂಟ್ ಪ್ಯಾಟ್ರಿಕ್ ಹಾಗೂ ಜರ್ಮನಿಯ ಕೊಲೊಜ್ನಾದಲ್ಲಿರುವ ಗೋಥಿಕ್ ಚರ್ಚ್‌ಗಳ ಮಾದರಿಯಲ್ಲಿ ಕಟ್ಟಲಾಗಿದೆ. ಫ್ರಾನ್ಸ್‌ನಿಂದ ಬರೆಯಿಸಿ ತಂದ ಸುಂದರವಾದ ಬಣ್ಣಬಣ್ಣದ ಗಾಜಿನ ಚಿತ್ರಗಳು ಈ ಚರ್ಚ್‌ನ ಗರ್ಭಗುಡಿಯ ಮೇಲೆ ದೊಡ್ಡಗಾತ್ರದಲ್ಲಿದೆ. ಅದರಲ್ಲಿ ದೊಡ್ಡ ಚಿಕ್ಕ ಚಿತ್ರಗಳಲ್ಲಿ ಸಂಯೋಜನೆಗೊಳಿಸಿದ್ದಾರೆ. ಅದರಲ್ಲಿ ಏಸುಕ್ರಿಸ್ತನ ದೀಕ್ಷಾಸ್ಥಾನ, ಶಿಲುಬೆಯಲ್ಲಿ ಏಸುವಿನ ಅಂತಿಮ ಪ್ರಾಣತ್ಯಾಗ, ಅನುಯಾಯಿಗಳ ಜೊತೆ ಏಸು, ಹುಟ್ಟು ಮತ್ತು ಬಾಲ್ಯ ಜೀವನದ ಚಿತ್ರಗಳು ಕಂಡುಬರುತ್ತದೆ. ಈ ಕಲಾಕೃತಿಯು ಗೋಡೆಯ ಕಿಟಕಿಯ ಮೇಲೆ ಇದೆ. ರೇಖೆಗಳಲ್ಲಿರುವ ಚಿತ್ರಿಸಿದ ಚಿತ್ರಣವಾಗಿದೆ. ಚಿಕ್ಕಚಿಕ್ಕ ಗಾಜಿನ ಆಕಾರಗಳಲ್ಲಿ ಚಿತ್ರಿಸಿದ್ದಾರೆ. ದೊಡ್ಡ ಚಿತ್ರಣವನ್ನು ಉತ್ತಮ ತಂತ್ರಗಾರಿಕೆಯಿಂದ ಈ ಚಿತ್ರವನ್ನು ೧೯೩೩ರಲ್ಲಿ ಚಿತ್ರಿಸಿರುವುದು ವಿಶೇಷವಾಗಿದೆ. ವರ್ಣಗಳ ಸಂಯೋಜನೆಯು ಉತ್ತಮವಾಗಿದೆ. ಯೇಸುಸ್ವಾಮಿಯ ಹುಟ್ಟಿನಿಂದ ಹಿಡಿದು ಸಾಯುವರೆಗಿನ ಅನೇಕ ಸಂದರ್ಭ ವಿವರಿಸುವ ಗಾಜಿನಚಿತ್ರಗಳು ಎರಡು ಕಿಟಕಿಯ ಹಲವು ಗಾಜಿನ ಮೇಲೆ ಚಿಕ್ಕದಾಗಿ ಕಲಾವಿದ ಉತ್ತಮವಾಗಿ ಚಿತ್ರಿಸಿದ್ದಾರೆ.

೬.೧೩. ಬಾಲಯೇಸುವಿನ ಪುಣ್ಯಕ್ಷೇತ್ರ ಅಥವಾ ಕಾರ್ಮೋಲ್‌ಸಭೆ, ಬಾಲಯೇಸು ದೇವಾಲಯದಲ್ಲಿ ಗಾಜಿನ ಚಿತ್ರಗಳು

ಈ ದೇವಾಲಯವು ಮೈಸೂರಿನ ಈರನಗೆರೆಯ ಆರ್.ಎಸ್.ನಾಯ್ಡುನಗರದಲ್ಲಿದೆ. ಇದಕ್ಕೆ ಪುಷ್ಪಾಶ್ರಮ ಎಂದು ಸಹ ಕರೆಯುತ್ತಾರೆ. ಇಲ್ಲಿ ಗಾಜಿನ ಚಿತ್ರಗಳು ವಿವಿಧ ರೀತಿಯಲ್ಲಿ ಕೂಡಿದ ಧಾರ್ಮಿಕ ಚಿತ್ರಗಳು ಇದೆ. ಇದರಲ್ಲಿ ಶಿಲುಬೆಯ ಹಾದಿ, ಕೈಚಿಹ್ನೆಗಳು, ಪರಮತತ್ವ ಇತ್ಯಾದಿಗಳು ವಿಶೇಷವಾಗಿ ಕ್ರೈಸ್ತೇತರ ಧರ್ಮಗಳ ಚಿಹ್ನೆಗಳ ಚಿತ್ರಗಳು ಇಲ್ಲಿ ಕಂಡುಬರುತ್ತದೆ. ಶಿಲುಬೆಯ ಹಾದಿ, ಯೇಸುವಿಗೆ ಸಂಬಂಧಪಟ್ಟಂತಹ ೧೬ ಗಾಜಿನ ಚಿತ್ರಗಳು ಇರುತ್ತದೆ. ಪ್ರಭುಯೇಸುವಿನ ಚಿತ್ರಗಳು ಬಣ್ಣದ ಗಾಜಿನಲ್ಲಿ ಚಿತ್ರಿತವಾದ ಶಿಲುಬೆಹಾದಿಯ ಪವಿತ್ರ ಕುಟುಂಬದಲ್ಲಿರುವ ಬಾಲ ಯೇಸುವಿನ ದೃಶ್ಯದಿಂದ ಆರಂಭಗೊಂಡು, ಯೇಸುವಿನ ಪುನರುತ್ಥಾನ ದೃಶ್ಯದಲ್ಲಿ ಕೊನೆಗೊಳ್ಳುತ್ತದೆ. ಪವಿತ್ರ ಕುಟುಂಬ,

ಮರಣಶಿಕ್ಷೆಗೆ ಗುರಿಯಾದ ಯೇಸು, ಯೇಸುವಿನ ಹೆಗಲ ಮೇಲೆ ಕ್ರೂಜೆಯನ್ನಿಟ್ಟರು, ಯೇಸುವಿನ ಮೊದಲ ಬೀಳುವಿಕೆ, ತನ್ನ ತಾಯಿಯೊಡನೆ ಭೇಟಿ, ಕ್ರೂಜೆ ಹೊರಲು ಸಮೋನನ ಸಹಕಾರ, ವೇರೋನಿಕಾ ಯೇಸುವಿನ ಮುಖವನ್ನು ಒರೆಸುತ್ತಾಳೆ, ಯೇಸುವಿನ ಎರಡನೆಯ ಬೀಳುವಿಕೆ, ಯೆರೆಸಲೇಮಿನ ಸ್ತ್ರೀಯರಿಗೆ ಯೇಸುವಿನ ಸಾಂತ್ವನ, ಯೇಸುವಿನ ಮೂರನೆ ಬೀಳುವಿಕೆ, ಯೇಸುವಿನ ಬಟ್ಟೆಯನ್ನು ಕಳಚುತ್ತಾರೆ. ಯೇಸುವಿನ ಕ್ರೂಜೆಗೆ ಜಡಿಯುತ್ತಾರೆ, ಕ್ರೂಜೆಯ ಶಿಲುಬೆ ಮೇಲೆ ಯೇಸುವಿನ ಪ್ರಾಣತ್ಯಾಗ, ಕ್ರೂಜೆಯಿಂದ ಯೇಸುವನ್ನು ಕೆಳಗಿಳಿಸುತ್ತಾರೆ. ಯೇಸುವಿನ ಶರೀರವನ್ನು ಸಮಾಧಿ ಮಾಡುತ್ತಾರೆ. ಯೇಸುವಿನ ಪುನರುತ್ಥಾನ. ಹೀಗೆ ೧೬ ಗಾಜಿನ ಚಿತ್ರಗಳು ಇದೆ.

ಈ ಗಾಜಿನ ಚಿತ್ರಗಳು ಯೇಸುವಿನ ಕಥಾಸಂದರ್ಭ ಆಧಾರಿತವಾಗಿದೆ. ಉತ್ತಮ ಆಕೃತಿಗಳ ಸಂಯೋಜನೆ, ವರ್ಣಗಳ ಸಂಯೋಜನೆಯು ಕಣ್ಣುಗಳನ್ನು ತನ್ನೆಡೆಗೆ ಸೆಳೆಯುವ ಬಣ್ಣಗಾರಿಕೆ, ಆಕೃತಿಗಳೆಲ್ಲಾ ರಿಯಾಲಿಸ್ಟಿಕ್ ಆಕೃತಿಗಳಾಗಿದ್ದು ನೋಡುಗರಿಗೆ ಅರ್ಥವಾಗುವ ಚಿತ್ರಗಳಾಗಿದೆ. ರೇಖೆಯೇ ಪ್ರಧಾನವಾಗಿದ್ದು ವರ್ಣಲೇಪನ ಕಾರ್ಯ ಉತ್ತಮವಾಗಿ ನಡೆದಿದೆ. ಮುಖಭಾವನೆಯು ಸಂದರ್ಭಕ್ಕೆ ತಕ್ಕಂತೆ ಇದು, ಕಲಾವಿದರಿಂದ ಅದ್ಭುತವಾಗಿ ಚಿತ್ರಗಳು ಮೂಡಿದೆ.

೬.೧೩.೧, ಪರಮತತ್ವ

ಬಲಭಾಗದ ಪ್ರವೇಶದ್ವಾರದ ಮೇಲೆ ಈ ಗಾಜಿನ ಚಿತ್ರವಾಗಿದೆ. ಪರಮತತ್ವದ ಮೂರು ವ್ಯಕ್ತಿಗಳನ್ನು ಪ್ರತಿಬಿಂಬಿಸುತ್ತದೆ. ಧರ್ಮಗುರುಗಳು, ಯೇಸುಬಾಲಕನಾಗಿದ್ದು ಅವರ ತಂದೆತಾಯಿ ಒಳಾಂಗಣದ ಚಿತ್ರವಾಗಿದ್ದು, ಕಿಟಕಿ ಹೊರಗೆ ಪರಿಸರ ಚಿತ್ರಣ ಕಾಣುತ್ತಿದೆ. ಜೊತೆಗೆ ಎರಡು ಒಂಟೆಗಳನ್ನು ಕಲಾವಿದರನ್ನು ತೋರಿಸಿದ್ದಾನೆ. ಎಲ್ಲಾ ಚಿತ್ರಗಳು ಸುಂದರವಾಗಿ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ.

೬.೧೩.೨, ಕೈಚಿಹ್ನೆಗಳ ಚಿತ್ರಗಳು

ಮೇಲಿನ ಅಂತಸ್ತಿನ ಕಿಟಕಿಗಳಲ್ಲಿ ಬಣ್ಣದ ಗಾಜಿನ ಚಿತ್ರಗಳು ಕೈಚಿಹ್ನೆಗಳು ಸಹಜವಾಗಿಯೇ ಬೈಬಲ್ ಆಧಾರಿತವಾಗಿದ್ದು ಅದರಲ್ಲಿನ ಪ್ರಮುಖ ಘಟನೆಗಳನ್ನು ನೆನಪಿಸುತ್ತವೆ. ದೇವರಸೃಷ್ಟಿಯ ಕೈಗಳು, ಮಹಾಪ್ರಳಯದ ನಂತರ ಹೊಸಜೀವನವನ್ನು ಹರಸುವ ಕೈಗಳು, ಕೆಂಪು ಸಮುದ್ರವನ್ನು ವಿಂಗಡಿಸುವ ಮೋಶೆಯ ಕೈಗಳು, ದೇವರನ್ನು ಸುತ್ತಿಸುವ ದಾವೀದನ ಕೈಗಳು, ಕುಂಬಾರನಂತೆ ನಮ್ಮನ್ನು ರೂಢಿಸುವ ದೇವರಕೈಗಳು, ಸತ್ತ ಮೂಳೆಗಳಿಗೆ ಜೀವ ನೀಡುವ ದೇವರ ಆಶಿರ್ವಾದದ ಕೈಗಳು, ಯೇಸುವಿಗೆ ಪವಿತ್ರಸ್ನಾನವನ್ನು ನೀಡುವ ಸ್ನಾನಿಕ ಯೋವಾನ್ನನ ಕೈಗಳು, ಸೇವೆ ಹಾಗೂ ಪ್ರೀತಿ(ಪರಮಪ್ರಸಾದ ಸಂಸ್ಕಾರ)ಯ ಯೇಸುವಿನ ಕೈಗಳು, ಕಾನಾನಗರದಲ್ಲಿ ನೀರುನ್ನು ದ್ರಾಕ್ಷಾರಸವನ್ನಿಗಿಸುವ ಯೇಸುವಿನ ಪವಾಡ ಕೈಗಳು, ಕೈಗಳು ಹಾಗೂ ಅದನ್ನು ಸ್ವೀಕರಿಸುವ ಜನರ ಕೈಗಳು, ರೂಪಾಂತರಗೊಂಡ ಹಾಗೂ ರೂಪಾಂತರಗೊಳಿಸುವ ಯೇಸುವಿನ ಕೈಗಳು, ವಿಶ್ವಾಸಿಗಳಿಗೆ ಆರೋಗ್ಯವನ್ನು ನೀಡುವ ಯೇಸುವಿನ ಕೈಗಳು, ನಿನ್ನನ್ನು ನಾ,, ನನ್ನ ಅಂಗೈಯಲ್ಲಿ ಕೆತ್ತಿರುವೆ, ದೇವರ ಪ್ರೀತಿಯ ವಾಗ್ದಾನದ ಕೈಗಳು, ಈ ಚಿತ್ರಗಳಲ್ಲಿ ರೇಖೆಯೇ ಜೀವಾಳವಾಗಿದೆ. ರಿಯಾಲಿಸ್ಟಿಕ್ ಚಿತ್ರಗಳಾಗಿದ್ದು ಕೆಲವು ತಂತ್ರಗಾರಿಕೆಯಿಂದ ಚಿತ್ರಗಳನ್ನು ನಿರ್ಮಿಸಿದ್ದಾರೆ. ಚೌಕಕಾರದೊಳಗೆ ಚಿತ್ರಿಸಿದ್ದಾರೆ. ಕಪ್ಪು ರೇಖೆಯಿಂದಲೇ ಚಿತ್ರವನ್ನು ಪೂರ್ಣಗೊಳಿಸಿ ಆ ನಂತರ ವರ್ಣಕಾರ್ಯ ನಡೆಸಿದ್ದಾರೆ. ನೋಡಲು ಸುಂದರ ಬೈಬಲ್‌ನ ಕ್ರಿಸ್ತನ ಘಟ್ಟನೆಗಳನ್ನು ನೆನಪಿಸುತ್ತವೆ.

೬.೧೩.೩. ಕ್ರೈಸ್ತೇತರ ಧರ್ಮಗಳ ಚಿಹ್ನೆಗಳ ಗಾಜಿನ ಚಿತ್ರಗಳು

ಕ್ರೈಸ್ತಧರ್ಮದ ಪುಣ್ಯಕ್ಷೇತ್ರದಲ್ಲಿ ಇತರ ಧರ್ಮದ ಚಿಹ್ನೆಗಳು, ದೇವರು ಇಡಿ ವಿಶ್ವದ ಸೃಷ್ಟಿಕರ್ತ ಹಾಗೂ ಈ ಮೂಲಕ ಎಲ್ಲರ ತಂದೆಯೂ ಆಗಿದ್ದಾನೆ ಎಂದು, ತನ್ನ ಆಗಾಧವಾದ ಪ್ರೀತಿಯನ್ನು ಮಾನವಕುಲಕ್ಕೆ ಧಾರೆಯೆರೆಯಲು, ಅವರು ವಿವಿಧ ಕಾಲದಲ್ಲಿ ವಿವಿಧ ದಾರಿಯ ಮೂಲಕ ತನ್ನನ್ನು ಪ್ರಕಟಗೊಳಿದ್ದಾರೆ ಎಂಬುದಾಗಿ. ವಿವಿಧ ಧರ್ಮಗಳು ಈ ಪ್ರಕಟಣೆಗಳನ್ನು ವಿವಿಧ ಪ್ರಕಾರಗಳಲ್ಲಿ ಪಡೆದುಕೊಂಡಿವೆ ಎಂದು ತೋರಿಸುವ ಈ ಚಿತ್ರಗಳಾಗಿದೆ ಎಂದು ಹೇಳುತ್ತಾರೆ. ಈ ಧರ್ಮಗಳಲ್ಲಿರುವ ಸತ್ಯ ಹಾಗೂ ಪಾವಿತ್ರ್ಯತೆಯನ್ನು ಕ್ಯಾಥೋಲಿಕ್ ಧರ್ಮಸಭೆ, ವ್ಯಾಟಿಕನ್ ಮಹಾಸಭೆ, ಕ್ಯಾಥೋಲಿಕ ಎಂದು ಇದೆ. ಎಂದರೆ ಸರ್ವದೇಶಿಕ, ಸರ್ವಗ್ರಾಹ್ಯ ಉದಾರಭರಿತ ಎಂದಾರ್ಥ. ಅದರಂತೆಯೆ ಈ ಕ್ಯಾಥೋಲಿಕ ಪುಣ್ಯಕ್ಷೇತ್ರವು ಎಲ್ಲರನ್ನೂ ಸಮಾನತೆಯಿಂದ ಕಾಣುತ್ತದೆ. ಆಗಾಗಿ ಈ ಚಿತ್ರಗಳು ಅದರಲ್ಲಿ ಪಾರ್ಸಿಧರ್ಮ, ತಾವೋಧರ್ಮ, ಹಿಂದೂ ಧರ್ಮ, ಬೌದ್ಧಧರ್ಮ, ಯೆಹೊದ್ಯ ಧರ್ಮ, ಜೈನಧರ್ಮ, ಇಸ್ಲಾಂಧರ್ಮ, ಸಿಖ್‌ಧರ್ಮ ಹೀಗೆ ೮ ಚಿತ್ರಗಳು ಆಯಾ ಧರ್ಮದ ಪ್ರತಿನಿಧಿಸುವ ಗಾಜಿನ ಚಿತ್ರಗಳಾಗಿರುತ್ತದೆ. ಶಾಂತಿ ಸಾರುವ ಪಾರಿವಾಳಗಳ ಚಿತ್ರಗಳು ಹಾಗೂ ಸ್ವಾಗತಿಸುವ ಎರಡು ಕೈಗಳ ಚಿತ್ರಗಳು ಇದೆ. ಈ ಎಲ್ಲಾ ಚಿತ್ರಗಳು ಒಂದೇ ತಂತ್ರವಿಧಾನಗಳಿಂದ ರಚಿಸಲಾಗಿದೆ.

ಈ ಮೈಸೂರಿನ ಜಿಲ್ಲೆಯಲ್ಲಿ ಗಾಜಿನಚಿತ್ರಗಳನ್ನು ಒಟ್ಟಾಗಿ ಧಾರ್ಮಿಕ ಹಾಗು ಧಾರ್ಮಿಕೇತ್ತರ ಚಿತ್ರಗಳಾಗಿಯೂ ನೋಡಬಹುದು. ಮತ್ತು ಐತಿಹಾಸ ಕಾಲದಲ್ಲಿ ರಚನೆಗೊಂಡ ಗಾಜಿನ ಚಿತ್ರಗಳು, ಆಧುನಿಕ ಕಾಲದಲ್ಲಿ ರಚನೆಗೊಂಡ ಗಾಜಿನಚಿತ್ರಗಳಾಗಿ ಕಂಡುಬರುತ್ತವೆ. ಈ ಆಧುನಿಕ ಕಾಲದಲ್ಲಿ ರಚನೆಗೊಂಡ ಚಿತ್ರಗಳಲ್ಲಿ ಧಾರ್ಮಿಕತೆಯು ತೀರಾ ಕಮ್ಮಿಯಾಗಿರುವುದು ತಿಳಿದು ಬರುತ್ತದೆ. ಅವುಗಳು ಶ್ರೀಮಂತರ ಮನೆ, ಮಹಲ್‌ಗಳಲ್ಲಿ, ಆಫೀಸುಗಳಲ್ಲಿ, ಬಾರ್‌ಗಳಲ್ಲಿ, ಅಂಗಡಿ, ಮಳಿಗೆಗಳಲ್ಲಿ ಸಹ ಕಂಡುಬರುತ್ತದೆ. ಅದರಲ್ಲಿ ವರ್ಣರಚನೆಯು ವೈವಿಧ್ಯತೆಯಿಂದ ಕೂಡಿರುತ್ತದೆ. ಮತ್ತು ಕೆಲವುಗಳಲ್ಲಿ ರೇಖೆಗಳಲ್ಲಿಯೂ ರಚಿಸಿದ್ದಾರೆ. ಆಕೃತಿಗಳಲ್ಲಿ ನವೀನತೆಯನ್ನು ಅನೇಕ ರೀತಿಯಲ್ಲಿ ಬಳಸಿದ್ದಾರೆ.

ಈ ಜಿಲ್ಲೆಯಲ್ಲಿನ ಗಾಜಿನ ಚಿತ್ರಗಳಲ್ಲಿ ತೌಲನಿಕವಾಗಿಯೂ ನೋಡಲು ಸಾಧ್ಯವಾಗಿದೆ. ಏಕೆಂದರೆ ೧೮ರಂದ ೨೧ನೇ ಶತಮಾನದೊಳಗೆ ಹಲವು ಧರ್ಮ ಧಾರ್ಮಿಕ ಹಿನ್ನೆಲೆಯ ಚಿತ್ರಗಳು ಈ ಪ್ರಾಂತ್ಯದಲ್ಲಿ ನಿರ್ಮಾಣವಾಗಿರುತ್ತದೆ. ಅರಮನೆಗಳಲ್ಲಿ, ಮಂದಿರ, ದೇವಾಲಯ ಮುಂತಾದ ಕಟ್ಟಡಗಳಲ್ಲಿ ಗಾಜಿನ ಚಿತ್ರಗಳು ಇವೆ. ಅದರಲ್ಲಿ ಧಾರ್ಮಿಕ ಚಿತ್ರಗಳಲ್ಲಿ ವೈವಿಧ್ಯತೆಯನ್ನು ಗುರುತಿಸಿ ತೌಲನಿಕತೆಯನ್ನು ಅಳೆಯಬಹುದು. ಇಲ್ಲಿ ಹಿಂದೂ, ಕ್ರೈಸ್ತ ಧರ್ಮದ ಚಿತ್ರಗಳಲ್ಲಿ ವ್ಯತ್ಯಾಸಗಳನ್ನು ಕಂಡುಕೊಳ್ಳಬಹುದು. ಅಲಂಕಾರಿಕ ನಕ್ಷಾಚಿತ್ರಗಳ ವಿವಿಧ ನಮೂನೆಗಳನ್ನು ಕಾಣಬಹುದು. ಇಲ್ಲಿನ ಚಿತ್ರಕಲೆಯಲ್ಲಿ ಸಂಪ್ರದಾಯಿಕ ಚಿತ್ರಕಲೆ, ಕಂಪನಿಚಿತ್ರಕಲೆ, ಹೋಲಿಕೆಯನ್ನು ಮಾಡಿಯೂ ನೋಡಬಹುದು.

ಈ ಭಾಗದಲ್ಲಿ ಪ್ರಾರಂಭದಲ್ಲಿ ಪಾಶ್ಚಾತ್ಯರಿಂದ ಗಾಜಿನ ಬಳಕೆ ಹಾಗೂ ಚಿತ್ರರಚನೆ, ಎಚ್ಚಿಂಗ್‌ತಂತ್ರ ವಿಧಾನವನ್ನು ಆಮದಾಗಿಸಿಕೊಂಡರು. ಇಲ್ಲಿನ ಅರಸರ ಆಸಕ್ತಿ, ಪ್ರೋತ್ಸಾಹದಿಂದ ಹೇರಳವಾಗಿ ಗಾಜಿನ ಚಿತ್ರಕಲೆಯು ಈ ಜಿಲ್ಲೆಯಲ್ಲಿ ಕಂಡುಬರುತ್ತದೆ. ಅದರಲ್ಲೂ ಮೈಸೂರು ನಗರ ಮತ್ತು ಸುತ್ತಮುತ್ತ ತಾಲೂಕುಗಳಲ್ಲಿಯೂ ಈ ಗಾಜಿನ ಚಿತ್ರಕಲೆಯು ಬೆಳೆದಿದೆ. ಉದ್ಯಮವಾಗಿಯೂ ಕಂಡುಬರುತ್ತದೆ. ಗಾಜಿನ ಚಿತ್ರಗಳು ತೊಗಲುಗೊಂಬೆಯ ಪ್ರಭಾವದಿಂದ ಗಾಜಿನ ಮೇಲೆ ವರ್ಣಚಿತ್ರವು ರಚನೆಗೊಂಡಿದೆ. ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ನಮ್ಮ ಕಲಾವಿದರು ವಿದೇಶಿಕಲೆಯನ್ನು ತಮ್ಮದಾಗಿಸಿಕೊಂಡು ಪರಿಣಾಮದಿಂದಾಗಿ ಅಮೋಘ ಕಲಾಕೃತಿಗಳನ್ನು ನೀಡಿದ್ದಾರೆ. ಅದನ್ನು ಅರಸರು ಪ್ರೀತಿಯಿಂದ ರಕ್ಷಿಸಿಕೊಂಡು ಬಂದಿದ್ದಾರೆ. ಅವು ಈಗ ವಿಶ್ವಮಾನ್ಯತೆ ಪಡೆದಿದ್ದು ನಮ್ಮೆಲ್ಲರ ಆಸ್ತಿಯಾಗಿದೆ.

ಈ ಚಿತ್ರಕಲೆಯ ಕಲಾವಿದರ ಕಲಾಕೃತಿಯ ಮೇಲೆ ಹೆಸರು ಕಂಡುಬರುವುದಿಲ್ಲ, ಆದರೆ ಈ ಕೆಲವು ಗಾಜಿನ ಚಿತ್ರಗಳನ್ನು ಮೈಸೂರಿನ ಅರಮನೆಯ ಕಲಾವಿದರೆ ರಚಿಸಿದ್ದಾರೆ ಎಂದು ತಿಳಿದುಬರುತ್ತದೆ. ಅವರಲ್ಲಿ ಕೆಲವರ ಹೆಸರು ತಿಳಿದುಬಂದಿದೆ. ವಿಶ್ವೇಶ್ವರ ರಾಜು, ತಿಪ್ಪಯ್ಯ, ವೀರಣ್ಣ, ಯಲ್ಲಯ್ಯ, ಬಸವಣ್ಣ ಮುಂತಾದ ಕಲಾವಿದರು ಗಾಜಿನ ಚಿತ್ರಗಳನ್ನು ರಚಿಸಿದ್ದಾರೆ.

ಯಾವುದೇ ದೇಶದ ಕಲೆ ಮತ್ತು ಸಂಸ್ಕೃತಿ ಉಳಿಸಿಕೊಂಡು ಹೋಗುವಲ್ಲಿ ನಾಗರೀಕರ, ಯುವಕರ, ಪಾತ್ರ ಬಹಳ ಮುಖ್ಯ. ಇಲ್ಲಿ ಅನೇಕ ರೀತಿಯಲ್ಲಿ ಅದ್ಭುತ ಗಾಜಿನ ಚಿತ್ರಗಳು ರಚನೆಯಾಗಿರುತ್ತವೆ ಅವುಗಳು ಸಾಕಷ್ಟುಕಡೆ ರಕ್ಷಣೆಯಿಲ್ಲದೆ ಹಾಳಾಗಿಯೂ ಹೋಗಿವೆ, ಕೆಲವು ಚಿತ್ರಗಳು ಮಳೆ, ಗಾಳಿ, ಬಿಸಿಲಿಗೆ ಹಾಗೂ ಕೆಲವು ಕುಚೇಷ್ಟೆಮಾಡುವ ಜನರಿಂದಲೂ ಸಹ ಕಾಪಾಡಬೇಕಾಗಿದೆ. ಮುಂದಿನ ಪೀಳಿಗೆಗೆ ಉಳಿಸಿ ಸಂರಕ್ಷಿಸಬೇಕಾಗಿದೆ. ಅದನ್ನು ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಸಂಘಗಳು, ಹಿತರಕ್ಷಣಾ ಸಮಿತಿಗಳು, ಸಾರ್ವಜನಿಕ ಹಿತ್ತಸಕ್ತಿಗಳು ಸೇರಿ ಉಳಿಸಿ ರಕ್ಷಣೆ ಮಾಡುವುದರಿಂದ ಮುಂದಿನ ಜನಾಂಗಕ್ಕೆ ತಲುಪಿಸಲು ರಕ್ಷಣಾಕಾರ್ಯ ಬಗ್ಗೆ ಅರಿಯು ಮೂಡಿಸಬೇಕು.

ಈ ಕಲೆಯ ಕಲಾಕೃತಿಗಳು ಶಾಶ್ವತವಾಗಿ ಉಳಿಯಬೇಕೆಂಬ ಮಹಾದಾಸೆ, ಆದರೆ ಕಲಾಕೃತಿಯನ್ನು ರಚಿಸಲು ಬಳಸುವ ಯಾವುದೇ ಪರಿಕರವು ಶಾಶ್ವತವಲ್ಲ. ಕಲ್ಲು, ಲೋಹಗಳೇ ಕಾಲಕ್ರಮೇಣ ಸವೆದು ಶಿಥಿಲಗೊಳ್ಳುವಾಗ ಗಾಜುಪಾರದರ್ಶಕ ಹಾಗೂ ನುಣುಪಾಗಿರುವ ಮೇಲ್ಮೈ ಇರುತ್ತದೆ. ಹಾಗಾಗಿ ಈ ಕಲೆಯ ಕಲಾಕೃತಿಗಳನ್ನು ತುಂಬ ನಾಜೂಕಾಗಿಯೂ ರಕ್ಷಿಸಬೇಕಾಗುತ್ತದೆ. ಈ ಕಲೆಯನ್ನು ಪಾಶ್ಚಾತ್ಯರು ಇಲ್ಲಿ ಕಲಾಶಾಲೆ ತೆರೆದು ಇಲ್ಲಿನ ಕಲಾವಿದ್ಯಾರ್ಥಿಗಳಿಗೆ ಈ ಕಲೆಯ ತಿಳುವಳಿಕೆ ನೀಡಿದ್ದಾರೆ.


ಮೈಸೂರು ಪಾಶ್ಚಿಮಾತ್ಯರ ಆಳ್ವಿಕೆಗೆ ಒಳಪಟ್ಟಾಗ ಅವರ ಕಲಾಶಿಕ್ಷಣ ಪದ್ಧತಿಯ ಬಳಕೆಯನ್ನು ಇಲ್ಲಿ ತಂದರು. ಅದರ ಪ್ರಭಾವದಿಂದ ಕಲಾಶಾಲೆಯಲ್ಲಿ ಗಾಜಿನ ಚಿತ್ರಕಲೆಗಳ ಕಲಿಕೆಯನ್ನು ಅವರು ಪಠ್ಯದಲ್ಲಿ ಸೇರಿಸಿ ಶಿಕ್ಷಣ ನೀಡಿದ್ದಾರೆ.

~~~~~~~~~~~~~oo~~~~~~~~~~~~~
~~~~~~~~~~~~~

ಕಲ್ಯಾಣಮಂಟಪದಲ್ಲಿನ ಗಾಜಿನಚಿತ್ರ



ದರ್ಬಾರ್‌ಹಾಲ್‌ನ ಗಾಜಿನಚಿತ್ರಗಳು



ಗಣೇಶ ಮತ್ತು ಗಂಡುಬೇರುಂಡ ಗಾಜಿನಚಿತ್ರಗಳು







ಬಾಲಬೆಣ್ಣೆಕೃಷ್ಣ ಮತ್ತು ಹಾಲುಕುಡಿಯುತ್ತಿರುವ ಕೃಷ್ಣನ ಗಾಜಿನಚಿತ್ರ





ಮುಮ್ಮಡಿಕೃಷ್ಣರಾಜ ಒಡೆಯರ ಗಾಜಿನ ಭಾವಚಿತ್ರ



ರಾಜ ರಾಣಿಯ ಗಾಜಿನ ಭಾವಚಿತ್ರ





ಗಾಯತ್ರಿದೇವಿ ಮತ್ತು ಕೊಳಲು ಊದುತ್ತಿರುವ ಕೃಷ್ಣನ ಗಾಜಿನಚಿತ್ರ





ಲಲಿತಮಹಲ್ ಮೇಲ್ಛಾವಣಿಯ ಗಾಜಿನ ಚಿತ್ರ



ರಾಮ,ಸೀತೆ ಗಾಜಿನಚಿತ್ರ




ವರಾಹಸ್ವಾಮಿ ಗಾಜಿನಚಿತ್ರ



ಯೇಸುಸ್ವಾಮಿಯ ಜೀವನ ಚರಿತ್ರೆಯ ಗಾಜಿನಚಿತ್ರಗಳು







ಬಾಲಯೇಸುಸ್ವಾಮಿಯ ಗಾಜಿನಚಿತ್ರ



ದೇವರ ಸೃಷ್ಟಿಯ ಕೈಗಳ ಗಾಜಿನಚಿತ್ರ





ಕ್ರೈಸ್ತೇತರ ಧರ್ಮಗಳ ಗಾಜಿನಚಿತ್ರಗಳು





ಆಧುನಿಕ ಕಾಲದ ಗಾಜಿನಚಿತ್ರಗಳು









ಅಧ್ಯಾಯ : ಏಳು

ಮೈಸೂರು ಜಿಲ್ಲೆಯ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ, ಶೈಲಿ ಪ್ರಮುಖ ಲಕ್ಷಣಗಳು.

ಅಧ್ಯಾಯ: ಏಳು

ಮೈಸೂರು ಜಿಲ್ಲೆಯ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ, ಶೈಲಿ ಮತ್ತು ಪ್ರಮುಖ ಲಕ್ಷಣಗಳು

ವೆರನ್ ಮತ್ತು ಜೈನೇಂದ್ರರವರು ಹೇಳುವಂತೆ "ಕಲೆ ಭಾವದ ಅಭಿವ್ಯಕ್ತಿ. ಅದು ರೇಖೆಗಳ, ರೂಪಗಳ, ವರ್ಣಗಳ ಸಂಯೋಗ ಅನುಕ್ರಮದಿಂದ ಹೊರಗೆ ಪ್ರಸಾರಗೊಳ್ಳುವಂಥಹದ್ದು.ಮುಖ್ಯವಾಗಿ ಜನಕಲ್ಯಾಣಕ್ಕಾಗಿ ಸತ್ಯದ ಸೌಂದರ್ಯ ಪೂರ್ಣ ಅಭಿವ್ಯಕ್ತಿಯಾಗಿದ ಕಲೆ. ಚಿತ್ರಕಲೆ."[೧] ಅದು ಪ್ರಥಮ ಕಲಾಪ್ರಕಾರವಾಗಿ ಆದಿ ಮಾನವನಿಂದ ಪ್ರಾರಂಭವಾಗಿ ಆಧುನಿಕ ಕಾಲದವರೆಗೆ ಅನೇಕ ಧಾರ್ಮಿಕ, ಮತಪಂಥ, ಧರ್ಮ,ರಾಜಕೀಯ ಪ್ರಭಾವ, ಪ್ರೇರಣೆಯಿಂದ ಕೂಡಿದ ಶೈಲಿಗಳ ಜೊತೆ ಪ್ರಮುಖ ಲಕ್ಷಣಗಳು ಹೊಂದಿದೆ. ನೀರಿನಂತೆ ಹರಿದಾಡುತ್ತಾ ಬದಲಾವಣೆಗೆ ಒಳಗಾಗಿ ವಿವಿಧ ರೂಪಾಂತರ ಗೊಳ್ಳುತ್ತಲೇ ಸಾಗಿರುವ ಈ ಪ್ರಯಾಣವನ್ನು ತಿಳಿಯಲೂ ಭಾರತೀಯ ಕಲಾ ಇತಿಹಾಸದ ಜೊತೆ ಇಂದಿನ ಕಲಾಚಟುವಟಿಕೆ ಗಮನಿಸಿದರೆ ಸಾಕಾಗುತ್ತದೆ.

ಭಾರತೀಯ ಕಲಾ ಪ್ರಪಂಚಕ್ಕೆ ಅಮೂಲ್ಯ ಕೊಡುಗೆ ನೀಡಿದಂತಹ ಮೈಸೂರಿನ ಚಿತ್ರಕಲೆಯನ್ನು ನೋಡಿದಾಗ ಇದು ಒಂದು ಸುಂದರಸರೋವರದಂತೆ ಕಂಡುಬರುತ್ತದೆ. ಇಲ್ಲಿಯೂ ಹಲವು ರಾಜಕೀಯ, ಧಾರ್ಮಿಕ ಮತಪಂಥಗಳ ಆಕ್ರಮಣ ಮತ್ತು ಪ್ರಚೋದನೆಯು ನದಿಗಳಂತೆ ಕಾಲಕಾಲಕ್ಕೆ ಬಂದು ಸೇರಿ ವಿಭಿನ್ನತೆಯನ್ನು ಸೃಷ್ಟಿಸಿದರು. ಅದನ್ನು ತನ್ನೊಳಗೆ ಮಿಲನಗೊಳಿಸಿಕೊಂಡು ಪ್ರಬುದ್ಧವಾಗಿ ಬೆಳೆದಂತಹ ಈ ಚಿತ್ರಕಲೆಯಲ್ಲಿ ಜನಪದ, ಶಿಷ್ಟಪದ, ಆಧುನಿಕ ಕಲೆಯ ಚಿತ್ರಕಲೆಯ ಶ್ರೇಷ್ಠ ಸಂಪತ್ತು ತನ್ನ ಒಡಲಿನಲ್ಲಿ ತುಂಬಿಕೊಂಡಿದೆ. ಅದರಲ್ಲಿ ಮುಖ್ಯವಾಗಿ ದ್ರಾವಿಡ, ಆರ್ಯರ ಪ್ರಭಾವ ಮೊದಲಿಗೆ ಸೇರಿತು. ನಂತರದಲ್ಲಿ ಮುಸ್ಲಿಂರ ಆಕ್ರಮಣದಿಂದ ಮೊಗಲ್ ಚಿತ್ರಕಲೆಯು ಪರ್ಷಿಯಾದ ಕಲಾವಿದರು. ಭಾರತೀಯ ಕಲಾವಿದರ ಮಿಲನದಿಂದ ಹೊಸಚಿತ್ರಕಲಾ ಶೈಲಿ ಮೂಡಿತು. ಕಾಗದದ ಆಗಮನವು ಹಸ್ತಪ್ರತಿಕಲೆಗೆ ಹೊಸ ತಿರುವು, ಕಲಾವಿದರಿಗೆ ನವೀನ ಮಾಧ್ಯಮದ ಪರಿಚಯವು ಚಿತ್ರಕಲೆ ರಚನೆಗೆ ಇನ್ನೂ ಪ್ರೇರೇಪಿಸಿತು.

೧. ಡಾ.ಡಿ.ಎ. ಉಪಾಧ್ಯ, ಭಾರತೀಯ ಕಲೆಗಳು ಪು.ಸಂ-೩೦

ಮೊಘಲ್ ಪತನ ನಂತರ ರಜಪೂತ, ಬಶೊಲಿ, ಕಾಂಗ್ರಚಿತ್ರಕಲಾ ಶೈಲಿಯ ಕಲಾಕೃತಿಯ ಪ್ರಭಾವ, ಪ್ರೇರಣೆಯು ಮೈಸೂರಿನ ಚಿತ್ರಕಲೆಯ ಮೇಲೆ ಆಗಿರುವುದನ್ನು ಸಂಪ್ರದಾಯ ಭಿತ್ತಿಚಿತ್ರಕಲೆ, ಹಸ್ತಪ್ರತಿಚಿತ್ರಕಲೆ, ಗಂಜೀಫಾ, ಈ ಚಿತ್ರಕಲೆಯಲ್ಲಿ ಗುರುತಿಸಬಹುದು. ಇಷ್ಟೇ ಅಲ್ಲದೆ ಕರ್ನಾಟಕ ಆಳಿದ ಪ್ರಮುಖ ಅರಸರು ಹುಟ್ಟುಹಾಕದ ಚಿತ್ರಕಲೆಯ ಪ್ರಭಾವ, ಪ್ರೇರಣೆಯು ಸಹ ಪ್ರಬಲವಾಗಿ ಆಗಿರುತ್ತವೆ. ಮುಂದಿನ ಶತಮಾನದಲ್ಲಿ ಆಂಗ್ಲರ ಪರಾಕ್ರಮವು ಇಲ್ಲಿನ ಕಲಾಕ್ಷೇತ್ರಕ್ಕೆ ಪ್ರಬಲ ಪ್ರಚೋದನೆಯನ್ನು ನೀಡಿತ್ತು. ಇದರ ಪರಿಣಾಮವು ಸಹ ಆಗಾಧ ಬದಲಾವಣೆಗೆ ನಾಂದಿ ಹಾಡಿದುದನ್ನು ಮೈಸೂರಿನಲ್ಲಿ ಕಂಡುಬರುವ ಚಿತ್ರಕಲೆಯಲ್ಲಿ ಎದ್ದು ತೋರುತ್ತವೆ.

ಭಾರತೀಯ ಚಿತ್ರಕಲೆಯ ಮೇಲಾದ ಪ್ರಭಾವ ಪ್ರೇರಣೆಯು ಮೈಸೂರು ಜಿಲ್ಲೆಯ ಚಿತ್ರಕಲೆಯ ಮೇಲಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಐತಿಹಾಸಿಕವಾಗಿ ಶಿಷ್ಟಪದ ಕಲೆಯಲ್ಲಿ ಕ್ರಿ.ಶ. ಪೂರ್ವದಿಂದ ವಿಜಯನಗರ ಕಾಲದವರೆಗೆ ಒಂದು ರೀತಿ ಪ್ರಭಾವ ಪ್ರೇರಣೆ ನಡೆದರೆ ನಂತರ ಕಾಲದಲ್ಲಿ ಮುಸ್ಲಿಂ ಆಕ್ರಮಣ ಮತ್ತು ಪ್ರಚೋದನೆಯಿಂದಲೂ ಅನೇಕ ಬದಲಾವಣೆ ನಡೆದಿರುತ್ತದೆ. ಮುಂದಿನ ಕಾಲದಲ್ಲಿ ಪಾಶ್ಚಾತ್ಯರ ಪ್ರಾಬಲ್ಯ ಹಾಗೂ ಪ್ರಚೋದನೆಯು ದೊಡ್ಡಮಟ್ಟದಲ್ಲಿ ಬದಲಾವಣೆಯ ಗಾಳಿ ಮೈಸೂರು ಚಿತ್ರಕಲೆಯ ಬೆಳೆವಣಿಗೆಯಲ್ಲಿ ಸೇರಿಕೊಂಡಿದೆ.

ಹಿಂದೂ ರಾಷ್ಟ್ರದಲ್ಲಿ ಕ್ರಿಸ್ತಪೂರ್ವದಿಂದಲೆ ಪ್ರಾರಂಭವಾದಂತಹ ಚಿತ್ರಕಲೆಯು ಸಿಂಧೂ ಸಂಸ್ಕೃತಿಯಲ್ಲಿ ಆರ್ಯ, ದ್ರಾವಿಡ ಸಮ್ಮಿಲನದಿಂದ ಕೂಡಿರುವುದು ನೋಡಬಹುದು. ನಂತರ ವೇದಕಾಲಗಳಿಂದ ಚಿತ್ರಕಲೆಯ ಧಾರ್ಮಿಕಸ್ವರೂಪವನ್ನು ಪಡೆಯಿತ್ತು. ಅಲ್ಲಿ ದೇವದೇವತೆಗಳ ಚಿತ್ರಗಳನ್ನು ಬರೆಯುವ ಪದ್ದತಿಯು ರೂಢಿಗೆ ಬಂತು. ಆನಂತರದಲ್ಲಿ ಚಿತ್ರಕಲೆಯ ಕುರಿತಾದ ಅನೇಕ ಸಾಹಿತ್ಯ ಗ್ರಂಥಗಳು ರಚನೆಗೊಂಡವು. ಇದರಿಂದ ಶಾಸ್ತ್ರದಲ್ಲಿ ಚಿತ್ರಕಲೆಯ ನಿಯಮ ಚೌಕ್ಕಟ್ಟು ಅಂದಿನಿಂದಲೆ ಪ್ರಾರಂಭಿವಾಗಿದೆ. ಅದು ಅಜಂತ ಚಿತ್ರಕಲೆಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಭಾರತೀಯ ಕಲೆಗೆ ಅಮೋಘ ಕಾಣಿಕೆ. ನೀಡಿದಂತಹ ಕರ್ನಾಟಕ ಚಿತ್ರಕಲೆಯಲ್ಲಿ ಬಾದಾಮಿ ಚಾಲುಕ್ಯರ ಚಿತ್ರಕಲೆಯೇ ಇತಿಹಾಸ ತಜ್ಞರು ಗುರುತಿಸುವಾಗ್ಗೆ ಮೊದಲ ಚಿತ್ರಕಲೆಯೇ ಸಾಕ್ಷಿಯಾಗಿದೆ. ಇವರಿಗೆ ಕ್ರಿಸ್ತಪೂರ್ವದ ಅಜಂತ ಚಿತ್ರಕಲೆ ಮತ್ತು ಹಲವು ಸಾಹಿತ್ಯ ಕಲಾಗ್ರಂಥಗಳು ರಾಮಾಯಣ, ಮಹಾಭಾರತ, ಪುರಾಣ ಧಾರ್ಮಿಕತೆಗಳೇ ಇವರಿಗೆ ಪ್ರಭಾವ, ಪ್ರೇರಣೆ ಒದಗಿಸಿದೆ. ಇವರ ಕಲೆಯಲ್ಲಿ ಕಾಣಬಹುದು. ಭಾರತೀಯ ಚಿತ್ರಕಲೆಯ ಇತಿಹಾಸವನ್ನು ಸಾಮಾನ್ಯವಾಗಿ ಅಂಜತ ಚಿತ್ರಕಲೆಯಿಂದ ಪ್ರಾರಂಭಿಸುವುದು ರೂಡಿ. ಮುಂದಿನ ರಾಷ್ಟ್ರಕೂಟ, ಹೊಯ್ಸಳ, ಭಿತ್ತಿಚಿತ್ರಕಲೆಯು ಬಾದಾಮಿಯ ಮುಂದಿನ ಹಂತ ಎನ್ನಬಹುದು. ಹೊಯ್ಸಳರಲ್ಲಿ ಭಿತ್ತಿಚಿತ್ರಕ್ಕಿಂತ ಹಸ್ತಪ್ರತಿಚಿತ್ರಕಲೆಯು ಪ್ರಚಲಿತದಲ್ಲಿತ್ತು.

ಹಾಗಾಗಿ ಮೈಸೂರಿನ ಅರಸರ ಮೇಲೆ ಹಸ್ತಪ್ರತಿಚಿತ್ರಕಲೆ, ಪ್ರೇರಣೆಯಿಂದ ಇಲ್ಲಿಯೂ ನಿರ್ಮಾಣಕ್ಕೆ ಮೂಲ ಸೆಳೆಯಾಗಿ. ಕಾಗದದ ಹಸ್ತಪ್ರತಿಗಳಲ್ಲೂ ಮುಂದುವರೆಯಿತು ಅದು ಕಳೆದ ಶತಮಾನದವರೆಗೂ ಇವುಗಳ ನಡೆವೆ ಪರ್ಶಿಯಾದಿಂದ ಮುಸ್ಲಿಂ ಕಲಾವಿದರು, ಭಾರತೀಯ ಕಲಾವಿದರ ಮಿಲನದಿಂದ ಹೊಸ ಚಿತ್ರಕಲಾಶೈಲಿ ಮೂಡಿಬಂತು ಅದೇ ಮೊಘಲ್‌ಚಿತ್ರಕಲೆ. ಈ ಮೊಘಲ್ ಚಿತ್ರಕಲೆಯು ಪ್ರಭಾವ, ಪ್ರೇರಣೆಯು ಮೈಸೂರಿನಲ್ಲಿ ಕಂಡುಬರುವ ಚಿತ್ರಕಲೆಯ ಮೇಲೆ ಆಗಾಧ ಪರಿಣಾಮ ಬೀರಿದೆ. ಮೊಗಲ್‌ರ ಪತನ ನಂತರ ಚಿಕ್ಕಣಿಚಿತ್ರಗಳು, ಕಾಗದಮೇಲೆ ಚಿತ್ರರಚನೆ, ಭಾವಚಿತ್ರಗಳು ಮುಂದೆ ಮೈಸೂರಿನ ಚಿತ್ರಕಲೆಯ ಮೇಲೆ ವಿಶೇಷ ಪ್ರಭಾವ ಬೀರಿದೆ.

ಮೊಘಲ್ ಪತನ ನಂತರ ರಜಪೂತ, ಬಾಶೋಲಿ, ಕಾಂಗ್ರಾ ಚಿತ್ರಕಲೆಯ ಶೈಲಿಯ ಸಹ ಮುಂದಿನ ಮೈಸೂರು ಚಿತ್ರಕಲೆಯ ಮೇಲೆ ಪ್ರಭಾವ ಬೀರಿ ಪ್ರೇರಣೆಗೊಳಿಸಿದೆ. ನಂತರದಲ್ಲಿ ಮುಸ್ಲಿಂರ ದಾಳಿಯಿಂದ ಹಿಂದೂ ಧರ್ಮ ಮತ್ತು ಸಂಸ್ಕೃತಿಯನು ಸಂರಕ್ಷಿಸುವ ಉದ್ದೇಶ ಲಲಿತಕಲೆಗಳು ಬೀರಿದ ಪ್ರಭಾವವು ಅದ್ಭುತವಾಗಿದೆ. ಅದರಲ್ಲಿ ಹೊಸಚೈತನ್ಯ ನೀಡಿದ ವಿಜಯನಗರ ಚಿತ್ರಕಲೆಯು ಕರ್ನಾಟಕದ ಪರಂಪರೆಯ ಮುಂದುವರಿಕೆಯಾಗಿದೆ.

ಈ ಕಲೆಯಪ್ರಭಾವ ಪ್ರೇರಣೆಯು ದಕ್ಷಿಣದ ರಾಜ್ಯವೆಲ್ಲ ಹರಡಿದೆ. ಆಗಿದೆ. ವಿಜಯನಗರ ಪತನ ನಂತರದಲ್ಲಿ ಕಲಾಪರಂಪರೆಯು ಮೈಸೂರು ಚಿತ್ರಕಲೆಯಲ್ಲಿ ಮತ್ತೆ ಮೊಳಕೆ ಒಡೆದು ಹೆಮ್ಮರವಾಗಿ ಬೆಳದಿತ್ತು. ಅಲ್ಲಿನ ಕಲಾವಿದರು ಆಶ್ರಯ ಅರಸಿ ಬಂದಾಗ ಮೈಸೂರಿನ ರಾಜ ಒಡೆಯರು ೧೫-೧೬ನೇ ಶತಮಾನದಲ್ಲಿ ಅವರಿಗೆ ಸೌಲಭ್ಯ ಒದಗಿಸಿದರು.

ಟಿಪ್ಪುವಿನ ಆ ನಂತರ ಮೇಲೂ ಮುಮ್ಮಡಿ ಕೃಷ್ಣರಾಜ ಒಡೆಯರು ಪ್ರೋತ್ಸಾಹವಿತ್ತರು. ಆಗಾಗಿ ಮೈಸೂರು ಚಿತ್ರಕಲೆಯಲ್ಲಿ ವಿಜಯನಗರ ಕಲಾಶೈಲಿಯು ಮುಂದುವರಿಕೆ ಎಂದು ನೋಡುವುದೇ ಸೂಕ್ತವಾಗಿದೆ. ಏಕೆಂದರೆ ಅವರ ಸಂಪ್ರದಾಯವನ್ನು ಚಾಚುತಪ್ಪದೆ. ಹೆಚ್ಚಾಗಿ ಪಾಲನೆಮಾಡಿದರೆ ಅಲ್ಲಿನ ಕಲಾವಿದರು ಇಲ್ಲಿನ ಅರಸರ ಆಶ್ರಯ ಪಡೆದು ಚಿತ್ರಕಲೆಯನ್ನು ಮುಂದುವರೆಸಿದರು. ಹಾಗಾಗಿ ವಿಜಯನಗರ ಕಲೆಯು ಕೆಲವು ಬದಲಾವಣೆಗಳಿಂದ ಕೂಡಿದ ಕವಲೊಡೆದ ಒಂದು ಶಾಖೆಯೂ ಆಗಿದೆ. ಅದರಲ್ಲಿ ಭಿತ್ತಿಕಲೆ, ಹಸ್ತಪ್ರತಿಚಿತ್ರಕಲೆ, ಗಂಜೀಫಾ ಚಿತ್ರಕಲೆಗಳು ಹೇರಳವಾಗಿ ಮೈಸೂರು ಮತ್ತು ಅದರ ಪ್ರಾಂತ್ಯಗಳಲ್ಲಿ ಹೆಚ್ಚಾಗಿ ರಚನೆಗೊಂಡಿದೆ. ದೇವಾಲಯ, ಮಠ, ಅರಮನೆಗಳಲ್ಲಿ ಭಜನೆ ಮಂದಿರ, ಶ್ರೀಮಂತರ ಗೃಹಗಳಲ್ಲಿ, ಅರಸರ ಆಶ್ರಯದಲ್ಲಿ ೧೯ನೇಶತಮಾನದ ಮಧ್ಯಭಾಗದಿಂದ ೨೦ನೇ ಶತಮಾನದ ಮೊದಲ ದಶಕಗಳವರೆಗೆ ಚಿತ್ರಕಾರರು ಮೈಸೂರು ಪರಂಪರೆಯ ಚಿತ್ರಗಳನ್ನು ವಿಜಯನಗರ ಮತ್ತು ಹಿಂದಿನ ಚಿತ್ರಕಲೆಯ ಪ್ರಭಾವ, ಪ್ರೇರಣೆಯ ಚಿತ್ರಗಳಾದ ರಾಮಾಯಣ, ಮಹಾಭಾರತ, ಭಾಗವತ, ಪುರಾಣ ಜೊತೆಗೆ ಶೈವ, ವೈಷ್ಣವ, ಶಾಕ್ತ, ಮತಧರ್ಮದ ಚಿತ್ರಗಳನ್ನು ಇಲ್ಲಿ ರಚಿಸುತ್ತ ಬಂದರು. ಮೈಸೂರು ಜಿಲ್ಲೆಯಲ್ಲಿ ಕಂಡುಬರುವ ಚಿತ್ರಕಲೆಯಲ್ಲಿ ಬರಿ ಐತಿಹಾಸಿಕ, ಧಾರ್ಮಿಕ, ಮತಧರ್ಮಗಳ ಪ್ರಭಾವ ಪ್ರೇರಣೆಯು ಮಾತ್ರ ಅಷ್ಟೇಅಲ್ಲದೆ. ಪರಿಸರ ಪ್ರಭಾವವು ಮುಖ್ಯವಾಗಿದೆ. ಪ್ರಕೃತಿಯ ಮಡಿಲಿನಲ್ಲಿರುವ ಗಿಡ ಮರ, ಹೂ ಬಳ್ಳಿ, ನದಿ, ತೋರೆ, ಬೆಟ್ಟಗಳು ಹೀಗೆ ಅವನು ನೆಲೆಸಿರುವ ವಾತಾವರಣವು ಅವನಲ್ಲಿ ಪ್ರಭಾವ, ಪ್ರೇರಣೆ ತುಂಬುತ್ತದೆ ಹಾಗೇ ಪರಿಸರದ ವಾತಾವರಣವನ್ನು ಕಲಾವಿದನು ಆಸ್ವಾದಿಸಿದಾಗ ಅವನಿಂದ ಕಲಾಕೃತಿಗಳು ಹೊರಹೊಮ್ಮುತ್ತವೆ. ಒಂದರ್ಥದಲ್ಲಿ ಕಲಾವಿದರನ್ನು ಆವರಿಸಿರುವ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಸೂಕ್ಷ್ಮಾತಿಸೂಕ್ಷ್ಮ ಅವರ ಮುಂದೆ ದೀರ್ಘಕಾಲದ ಪ್ರಭಾವವನ್ನು ಬೀರಿರುವುದು ಕಂಡುಬರುತ್ತದೆ.

ಈ ರೀತಿಯ ಪ್ರಭಾವ ಮೈಸೂರು ಜಿಲ್ಲೆಯ ಚಿತ್ರಕಲೆಯಲ್ಲಿ ಕಾಣಬಹುದು. ಅದು ೧೫-೧೭ನೇಯ ಶತಮಾನದವರೆಗೆ ಮಾತ್ರ. ನಂತರದಲ್ಲಿ ೧೮-೨೦ ಶತಮಾನದಲ್ಲಿ ಮೈಸೂರು ಜಿಲ್ಲೆಯ ಚಿತ್ರಕಲೆಯ ಮೇಲೆ ಮೂರನೆಯ ಪ್ರಭಾವ ಆಗತೊಡಗುತ್ತದೆ. ಅಲ್ಲದೆ ಇಡೀ ಭಾರತದ ಚಿತ್ರಕಲೆಯ ಮೇಲೆ ಆಂಗ್ಲರ ಪರಾಕ್ರಮ ಅಥವಾ ಪ್ರಚೋದನೆಯಿಂದ ಮಹತ್ತರ ಬದಲಾವಣೆಯೂ ನಡೆದು ಹೋಯಿತು. ಅದರ ಪರಿಣಾವನ್ನು ನಾವು ಇಂದು ಮೈಸೂರಿನ ಚಿತ್ರಕಲೆಯಲ್ಲಿ ಅನೇಕ ಕಲಾಪ್ರಕಾರಗಳಲ್ಲಿ ಆದ ಬದಲಾವಣೆಯಲ್ಲಿ ಅದು ತೋರಿದೆ. ಭಿತ್ತಿಚಿತ್ರಕಲೆ, ಹಸ್ತಪ್ರತಿ ಚಿತ್ರಕಲೆ, ಗಾಜಿನ ಚಿತ್ರಕಲೆ, ಗಂಜೀಫಾ ಚಿತ್ರಕಲೆ, ಮತ್ತು ಕಲಾಶಿಕ್ಷಣ, ಕಲಾವಿದರು, ಕಲಾಕೃತಿಗಳು ಜೊತೆಗೆ ಸಂಕೀರ್ಣ ಚಿತ್ರಕಲೆಯಲ್ಲಿ, ಅವರ ಆಧುನಿಕ ಕಲೆಯು ಪ್ರಚೋದನೆಯನ್ನು ಕಾಣಬಹುದಾಗಿದೆ.

ಕಲಾಕ್ಷೇತ್ರದಲ್ಲಿ ೧೯ನೇ ಶತಮಾನದಲ್ಲಿ ಬ್ರಿಟಿಷರಿಂದ ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯು ಹಿಂದಿನ ಗುರುಕುಲ ಪದ್ಧತಿಯನ್ನು ತೊಡೆದುಹಾಕಿ. ಪರಂಪರೆಯಿಂದ ಭಿನ್ನವಾದ ಶಿಕ್ಷಣ ವಿಧಾನ ಪ್ರಾರಂಭವಾಯಿತು. ಇದರಿಂದ ಎಲ್ಲಾ ಜಾತಿಯವರು ಕಲಾ ವಿದ್ಯೆಯು ಕಲಿಯುವಂತಾಯಿತು. ಅವರ ಕಲಾಶಾಲೆಯ ಸ್ಥಾಪನೆಯಿಂದ ಅನೇಕ ಕಲಾವಿದರುಗಳು ಸೃಷ್ಟಿಗೊಂಡರು. ಕಲಾಶಿಕ್ಷಣವೂ ವಿದೇಶಿ ಪದ್ಧತಿಯದಾಯಿತು. ಅಲ್ಲಿನ ಪಾಠಕ್ರಮ ಹಾಗೂ ಶಿಕ್ಷಕರಲ್ಲಿ ಇಲ್ಲಿ ಯಥಾರ್ದರ್ಶನ, ಮಾನವದೇಹಶಾಸ್ತ್ರ, ವೈಜ್ಞಾನಿಕ ಅನ್ವೇಷಣೆ, ಮನಶಾಸ್ತ್ರ ಮತ್ತು ಯಂತ್ರೋಪಕರಣಗಳ ಬಳಕೆ, ವಿಶೇಷವಾಗಿ ಕ್ಯಾಮರಾ, ಜೊತೆಗೆ ಕಲಾ ವಿವಿಧ ಮಾಧ್ಯಮ ಪರಿಕರಗಳಾದ ತೈಲವರ್ಣ, ಸೀಸದಕಡ್ಡಿ, ಗಾಜು ಕ್ಯಾನ್‌ವಾಸ್ ಮುಂತಾದವುಗಳ ಉಪಯೋಗ ಕಂಡುಬಂದಿತು.

ಪಾಶ್ಚತ್ಯರ ಉದ್ದೇಶವಾದರೂ ಕಲಾವಿದರನ್ನು ಸೃಷ್ಟಿಸುವುದಾಗಿರಲಿಲ್ಲ ಕಲಾಶಿಕ್ಷಕರು ಬ್ರಿಟಿಷರ ಬೇಡಿಕೆಯನ್ನು ಪೂರೈಸುವ ವಾಣಿಜ್ಯ ಚಿತ್ರಕಾರರನ್ನು ತಯಾರಿಸುವುದಾಗಿತ್ತು. ಮುದ್ರಣ ಸೌಲಭ್ಯವು ಇಂತಹ ಕಲೆಗೆ ಪೋಷಕವಾಗಿತ್ತು. ಇಂತಹ ಹಿನ್ನೆಲೆಯಲ್ಲಿ ಅರಮನೆಯಿಂದ ಸಾಮಾನ್ಯರ ಮನೆವರೆಗೆ ಚಿತ್ರಪಟವು ಕಾಣಲು ಕಾರಣರಾದರೂ ಬ್ರಿಟಿಷರು ಇವರ ಹಿರಿಮೆಯಿಂದ ಇಲ್ಲಿನ ಕಲಾವಿದರು ಪ್ರೇರಣೆಗೊಂಡು ವ್ಯಕ್ತಿಯಿಂದ ಕಲೆಯನ್ನು ಗುರುತಿಸುವ ಹೊಸವಿಚಾರ ಕಲೆಹಾಕಿತು. ಸುಸಂಸ್ಕೃತ ವಾತಾವರಣದಲ್ಲಿ ಬೆಳೆದ ಕಲಾವಿದರು ನಂತರ ವಿಕ್ಟೋರಿಯನ್ ಕಲಾವಿದರ ಕಂಪನಿಶೈಲಿಯ ಪ್ರಭಾವಕ್ಕೆ ಒಳಗಾದ, ವೈದಿಕ, ಪೌರಣಿಕ ಶಾಸ್ತ್ರಜ್ಞಾನವೂ ಭಾವಚಿತ್ರ, ಪುರಾಣವಸ್ತು ಚಿತ್ರಗಳನ್ನು ರಚಿಸಲು ಕಾರಣವಾಯಿತು.

ಈ ಹಿನ್ನೆಲೆಯಲ್ಲಿಯೇ ಈ ಸ್ಥಳದಲ್ಲಿ ತಾಂತ್ರಿಕ ಶಾಲೆಗಳು ಕುಶಲಕಲಾ ತರಬೇತಿಯಲ್ಲಿ ಸಂಕೀರ್ಣಕಲೆಗಳ ತರಬೇತಿಯನ್ನು ಮೈಸೂರಿನಲ್ಲೂ ಪ್ರಾರಂಭಿಸಿದವು. ಇದರ ತರುವಾಯ ಆಧುನಿಕ ಕಲೆಯು ನೆಲೆಯೂರಿತ್ತು ಪಾಶ್ಚಾತ್ಯರಲ್ಲಿ ಮೊದಲು ಕಂಡುಬಂದ ಹೊಸ ಕಲಾಚಳುವಳಿಗಳು ಯೂರೋಪಿನ ದೇಶಗಳಲ್ಲಿ ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಕಂಡುಬಂದವು. ಇಲ್ಲಿಯೂ ಅವರ ಆಡಳಿತ ಪ್ರಭಾವ ಇದ್ದುದರಿಂದ ಬೇಗ ಅವರ ಪ್ರಚೋದನೆ ಗೊಳಗಾಗಿ ಕಲಾಚಳುವಳಿಗಳು ಇಲ್ಲಿ ಪಸರಿಸಿತು. ಇದರಿಂದ ಸಾಮೂಹಿಕ, ಸಾಮಾಜಿಕ ಅನುಭವಗಳಿಗೆ ಆಧುನಿಕ ಕಲಾವಿದ ಅಭಿವ್ಯಕ್ತಿ ನೀಡುತ್ತಾನೆ. ಇದರಲ್ಲಿ ವ್ಯಕ್ತಿವೈಶಿಷ್ಟ ತಿಳಿಯುತ್ತದೆ. ಹಾಗಾಗಿ ಮೈಸೂರಿನಲ್ಲಿ ಕಂಡು ಬರುವ ಚಿತ್ರಕಲೆಯಲ್ಲಿ ಇದರ ಪರಿಣಾಮವು ಆಗಿರುವುದನ್ನು ಭಿತ್ತಿಚಿತ್ರಕಲೆ, ಗಾಜಿನಚಿತ್ರಕಲೆ, ಸಂಕೀರ್ಣಕಲೆಯು ಪಾಶ್ಚಾತ್ಯರ ಘನತೆ, ಪ್ರಚೋದನೆಯಿಂದ ಇಲ್ಲಿನ ಚಿತ್ರಕಲೆಯು ಹಲವು ವೈವಿಧ್ಯತೆಯಿಂದ ಕೂಡಿದೆ. ಇದು ಕಲಾಕ್ಷೇತ್ರದಲ್ಲಿ ಹೊಸ ಬೆಳವಣಿಗೆಗೆ ನಾಂದಿಹಾಡಿ, ಮೈಸೂರಿನಲ್ಲಿ ಇರುವ ಚಿತ್ರಕಲೆಯು ವಿಶೇಷ ಪ್ರಾಮುಖ್ಯತೆ ಹೊಂದಿದೆ..

ಶೈಲಿ : ಶೈಲಿಯು ಕಲೆಯ ಆತ್ಮವಾಗುತ್ತದೆ. ಆಶೈಲಿಗೆ ಮಾಧ್ಯಮವು ಶರೀರವಾಗುತ್ತದೆ. ಅಂಥ ಮಾಧ್ಯಮವನ್ನು ವಸ್ತುವಿನ್ಯಾಸಕ್ಕೆ ಅನುಗುಣವಾಗಿ ಬಳಸಿಕೊಳ್ಳುವ ರೀತಿ ಮುಖ್ಯವಾಗಿರುತ್ತದೆ. ಇದನ್ನು ಶೈಲಿ ಎಂದು ಕರೆಯುತ್ತಾರೆ.[೨] ಶೈಲಿ ಎಂದರೆ ಕ್ರಮ, ಧಾಟಿ, ಚಿತ್ರರಚನೆಯ ರೀತಿ ಮಾರ್ಗ ಎಂದಾಗುತ್ತದೆ. ಶೈಲಿಯಲ್ಲಿ ನಾಲ್ಕುಅಂಶಗಳು ಮುಖ್ಯವಾಗಿರುತ್ತದೆ.

೨. ಡಾ.ಡಿ.ಎ.ಉಪಾಧ್ಯ, ಭಾರತೀಯ ಕಲೆಗಳ ನೆಲೆಗಳು, ಪು.ಸಂ_೪೬

೧.ಕಲಾವಿದ. ೨,ಅನುಭವ, ೩,ಅಭಿವ್ಯಕ್ತಿ ೪,ಮಾಧ್ಯಮ. ಅನುಭವವನ್ನು ಕಲಾವಿದ ಮಾಧ್ಯಮದ ಮೂಲಕ ಹೇಳುವ ಅಥವಾ ಅಭಿವ್ಯಕ್ತಿಗೊಳಿಸುವ ವಿಧಾನವೇ ಶೈಲಿಯಾಗುತ್ತದೆ. ಶೈಲಿಯಲ್ಲಿ ಸ್ಪಷ್ಟತೆ ಮತ್ತು ಮಾಧ್ಯಮ ಶುದ್ದತೆ, ಮುಖ್ಯ ಇದನ್ನು ಮೈಸೂರಿನ ಜಿಲ್ಲೆಯ ಚಿತ್ರಕಲೆಯಲ್ಲಿ ನಿರ್ದಿಷ್ಟವಾಗಿ ತೋರಿಸಿದ್ದಾರೆ. ಶೈಲಿಯಿಂದ ಕಾಲಮಾನವನ್ನು ಸಹ ಕಂಡು ಹಿಡಿಯಬಹುದು.

ಮೈಸೂರು ಜಿಲ್ಲೆಯ ಚಿತ್ರಕಲೆಯ ಮೇಲೆ ಅನೇಕ ಕಲಾಶೈಲಿಗಳ ಪ್ರಭಾವ ಆಗಿರುವುದು ನಾವು ಒಪ್ಪಲೇಬೇಕು. ಇಲ್ಲಿ ಚಿತ್ರಕಲೆಯ ಮೇಲಾದ ಪ್ರಭಾವವನ್ನು ಐತಿಹಾಸಿಕವಾಗಿ ನೋಡಿದಾಗ ಪರ್ಶಿಯನ್, ವಿಜಯನಗರ, ರಾಜಸ್ಥಾನ, ಬಿಜಾಪುರ, ಅರಸರು ಬೆಳೆಸಿದ ಚಿತ್ರಕಲೆಯು ಮುಂದೆ ಮೈಸೂರು ಶೈಲಿಯಾಗಿ ಬೆಳೆಯಿತು. ಮುಮ್ಮಡಿಯರ ಆಶ್ರಯದಲ್ಲಿ ಮೈದಳೆದ ಚಿತ್ರಕಲಾ ಪ್ರಕಾರವು ಒಂದು ನಿರ್ದಿಷ್ಟಶೈಲಿಯ ಒಂದು ಘಟ್ಟವೆಂದಾಗಲಿ ಫಲವೆಂದಾಗಲಿ ಹೇಳುವಂತಿಲ್ಲ ಇದ್ದಕ್ಕಿದ್ದಂತೆ ಯಾವ ಪೂರ್ವೋತ್ತರವೂ ಇರದೆ ಕಾಣಿಸಿಕೊಂಡದ್ದು ಅಲ್ಲ, ಆಗ ಸಿದ್ಧಿವಾಗಿ ಈಗ ಉಳಿದು ಬಂದಿರುವ ಕಲಾಕೃತಿಗಳನ್ನು ಪರಿಶೀಲಸಿದರೆ ಮೇಲಿನದು ಸ್ಪಷ್ಟವಾಗುತ್ತದೆ.

ಒಂದು ಕಲಾಶೈಲಿ ಇನ್ನೊಂದು ಕಲಾಶೈಲಿಯ ಸಂಪರ್ಕಕ್ಕೆ ಬಂದಾಗ ಅದರಿಂದ ಪ್ರಭಾವವಾಗುವುದು ಸಹಜ ಆದರೆ ಹಾಗೆ ಪ್ರಭಾವವನ್ನು ಒಡಮೂಡಿಸಿಕೊಳ್ಳುವಾಗ ತನ್ನತನವನ್ನು ಕಳೆದುಕೊಳ್ಳುವುದಿಲ್ಲ. ಮಾರ್ಪಾಟು ಒದಗುವುದು ಮೂಲಭೂತ ಮುಖವಾಗಿ ಸಂಪ್ರದಾಯ ಚೌಕಟ್ಟಿನಲ್ಲಿ ಉಳಿದೇ ಉಳಿದುಕೊಳ್ಳುತ್ತದೆ. ಉದಾ: ರಾಮಾಯಣ, ಮಹಾಭಾರತ, ಪುರಾಣ, ಭಾಗವತ ಇತ್ಯಾದಿ.

ಮನುಷ್ಯನು ಬಟ್ಟೆಯನ್ನು ಬದಲಿಸಿದ್ಧಂತೆ ಒಂದು ಪ್ರದೇಶವು ವಿವಿಧತೆಯನ್ನು ಹೊಂದಬಹುದು. ನಿರ್ದಿಷ್ಟ ಪ್ರದೇಶ, ಪಂಗಡ ಜನರ, ಹಾವ,ಭಾವ, ಅಭಿರುಚಿ ಸಹ ಕಾರಣವಿರಬಹುದು. ಶೈಲಿಯಲ್ಲಿ ಯಾವುದೇ ಪ್ರದೇಶ ಗುಣವೈಶಿಷ್ಟತೆ, ರಚನೆಯ ಲಕ್ಷಣ, ಚಿತ್ರಿಸುವವಿಧಾನ, ಉಡುಗೆ ತೊಡುಗೆ, ಪ್ರಕೃತಿಯ ಹಿನ್ನೆಲೆಯೂ ಸೇರಿ ಒಳಗೊಂಡು ಶೈಲಿಯ ಪೂರ್ಣಗೊಳ್ಳುವುದು. ಶೈಲಿಯನ್ನು ಗುರುತಿಸಲು ಕೆಲವು ಪ್ರಮುಖ ಲಕ್ಷಣಗಳನ್ನು ಅದು ಮನುಷ್ಯರ ಪ್ರಾಣಿ–ಪಕ್ಷಿಚಿತ್ರಗಳು, ಉಡುಗೆ ತೊಡುಗೆ, ಆಭರಣ, ರಚನಾವಿಧಾನ, ವರ್ಣಗಳ ಬಳಕೆ, ರೇಖಾ ಲಾಲಿತ್ಯ, ತಂತ್ರ ಇವುಗಳಿಂದ ಶೈಲಿಯನ್ನು ಗುರುತಿಸಬಹುದು.

ಮನುಷ್ಯನ ಚಿತ್ರಗಳು : ಮೈಸೂರು ಜಿಲ್ಲೆಯ ಚಿತ್ರಕಲೆಯಲ್ಲಿ ಭಿತ್ತಿಚಿತ್ರ, ಹಸ್ತಪ್ರತಿ. ಗಂಜೀಫಾ. ಗಾಜಿನ ಚಿತ್ರಕಲೆ, ಸಂಕೀರ್ಣಚಿತ್ರಕಲೆಯಲ್ಲಿ ಕಂಡುಬರುವ ಸಂಪ್ರದಾಯ, ಆಧುನಿಕ ಜನಪದ ಕಲೆಯಲ್ಲಿ ಮಾನವ ಆಕೃತಿಗಳು ಸದೃಢವಾದ ದೇಹವನ್ನು ಹಾಗೂ ಸುಂದರ ಮೈಕಟ್ಟು ಹೊಂದಿರುವ ಹಾಗೆ ಚಿತ್ರಿಸಿದ್ದಾರೆ.

ಸ್ತ್ರೀಯರ ಚಿತ್ರಗಳನ್ನು ಕೋಮಲವಾಗಿ ರಚಿಸಿದ್ದಾರೆ. ತಾಳಮಾನ ಹಾಗೂ ಪಾಶ್ಚಾತ್ಯ ಮಾನವ ದೇಹಶಾಸ್ತ್ರದ ಲೆಕ್ಕಚಾರ ಬಳಸಿ, ಮುಖವುದುಂಡಗೆ, ತುಂಬ ಮುಖದಂತೆ, ಗಂಡು, ಹೆಣ್ಣು, ಮಕ್ಕಳು, ಬಾಲಕರನ್ನು ಸುಂದರವಾಗಿ ಚಿತ್ರಿಸಿದ್ದಾರೆ. ದೇವರನ್ನು ಚಿತ್ರಿಸಿಸುವಾಗ ಸ್ವಲ್ಪ ದೊಡ್ಡದಾಗಿ ಎತ್ತರವಾಗಿ ಇನ್ನುಳಿದ ಆಕೃತಿಗಳ ಚಿತ್ರಗಳನ್ನು ಚಿಕ್ಕದಾಗಿ ಆನಂತರದನ್ನು ಕುಬ್ಜವಾಗಿ ಸುಂದರವಾಗಿ ರಚಿಸಿದ್ದಾರೆ. ಐತಿಹಾಸಿಕ ದೃಷ್ಟಿಯಿಂದ ಈ ಚಿತ್ರಗಳು ಮಹತ್ವಪೂರ್ಣವಾಗಿದೆ.

ಪ್ರಾಣಿ–ಪಕ್ಷಿ ಚಿತ್ರಗಳು : ಮೈಸೂರಿನ ಚಿತ್ರಕಲೆಯಲ್ಲಿ ಪ್ರಾಣಿ–ಪಕ್ಷಿಗಳ ಬಗ್ಗೆ ಸಂಪೂರ್ಣ ಜ್ಞಾನವುಳ್ಳವರಾಗಿದ್ದರು. ಅದನ್ನು ಇಲ್ಲಿನ ಎಲ್ಲಾ ಪ್ರಾಣಿ–ಪಕ್ಷಿಚಿತ್ರಗಳನ್ನು ನೋಡಿದರೆ ಅರಿವಿಗೆ ಬರುತ್ತದೆ. ಆನೆ, ಜಿಂಕೆ, ಅಶ್ವ, ಗೂಳಿ, ಹಾವು, ಇಲ್ಲಿ ಸಿಂಹ, ಹುಲಿ ಮುಂತಾದ ಪ್ರಾಣಿಗಳನಲ್ಲದೆ. ಪಕ್ಷಿಗಳಾದ

ನವಿಲು, ಗಿಳಿ, ಹಂಸ, ಪಾರಿವಾಳ, ಗರುಡ, ಕಾಲ್ಪನಿಕ ಗಂಡುಭೇರುಂಡು ಪಕ್ಷಿಯನ್ನು ಸಹ ಪ್ರಮಾಣ ಬದ್ಧವಾಗಿದ್ದು ಮತ್ತು ಸುಂದರವಾಗಿ ಚಿತ್ರಿಸಿದ್ದು ಇಲ್ಲಿನ ಶೈಲಿಯ ವೈಶಿಷ್ಟ್ಯವಾಗಿದೆ.

ನಕ್ಷಾಚಿತ್ರಗಳು : ಮೈಸೂರು ಜಿಲ್ಲೆಯ ಚಿತ್ರಕಲೆಯಲ್ಲಿ ಸಾಮಾನ್ಯವಾಗಿ ಹೊಯ್ಸಳ, ಪಾಶ್ಚಾತ್ಯರ ಅಲಂಕಾರಿಕ ನಕ್ಷೆಯ ವಿಧಾನಗಳು ಹೂ, ಬಳ್ಳಿ, ಎಲೆ, ಚಿಗುರು, ಮೊಗ್ಗು, ಕುಡಿ, ಬುಡ ಇತ್ಯಾದಿ ಭಾಗಗಳನ್ನು ಅಲಂಕಾರಿಕವಾಗಿ ಬಳಸಿಕೊಂಡು ಸುಂದರವಾಗಿ ಚಿತ್ರಿಸಿದ್ದಾರೆ. ಅದನ್ನು ದ್ವಿವರ್ಣ, ಏಕವರ್ಣದಲ್ಲಿ ತೋರಿಸಿ ಚಿತ್ರಕ್ಕೆ ಸೌಂದರ್ಯ ಹೆಚ್ಚಿಸಲು ಪ್ರಯತ್ನಿಸಿ ಸ್ಥಳೀಯ ಶೈಲಿಯನ್ನು ಚಿಕ್ಕದಾಗಿ ಚಿತ್ರಕಲೆಯ ಎಲ್ಲಾ ಪ್ರಕಾರ ಕಲೆಯಲ್ಲಿಯೂ ರಚಿಸಿದ್ದಾರೆ.

ಉಡುಗೆ ತೊಡುಗೆಗಳು : ಮೈಸೂರು ಜಿಲ್ಲೆಯ ಚಿತ್ರಗಳ ಕಲಾಕೃತಿಗಳಲ್ಲಿ ಎಲ್ಲಾಕಲಾ ಪ್ರಕಾರಗಳಲ್ಲಿ ವಸ್ತುವು ಬಹು ಅಲಂಕಾರಿಕೆ ತಕ್ಕಷ್ಟು ಹಾಗೂ ಕಣ್ಣಿಗೆ ಹಿತ ಮಿತವಾಗಿ. ಆಕೃತಿಗೆ ಆಡಚಣೆಯಾಗದ್ದಂತೆ ಆಧುನಿಕ, ಸಂಪ್ರದಾಯ ಆಕೃತಿಗೆ ತಕ್ಕಂತೆ ಒಪ್ಪುವ ಹಾಗೆ ಪುರುಷರಿಗೆ ಪಂಚೆ, ಲುಂಗಿ, ಅಂಗಿ, ಜುಬ್ಬಾವನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಸ್ತ್ರೀಯರ ಸೀರೆ–ಲಂಗ ರವಿಕೆ, ದಾವಣಿ, ಉಡುಪುಗಳನ್ನು ಅಲಂಕರಿಸಿ ತೋರಿಸಿದ್ದಾರೆ. ರಾಜ, ಸಾಮಾನ್ಯ, ವ್ಯಕ್ತಿ, ರಾಜನಪರಿವಾರ, ದೇವರು, ಹೀಗೆ ವಿಭಿನ್ನತೆ ಒಳಗೊಂಡಿದೆ. ಅದ್ಭುತವಾದ ಶೈಲಿಯಲ್ಲಿ ತೋರಿಸಿದ್ದಾರೆ. ಚಿತ್ರದಲ್ಲಿ ಒಂದು ಭಾಗವಾಗಿದೆ.

ಆಭರಣಗಳು : ಇಲ್ಲಿನ ಚಿತ್ರಕಲೆಯಲ್ಲಿ ಶ್ರೀಮಂತಿಕೆ ಗುರುತಾಗಿ ಮತ್ತು ಸಮೃದ್ಧಿಯ ಸಂಕೇತವಾಗಿಯೂ ಹಾಗೂ ಸೌಂದರ್ಯಕ್ಕಾಗಿಯೂ ಚಿತ್ರಗಳಲ್ಲಿ ಸೌಂದರ್ಯ ಹೆಚ್ಚಾಗಲೂ ಸಹ ಆಭರಣಗಳನ್ನು ತೋರಿಸಿದ್ದಾರೆ. ಎಲ್ಲಾ ಸಂಪ್ರದಾಯ ಕಲೆಯ ಆಕೃತಿಗಳಲ್ಲಿ ದೇವದೇವತೆಗಳು ಅರಸರನ್ನು ತೋರಿಸುವಾಗ ಹೆಚ್ಚಾಗಿಯೋ ಆಭರಣಗಳು ಇವೆ. ಆಭರಣಗಳ ಅನೇಕ ವಿವಿಧ ನಮೂನೆಗಳಲ್ಲಿ ಇರುವುದು ಕಂಡುಬರುತ್ತದೆ. ಈ ಚಿತ್ರಗಳಲ್ಲಿ ಆಗಿನ ಕಾಲದ ರಾಜರು, ಅವರ ಪರಿವಾರ, ದೇವರು ಹಾಗೂ ಶ್ರೀಸಾಮಾನ್ಯರು ಧರಿಸುತ್ತಿದ್ದ ಆಭರಣ ಹೇಗೆ ಇದ್ದವೆಂದೂ ತಿಳಿಯಬಹುದು.

ಅದರಲ್ಲಿ ಬೇರೆ ಶೈಲಿಯ ಚಿತ್ರಕಲಾಕೃತಿಗಳ ಎದುರು ಮೈಸೂರಿನ ಶೈಲಿಯೆಂದೇ ಸ್ಪಷ್ಟವಾಗಿ ಸಹ ಗುರುತಿಸುವ ಹಾಗೆ ಆಭರಣಗಳನ್ನು ಚಿತ್ರಿಸಿದ್ದಾರೆ.

ರಚನಾ, ವಿಧಾನ ಮತ್ತು ಮಾಧ್ಯಮ

ಮೈಸೂರಿನ ಜಿಲ್ಲೆಯಲ್ಲಿ ಕಂಡುಬರುವ ಚಿತ್ರಕಲೆಯಲ್ಲಿ ರಚನಾವಿಧಾನವು ತಮ್ಮದೆ ರೀತಿನೀತಿಗಳನ್ನು ಹೊಂದಿರುವುವು ಮತ್ತು ಹಿಂದಿನ ಪರಂಪರೆಯ ಕ್ರಮ, ಉಪಾಯವನ್ನು ಹೊಂದಿರುವುದು ಕಂಡುಬರುತ್ತದೆ. ಉದಾ: ಭಿತ್ತಿಚಿತ್ರಕಲೆಯಲ್ಲಿ ಒಣಭಿತ್ತಿ ಗಾರೆಯನ್ನು ಉಪಯೋಗಿಸಿ, ಗೋಡೆ, ಕಂಬ ಮುಂತಾದವುಗಳಲ್ಲಿ ಬಳಸಿ ಕೊಂಡಿದ್ದಾರೆ. ಹಾಗೇ ಹಸ್ತಪ್ರತಿಗೆ ತಾಳೆಗರಿ, ಕಾಗದ, ಚರ್ಮ, ಬಟ್ಟೆಯನ್ನು ಉಪಯೋಗಿಸಿರುವುದು ಕಂಡುಬರುತ್ತದೆ. ಆಧುನಿಕ ಕಲೆಯಲ್ಲಿಯೂ ವಿವಿಧ ರೀತಿಯ ನಿರ್ಮಾಣ, ತಂತ್ರ ನಿಯಮವನ್ನು ಪಾಲಿಸಿದ್ದಾರೆ. ಆಕೃತಿ ರಚನೆ, ಉಡುಗೆ, ವಸ್ತುಗಳ ರಚನೆ, ಪ್ರಕೃತಿ ರಚನೆಯ ವಿಧಾನ, ವರ್ಣಗಾರಿಕೆಯ ತಂತ್ರ ರಚನಾವಿಧಾನವು ಸಂಮೋಹವಾಗಿ ಕಲಾವಿದರು ಕೆಲಸಮಾಡಿದ್ದಾರೆ.

ಮಾಧ್ಯಮ : ಅಭಿವ್ಯಕ್ತಿಗೆ ಮಾಧ್ಯಮ ಮುಖ್ಯ ಭಾವಭಿವ್ಯಕ್ತಿಗೆ ರಸಾಸ್ವಾದನೆಗೆ ಹಾಗೂ ಸೌಂದರ್ಯ ಸ್ವಾದನೆಗೆ ಸಾಧನಮೂಲವೇ ಮಾಧ್ಯಮ. ಬೇರೆಬೇರೆ ಕಲೆಗಳ ಹುಟ್ಟು ಮತ್ತು ಅಸ್ತಿತ್ವಕೆ ಮೂಲ ಕಾರಣ ಮಾಧ್ಯಮಗಳು,

ಮಾಧ್ಯಮಗಳಿಂದಲೇ ಆಯಾಕಲೆಗಳಿಗೆ ವೈವಿಧ್ಯತೆ ಹಾಗೂ ಸ್ವಾತಂತ್ರ ಲಭಿಸಿದೆ.[೩] ಮೈಸೂರಿನ ಜಿಲ್ಲೆಯ ಚಿತ್ರಕಲೆಯ ಕಲಾಪ್ರಕಾರಗಳಲ್ಲಿ ಉತ್ತಮ ಮಾಧ್ಯಮಗಳನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಅಭಿವ್ಯಕ್ತಿಗೊಳಿಸುವ ರೀತಿಯಲ್ಲಿ ತಮ್ಮದೇ ಶೈಲಿಯಲ್ಲಿ ನಮ್ಮ ಕಲಾವಿದರು ತಮ್ಮ ಸಾಮರ್ಥ್ಯದಿಂದ ಸಾಧನೆಯನ್ನು ಮಾಡಿದ್ದಾರೆ. ಗೋಡೆ, ಕಲ್ಲು, ಗಾರೆ, ಕಂಬ, ಮೇಲ್ಛಾವಣಿ, ಕಾಗದ, ಚರ್ಮ, ಬಟ್ಟೆ, ಗಾಜು, ತಾಳೆಗರಿ, ಮರದಹಲಗೆ, ಪ್ಲಾಸ್ಟಿಕ್‌ಶೀಟ್, ಲೋಹದಹಾಳೆ, ಇತ್ಯಾದಿ ಮಾಧ್ಯಮಗಳಿಂದ ಇಲ್ಲಿ ಬಣ್ಣ ಬ್ರೇಶ್‌ಗಳಿಂದ ಚಿತ್ರರಚನೆಯ ಕಾರ್ಯ ನಿರ್ವಹಣೆಯಲ್ಲಿ ಬಳಸಿಕೊಂಡು ಸ್ವತಂತ್ರ ಶೈಲಿಯಲ್ಲಿ ಚಿತ್ರ ಕಲಾಕೃತಿಗಳನ್ನು ರಚಿಸಿದ್ದಾರೆ.

ಸಂಯೋಜನೆ : ಮೈಸೂರಿನ ಜಿಲ್ಲೆಯಲ್ಲಿ ಕಂಡುಬರುವ ಚಿತ್ರಕಲೆಯಲ್ಲಿ ಸಂಯೋಜಿಸಿರುವ ರೀತಿ ಬಹಳ ಅದ್ಭುತವಾಗಿ ಎಲ್ಲಾ ರೀತಿಯಲ್ಲಿಯೂ ಎಲ್ಲಾ ಭಾಗಗಳಲ್ಲಿ ಸಂಯೋಜನೆಗೊಳಿಸಿದ್ದಾರೆ. ಅಲ್ಲದೆ ವಿವಿಧ ಮಾಧ್ಯಮದಲ್ಲಿಯೂ ಸಹ ತಮ್ಮದೇ ಶೈಲಿಯಲ್ಲಿ ಸಂಯೋಜನೆಯ ಅಲಂಕಾರಿಕವಾಗಿ ಕೆಲವು ಕಡೆ ಹಿತಮಿತವಾಗಿ ಹೇರಳವಾಗಿಯೂ ಧಾರ್ಮಿಕತೆ, ಪ್ರಕೃತಿ ಮತ್ತು ಸಾಮಾಜಿಕತೆಯಿಂದ ಕೂಡಿದ ಸಂಯೋಜನೆಯನ್ನು ಮಾಡಿರುವುದು ಕಂಡುಬರುತ್ತದೆ.

ವರ್ಣಗಳ ಬಳಕೆ : ಮೈಸೂರು ಜಿಲ್ಲೆಯ ಚಿತ್ರಕಲೆಯಲ್ಲಿ ಹಲವು ಪ್ರಕಾರಗಳಲ್ಲಿದ್ದು ಅವುಗಳಲ್ಲಿ ವರ್ಣಬಳಕೆಯು ಬಹುಮುಖ್ಯ ಪಾತ್ರವಹಿಸುತ್ತದೆ. ಚಿತ್ರಕಲೆಗೆ ಬಣ್ಣವು ಶರೀರವಾಗಿದೆ. ಬಣ್ಣಗಳನ್ನು ಮೂಲವರ್ಣ, ದ್ವಿತೀಯವರ್ಗದ ಬಣ್ಣ, ಸೌಮ್ಯವರ್ಣ, ಪ್ರಖರಬಣ್ಣ, ದಟ್ಟವರ್ಣಗಳು, ತಿಳಿವರ್ಣ, ಸಂದರ್ಭಿತಬಣ್ಣ, ವಿರುದ್ಧ ಮೂಲವರ್ಣಗಳನ್ನು ಚಿತ್ರಕಲೆಯಲ್ಲಿ ಬಳಕೆ ಮಾಡುತ್ತಾರೆ. ಬಣ್ಣದ ಮೂಲವು ಸಸ್ಯ ಮೂಲ, ಖನಿಜಮೂಲ, ರಾಸಾಯನಿಕ ಮೂಲಗಳಿಂದ ಪಡೆದು ಇಲ್ಲಿ ಚಿತ್ರಕಲೆಗೆ ಬಳಸಿದ್ದಾರೆ. ಈ ಪ್ರಾಂತ್ಯದ ಚಿತ್ರಶೈಲಿಯ ಕಲಾಕೃತಿಗಳಲ್ಲಿ ಹೆಚ್ಚಾಗಿ ಸೌಮ್ಯವರ್ಣ, ತಿಳಿವರ್ಣ, ಸಂಬಂಧಿತ ವರ್ಣಗಳನ್ನು ಬಳಸಲಾಗಿದೆ. ಶಿಷ್ಟಪದ ಕಲೆಯಲ್ಲಿ ಚಪ್ಪಟೆಯಾಗಿ, ಆಧುನಿಕದಲ್ಲಿ ಮಿಶ್ರವಾಗಿ ಉಪಯೋಗಿಸಿದ್ದಾರೆ.

ರೇಖಾಲಾಲಿತ್ಯ : ಬಿಂದುವಿನ ಚಲನೆಯ ಪಾತ್ರವೇ ರೇಖೆ. ರೇಖೆಯಲ್ಲಿ ಹಲವು ವಿಧಗಳಿದ್ದು ನವಿರಾದ, ಸರಳ, ಓರೆಯಾದ ಇತ್ಯಾದಿ ರೇಖೆಗಳು ಇರುತ್ತದೆ. ರೇಖೆಗಳು ಚಿತ್ರಕಲೆಯ ಮೂಲಭೂತ ಬುನಾದಿಯಲ್ಲಿ ರೂಪಿಸುವ ಪ್ರಮುಖಸ್ಥಾನದಲ್ಲಿದೆ. ಎಂಬುದನ್ನು ಮೈಸೂರಿನಲ್ಲಿ ಕಂಡು ಬರುವ ಚಿತ್ರಕಲೆಯಲ್ಲಿಯೂ ಬಹುಮುಖ್ಯ ಪಾತ್ರವಹಿಸಿದೆ. ಇಲ್ಲಿನ ರೇಖಾ ಶೈಲಿಯ ವಿನ್ಯಾಸವು ಅದ್ಭುತವಾಗಿದೆ. ಆಕೃತಿಗಳ ಬಾಹ್ಯ ರೇಖೆಗಳು ಅತಿ ಸೂಕ್ಷ್ಮವಾಗಿದ್ದು ಕೌಶಲ್ಯದಿಂದ ಕೂಡಿದೆ. ಮೇಲ್ಮೈ ಗೆರೆಗಳು ಸ್ಪಷ್ಟವಾಗಿ ಖಚಿತವಾಗಿರುತ್ತದೆ. ಗಾತ್ರವನ್ನು ಬಾಹ್ಯವಾಗಿ ತೋರಿಸಲೆಂದು ಈ ಗೆರೆಯ ಒಳಅಂಚಿನಲ್ಲಿ ಮಾತ್ರ ಸ್ವಲ್ಪ ನವಿರಾಗಿ, ಹಗುರವಾಗಿ ಬಣ್ಣ ಹಾಕಿರುತ್ತಾರೆ.

ತಂತ್ರಗಾರಿಕೆ : ಚಿತ್ರರಚಿಸುವ ತಂತ್ರಗಾರಿಕೆಯನ್ನು ಆದಿಮಾನವನಿಂದ ಹಿಡಿದು ಆಧುನಿಕ ಮಾನವನವರೆಗೆ ಕಂಡುಬರುತ್ತದೆ. ಅದರಲ್ಲಿ ತನ್ನದೆಯಾದ ತಂತ್ರಗಾರಿಕೆಗಳ ಮೂಲಕ ಕಲಾವಿದ ಚಿತ್ರಗಳನ್ನು ಅಭಿವ್ಯಕ್ತಿ ಗೊಳಿಸಿದ್ದಾನೆ. ತಂತ್ರ ಎಂದರೆ ಪ್ರಯೋಗ, ವಿಧಾನ, ಧಾರ್ಮಿಕ, ಪ್ರದಾನ, ವಿಧಿ, ಶಾಸ್ತ್ರ, ತತ್ವ, ಸಿದ್ಧಾಂತ ಎಂದು ಅರ್ಥಬರುತ್ತದೆ. ತಂತ್ರಗಾರಿಕೆ ಎಂದರೆ ಆಂಗ್ಲ ಭಾಷೆಯಲ್ಲಿ ಟೆಕ್ನಿಕ್ ಎಂದು ಕರೆಯುತ್ತಾರೆ. ಕಲಾವಿದರ ಭಾಷೆಯಲ್ಲಿ ಮೈವಳಿಕೆ ಎಂದು ಕರೆಯುವುದುಂಟು ಮೈಸೂರಿನಲ್ಲಿ ಇರುವ ಚಿತ್ರಕಲೆಯಲ್ಲಿ

೩. ಡಾ.ಡಿ.ಎ.ಉಪಾಧ್ಯ, ಭಾರತೀಯ ಕಲೆಗಳ ನೆಲೆಗಳು, ಪು.ಸಂ_೮೬

ಶೈಲಿಯಲ್ಲಿ ಕಲಾವಿದರು ತಮ್ಮ ಚಿತ್ರರಚನೆ ವಿಧಾನಗಳಲ್ಲಿ ಬಳಸಿಕೊಂಡ ತಂತ್ರಗಾರಿಕೆಗಳು ಬಹು ಕೂತೂಹಲಕಾರಿಯಾಗಿದ್ದು. ಅತಿಸೂಕ್ಷ್ಮ ಕುಶಲಗಾರಿಕೆಯ ಕಾರ್ಯದಿಂದ ಹಿಡಿದು ಬಹುದೊಡ್ಡ ಕಲಾಕೃತಿಗಳ ಕುಶಲಗಾರಿಕೆ ಕಾರ್ಯವನ್ನು ಸಹ ಶೈಲಿಯಲ್ಲಿ ಅದ್ಭುತವಾಗಿ ನಿರ್ವಹಿಸಿದ್ದಾರೆ. ಇದರ ಜೊತೆಗೆ ಧಾರ್ಮಿಕ ಕ್ರಿಯಾವಿಧಿ, ವಿಧಾನ, ಸಂಪ್ರದಾಯಿಕ ಕಲೆಯನ್ನು ಚಿತ್ರಿಸಿದ್ದಾರೆ. ತಾಳಮಾನ, ಮಾನವದೇಹಶಾಸ್ತ್ರ ನಿಯಮ, ಟ್ರೇಸಿಂಗ್ ಪೇಪರ್, ಪಾಶ್ಚಾತ್ಯರಿಂದ ಯಂತ್ರಗಳು ಮತ್ತು ಉಪಕರಣಗಳ ತಂತ್ರಗಾರಿಕೆಯನ್ನು ಬಳಸಿದ್ದಾರೆ. ಆಧುನಿಕ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ.

ಇಲ್ಲಿನ ಬಣ್ಣವನ್ನು ಬಳಸುವ ತಂತ್ರಗಾರಿಕೆಯು ವಿಸ್ಮಯವಾದುದ್ದು. ನೇರಬಣ್ಣದಿಂದ ಆಕೃತಿಗಳ ತೋರಿಸುವಿಕೆ ಬಣ್ಣಗಳನ್ನು ಸೂಕ್ಷ್ಮತೆಯಿಂದ ಹಿಡಿದು ಅತಿಚಪ್ಪಟೆ ಲೇಪನಗಳಲ್ಲಿ ವಿಶೇಷವಾಗಿ ತಂತ್ರಗಾರಿಕೆಯನ್ನು ಬಳಸಿಕೊಂಡು ರಚಿಸುತ್ತಾರೆ. ಬಣ್ಣಗಳ ಹೊಂದಾಣಿಕೆಯ ನಿಜಕ್ಕೂ ಒಂದು ಕುತೂಹಲಕಾರಿಯಾದ ತಂತ್ರಗಾರಿಕೆಯನ್ನು ಬಳಸಿಕೊಂಡು ರಚಿಸುತ್ತಾರೆ. ಬಣ್ಣಗಳ ಹೊಂದಾಣಿಕೆಯಲ್ಲಿ ನಿಜಕ್ಕೂ ಒಂದು ಕುತೂಹಲಕಾರಿಯಾದ ತಂತ್ರಗಾರಿಕೆ ಗುಣ ಹೊಂದಿದ್ದಾರೆ. ಆಧುನಿಕತೆಯ ಚಿತ್ರಗಳಲ್ಲಿ ಸಹ ಮೈವಳಿಕೆ, ದ್ವಿ ಪರಿಣಾಮ, ತ್ರೀಪರಿಣಾಮಗಳು ಕಂಡುಬರುವ ಹಾಗೆ ಚಿತ್ರಿಸಿದ್ದಾರೆ. ಸೂಕ್ಷ್ಮತೆಯಿಂದ ಕೂಡಿದ್ದು ವೈವಿಧ್ಯಗಳಿಂದ ವರ್ಣ ಪ್ರಯೋಗವು ಅಮರವಾಗಿದೆ.

ಪ್ರಮುಖ ಲಕ್ಷಣಗಳು : ಮನಸ್ಸಿನ ನಿಗೂಢ ಭಾವನೆಗಳನ್ನು ಮಾಧ್ಯಮ ಮೂಲಕ ವರಪಡಿಸುವುದೇ ಕಲೆ ಮೈಸೂರಿನ ಕಲೆಯ ಪ್ರಧಾನತತ್ವ ಆಧ್ಯಾತ್ಮಿಕ ಸಾಧನೆಯಾಗಿದ್ದುಆಯಾಯ ಕಾಲದ ಧಾರ್ಮಿಕ ಮನೋಭಾವನೆಯನ್ನು ಪ್ರತಿಬಿಂಬಿಸುವಂತೆ ಮತ್ತು ಕಲಾ ವೈಖರಿಯು ಧಾರ್ಮಿಕ ಮತ್ತು ಶೈಕ್ಷಣಿಕ ಮನೋಭಾವನೆಯನ್ನು, ಪ್ರದರ್ಶಿಸುವ ಕಲೆಯುಳ್ಳದಾಗಿದೆ. ಭಾವೈಕ್ಯತೆ ಅದರಲ್ಲಿ ಸೌಂದರ್ಯ, ಆಧ್ಯಾತ್ಮಿಕ ಭಾವನೆ, ಆದರ್ಶವಾದ ಸಾಂಕೇತಿಕವಾದ, ನಿಸರ್ಗಸಹಜತೆ, ವಾಸ್ತವತೆ, ಸಾಂಸ್ಕೃತಿಕ ಪ್ರತಿಕೃತಿ, ಮನುಷತ್ವ ಮತ್ತು ಮಹತ್ತರವಾದ ಇವುಗಳಂತಹ ಪ್ರಮುಖ ಲಕ್ಷಣಗಳನ್ನು ಒಳಗೊಂಡಿದೆ.

ಸೌಂದರ್ಯವು ಕಲಾ ನಿರ್ಮಾಣದಲ್ಲಿ ಅನಿವಾರ್ಯವಾಗಿದೆ. ಮತ್ತು ಎಲ್ಲಾ ಕಲೆಯ ಪರಮ ಉದ್ದೇಶ ಇದೆಯಾಗಿದೆ. ಸೌಂದರ್ಯದ ಮಾನದಂಡ ಪ್ರಕೃತಿಯಿಂದ ಬಂದದ್ದು. ಮೈಸೂರಿನ ಜಿಲ್ಲೆಯ ಚಿತ್ರಕಲೆಯಲ್ಲಿ ಉತ್ತಮವಾಗಿ ಅರ್ಥಪೂರ್ಣವಾಗಿ ಸೃಷ್ಟಿಯಾಗಿದೆ. ಸಾಂಕೇತಿಕಅರ್ಥ, ಕಲ್ಪನೆ ಮತ್ತು ಆಧ್ಯಾತ್ಮಿಕ ಸಂದೇಶ ಸಾರುತ್ತಿದೆ. ಇಲ್ಲಿನ ಎಲ್ಲಾ ಕಲೆಯ ಪ್ರಕಾರದಲ್ಲಿ ಸೌಂದರ್ಯವನ್ನು ಕಾಣುವುದು. ಅದರ ಸಹಾಯದಿಂದ ತನ್ನೊಳಗಿರುವ ಸೌಂದರ್ಯದ ಸ್ಥಿತಿಯನ್ನು ಗುರುತಿಸಿಕೊಂಡು ಇಲ್ಲಿನ ಕಲಾವಿದರು ಅನುಭವಿಸುತ್ತಾರೆ

ಆಧ್ಯಾತ್ಮಿಕ ಭಾವನೆ : ಮೈಸೂರು ಚಿತ್ರಕಲೆಯಲ್ಲಿ ಆಧ್ಯಾತ್ಮಿಕ ನಿರೂಪಣೆಯೇ ಪ್ರಮುಖವಾಗಿದೆ. ಈ ವಿಚಾರವು ಎಲ್ಲಾ ಕಲೆಯ ಲಕ್ಷಣಗಳಲ್ಲಿ ಅತ್ಯಂತ ಉನ್ನತವಾದ ಹಾಗೂ ಬಹುಮುಖ್ಯವಾದ ಲಕ್ಷಣವಾಗಿದೆ. ಮತ್ತು ಇಲ್ಲಿನ ಧರ್ಮವಿಚಾರವು ಧಾರ್ಮಿಕ ಮಹತ್ವವನ್ನು ಆಧ್ಯಾತ್ಮಿಕ ದೋರಣೆಗಳಲ್ಲಿ ತೋರಿಸಿದ್ದಾರೆ.

ಆದರ್ಶಮಯ ಪೌರಾಣಿಕ ಪಾತ್ರಗಳ ಚಿತ್ರಗಳು

ಮೈಸೂರಿನ ಚಿತ್ರಕಲೆಯಲ್ಲಿ ಆದರ್ಶವಾದ ಈ ಲಕ್ಷಣವು ಇದೆ. ಮತ್ತೊಂದು ಭಾವನೆಯಾಗಿದೆ. ಆದರ್ಶಗುಣಗಳು ರಾಮಾಯಣ, ಮಹಾಭಾರತ, ಪುರಾಣ, ಭಾಗವತ, ಗ್ರಂಥಗಳೇ ಆದರ್ಶವಾಗಿದೆ. ಹಾಗೇ ಕೆಲವನ್ನು ಸಾಂಕೇತಿಕವಾಗಿ ತೋರಿಸಿದ್ದಾರೆ. ಉದಾ:ಕಮಲ ಹೂವನ್ನು ಕೈಯಲ್ಲಿ ಹಿಡಿದಿರುವಂತೆ

ತೋರಿಸಿ ಸಮೃದ್ಧಿ ಮತ್ತು ಮಂಗಳ ಗುಣಗಳನ್ನು ಕಲಾಕಾರ ಸಾಂಕೇತಿಕವಾಗಿ ಹಾಗೂ ಆದರ್ಶವನ್ನು ಇನ್ನೂ ಹಲವಾರು ರೀತಿಯಲ್ಲಿ ಕಲಾವಿದರು ವ್ಯಕ್ತಪಡಿಸಿದ್ದಾರೆ.

ಸಾಂಕೇತಿಕ ಲಕ್ಷಣಗಳು : ಮೈಸೂರಿನ ಚಿತ್ರಕಲೆಯ ನಿರ್ಮಾಣದಲ್ಲಿ ಸಾಂಕೇತಿಕ ನಿರೂಪಣೆಯು ಒಂದು ಪ್ರಮುಖವಾದ ಗುಣಲಕ್ಷಣವಾಗಿದೆ. ಸಾಂಕೇತಿಕವು ವೈಶಿಷ್ಟ ಇಂದ್ರಿಯ ಸೌಂದರ್ಯ, ಕಲ್ಪನಾ ಸೌಂದರ್ಯ, ಮಾನಸಿಕ ಬುದ್ಧಿವಂತಿಕೆ ನಿರೂಪಣೆಯಾಗಿದೆ. ಅಂದರೆ ಕಲಾಶೈಲಿಯ ಸೃಷ್ಟಿಯೂ ತನ್ನದೇ ಆದ ಲಕ್ಷಣದಲ್ಲಿ ಸಾಂಕೇತಿಕತೆವನ್ನು ವ್ಯಕ್ತಪಡಿಸುತ್ತದೆ.

ನಿಸರ್ಗ ಸಹಜತೆ : ಮೈಸೂರಿನ ಚಿತ್ರಕಲೆಯಲ್ಲಿ ನಿಸರ್ಗದ ಪಾತ್ರಗಳು ಅತ್ಯಂತ ಮುಖ್ಯವಾದವುಗಳಲ್ಲಿ ಪ್ರಾಣಿ, ಪಕ್ಷಿ, ಸಸ್ಯ, ಮರ, ಮನುಷ್ಯ ಇವರುಗಳಲ್ಲಿ ಹರಿಯುವ ಚೈತನ್ಯಶಕ್ತಿಯನ್ನು ತನ್ನ ಕೃತಿಯಲ್ಲಿ ಮೂಡಿಸಿರುತ್ತಾನೆ. ಪ್ರಕೃತಿಯಿಂದ ಸ್ಫೂರ್ತಿಯನ್ನು ಪಡೆದು ಬದುಕಿನ ಸಹಜತೆಗಳನ್ನು ತನ್ನ ಪ್ರತಿಭೆಯ ಕನ್ನಡಿಯಲ್ಲಿ ಹಿಡಿದು ನೈಜವಾದ, ಭಿನ್ನವಾದ ಕಲಾಪ್ರಪಂಚವನ್ನು ಇಲ್ಲಿನ ಚಿತ್ರಕಲಾಕೃತಿಗಳ ನಿರ್ಮಾಣ ಮಾಡುತ್ತಾನೆ.

ವಾಸ್ತವತೆ : ಮೈಸೂರು ಜಿಲ್ಲೆಯ ಚಿತ್ರಕಲೆಯಲ್ಲಿ ವಾಸ್ತವವಾದ ಲಕ್ಷಣವನ್ನು ಕಾಣಬಹುದು. ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟ ವಾಸ್ತವವಾದುದನ್ನು ಇಲ್ಲಿನ ಕಲಾವಿದರು ನಿರ್ಮಿಸಿರುವುದನ್ನು ಕಾಣಬಹುದು. ಜನಜೀವನದ ಹಾವ-ಭಾವ, ಸೌಂದರ್ಯ-ಪ್ರಜ್ಞೆ, ಮತ್ತು ಸ್ತ್ರೀಯರ ವಿವಿಧ ಭಂಗಿಗಳು, ಗಿಣಿ, ಹೂಬಳ್ಳಿ, ಪ್ರಾಣಿ, ಪಕ್ಷಿ ಇನ್ನೂ ಇತ್ಯಾದಿಗಳು ವಾಸ್ತವ ಅಂಶವನ್ನು ವ್ಯಕ್ತಪಡಿಸುತ್ತದೆ. ಮೈಸೂರಿನ ಚಿತ್ರಕಲೆಯಲ್ಲಿ ಸರಳವಾದ ವಾಸ್ತವಿಕ ವಿವರಣೆಯನ್ನು ಅನುಕರಣಕಾರನ ಜೀವನಕ್ಕೆ ಅನುಗುಣವಾಗಿ ನಿರ್ಮಿತವಾಗಿರುವುದು, ದೇಶಿಯ ಕಲೆಯ ವಿಶೇಷವಾಗಿದೆ.

ಸಾಂಸ್ಕೃತಿಕ ಪ್ರತಿಕೃತಿ ; ಮೈಸೂರಿನ ಚಿತ್ರಕಲೆಯಲ್ಲಿ ಮಾನವ ಪ್ರಗತಿಯಲ್ಲಿ ಸಂಸ್ಕೃತಿಯು ಜೀವಸ್ವರೂಪ ಇಚ್ಛೆ, ಜ್ಞಾನ ಮತ್ತು ಕ್ರಿಯಾ ಶಕ್ತಿಗಳ ತಾದಾತ್ಮವನ್ನು ಪ್ರದರ್ಶಿಸುತ್ತದೆ. ಸಂಸ್ಕೃತಿಯ ಕಾರ್ಯ ಪ್ರವೃತ್ತರಾಗಲು ಕಲೆಯು ಸಹಾಯಕವಾಗಿದೆ. ಆಧ್ಯಾತ್ಮಿಕ ವಿವೇಚನೆಗೆ ಅಧಿಕ ಪ್ರಾಶಸ್ತ್ಯವಿದ್ದರೂ ಸನಾತನ ಪರಂಪರೆಯಲ್ಲಿ ಪ್ರಕೃತಿ ಆರಾಧನೆಯ ಹಿನ್ನೆಲೆಯಲ್ಲಿಯೇ ಧರ್ಮ ಉದಯಿಸಿದ್ದು. ಅದು ಸಂಸ್ಕೃತಿ, ಧರ್ಮ, ನೀತಿ ಮುಂತಾದ ಅಂಶಗಳನ್ನು ಸೃಷ್ಟಿಸಿದೆ. ಈ ಹಿನ್ನೆಲೆಯಲ್ಲಿ ಕಲೆಯು ಉದಯಿಸಿದ್ದು. ಅದು ಆಸೆ, ಆಕಾಂಕ್ಷೆ ಕರ್ಮಾಚರಣೆ, ಪ್ರಾಪಂಚಿಕಸುಖ ಇವುಗಳೂ ಕೂಡ ಸೃಷ್ಟಿಗೊಂಡಿದೆ. ಮೈಸೂರಿನ ಸಂಸ್ಕೃತಿಯೂ ಇತರ ಸಂಸ್ಕೃತಿಗಳಂತೆ ಅಪೂರ್ಣವಾಗಿಲ್ಲದೆ ಕಲಾಪೂರ್ಣವಾಗಿ ಸುಂದರವಾಗಿ ಇಂದಿಗೂ ಪರಂಪರೆಯಲ್ಲಿ ಜೀವಂತವಾಗಿದೆ. ಮೈಸೂರು ಕಲೆ ಪ್ರಕೃತಿ ಹಾಗೂ ಸಂಸ್ಕೃತಿಗಳೆರಡರ ಸಮ್ಮಿಲನದ ಸಂಕೇತವಾಗಿ ಚಿತ್ರಗಳಲ್ಲಿ ಸಾಂಸ್ಕೃತಿಕ ಪ್ರತಿಕೃತಿಯೇ ಆಗಿದೆ.

ಭಾವೈಕ್ಯತೆ ; ಇಲ್ಲಿನ ಚಿತ್ರಕಲೆಯಲ್ಲಿ ಏಕ ಸ್ವಭಾವನೆಯ ಮೂಲವಾಗಿದೆ. ಅದರಲ್ಲಿ ಭಾವೈಕ್ಯತೆಯನ್ನು ಕಂಡು ಕೊಳ್ಳಬಹುದು. ಇಲ್ಲಿನ ಅರಸರ ಮತ್ತು ಕಲಾವಿದರ ಅಭಿರುಚಿಗೆ ತಕ್ಕಂತೆ ಒಂದು ಮೂಲ ಭಾವವನ್ನು ಕಾಣುತ್ತೇವೆ. ಆಧ್ಯಾತ್ಮಿಕತೆಯ ಭಾವೈಕ್ಯತೆಯನ್ನು ಇಲ್ಲಿನ ಚಿತ್ರಕಲೆಯಲ್ಲಿ ಕಾಣುತ್ತೆವೆ.

ಒಂದು ಉದ್ದೇಶದ ಮೇಲೆ ನಿರ್ಮಾಣಗೊಂಡ ಚಿತ್ರಗಳಲ್ಲಿ ಅನೇಕ ಭಾವಗಳು ಇವೆ. ಈ ರೀತಿಯ ಚಿತ್ರಕಲೆಯಲ್ಲಿಯೂ ವಿವಿಧತೆಯಲ್ಲಿ ಏಕತೆಯನ್ನು ಸಾರುವ ಕಲೆಯನ್ನು ಈ ಜಿಲ್ಲೆಯ ಕಲೆಯಲ್ಲಿ ಕಾಣಬಹುದು. ಮೈಸೂರು ಕಲೆಯಲ್ಲಿ ಸರ್ವಧರ್ಮಸಮನ್ವತೆಯನ್ನು ಭಾವೈಕ್ಯತೆಯನ್ನು ಕಾಣಬಹುದಾಗಿದೆ.

ಮನುಷ್ಯತ್ವ : ಮೈಸೂರು ಚಿತ್ರಕಲೆಯಲ್ಲಿ ಮಾನವನಲ್ಲಿರುವ ಬಹುದಾದ ಭಾವನೆಗಳು ಮಾನಸಿಕ ಗುಣಗಳು, ದೈಹಿಕಶಕ್ತಿ, ವೈಯಕ್ತಿಕ ವಾಸ್ತವಿಕ ಗುಣಗಳು ಕಂಡುಬರುತ್ತದೆ. ಹೃದಯವಂತಿಕೆಯನ್ನು ನಾವು ಮೈಸೂರಿನ ಕಲಾನಿರ್ಮಾಣದಲ್ಲಿ ಗುರುತಿಸಬಹುದು. ದಿನ ನಿತ್ಯದ ಜೀವನವ್ಯವಸ್ಥೆಯು ಇಲ್ಲಿ ವ್ಯಕ್ತವಾಗುತ್ತದೆ.

ಈ ಮೇಲಿನಂತೆ ಮೈಸೂರು ಜಿಲ್ಲೆಯ ಚಿತ್ರಕಲೆಯಲ್ಲಿ ಪ್ರಮುಖ ಲಕ್ಷಣಗಳು ನೋಡಬಹುದು. ಒಂದು ಉದ್ದೇಶದ ಮೇಲೆ ಅನೇಕ ಭಾವಗಳ ಕಲಾರೂಪವನ್ನು ನಾವು ಕಾಣಬಹುದು. ಹೆಚ್ಚಾಗಿ ನಾವು ಇಲ್ಲಿ ಸಾಮರಸ್ಯವನ್ನು ಕಾಣಬಹುದು. ಈ ಎಲ್ಲಾ ಲಕ್ಷಣಗಳು ಒಂದೆಡೆ ಒಂದು ಪಕ್ಕದಲ್ಲಿ ಒಳನಾಡಿಗಳಾಗಿ ಬೆಳೆದು ಬಂದದ್ದು ತಿಳಿಯುತ್ತದೆ.

~~~~~~~~~~~~~~oo~~~~~~~~~~~~~
~~~~~~~~~~~~~~

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ: ಎಂಟು

ಸಮಾರೋಪ

ಒಂದು ಕಾಲದಲ್ಲಿ ಮೈಸೂರು ಜಿಲ್ಲೆಯು ಲಲಿತಕಲೆಗಳ ತವರೂರಾಗಿ, ಪ್ರಾಚೀನ ಐತಿಹಾಸಿಕ ನಾಡಾಗಿ, ಪ್ರಸಿದ್ಧಿಯಾದ ಮಹಿಷಾಪುರವು ಧಾರ್ಮಿಕ ಹಿನ್ನೆಲೆಯ ಆರಾಧನಾ ಪುಣ್ಯಸ್ಥಳವಾಗಿ, ಸಾಂಸ್ಕೃತಿಕ ಕೇಂದ್ರವಾಗಿ, ಹಲವೂ ಕಲೆಗಳ ನೆಲೆಯಾಗಿ, ಹಿಂದಿನ ಕಾಲದಿಂದ ಈ ಆಧುನಿಕ ಕಾಲದಲ್ಲೂ ಉತ್ತಮ ಚಿತ್ರಕಲೆ ಮೂಡಿಬರುತ್ತಿರುವ ಪ್ರಮುಖ ಕಲಾ ಬೆಳವಣಿಗೆಯ ಕೇಂದ್ರವಾಗಿದೆ.

ಮೈಸೂರು ಜಿಲ್ಲೆಯಲ್ಲಿ ಆದಿಮಾನವ ನೆಲೆಗಳು ಹಾಗೂ ಕಲೆಯ ಕುರುಹುಗಳು ಪತ್ತೆಯಾಗಿದೆ. ಪುರಾಣಗಳಲ್ಲಿ ಪ್ರಸಿದ್ಧ ಕ್ಷೇತ್ರವಾಗಿದ್ದು, ಶೈವ, ವೈಷ್ಣವ, ಬೌದ್ಧ, ಜೈನ, ಮುಸ್ಲಿಂ, ಕ್ರೈಸ್ತ ಚಿತ್ರಕಲೆಯು ಹೇರಳವಾಗಿದ್ದು. ಮಠ, ಮಂದಿರ, ದೇವಸ್ಥಾನ, ಮಹಲ್‌ಗಳಲ್ಲಿ ಮತ್ತು ಚರ್ಚ್‌ನಲ್ಲೂ ಕಲೆ ಇದೆ. ಐತಿಹಾಸಿಕವಾಗಿಯೂ ಅನೇಕ ರಾಜಮಹಾರಾಜರ ಪ್ರೋತ್ಸಾಹ ಕೊಡುಗೆಗಳು ಇವೆ. ಇದರಲ್ಲಿ ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ, ಮೈಸೂರು ಒಡೆಯರು ಮುಸ್ಲಿಂ ಅರಸರು, ಅಲ್ಲದೆ ಬ್ರಿಟಿಷ್ ಅಧಿಕಾರಿಗಳೂ ಸಹ ಅನೇಕ ಕೊಡುಗೆಗಳನ್ನು ಲಲಿತಕಲೆಗಳ ಅನೇಕ ಪ್ರಕಾರಗಳಿಗೆ ನೀಡಿದ್ದಾರೆ. ಹಾಗಾಗಿ ಹಲವು ಬಗೆಯ ಚಿತ್ರಕಲೆಗಳು ಇಲ್ಲಿ ಕಂಡುಬರುತ್ತವೆ.

ಈ ಪ್ರಾಂತ್ಯದಲ್ಲಿ ಕಾಲಕಾಲಕ್ಕೆ ಚಿತ್ರಕಲೆಯ ಮೇಲಾದ ಪ್ರಭಾವ ಹಾಗೂ ಪ್ರೇರಣೆಗೊಂಡು ಅನೇಕ ಬದಲಾವಣೆ ಅಂಶಗಳು ಕಂಡುಬರುತ್ತದೆ. ಚಿತ್ರಕಲಾ ಕೃತಿಯಲ್ಲಿ ರಾಮಾಯಣ, ಮಹಾಭಾರತ, ಪುರಾಣಗಳಲ್ಲಷ್ಟೇ ಅಲ್ಲದೆ ಅಲಂಕಾರಿಕ, ಸಾಮಾಜಿಕ ವಿಷಯಗಳಲ್ಲದೆ ಹಲವಾರು ನಮೂನೆಗಳ ಚಿತ್ರಗಳು ರಚನೆಯಾಗಿರುತ್ತದೆ. ಅವುಗಳನ್ನು ಅಧ್ಯಯನ ಮಾಡಲಾಗಿದೆ.

ಒಂದನೆಯ ಅಧ್ಯಾಯ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಕುರಿತಾಗಿದ್ದು. ಪ್ರಸ್ತುತ ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಬಗ್ಗೆ ಚರ್ಚಿಸಲಾಗಿದೆ. ಈ ಅಧ್ಯಾಯದಲ್ಲಿ ಸಂಶೋಧನೆ ಕೈಗೊಳ್ಳುವ ಸ್ಪಷ್ಟ ಉದ್ದೇಶವನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಮತ್ತು ಈ ಸಂಶೋಧನ ಕಿರುಪ್ರಬಂಧಕ್ಕೆ ಒಂದು ಗಟ್ಟಿಯಾದ,

ಸ್ವರೂಪವನ್ನು ಕಟ್ಟಿ ಕೊಡುವ ಪ್ರಯತ್ನ ಈ ಅಧ್ಯಯನದ ಸ್ವರೂಪದಲ್ಲಿ ಸಮೀಕ್ಷಿಸಲಾಗಿದೆ. ಹಾಗೆಯೇ ಅಧ್ಯಯನಕ್ಕೆ ಬಳಸಿಕೊಂಡು ಸಂಶೋಧನೆಯ ವ್ಯಾಪ್ತಿ ಹಾಗೂ ಇದುವರೆಗೆ ನಡೆದ ಅಧ್ಯಾಯನದ ಸಮೀಕ್ಷೆ ಹಾಗೂ ಅಧ್ಯಯನದ ಕುರಿತು ವಿವರಗಳನ್ನು ಒಂದನೆಯ ಅಧ್ಯಾಯದಲ್ಲಿ ನೀಡಲಾಗಿದೆ.

ಎರಡನೆಯ ಅಧ್ಯಾಯ ಮೈಸೂರು ಜಿಲ್ಲೆಯ ಸಾಂಸ್ಕೃತಿಕಪರಿಸರ, ಲಲಿತಕಲೆಗಳ ಬೆಳವಣಿಗೆಯ ನೆಲೆ ಹಿನ್ನೆಲೆಯ ಕುರಿತಾಗಿದ್ದು. ಪ್ರಸ್ತುತ ಈ ಅಧ್ಯಾಯದಲ್ಲಿ ಮೈಸೂರು ಜಿಲ್ಲೆಯ ಸಾಂಸ್ಕೃತಿಕ ಪರಿಸರ, ಲಲಿತಕಲೆಗಳಿಗೆ ಸಿಕ್ಕ ಪ್ರೋತ್ಸಾಹ ಮತ್ತು ಚಿತ್ರಕಲೆಯ ಪರಂಪರಾಗತ ಬೆಳವಣಿಗೆ, ಆದಿಮಾನವ ಐತಿಹಾಸಿಕ, ಚಾರಿತ್ರಿಕ, ಧಾರ್ಮಿಕ ಮತ್ತು ಸಾಂಸ್ಕೃತಿ ನೆಲೆ–ಹಿನ್ನೆಲೆಯನ್ನು ಕುರಿತು ಸ್ಥೂಲವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಅಲ್ಲದೆ ಲಲಿತಕಲೆಗಳಲ್ಲಿ ಮುಖ್ಯವಾಗಿ ಚಿತ್ರಕಲೆ ಬೆಳೆದು ಬಂದ ಬಗೆಯನ್ನು ಸ್ಥೂಲವಾಗಿ ಗಮನಿಸಿ ಅಧ್ಯಯನಕ್ಕೆ ಪೂರಕವಾದ ಇತಿಹಾಸಿಕ ನೆಲೆಯನ್ನು ಅಭ್ಯಾಸ ಮಾಡಲಾಗಿದೆ. ಮೈಸೂರು ಅರಸರು ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಈ ಎರಡನೆಯ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಮೂರನೆಯ ಅಧ್ಯಾಯ ಮೈಸೂರು ಜಿಲ್ಲೆಯ ಭಿತ್ತಿಚಿತ್ರಕಲೆಯ ಕುರಿತಾಗಿದ್ದು. ಈ ಅಧ್ಯಾಯದಲ್ಲಿ ಮೈಸೂರು ಜಿಲ್ಲೆಯಲ್ಲಿ ಭಿತ್ತಿಚಿತ್ರಕಲೆ ಒಂದು ಪ್ರಾಚೀನ ಪರಂಪರೆಯಾಗಿದ್ದು. ಈ ಜಿಲ್ಲೆಯಲ್ಲಿ ಕಂಡು ಬರತಕ್ಕಂತಹ ರಾಜಾಶ್ರಯ ಮತ್ತು ಪರಿವಾರದವರು ಪ್ರೋತ್ಸಾಹಿಸಿ ಬೆಳಸಿದ ಭಿತ್ತಿಚಿತ್ರಕಲೆಯ ಶ್ರೀಮಂತಪರಂಪರೆ. ಐತಿಹಾಸಿಕ ಧಾರ್ಮಿಕ ಹಿನ್ನೆಲೆಗೆ ಸಂಬಂಧ ಪಟ್ಟ ಭಿತ್ತಿಚಿತ್ರಗಳ ನೆಲೆಗಳಾದ ಅರಮನೆ, ದೇವಾಲಯ, ಚರ್ಚ್, ಮಠಗಳಲ್ಲಿ ಬಳಸಿಕೊಂಡ ವಸ್ತುವಿಷಯ, ರಚನಾ ವಿಧಿವಿಧಾನ ಮತ್ತು ಬಳಸಿದ ಪರಿಕರಗಳು, ಪ್ರೋತ್ಸಾಹದ ಕೈಗಳ ಕುರಿತು ಮತ್ತು ಕಲಾವಿದರುಗಳು ನಡೆಸಿದ ಅಧ್ಯಯನವನ್ನು ಇಲ್ಲಿ ಹೇಳಲಾಗಿದೆ. ಜೊತೆಗೆ ಆಧುನಿಕ ಭಿತ್ತಿಚಿತ್ರಗಳ ನೆಲೆ–ಹಿನ್ನಲೆಗಳನ್ನು ಹಾಗೂ ವಸ್ತುವಿಷಯ, ರಚನಾವಿಧಾನ, ತಂತ್ರಗಳ ಕುರಿತು ಮೂರನೆಯ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯ ಮೈಸೂರು ಜಿಲ್ಲೆಯ ಹಸ್ತಪ್ರತಿ ಚಿತ್ರಕಲೆಯ ಕುರಿತಾಗಿದ್ದು. ಪ್ರಸ್ತುತ ಈ ಅಧ್ಯಾಯದಲ್ಲಿ ಮೈಸೂರು ಜಿಲ್ಲೆಯಲ್ಲಿ ಹಸ್ತಪ್ರತಿ ಚಿತ್ರಕಲೆಯು ಒಂದು ಪರಂಪರೆಯಾಗಿದ್ದು. ಈ ಜಿಲ್ಲೆಯ ಸುತ್ತಮುತ್ತ ನೆಲೆಗಳಲ್ಲಿ ಸಂಗ್ರಹವಾಗಿರುವ ಹಸ್ತಪ್ರತಿಗಳು ವಿವಿಧ ಹಸ್ತಪ್ರತಿ ಭಂಡಾರ ಮತ್ತು ವಸ್ತುಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಂತಹ ಹಸ್ತಪ್ರತಿಗಳಿಲ್ಲರುವ ಚಿತ್ರಕಲೆ ಕುರಿತು ಅಧ್ಯಯನ ನಡೆಸಲಾಗಿದೆ. ವಿವಿಧ ಮಾಧ್ಯಮ ಹಾಗೂ ಪರಿಕರಗಳನ್ನು ಕುರಿತು ಗಮನಹರಿಸಲಾಗಿದೂ ಅವುಗಳಲ್ಲಿ ಇರುವ ವಸ್ತುವಿಷಯ, ರಚನಾವಿಧಾನ, ಬಣ್ಣಗಳ ಬಳಕೆ, ಹಾಗೂ ಚರಿತ್ರೆಯಲ್ಲಿ ಈ ಕಲೆಗೆ ಸಿಕ್ಕ ಪ್ರೋತ್ಸಾಹ ಕುರಿತು ಸಹ ವಿವರ ನೀಡಲಾಗಿದೆ. ವಿಶೇಷವಾಗಿ ಆಧುನಿಕ ಹಸ್ತಪ್ರತಿಗಳನ್ನು ಸಹ ಗಣನೆಗೆ ತೆಗದುಕೊಂಡು ಗಮನಿಸಿ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ.

ಐದನೆಯ ಅಧ್ಯಾಯ ಮೈಸೂರು ಜಿಲ್ಲೆಯ ಗಂಜೀಫಾ ಚಿತ್ರಕಲೆಯ ಕುರಿತಾಗಿದ್ದು. ಪ್ರಸ್ತುತ ಈ ಅಧ್ಯಾಯದಲ್ಲಿ ಮೈಸೂರು ಜಿಲ್ಲೆಯಲ್ಲಿ ಗಂಜೀಫಾ ಚಿತ್ರಕಲೆಯು ಒಂದು ವಿಶಿಷ್ಟ ಪ್ರಕಾರದ ಕಲೆಯಾಗಿ ಬೆಳೆದು ಬಂದಿದ್ದು, ಐತಿಹಾಸಿಕ ಕಾಲದಿಂದಲೂ ಭಾರತದಲ್ಲಿ ತುಂಬ ಪ್ರಸಿದ್ಧಿ ಕಂಡ ಒಳಾಂಗಣ ಕ್ರೀಡೆಯಾಗಿದೆ. ಮೈಸೂರು ಭಾಗದಲ್ಲಿ ಈ ಕಲೆಗೆ ಕಲಾವಿದರುಗಳಿಗೆ ರಾಜಾಶ್ರಯ ದೊರಕಿತ್ತು. ಧಾರ್ಮಿಕ ಮತ್ತು ಮನರಂಜನೆಯ ಹಿನ್ನೆಲೆಯಿಂದ ಈ ಕಲೆ ಇಲ್ಲಿ ಬೆಳೆದಿದೆ. ಇದರ ವಸ್ತುವಿಷಯ, ರಚನಾ ವಿಧಿ–ವಿಧಾನ ಪರಿಕರಗಳಲ್ಲದೆ, ಆಧುನಿಕತೆಯ ರಚನಾವಿಧಾನ, ಲಕ್ಷಣಗಳು ಮತ್ತು ಇತ್ತೀಚಿನ ಈ ಕಲೆಯ ಸ್ಥಿತಿ–ಗತಿಯ ಬಗ್ಗೆಯೂ ಸಹ ಈ ಆರನೆಯದಲ್ಲಿ ಅಧ್ಯಾಯದಲ್ಲಿ ಪ್ರಸ್ತುತ ಪಡಿಸಲಾಗಿದೆ.

ಆರನೆಯ ಅಧ್ಯಾಯ ಮೈಸೂರು ಜಿಲ್ಲೆಯ ಗಾಜಿನ ಚಿತ್ರಕಲೆಯ ಕುರಿತಾಗಿದ್ದು. ಪ್ರಸ್ತುತ ಈ ಅಧ್ಯಾಯದಲ್ಲಿ ಮೈಸೂರು ಜಿಲ್ಲೆಯಲ್ಲಿ ಗಾಜಿನ ಮೇಲಿನ ಚಿತ್ರಕಲೆಯ ಬೆಳೆದು ಬಂದಿದ್ದನ್ನು ಹಾಗೂ ಗಾಜಿನ ಚಿತ್ರಕಲೆಯ ಪ್ರಕಾರವನ್ನು, ರಾಜಾಶ್ರಯ ಮತ್ತು ಶ್ರೀಮಂತರ ಪ್ರೋತ್ಸಾಹದಿಂದ ರಚಿತವಾದ ಚಿತ್ರಗಳಲ್ಲದೆ. ವಸ್ತುವಿಷಯ ಮಾಧ್ಯಮದ ಹಿನ್ನೆಲೆ, ರಚನಾ ವಿಧಿ-ವಿಧಾನ, ತಂತ್ರಗಾರಿಕೆ, ಕಲಾಕೃತಿ ಸಂಗ್ರಹಗಳ ಮುಂತಾದವುಗಳ ಕುರಿತು ವಿವೇಚಿಸಲಾಗಿದೆ. ಈ ಕಲೆಯ ಪ್ರಮುಖ ನೆಲೆಗಳಾದ ಅರಮನೆ, ಮ್ಯೂಸಿಯಂ, ಸಂಗ್ರಹಕಾರರು, ಕಲ್ಯಾಣಮಂಟಪ ಮಹಲ್‌ಗಳಲ್ಲಿ ಇರುವುದನ್ನು ಗುರಿತಿಸಲಾಗಿದೆ. ಆಧುನಿಕತೆಯಲ್ಲಿ ಈ ಚಿತ್ರಕಲೆಯು ಒಂದು ಉದ್ಯಮವಾಗಿ ಬೆಳೆಯುತ್ತಿದೆ ಅದನ್ನು ಸಹ ಗುರುತಿಸಿ ಅಧ್ಯಯನ ನಡೆಸಲಾಗಿದೆ.

ಏಳನೆಯ ಅಧ್ಯಾಯ ಮೈಸೂರು ಜಿಲ್ಲೆಯ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ ಶೈಲಿ ಮತ್ತು ಪ್ರಮುಖ ಲಕ್ಷಣಗಳ ಕುರಿತಾಗಿದ್ದು. ಈ ಅಧ್ಯಾಯದಲ್ಲಿ ಮೈಸೂರು ಜಿಲ್ಲೆಯ ಚಿತ್ರಕಲೆಯ ಮೇಲಾದ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಿನ್ನೆಲೆಯ ದಾಳಿಯಿಂದ ಇಲ್ಲಿನ ಚಿತ್ರಕಲೆಯ ಮೇಲೆ ಅನೇಕ ಪ್ರಭಾವ ಪ್ರೇರಣೆಗಳಾಗಿದೆ. ಅದರಲ್ಲಿ ಮುಸ್ಲಿಂ, ಕ್ರೈಸ್ತ, ಮೊಗಲ್, ವಿಜಯನಗರದ ಪ್ರಭಾವ ಪ್ರೇರಣೆಗಳು ಮುಖ್ಯವಾಗಿದೆ. ಅದರಲ್ಲಿಯೂ ದೇಶಿತನವನ್ನು ಮೈಗೂಡಿಸಿಕೊಂಡು ಬಂದ ಈ ಚಿತ್ರಕಲೆಯಲ್ಲಿ ತನ್ನದೆಯಾದ ಶೈಲಿಯದ್ದು ಕೆಲವು ಪ್ರಮುಖ ಲಕ್ಷಣಗಳನ್ನು ಹೊಂದಿದ್ದು. ಅವುಗಳನ್ನು ಈ ಒಂಭತ್ತನೆಯ ಅಧ್ಯಾಯನದಲ್ಲಿ ವಿವೇಚಿಸಲಾಗಿದೆ.

ಏಂಟನೆಯ ಅಧ್ಯಾಯ ಸಮಾರೋಪ ಕುರಿತಾಗಿದ್ದು. ಪ್ರಸ್ತುತ ಈ ಅಧ್ಯಾಯದಲ್ಲಿ ಮೇಲೆ ಹೇಳಿದ ಪ್ರತಿಯೊಂದು ಅಧ್ಯಾಯಗಳಲ್ಲಿ ಚರ್ಚಿಸಿದ ಅನೇಕ ವಿಷಯಗಳನ್ನು ಈ ಕೊನೆಯ ಅಧ್ಯಾಯವಾದ ಸಮಾರೋಪದಲ್ಲಿ ಸಮೀಕ್ಷಿಸಲಾಗಿದೆ. ಅಲ್ಲದೇ ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಾಯನದಿಂದ ಕಂಡುಕೊಂಡ ಕೆಲವು ಪ್ರಮುಖವಾದ ಫಲಿತಗಳನ್ನು ಸಹ ಇಲ್ಲಿ ಸಮೀಕ್ಷಿಸಲಾಗಿದೆ.

ಅಧ್ಯಾಯನದ ಫಲಿತಗಳು

ಮೈಸೂರು ಜಿಲ್ಲೆಯ ಚಿತ್ರಕಲೆಯಾಗಿ ಅಧ್ಯಯನ ಮಾಡಿದಾಗ ಮೈಸೂರಿನದೆ ಆದ ವಿಶೇಷವಾದ ಮೈಸೂರುಶೈಲಿಯ ಚಿತ್ರಕಲಾ ಸಂಪ್ರದಾಯದವು ಕರ್ನಾಟದಲ್ಲಿ ಬೆಳವಣಿಗೆ ಆದುದ್ದು ಸಹ ಗುರುತಿಸಲಾಗಿದೆ.

ದುಂಡುಮುಖ, ಸೂಕ್ಷ್ಮರೇಖೆ, ಮೊದಲಾದ ಲಕ್ಷಣಗಳ ನಯವಾದ ಮುಖ ಭಾವ, ಆವಭಾವಗಳ ಪ್ರಮುಖ ಲಕ್ಷಣವಾಗಿದೆ.

ಮೈಸೂರುಶೈಲಿಯ ಚಿತ್ರಕಲೆಯಲ್ಲಿ ಬಂಗಾರದ ಲೇಪನ ವಸ್ತು ಈ ಜಿಲ್ಲೆಯಲ್ಲಿನ ವಿಶಿಷ್ಟ ತಂತ್ರವಾಗಿದೆ.

ಈ ಶೈಲಿಯಲ್ಲಿ ರಾಜಾಶ್ರಯದಲ್ಲಿ ವಿಶೇಷವಾಗಿ ಚಿತ್ರಕಲೆ ಅರಮನೆ, ದೇವಾಸ್ಥಾನ ಮುಂತಾದ ಭಾಗದಲ್ಲಿ ರಚನೆಯಾಗಿದೆ.

ಮೈಸೂರಿನದೆ ಆದ ವಿಶಿಷ್ಟವಾದ ಚಿತ್ರಕಲೆ ಗಂಜೀಫಾ ಕಲೆಯು ಮೈಸೂರಿನ ಆದ ಒಂದು ಪ್ರಮುಖ ಕೊಡುಗೆ ಆಗಿದೆ.

ಗಾಜಿನ ಚಿತ್ರಕಲೆ ಹಾಗೂ ಉದುಗು ಚಿತ್ರಕಲೆ ಮೈಸೂರಿನ ವಿಶೇಷವಾದ ಕಲಾ ಕೊಡುಗೆಗಳಾಗಿದೆ.

ಹಸ್ತಪ್ರತಿ ಚಿತ್ರಕಲೆ ಕರ್ನಾಟಕಕ್ಕೆ ಅಷ್ಟೇ ಏಕೆ ಮೈಸೂರು ನೀಡಿದ ಅಮೂಲ್ಯ ಕಲಾ ಕೊಡುಗೆ ಆಗಿದೆ. ಹಲವಾರು ಸುಚಿತ್ರ ಹಸ್ತಪ್ರತಿಗಳಲ್ಲಿ ಸಾವಿರು ವರ್ಣಚಿತ್ರಗಳು ರಚನೆಯಾಗಿರುವುದು ಇತಿಹಾಸ ದಾಖಲಾಗಿದೆ.

ಮೈಸೂರುನಲ್ಲಿ ಕಲಾಕೃತಿಗಳ ಸಂಗ್ರಹಕ್ಕಾಗಿ ದೊಡ್ಡ ದೊಡ್ಡ ವಸ್ತುಸಂಗ್ರಹಾಲಯ ಮತ್ತು ಕಲಾಗ್ಯಾಲರಿ ನಿರ್ಮಿಸಿ ಅವುಗಳ ಸಂರಕ್ಷಣೆ ಕ್ರಮ ಇರುವುದು ಒಂದು ಮಹತ್ವದ ಸಾಧನೆಯಾಗಿದೆ.

ಮೈಸುರು ಐತಿಹಾಸಿಕ ಪ್ರೇಕ್ಷಣೆ ಸ್ಥಳವಾಗಿರುವಂತೆ ಕಲಾವಿದರಿಗೆ ಮಾರಾಟ ಮತ್ತು ಸಾವಿರು ಕಲಾಕೃತಿ ನೋಡುವ ಒಂದ ಮಹತ್ವದ ಕಲಾಕೇಂದ್ರವಾಗಿದೆ.

ಮೈಸೂರು ಕಲೆ ತನ್ನದೆ ಆದ ವಿಶೇಷತೆಯಿಂದ ದೇಶ ವಿದೇಸದ ಗಮನ ಸೆಳೆದಿದೆ.

ಮೈಸೂರು ಅರಸರ ಎಲ್ಲಾ ಲಲಿತಕಲೆಗಳಿಗೂ ಸಾಕಷ್ಟು ಪ್ರೊತ್ಸಾಹ ನೀಡಿದ ಕಾರಣದಿಂದಾಗಿ ಸಂಗೀತ, ನೃತ್ಯ, ನಾಟಕ, ಸಾಹಿತ್ಯ, ವಾಸ್ತು, ಶಿಲ್ಪ, ಚಿತ್ರಕಲೆ, ಹೀಗೆ ಎಲ್ಲಾ ಕಲೆಗಳ ಏಕೈಕ ಕೇಂದ್ರವಾಗಿದ್ದು ತನ್ನ ವರ್ಚಸ್ಸು ಇಂದಿಗೂ ಹೆಚ್ಚಿಸಿಕೊಳ್ಳುತಿರುವುದು ಒಂದು ಗಮನಾರ್ಯವಾದ ಅಂಶವಾಗಿದೆ.

ಮೈಸೂರಿನ ನೂರಾರು ಹಿರಿಯ ಕಲಾವಿದರ ಹಲವಾರು ಕಲಾಪ್ರಕಾರಗಳ ಶೈಲಿಗಳ ಕುರಿತು ಸಾಕಷ್ಟು ರೀತಿಯಲ್ಲಿ ಸಂಶೋಧಕರಿಗೆ ಇನ್ನೂ ಅಧ್ಯಯನಕ್ಕೆ ಅವಕಾಶ ಇರುವುದನ್ನು ಪ್ರಸ್ತುತ ಅಧ್ಯಯನದ ಅಧ್ಯಾಯನದಲ್ಲಿ ಕಂಡುಕೊಳ್ಳಲಾಗಿದೆ.

ಮೈಸೂರಿನ ಅರಸರ ಆಡಳಿತ ಕಾಲದಲ್ಲಿ ಚಿತ್ರಕಲೆಯ ಉಳಿವಿಗೆ ತೆಗೆದುಕೊಂಡ ನಿರ್ಧಾರದ ಪರಿಣಾಮ ಹಲವು ಕಲೆಗಳ ನೆಲೆಯಾಗಿ ಇಂದು ಕಲಾಕೇಂದ್ರವಾಗಿ ಮೈಸೂರುಕಂಡುಬರುತ್ತದೆ.

ಈ ನಾಡಿನ ಭಿತ್ತಿಚಿತ್ರಕಲೆಯ ಪರಂಪರೆಯಲ್ಲಿ ಧಾರ್ಮಿಕತೆಯ ಜೊತೆ ಸಮಾಜಿಕ ಅಂಶಗಳನ್ನು ಗುರುತಿಸುವುದರ ಜೊತೆಯಲ್ಲಿ ಕಲಾವಿದರ ತಾಳ್ಮೆ, ಸೌಂದರ್ಯಪ್ರಜ್ಞೆಯೊಂದಿಗೆ ಪಾಶ್ಚತ್ಯಕಲೆಗಳ ತಂತ್ರ, ವಿಧಾನವನ್ನು ನಮ್ಮವರು ಒಗ್ಗಿಸಿಕೊಂಡು ಅಲ್ಲದೆ ಸ್ಥಳೀಯ ವಿಷಯ ಆಧಾರಿತ ಭಿತ್ತಿಚಿತ್ರಕಲೆಗಳನ್ನು ಅದ್ಭುತವಾಗಿ ರಚಿಸಿರುವುದು ಕಂಡುಬರುತ್ತದೆ.

ಹಸ್ತಪ್ರತಿ ಕಲೆಯಲ್ಲಿ ರೇಖಾಚಿತ್ರ, ವರ್ಣಚಿತ್ರ ರಚಿಸಲು ಹಲವು ಮಾಧ್ಯಮಗಳನ್ನು ಬಳಸಲು ಪ್ರೇರೆಪಿಸುವುದರ ಜೊತೆಗೆ ಸಾಹಿತ್ಯಕಾರರಾಗಿ ಮತ್ತು ಅವುಗಳ ಸಂರಕ್ಷಣೆ, ಪ್ರಕಟಣೆಯ ಜೊತೆಗೆ ಶಿಕ್ಷಣಕ್ಕೆ ಉತ್ತೇಜನ ನೀಡಿದನ್ನು ಕಂಡುಕೊಳ್ಳಲಾಗಿದೆ.

ರಾಜಾಶ್ರಯದ ಕಲಾವಿದರು ರಾಜರ ಆಜ್ಞೆಯಂತೆ ಚಿತ್ರಕಲೆಗಳನ್ನು ರಚಿಸುವುದರ ಜೊತೆಗೆ ರಾಜರ ಮೇಲೆ ಇಟ್ಟ ಭಯಭಕ್ತಿ ಗೌರವದೊಂದಿಗೆ ತಮ್ಮ ಕೌಶಲ್ಯ, ಕಲಾ ಅರ್ಪಣಾಭಾವವನ್ನು ಗುರುತಿಸಲಾಗಿದೆ.

ವಿಶಿಷ್ಟವಾದ ಗಾಜಿನ ಮಾಧ್ಯಮದಲ್ಲಿ ವಿಭಿನ್ನ ಕಲಾಕೃತಿಗಳನ್ನು ನಿರ್ಮಿಸುವುದರಿಂದ ಕಲಾಕ್ಷೇತ್ರದಲ್ಲಿ ವೈಶಿಷ್ಟತೆ ಮೇರೆದಿದ್ದಾರೆ. ಈ ಕಲೆಯನ್ನು ಉದ್ಯಮವಾಗಿಸಿಕೊಂಡು ಸೃಜನಶೀಲ ಉದ್ಯಮಿಗಳಾಗಿದ್ದಾರೆ.

ಈ ಜಿಲ್ಲೆಯ ಚಿತ್ರಕಲೆಯ ಕಲಾಕೃತಿಗಳನ್ನು ಮಾರಾಟಮಾಡುವ ಒಂದು ದೊಡ್ಡ ಮಾರುಕಟ್ಟೆಯನ್ನು ನಿರ್ಮಿಸಿಕೊಂಡಿದ್ದಾರೆ. ಮತ್ತು ಕರಕುಶಲ ಕಲೆಯ ಕಲಾಕೃತಿಗಳನ್ನು ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರಟ ಮಾಡುತ್ತಿದ್ದುದನ್ನು ಗುರುತಿಸಲಾಗಿದೆ.

ಕ್ರೀಡೆ ಮತ್ತು ಕಲೆಯಾಗಿ ಇದ್ದ ಗಂಜೀಫಾ ಚಿತ್ರಕಲೆಯು ಇಂದು ಬರಿ ಚಿತ್ರಕಲೆಯಾಗಿ ಈ ಜಿಲ್ಲೆಯಲ್ಲಿ ಉಳಿದುಕೊಂಡಿರುತ್ತದೆ.

ಜಿಲ್ಲೆಯ ಕಲೆಯ ಅಧ್ಯಯನಕ್ಕೆ ಪೂರಕವಾಗಿ ಐತಿಹಾಸಿಕ, ಸಾಮಾಜಿಕ, ರಾಜಕೀಯ ಮಹತ್ವದ ಘಟನೆಗಳನ್ನು ಒಳಗೊಂಡು ಕಲೆಗಳೊಂದಿಗೆ ಬೆರೆತ ಅಂಶವನ್ನು ಕಾಣಬಹುದು. ಭಿನ್ನವಾಗಿಯೂ ಕಲೆಗಳು ಇದರು ಅಸ್ತಿತ್ವವನ್ನು ಪರಂಪರಾನುಗತವಾಗಿ ಉಳಸಿಕೊಂಡು ಬಂದಂತಹ ಅಂಶ ವೈಶಿಷ್ಟವೆನ್ನುವ ಹಾಗೆ, ರಾಜಕೀಯ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ಬದಲಾವಣೆಗಳನ್ನು ಕಾಲಕ್ರಮೇಣವಾಗಿ ಗುರುತಿಸಬಹುದಾಗಿದೆ.

ಅಧ್ಯಯನದ ಹಿನ್ನೆಲೆಯಲ್ಲಿ ಕಲೆಯ ಅಧ್ಯಯನ ಕೇವಲ ಕಲಾಪೂರಕವಾಗಿರದೆ ಹಲವಾರು ಮಹತ್ವದ ಐತಿಹಾಸಿಕ ಘಟನೆಗಳನ್ನು ನಿಮ್ಮೆದುರು ಈ ಪ್ರಾಂತ್ಯದ ಚಿತ್ರಕಲೆ ತೆರೆದಿಡುವ ಒಂದು ಪ್ರಯತ್ನವು ಸಹ ಇದಾಗಿದೆ.

~~~~~~~~~~~~~~~oo~~~~~~~~~~~~~~~
~~~~~~~~~~~~~~~

ಮೈಸೂರು ಜಿಲ್ಲೆಯ ನಕ್ಷೆ


ಹಾಸನ ಜಿಲ್ಲೆ
ಮಂಡ್ಯ ಜಿಲ್ಲೆ
ಕೊಡಗು ಜಿಲ್ಲೆ
ಚಾಮರಾಜನಗರ ಜಿಲ್ಲೆ
ಸಾಲಿಗ್ರಾಮ
ಚುಂಚನಕಟ್ಟೆ
ಕೊಪ್ಪ
ಬೆಟ್ಟದಪುರ
ಕೃಷ್ಣರಾಜನಗರ
ಪಿರಿಯಾಪಟ್ಟಣ
ಮೈಸೂರು
ಹುಣಸೂರು
ಚಾಮುಂಡಿಬೆಟ್ಟ
ಟಿ. ನರಸೀಪುರ
ತಿರುಮಕೂಡಲು
ತಲಕಾಡು
ಮುಡುಕುತೊರೆ
ಕಪಿಲಾ ನದಿ
ನಂಜನಗೂಡು
ಹೆಗ್ಗಡದೇವನಕೋಟೆ
ತಾಲ್ಲೂಕುಗಳು
ಮೈಸೂರು
ನಂಜನಗೂಡು
ಟಿ. ನರಸೀಪುರ
ಕೃಷ್ಣರಾಜನಗರ
ಹುಣಸೂರು
ಪಿರಿಯಾಪಟ್ಟಣ
ಹೆಗ್ಗಡದೇವನಕೋಟೆ

ಅನಬಂಧ -೨

ಸಂಕ್ಷೇಪಗಳು

ಕ.ವಿ.ವಿ.ಹಂಪಿ	; ಕನ್ನಡ ವಿಶ್ವವಿದ್ಯಾಲಯ ಹಂಪಿ
ಕ.ಲ.ಅ.ಬೆಂ	; ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
ಕ.ಅ.ಸ.ಮೈ	; ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.
ಕ.ಸಾ.ಸ.ಬೆಂ.	; ಕನ್ನಡ ಸಾಹಿತ್ಯ ಸಮೇಳನ ಬೆಂಗಳೂರು.
ಕ.ರಾ.ಮು.ವಿ.ವಿ.ಮಾ.ಮೈ	; ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮಾನಸಗಂಗೋತ್ರಿ, ಮೈಸೂರು.
ಕ.ಭಾ.ಯೋ.ಕ.ಸ..ಇ.ಬೆಂ	; ಕನ್ನಡ ಭಾಷೆಯ ಯೋಜನೆ ಕರ್ನಾಟಕ ಸರ್ಕಾರ, ಇಲಾಖೆ ಬೆಂಗಳೂರು.
ಪ್ರ.ಸಂ.	; ಪ್ರಧಾನ ಸಂಪಾದಕ
ಪ್ರ.ಕ.ರಾ.ಮು.ವಿ.ವಿ.ಮೈ	; ಪ್ರಸಾರಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು
ಪ್ರ	; ಪ್ರಕಟಣೆ
ಪ್ರಾ.ಸಂ.ನಿ.ಮೆ	; ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಮೈಸೂರು.
ಪ್ರಾ.ವಿ.ಸಂ	; ಪ್ರಾಚ್ಯವಿದ್ಯಾಸಂಶೋಧನಾಲಯ
ಪು.ಸಂ	; ಪುಟ,ಸಂಖ್ಯೆ
ಲೇ	; ಲೇಖಕ
ಸಂ.	; ಸಂಪಾದಕ

ಮೈಸೂರು ಜಿಲ್ಲೆಯ ಚಿತ್ರಕಲೆಯ ನೆಲೆಗಳು

---

೩. ಭಿತ್ತಿಚಿತ್ರಗಳ ನೆಲೆಗಳು

೧, ಅಂಬಾವಿಲಾಸ ಅರಮನೆ, ಮೈಸೂರು

೨, ಅಗಸ್ತೇಶ್ವರ ದೇವಸ್ಥಾನ, ಟಿ.ನರಸಿಪುರ (ತಾ), ಮೈಸೂರು (ಜಿ).

೩, ಕೋಟೆಯ ಹೊರಭಾಗದ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಮೈಸೂರು.

೪, ಜಗನ್ಮೋಹನ ಅರಮನೆ ಮೈಸೂರು

೫, ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ, ಮೈಸೂರು.

೬, ಭಗವಾನ್ ಅನಂತನಾಥ ದೇವಸ್ಥಾನ, ಸಾಲಿಗ್ರಾಮ, ಕೆ.ಆರ್.ನಗರ (ತಾ), ಮೈಸೂರು (ಜಿ).

೭, ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ. ಟಿ.ನರಸಿಪುರ (ತಾ) ಮೈಸೂರು (ಜಿ).

೮, ಶ್ವೇತವಾರಹಸ್ವಾಮಿ ದೇವಾಲಯ ಮತ್ತು ಅಂಬುಜವಲ್ಲಿ ದೇವಾಲಯ.

೯, ಶ್ರೀರಾಮದೇವರ ದೇವಾಲಯ, ಚುಂಚನಕಟ್ಟೆ, ಕೆ.ಆರ್.ನಗರ. (ತಾ), ಮೈಸೂರು(ಜಿ).

೧೦, ಸಿಡ್ಲುಮಲ್ಲಿಕಾರ್ಜುನಸ್ವಾಮಿ ದೇವಾಲಯ, ಬೆಟ್ಟದಪುರ, ಪಿರಿಯಾಪಟ್ಟಣ(ತಾ), ಮೈಸೂರು (ಜಿ).

ಆಧುನಿಕ ಭಿತ್ತಿಚಿತ್ರ ನೆಲೆಗಳು

೧, ಸುತ್ತೂರು ಮಠದ ವಸ್ತುಸಂಗ್ರಹಾಲಯ, ಸುತ್ತೂರು, ನಂಜನಗೂಡು(ತಾ), ಮೈಸೂರು(ಜಿ).

೨, ಮಾನವ ಮತ್ತು ಪ್ರಾಕೃತಿಕ ವಿಜ್ಞಾನ ವಸ್ತುಸಂಗ್ರಹಾಲಯ, ಸಿದ್ದಾರ್ಥನಗರ, ಮೈಸೂರು.

೩, ಶ್ರೀಲಕ್ಷ್ಮೀನರಸಿಂಹಸ್ವಾಮಿ ಸನ್ನಿಧಿ, ಜಗನ್ಮೋಹನ ಅರಮನೆ ಹತ್ತಿರ, ಮೈಸೂರು.

೪, ರಾಮ್‌ಸನ್ಸ್ ಬೊಂಬೆಮನೆ, ನಜರ್‌ಬಾದ್, ಮೈಸೂರು.

೫, ಸತ್ಯನಾರಾಯಣಸ್ವಾಮಿ ದೇವಸ್ಥಾನ, ಸಯ್ಯಾಜಿರಾವ್ ರಸ್ತೆ ಮೈಸೂರು.

೬, ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ, ಮೈಸೂರು.

೭, ಪುಷ್ಪಾಶ್ರಮ, ಆರ್.ಎಸ್.ನಾಯ್ಡುನಗರ, ಮೈಸೂರು.

೮, ಸ್ವರ್ಣದೇವಾಲಯ, ಬೈಲುಕುಪ್ಪೆ, ಕುಶಾಲನಗರ(ತಾ), ಮೈಸೂರು(ಜಿ).

೪, ಹಸ್ತಪ್ರತಿ ನೆಲೆಗಳು

೧, ಅಂಬಾವಿಲಾಸ ಅರಮನೆ ಸರಸ್ವತಿಭಂಡಾರ, ಮೈಸೂರು.
೨, ಪ್ರಾಚ್ಯವಿದ್ಯಾಸಂಶೋಧನಾಲಯ, ಕಮೀಷನ್‌ರ್ ಆಫಿಸ್, ಹತ್ತಿರ, ಮೈಸೂರು.

೩, ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

೪, ಸಂಸ್ಕೃತ ಪಾಠಶಾಲೆ, ಅಂಬಾವಿಲಾಸ ಅರಮನೆ ಹತ್ತಿರ, ಮೈಸೂರು.

೫, ಗಂಜೀಫಾ ಚಿತ್ರಕಲೆಯ ನೆಲೆಗಳು

೧, ಶ್ರೀಜಯಚಾಮರಾಜೇಂದ್ರ ಕಲಾಗ್ಯಾಲರಿ, ಮೈಸೂರು.

೨, ಸುತ್ತೂರಿನ ಸಂಗ್ರಹಾಲಯ ಮೈಸೂರು. (ಜಿ), ನಂಜನಗೂಡು(ತಾ).

೬, ಗಾಜಿನ ಚಿತ್ರಕಲೆಯ ನೆಲೆಗಳ

೧, ಅಂಬಾವಿಲಾಸ ಅರಮನೆ ಮೈಸೂರು.
೨, ಕುಪ್ಪಣ್ಣಪಾರ್ಕ, ಹಾರ್ಡ್‌ಂಗ್ ಸರ್ಕಲ್, ಮೈಸೂರು.

೩, ಜಯಲಕ್ಷ್ಮೀವಿಲಾಸ ಅರಮನೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ ಮೈಸೂರು.

೪, ಬಾಲಯೇಸುವಿನ ಪುಣ್ಯಕ್ಷೇತ್ರ, ಆರ್.ಎಸ್. ನಾಯ್ಡುನಗರ ಮೈಸೂರು.

೫, ಲಲಿತಮಹಲ್ ಅರಮನೆ ಆಲನಹಳ್ಳಿ ಮೈಸೂರು.

೬, ಶ್ರೀಗಣಪತಿ ಸಚ್ಚಿದಾನಂದ ಆಶ್ರಮ, ವೆಂಕಟೇಶ್ವರ ದೇವಾಲಯ ದತ್ತನಗರ, ಮೈಸೂರು.

೭, ಸಂತ ವಾರ್ತಲೋಮಿಯಾ ದೇವಾಲಯ ಸಬರ್ಬ್ ಬಸ್ಸು ನಿಲ್ದಾಣ, ಮೈಸೂರು.

೮, ಸಂತ ಗ್ರೀಕ್‌ಗ್ರೀಸ್ ಚರ್ಚ್, ನಜರ್‌ಬಾದ್, ಮೈಸೂರು.

೯, ಸಂತ ಫಿಲೋಮಿನಾ ಕೆಥಿಡ್ರಲ್‌ಚರ್ಚ್, ಈರನಗೆರೆ, ಮೈಸೂರು.

೭. ಅನುಬಂಧ

ಗ್ರಂಥಋಣ

ಕನ್ನಡ ಗ್ರಂಥಗಳು

೧. **ಅಶ್ವಶಾಸ್ತ್ರ** — **ಜಿ.ಜಿ.ಮಂಜುನಾಥನ್**
ಕನ್ನಡ ಅಧ್ಯಯನ ಸಂಸ್ಥೆ ಮೈಸೂರು
ವಿಶ್ವವಿದ್ಯಾಲಯ ಮೈಸೂರು
೧೯೮೭

೨. **ಆಲೇಖ್ಯ** — **ಡಾ.ಅ.ಲ.ನರಸಿಂಹನ್**
ಸಂಯೋಜಿತ ಸಮಕಾಲೀನ
ಕಲಾವಿದರ ಸಂಸ್ಥೆ, ಬೆಂಗಳೂರು
೧೯೯೯

೩. **ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ** — **ಡಾ.ಯಾದಪ್ಪ ಪರದೇಶಿ**
ಒಂದು ಅಧ್ಯಯನ, ಅಪ್ರಕಟಿತ ಮಹಾಪ್ರಬಂಧ
ಪ್ರಕಟಣೆ, ಕನ್ನಡ ವಿಶ್ವವಿದ್ಯಾಲಯ ಹಂಪಿ,
೨೦೦೧

೪. **ಉದ್ದರಣಾಸಾಹಿತ್ಯ** — **ಡಾ.ಕೆ.ರವಿಂದ್ರನಾಥ**
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,
೨೦೧೦

೫. **ಕರಕುಶಲ ಕಲೆಗಳು** — **(ಸಂ)ಕರೀಗೌಡ ಬೀಚನಹಳ್ಳಿ**
ಕನ್ನಡ ವಿಶ್ವವಿದ್ಯಾಲಯ ಹಂಪಿ,
೨೦೦೦

೬. **ಕಲಾಕೋಶ** — **ಪಿ.ಆರ್.ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೨೦೦೯

೭. **ಕರ್ನಾಟಕ ಸಂಸ್ಕೃತಿ ಸಮೀಕ್ಷೇ** — **ಡಾ.ಎಚ್.ತಿಪ್ಪೇರುದ್ರಸ್ವಾಮಿ**
ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು
೧೯೯೭

೮. **ಕರ್ನಾಟಕ ಸಂಸ್ಕೃತಿ ಚರಿತ್ರೆ–೪** **ಡಾ.ಎನ್. ಚಿನ್ನಸ್ವಾಮಿಸೋಸಲೆ**
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೨೦೦೪

೯. **ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣಗಳ ಬಳಕೆ** **ಕೆ.ವಿ.ಕಾಳೇ**
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೨೦೦೦

೧೦. **ಕರ್ನಾಟಕದಲ್ಲಿ ಚಿತ್ರಕಲಾ ಬೆಳವಣಿಗೆ ಒಂದು ಸಮೀಕ್ಷೆ** **ಎಲ್.ಶಿವಲಿಂಗಪ್ಪ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೨೦೦೬

೧೧. **ಕರ್ನಾಟಕದ ಭಿತ್ತಿಚಿತ್ರ ಪರಂಪರೆ** **ಡಾ.ಅ.ಲ.ನರಸಿಂಹನ್**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೮

೧೨. **ಕರ್ನಾಟಕ ಚಿತ್ರಕಲಾ ಪರಂಪರೆ** **ಎನ್.ಮರಿಶಾಮಚಾರ್**
ಸಿ.ಎನ್.ಪ್ರಕಾಶನ, ಬೆಂಗಳೂರು.
೨೦೧೨

೧೩. **ಕರ್ನಾಟಕ ಬೌದ್ಧಚಿತ್ರಕಲೆ** **ಡಾ.ಎಚ್.ಎನ್.ಕೃಷ್ಣೇಗೌಡ**
ಅಪ್ರಕಟಿತ ಪಿ.ಹೆಚ್‌ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ ಹಂಪಿ,
೨೦೧೨

೧೪. **ಕಲಾಸಂಸ್ಕೃತಿ** **ಎಂ.ಎಚ್.ಕೃಷ್ಣಯ್ಯ**
ಸಪ್ನ ಬುಕ್‌ಹೌಸ್, ಬೆಂಗಳೂರು.
೨೦೧೨

೧೫. **ಕರ್ನಾಟಕ ಗಾಜಿನ ಚಿತ್ರಕಲೆ ಒಂದು ಅಧ್ಯಯನ** **ಡಾ.ಎಂ.ಎನ್.ಅಂಗಡಿ**
ಪಿ.ಹೆಚ್‌ಡಿ ಅಪ್ರಕಟಿತ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ ಹಂಪಿ,
೨೦೧೦

೧೬. **ಕರ್ನಾಟಕ ಗಂಜೀಫಾ ಚಿತ್ರಕಲೆ** **ಡಾ.ಶಂಕರ ಕುಂದಗೋಳ**
ಪಿ.ಹೆಚ್‌ಡಿ ಅಪ್ರಕಟಿತ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ ಹಂಪಿ,
೨೦೧೨

೧೭, **ಕರ್ನಾಟಕ ಜನಪದ ಚಿತ್ರಕಲೆ** — **ಡಾ.ಎಸ್.ಸಿ.ಪಾಟೀಲ**
ಉತ್ತರ ಕರ್ನಾಟಕ ಅನುಲಕ್ಷಿಸಿ
ಅಧ್ಯಯನ ಸಂಸ್ಥೆ ಶ್ರೀಜಗದ್ಗುರು
ತೋಂಟದಾರ್ಯ ಸಂಸ್ಥಾನ
ಮಠ, ಗದಗ
೧೯೯೩

೧೮, **ಕನ್ನಡ ಹಸ್ತಪ್ರತಿ ಶಾಸ್ತ್ರ** — **ಡಾ.ಎಂ.ಎಂ.ಕಲಬುರ್ಗಿ**
ಸಪ್ನ ಬುಕ್ ಹೌಸ್, ಬೆಂಗಳೂರು.
೧೯೯೩

೧೯, **ಗಂಜೀಫಾಕಲೆ** — **ಸಂತೋಷಕುಮಾರ ಗುಲ್ವಾಡಿ**
ಕರ್ನಾಟಕ ಲಲಿತಕಲಾ
ಅಕಾಡೆಮಿ, ಬೆಂಗಳೂರು.
೧೯೯೪

೨೦, **ಗಂಜೀಫಾ** — **ಎಂ.ಎಲ್.ಶಿವಶಂಕರ**
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ
ನಿರ್ದೇಶನಾಲಯ, ಮೈಸೂರು
೧೯೯೬

೨೧, **ದಖ್ಖನಿಚಿತ್ರಕಲೆ** — **ಎಸ್.ಕೆ. ಅರುಣಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೨೦೦೧

೨೨, **ದಿವಾನ್ ಸರ್‌ಮಿರ್ಜಾ ಎಂ. ಇಸ್ಮಾಯಿಲ್** — **ಡಾ.ಎನ್. ಚಿನ್ನಸ್ವಾಮಿಸೋಸಲೆ**
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,
೨೦೧೨

೨೩, **ದಿವಾನ್ ಪೂರ್ಣಯ್ಯ** — **(ಸಂ)ಡಾ.ಆರ್.ಗೋಪಾಲ್**
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಮೈಸೂರು.
೧೯೯೮

೨೪, ನಿಜದ ನೆಲೆ (ಸಂ)ಡಾ.ಎಸ್.ಸಿ.ಪಾಟೀಲ
ಬಸವೇಶ್ವರ ವಿದ್ಯಾವರ್ಧಕ ಸಂಘ,
ಬಾಗಲಕೋಟೆ.
೨೦೦೩

೨೫, ಭಾರತೀಯ ಚಿತ್ರಕಲೆ ಆರ್.ಚಿರಾಯಕ್
ಕರ್ನಾಟಕ ಲಲಿತಕಲಾ
ಅಕಾಡೆಮಿ, ಬೆಂಗಳೂರು.
೧೯೯೬

೨೬, ಮುಮ್ಮಡಿ ಕೃಷ್ಣರಾಜ ಒಡೆಯರು ಡಾ.ಆರ್.ಗೋಪಾಲ್
ಒಂದು ಚಾರಿತ್ರಿಕ ಅಧ್ಯಯನ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಹೊಸಪೇಟೆ.
೨೦೦೪

೨೭, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಡಾ.ಆರ್.ಗೋಪಾಲ್
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಮೈಸೂರು.
೨೦೧೦

೨೮, ಮೈಸೂರು ದರ್ಶನ ಸಂಪುಟ–೧ ಪ್ರ.ಸಂ. ಪ್ರೊ.ಕೆ.ಎಸ್.ರಂಗಪ್ಪ
ಪ್ರಸಾರಾಂಗ ಕರ್ನಾಟಕ ರಾಜ್ಯ
ಮುಕ್ತ ವಿಶ್ವವಿದ್ಯಾಲಯ, ಮೈಸೂರು.
೨೦೧೨

೨೯, ಮೈಸೂರು ನೂರಿನ್ನೂರು ವರ್ಷಗಳ ಹಿಂದೆ. ಪ್ರೊ.ಪಿ.ವಿ.ನಂಜರಾಜ ಅರಸು
ಅಭಿರುಚಿ ಪ್ರಕಾಶನ ಸರಸ್ವತಿಪುರಂ, ಮೈಸೂರು
೨೦೦೭

೩೦, ವರ್ಣಸಂಚಯ ಡಾ.ಎಸ್.ಸಿ. ಪಾಟೀಲ
ಪ್ರಕಾಶನ ವಿಜಯ ಚಿತ್ರಕಲಾ
ಮಹಾವಿದ್ಯಾಲಯ, ಇಲಕಲ್ಲ.
೨೦೦೧

೩೧, ಶಿಲೆ_ಕಲೆ ಡಾ.ಚೂಡಾಮಣಿ ನಂದಗೋಪಾಲ್
ಸುಂದರ ಪ್ರಕಾಶನ, ಬೆಂಗಳೂರು.
೨೦೦೭

೩೨, ಶ್ರೀ ತತ್ವನಿಧಿ (ಸಂ)ಸಾಲಿಗ್ರಾಮ
ಪ್ರಸಾರಾಂಗ ಕನ್ನಡ
ವಿಶ್ವವಿದ್ಯಾಲಯ ಹಂಪಿ.
೧೯೯೨

೩೩, ಶ್ರೀತತ್ವನಿಧಿ ಸಾಲಿಗ್ರಾಮ ಕೃಷ್ಣರಾಮಚಂದ್ರರಾವ್
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ
ಹಂಪಿ,
೧೯೯೨

೩೪, ಸಾಹಿತ್ಯ ಮತ್ತು ಚಿತ್ರಕಲೆ ಚಂದ್ರಕಾಂತ ಕುಸನೂರು
ಕಾಲ ಪ್ರಕಾಶನ, ಬೆಂಗಳೂರು.
೨೦೧೧

೩೪, ಸೌಗಂಧಿಕಾಪರಿಣಯ (ಸಂ)ಡಾ. ಎಚ್.ಎಸ್.ಶ್ರೀಮತಿ
ಕೇಂದ್ರ ಸಾಹಿತ್ಯ ಅಕಾಡೆಮಿ, ದೆಹಲಿ
೨೦೦೪

೩೫, ಹಸ್ತಪ್ರತಿಶಾಸ್ತ್ರ ಬಿ.ಎಸ್.ಸಣ್ಣಯ್ಯ
ಬಾಹುಬಲಿ ಪ್ರಾಕೃತ ವಿದ್ಯಾ ಪೀಠ (ರಿ)
ರಾಷ್ಟ್ರೀಯ ಪ್ರಾಕೃತ ಅಧ್ಯಯನ
ಮತ್ತು ಸಂಶೋಧನಾ ಸಂಸ್ಥೆ,
ಶ್ರವಣಬೆಳಗೊಳ.
೧೯೯೭

ಕನ್ನಡ ಪತ್ರಿಕೆ

1, ಪ್ರಜಾವಾಣಿ
ಕರ್ನಾಟಕ ದರ್ಶನ
ನೂರರ ಹೊಸ್ತಿಲಲ್ಲಿ
ಮೈಸೂರು ಅರಮನೆ.
29–9–2011
ರವೀಂದ್ರಭಟ್ಟ

2, ಪ್ರಜಾವಾಣಿ
ಮೇಟ್ರೊ ಮೈಸೂರು
ದೇಸಿಕಲೆಗೆ ವಿದೇಶಿ ಬೆಲೆ
18–10–2011
ರವಿಂದ್ರ. ಆರ್

3, ಪ್ರಜಾವಾಣಿ
ಸಾಪ್ತಹಿಕ ಪುರವಣಿ
ಮನೆಮನೆದೀಪ ಕೃಷ್ಣರಾಜಭೂಪ
3–6–2012
ರವಿಂದ್ರಭಟ್ಟ

4, ಮೈಸೂರು ಮಿತ್ರ
ವಾರದ ಮಿತ್ರದ ಸಾಪ್ತಹಿಕ ಪುರವಣಿ
ಅಂದದ ಅರಮನೆ
6–11–2011
ಕಿರಣಕುಮಾರ್

5, ಮೈಸೂರು ಮಿತ್ರ
ವಾರದ ಮಿತ್ರದ
ಸಾಪ್ತಹಿಕ ಪುರವಣಿ
ಮೈಸೂರು ಪರಂಪರೆ
14–10–2012
ಕಿರಣಕುಮಾರ್

ಇಂಗ್ಲಿಷ್ ಪುಸ್ತಕಗಳು

1, **Indian paintings on glass** **Jothinjain**
Secrelary india corncil for cultural
Relations Azad bhavan ,
Indraprastha.
1981

2, **Mysore Chitrmala** **S.K.Ramachandra Rao**
Traditional Paintings
Chithr kala parisatha.
1995

3, **Mysore palace** **R.G.Singh**
Celebrating a Centary
Ramsons Kala prtishtana, Mysore.
2012

4, **Mural Paintings In India** **J.C.Nagpall**
Gian publisging House, Delhi.
1988

5, **Sri Jayachmarajendra Art Gallery** **Jagnmohan Palace Mysore**
Catalogve , Mysore .
2008

6, **India Architicinre Buddist and India.** **Peray Broon**
P-B-Tarapor evela Sons & co-private Lte ,
Bombay.
1995

7, **Spell Of The South** **S.L. Khurana**
South Zone Cultural Center,
Tanjavur.
1998

8, The Cardens Of Mughal India. **Sylvia Crowl**
Vikas Publishing House,
Pvt ltd. Delghi.
1973

9, Dhna In The History oF mysore **D.r.M.Prasanna kumar**
(1600-1881) A.D
Samanvaya Prakasana
Mangalore.
2001

10, Essays In Architectual Theory **Ananda ki coomara Swamy**
Indira Gandhi National
Centre Or the Arts .
Oxford univerinty press Delhi.
1995

ಮೈಸೂರು ಜಿಲ್ಲೆಯ ಚಿತ್ರಕಲೆ











ಮೈಸೂರು ಜಿಲ್ಲೆಯ ಚಿತ್ರಕಲೆ